ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಪ್ರಜಾ ಪ್ಲಸ್

ಪುಟ 4

‘ಬದಲಾಗುವ ಗುರು ಶಿಷ್ಯ ಪರಂಪರೆಯ ಪಯಣ’ ಎನ್ನುವ ವಿಷಯವನ್ನು ಆಧರಿಸಿ ಈ ವರ್ಷದ ಸಮಾರಂಭ ನಡೆಯಲಿದೆ.

ಎಂದೂ ಮಾಸದ ‘ನಗು’ ನರಸಿಂಹರಾಜು

ನರಸಿಂಹರಾಜು ಬದುಕಿದ್ದರೆ ಇದೇ ಜುಲೈ 24ಕ್ಕೆ ನೂರು ವರ್ಷ ತುಂಬುತ್ತಿತ್ತು. ಅವರ ಜನ್ಮಶತಾಬ್ದಿಯ ನೆನಪಿಗಾಗಿ ಜುಲೈ 24ರಂದು ಕರ್ನಾಟಕ ಸರ್ಕಾರದ ಸಚಿವಾಲಯ ಕ್ಲಬ್ ಅಪರೂಪದ ಕಾರ್ಯಕ್ರಮ ಆಯೋಜಿಸಿದೆ. ಸಣಕಲು ಶರೀರ, ಉಬ್ಬುಹಲ್ಲನ್ನೇ ಧನಾತ್ಮಕ ಶಕ್ತಿಯಾಗಿಸಿಕೊಂಡಿದ್ದ ನರಸಿಂಹರಾಜು ಅವರು ಪರಿಶುದ್ಧ ಹಾಸ್ಯ ಹೇಗಿರಬೇಕು ಎಂಬುದಕ್ಕೆ ನಟನೆಯ ಮೂಲಕವೇ ಭಾಷ್ಯ ಬರೆದರು. ಇಂಥ ಮೇರುನಟನ ಸಂಸ್ಮರಣಾ ಕಾರ್ಯಕ್ರಮ ನಡೆಯಲಿದೆ.

ಮಂಜುಶ್ರೀ ಎಂ. ಕಡಕೋಳ

ನಗಬೇಕು, ನಗಿಸಬೇಕು ಇದೇ ನನ್ನ ಧರ್ಮ
ನಗಲಾರೆ ಅಳುವೆ ಎಂದರೆ ಅದು ನಿಮ್ಮ ಕರ್ಮ

‘ನಕ್ಕರೆ ಅದೇ ಸ್ವರ್ಗ’ ಸಿನಿಮಾದ ಈ ಹಾಡು ಕನ್ನಡ ಚಿತ್ರರಂಗದ ಹಾಸ್ಯನಟ ಟಿ.ಆರ್. ನರಸಿಂಹರಾಜು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ. ಈ ಚಿತ್ರ ನರಸಿಂಹರಾಜು ಅವರ ನಟನೆಯ ನೂರನೇ ಚಿತ್ರವೂ ಹೌದು.

ನರಸಿಂಹರಾಜು ಬದುಕಿದ್ದರೆ ಇದೇ ಜುಲೈ 24ಕ್ಕೆ ನೂರು ವರ್ಷ ತುಂಬುತ್ತಿತ್ತು. ಅವರ ಜನ್ಮಶತಾಬ್ದಿಯ ನೆನಪಿಗಾಗಿ ಜುಲೈ 24ರಂದು ಕರ್ನಾಟಕ ಸರ್ಕಾರದ ಸಚಿವಾಲಯ ಕ್ಲಬ್ ಅಪರೂಪದ ಕಾರ್ಯಕ್ರಮ ಆಯೋಜಿಸಿದೆ. ಈ ನೆಪದಲ್ಲಿ ನರಸಿಂಹರಾಜು ಅವರನ್ನು ಸ್ಮರಿಸಿಕೊಂಡರೆ ಅವರ ನೆನಪಿನೊಂದಿಗೆ ಕನ್ನಡ ಚಿತ್ರರಂಗದ ಅಪೂರ್ವ ಅಧ್ಯಾಯವೊಂದನ್ನು ನೆನಪಿಸಿಕೊಂಡಂತೆ ಆಗುತ್ತದೆ.

ವರನಟ ಡಾ. ರಾಜಕುಮಾರ್ ಅವರಿಲ್ಲದೇ ಕನ್ನಡ ಸಿನಿಮಾದ ಇತಿಹಾಸ ಹೇಗೆ ಅಪೂರ್ಣವೋ, ನರಸಿಂಹರಾಜು ಅವರನ್ನು ಹೊರತುಪಡಿಸಿ ಕನ್ನಡ ಸಿನಿಮಾರಂಗವನ್ನು ನೋಡುವುದೂ ಅಪೂರ್ಣ. ವಿಶಿಷ್ಟ ಶೈಲಿಯ ಹಾಸ್ಯದಿಂದ ಪ್ರೇಕ್ಷಕರನ್ನು ರಂಜಿಸಿದ್ದ ನರಸಿಂಹರಾಜು ಅವರ ನಟನಾ ಬದುಕಿಗೆ ಮುನ್ನುಡಿ ಬರೆದಿದ್ದು ‘ಅಭಿನವ ಶಿರೋಮಣಿ’ ಸಿ.ಬಿ. ಮಲ್ಲಪ್ಪನವರ ಶ್ರೀಚಂದ್ರಮೌಳೇಶ್ವರ ನಾಟಕಸಭಾ. ಬಾಲ್ಯದಲ್ಲೇ ಬಣ್ಣದ ಒಡನಾಟಕ್ಕೆ ಬಿದ್ದ ಅವರು ಶಾಲೆಯಲ್ಲಿ ಕಲಿತದ್ದು ಕಡಿಮೆ. ಆದರೆ, ಅವರ ಸಾಧನೆ ಇಂದು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನಕ್ಕೆ ಯೋಗ್ಯವಾಗುವಷ್ಟು ದೊಡ್ಡದು. ನಾಟಕಗಳಲ್ಲಿ ತಮ್ಮ ಛಾಪು ಮೂಡಿಸಿದ್ದ ನರಸಿಂಹರಾಜು, ಕೆಲ ಕಾಲ ಸ್ವಂತ ನಾಟಕ ಕಂಪನಿಯನ್ನೂ ನಡೆಸಿದ್ದರು. ವ್ಯವಹಾರ ಜ್ಞಾನವಿಲ್ಲದೇ ಕಂಪನಿ ಮುಚ್ಚಿ, ಗುಬ್ಬಿ ವೀರಣ್ಣ ಅವರ ಕಂಪನಿಗೆ ಸೇರಿದರು.

ನರಸಿಂಹರಾಜು ಅವರು ರಂಗಭೂಮಿಯಿಂದ ಕನ್ನಡ ಸಿನಿಮಾರಂಗಕ್ಕೆ ಪ್ರವೇಶಿಸಿದ್ದು ‘ಬೇಡರ ಕಣ್ಣಪ್ಪ’ ಚಿತ್ರದ ಮೂಲಕ. ಅದು ರಾಜ್ ಅವರ ಮೊದಲ ಸಿನಿಮಾ ಕೂಡಾ. ಅಂದು ಜತೆಯಾದ ರಾಜಕುಮಾರ್ ಮತ್ತು ನರಸಿಂಹರಾಜು ಜೋಡಿ, ಮುಂದೆ ಸುಮಾರು 94 ಚಿತ್ರಗಳ ತನಕವೂ ಮೋಡಿ ಮಾಡಿತು. ತಮ್ಮ ಸಣಕಲು ಶರೀರ, ಉಬ್ಬುಹಲ್ಲನ್ನೇ ಧನಾತ್ಮಕ ಶಕ್ತಿಯಾಗಿಸಿಕೊಂಡಿದ್ದ ನರಸಿಂಹರಾಜು ಅವರು ಪರಿಶುದ್ಧ ಹಾಸ್ಯ ಹೇಗಿರಬೇಕೆಂಬುದಕ್ಕೆ ಮಾದರಿ ಹಾಕಿಕೊಟ್ಟವರು.

ಭಾವುಕ ಕ್ಷಣದಲ್ಲಿ ರಾಜ್‌ಕುಮಾರ್, ನರಸಿಂಹರಾಜು

200ಕ್ಕೂ ಹೆಚ್ಚು ಕನ್ನಡ ಸಿನಿಮಾಗಳಲ್ಲಿ ಅಭಿನಯಿಸಿದ್ದ ನರಸಿಂಹರಾಜು, ಹೃದಯಾಘಾತದಿಂದ ತೀರಿಕೊಂಡಾಗ ಅವರಿಗೆ 55 ವರ್ಷವಾಗಿತ್ತು. ಅವರು ಭೌತಿಕವಾಗಿ ಇಲ್ಲದಿದ್ದರೂ ಅವರು ಹಾಕಿಕೊಟ್ಟ ಉತ್ಕೃಷ್ಟ ಹಾಸ್ಯಪರಂಪರೆ ಚಿರಸ್ಥಾಯಿಯಾಗಿದೆ.

ಅವರ ನೆನಪಿನಲ್ಲಿ ಇದೇ 24ರಂದು ಸಚಿವಾಲಯ ಕ್ಲಬ್‌ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ನಟಿ ಸುಧಾ ನರಸಿಂಹರಾಜು, ನಿರ್ದೇಶಕ ಅರವಿಂದ ನರಸಿಂಹರಾಜು, ಬರಹಗಾರ ಕೆ. ಪುಟ್ಟಸ್ವಾಮಿ, ಸಚಿವಾಲಯ ಕ್ಲಬ್‌ನ ಗೌರವ ಕಾರ್ಯದರ್ಶಿ ಎಲ್.ಎನ್. ನಾಗಭೂಷಣ, ಕಾರ್ಯದರ್ಶಿ ಎಂ.ವಿ. ಮಹೇಂದ್ರ ಉಪಸ್ಥಿತರಿರುವರು. ನರಸಿಂಹರಾಜು ವ್ಯಕ್ತಿಚಿತ್ರ ಕುರಿತು ಮಂಜುನಾಥ್ ಎಲ್. ಬಡಿಗೇರ ನಿರ್ದೇಶನದ ಕಿರುನಾಟಕ ಪ್ರದರ್ಶನವಾಗಲಿದೆ. ‘ನಗುವಿನ ರುಜು ನರಸಿಂಹರಾಜು’ ಸ್ಮರಣ ಸಂಚಿಕೆಯೂ ಬಿಡುಗಡೆಯಾಗಲಿದೆ.

ಸ್ಥಳ: ಕರ್ನಾಟಕ ಸರ್ಕಾರದ ಸಚಿವಾಲಯ ಕ್ಲಬ್‌ನ ಸಭಾಂಗಣ, ಕಬ್ಬನ್ ಪಾರ್ಕ್. ಜುಲೈ 24. ಮಧ್ಯಾಹ್ನ 1.30ಕ್ಕೆ.

ಸ್ವರ ಸೌರಭದಿಂದ ‘ಗುರು ಸ್ಮೃತಿ’ ಸಂಗೀತ ಸಂಭ್ರಮ

ಸ್ವರ ಸೌರಭವು ವಾರ್ಷಿಕ ಸಂಗೀತ ಕಾರ್ಯಕ್ರಮ ‘ಗುರು ಸ್ಮೃತಿ’ಯನ್ನು ಸಂಗೀತ ವಿದ್ಯಾಸಾಗರ ಆರ್.ಆರ್. ಕೇಶವಮೂರ್ತಿ ಫೌಂಡೇಷನ್ ಸಹಭಾಗಿತ್ವದಲ್ಲಿ ಹಮ್ಮಿಕೊಂಡಿದೆ. ಕಾರ್ಯಕ್ರಮವು ಜುಲೈ 20ರ ಸಂಜೆ 4ಗಂಟೆಗೆ ನಡೆಯಲಿದೆ. ಮಾಜಿ ಶಾಸಕಿ ಸೌಮ್ಯಾ ರೆಡ್ಡಿ, ನಾದರಂಜನಿ ಸಂಗೀತ ಸಭಾ ಕಾರ್ಯದರ್ಶಿ ಜಿ.ಬಾಬು ಹಾಗೂ ಶಿಕ್ಷಣವಾದಿ ಶಾಮಸುಂದರ ಶರ್ಮ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ

ಕಾರ್ಯಕ್ರಮದಲ್ಲಿ ಪ್ರಸಿದ್ಧ ವಯೋಲಿನ್ ವಾದಕ ವಿದ್ವಾನ್ ವಿ.ವಿ.ಸುಬ್ರಮಣ್ಯ ಅವರಿಗೆ ‘ಸಾಧನಾಚಾರ್ಯ’ ಬಿರುದು ನೀಡಿ ಗೌರವಿಸಲಾಗುತ್ತದೆ. ನಂತರ ಮಗ ವಿದ್ವಾನ್ ವಿ.ವಿ.ಎಸ್. ಮುರಳಿ ಜತೆಗೂಡಿ ಪ್ರದರ್ಶನ ನೀಡಲಿದ್ದಾರೆ.

ವಿದ್ವಾನ್ ಎ. ರೇಣುಕಾ ಪ್ರಸಾದ್, ವಿದ್ವಾನ್ ಬಿ.ಎಸ್. ಪುರುಷೋತ್ತಮ್ ಅವರು ವಯೋಲಿನ್ ಪ್ರಸ್ತುತಪಡಿಸಲಿದ್ದಾರೆ. ಮಾಧುರಿ ಕೌಶಿಕ್ ಹಾಗೂ ತಂಡ ಗಾಯನ ಪ್ರದರ್ಶನ ನೀಡಲಿದೆ.

ಈ ಹಿಂದೆ ಸಂಗೀತ ಕ್ಷೇತ್ರದ ದಿಗ್ಗಜರಾದ ಎಂ.ಬಾಲಮುರಳಿಕೃಷ್ಣ, ಡಾ.ಎಲ್.ಸುಬ್ರಮಣ್ಯಂ, ಎನ್.ರಾಜಂ, ಪ್ರೊ.ಟಿ.ಎನ್.ಕೃಷ್ಣನ್, ಪ್ರೊ. ರಾಮರತ್ನಂ, ಡಾ.ಆರ್.ಕೆ. ಶ್ರೀಕಂಠನ್ ಅವರಿಗೆ ‘ಸಾಧನಾಚಾರ್ಯ’ ಬಿರುದು ನೀಡಲಾಗಿತ್ತು.

ಸುಗಮ ಸಂಗೀತವನ್ನು ಪ್ರಚುರಪಡಿಸಲು ಸಂಗೀತ ಶಿಕ್ಷಣ, ಕಾರ್ಯಕ್ರಮ, ವಾದ್ಯ ತರಬೇತಿ, ಸಂಗೀತ ತರಬೇತಿ ಕಾರ್ಯಾಗಾರವನ್ನು ಸ್ವರ ಸೌರಭ ಎರಡು ದಶಕಗಳಿಂದ ನಡೆಸಿಕೊಂಡು ಬಂದಿದೆ.

ಪ್ರಸಿದ್ಧ ವಯೋಲಿನ್ ವಾದಕ ಆರ್.ಆರ್. ಕೇಶವಮೂರ್ತಿ ಅವರು ಅಪಾರ ಸಂಖ್ಯೆಯ ವಿದ್ಯಾರ್ಥಿಗಳಿಗೆ ಸಂಗೀತ ಕಲಿಸಿಕೊಡುವ ಮೂಲಕ, ಈ ಕ್ಷೇತ್ರದಲ್ಲಿ ಅವರು ನೆಲೆಯೂರಲು ಕಾರಣರಾಗಿದ್ದಾರೆ. ಸಂಗೀತದ ಕುರಿತು ಬರೆದಿರುವ 13 ಪುಸ್ತಕಗಳು ಈ ಕ್ಷೇತ್ರಕ್ಕೆ ನೀಡಿದ ಕೊಡುಗೆಯಾಗಿದೆ. ಅವರ ಆಶಯದಂತೆ ಸಂಗೀತ ವಿದ್ಯಾಸಾಗರ ಆರ್.ಆರ್. ಕೇಶವಮೂರ್ತಿ ಫೌಂಡೇಷನ್ ಸಂಗೀತದ ಪ್ರಚಾರಕ್ಕಾಗಿ ಕೆಲಸ ಮಾಡುತ್ತಿದೆ.

ಜೆಎಸ್‌ಎಸ್ ಸಭಾಂಗಣ, ಜಯನಗರದ 8ನೇ ಬ್ಲಾಕ್.

ಇಂದು ಸಪ್ತಕ್ ಸಂಗೀತ ಕಛೇರಿ

ಮಾನಸ ಶಾಸ್ತ್ರಿ

ಮಲ್ಲೇಶ್ವರಂನ ಮೈಸೂರು ಶಿಕ್ಷಣ ಸಂಸ್ಥೆ(ಎಂಇಎಸ್) ಮತ್ತು ಸಪ್ತಕ್ ಸಹಭಾಗಿತ್ವದಲ್ಲಿ ಜುಲೈ 20ರಂದು ಇಂದಿರಾ ಹಾಗೂ ನಾರಾಯಣದಾಸ್ ದತ್ತಿನಿಧಿ ಸಂಗೀತ ಕಛೇರಿ ಹಮ್ಮಿಕೊಂಡಿದೆ.

ಕಾರ್ಯಕ್ರಮದಲ್ಲಿ ಗೀತಾ ಹೆಗಡೆ ಮತ್ತು ವ್ಯಾಸಮೂರ್ತಿ ಕಟ್ಟಿ ಅವರ ಶಿಷ್ಯೆ ಮಾನಸ ಶಾಸ್ತ್ರಿಯವರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ. ರೂಪಕ್ ವೈದ್ಯ ಅವರು ತಬಲಾ, ಸೂರಜ್ ಉಪಾಧ್ಯಾಯ ಅವರು ಹಾರ್ಮೋನಿಯಂ ವಾದನ ಮಾಡಲಿದ್ದಾರೆ.

ಸಂಗೀತ ಮತ್ತು ಕೊಳಲು ಜುಗಲ್‌ಬಂದಿಯಾಗಿ, ಬೆಂಗಳೂರಿನ ಅನಿರುದ್ಧ್ ಐತಾಳ್ ಸಂಗೀತ ಕಛೇರಿ ನೀಡಿದರೆ, ಅವರಿಗೆ ಮುಂಬೈನ ಕೊಳಲು ವಾದಕ ಎಸ್. ಆಕಾಶ್, ಬೆಂಗಳೂರಿನ ಸಾರಂಗಿ ವಾದಕ ಸರ್ಫರಾಜ್ ಖಾನ್, ಧಾರವಾಡದ ತಬಲಾ ವಾದಕ ಹೇಮಂತ್ ಜೋಷಿ ಸಾಥ್ ನೀಡಲಿದ್ದು, ಆಸಕ್ತರು ಭಾಗವಹಿಸುವಂತೆ ಸಪ್ತಕ್‌ನ ಸಂಚಾಲಕ ಜಿ.ಎಸ್. ಹೆಗಡೆ ಮತ್ತು ಅನುರಾಧ ಕೋರಿದ್ದಾರೆ.

ಸ್ಥಳ: ಎಂಇಎಸ್ ಕಾಲೇಜಿನ ಹೊಸ ಸಭಾಂಗಣ, ಎಂಪಿಎಲ್ ಶಾಸ್ತ್ರಿ ರಸ್ತೆ, ಮಲ್ಲೇಶ್ವರಂ. ಸಂಜೆ 5.30

ಲಹರಿ

ಏನ್ ಅಡುಗೆ ಮಾಡೀರಿ?

ಅಮಿತಾ ರವಿಕಿರಣ್

ಜಗತ್ತಿನಲ್ಲಿ ಹವ್ಯಾಸವಿರದ ಮನುಷ್ಯರಿರುವುದು ಅತಿ ವಿರಳ. ಹವ್ಯಾಸಗಳು ಮನುಷ್ಯನನ್ನು ಸದಾ ಖುಷಿಯಲ್ಲಿಡುತ್ತವೆ; ಜೀವನ ಚೈತನ್ಯಪೂರ್ಣವಾಗಿರಲು ಸಹಾಯ ಮಾಡುತ್ತವೆ. ಕೆಲವೊಮ್ಮೆ ಹವ್ಯಾಸ ಹುಚ್ಚಾಗಿ ಮಾರ್ಪಾಡಾಗುವುದುಂಟು. ಯಾರಿಗೂ ತೊಂದರೆ ಕೊಡದೆ ಒಳ್ಳೆಯದೇ ಮಾಡುವ ಹುಚ್ಚುಗಳಿವು. ಹಾಗೆ ಅಂಥದೇ ನನಗೆ ಅಂಟಿಕೊಂಡ ಒಂದು ಹುಚ್ಚು ಅಡುಗೆ ಮಾಡುವುದು.

ಭಾರತ ದೇಶದಲ್ಲಿ ಹುಟ್ಟಿದ ಪ್ರತಿ ಜೀವಕ್ಕೂ ಅಡುಗೆ ಮಾಡುವ ಕಲೆ ಎಂಬುದು ಬಳುವಳಿಯಾಗಿ ಬಂದಿರುತ್ತದೆ. ಕೆಲವರು ಬರೀ ದಿನನಿತ್ಯದ ಅಡುಗೆಯ ಮಟ್ಟಿಗೆ ಮಾತ್ರ ಆ ಕಲೆಯನ್ನು ಸೀಮಿತ ಗೊಳಿಸಿದರೆ, ಮತ್ತೊಂದಿಷ್ಟು ಜನ ಜನ್ಮಜಾತವಾಗಿ ಒದಗಿ ಬರುವ ಈ ವಿದ್ಯೆಗೆ ಹೊಸ ಆಯಾಮ ನೀಡಿ ವೃತ್ತಿಯಾಗಿ ಸ್ವೀಕರಿಸುತ್ತಾರೆ.

ಇನ್ನು ಕೆಲವರು ನನಗೆ ಅಡುಗೆ ಬರುವುದಿಲ್ಲ ಎಂದು ಹೇಳಿ ಮಾಡಿದ್ದನ್ನು ತಿಂದು ಸುಮ್ಮನಾದರೆ, ಇನ್ನೊಂದಿಷ್ಟು ಜನ ಮಾಡಿದ ಅಡುಗೆಯಲ್ಲಿ ಐಬು ಹುಡುಕುವ ಕೆಲಸವನ್ನು ಖುಷಿಯಿಂದ ರೂಡಿಸಿಕೊಳ್ಳುತ್ತಾರೆ.

ಈ ನಾಲ್ಕು ರೀತಿಯ ಜನರ ಜೊತೆಗೆ ಅಡುಗೆಯೆಂಬುದನ್ನು ಧ್ಯಾನ ಎಂಬಂತೆ ಅಪ್ಪಿಕೊಂಡ ಇನ್ನೊಂದು ಒಂದು ದೊಡ್ಡ ಬಳಗವೇ ಇದೆ. ಈ ಬಳಗದವರಿಗೆ ಅಡುಗೆ ಮಾಡುವುದು ಎಂಬುದು ಅತ್ಯಂತ ಖುಷಿಯ ವಿಷಯ. ಮನಸಿಗೆ ನೋವಾದರೂ, ಖುಷಿಯಾದರೂ ಅಡುಗೆ ಮಾಡಿದರೆ ಅದೇನೋ ಸಮಾಧಾನ ಸಿಗುತ್ತದೆ. ನಾನು ಕೂಡ ಈ ಬಳಗದವಳೇ.

ನನ್ನ ಮತ್ತು ಅಡುಗೆಯ ನಂಟು ಶುರುವಾಗಿದ್ದು ಚಂದ್ರವ್ವನ ಗುಡಿಸಿಲಿನಿಂದ. ಆಕೆ ನಮ್ಮ ಹಳೆಮನೆ ಮನೆಯ ಮುಂದೆ ಒಂದು ಚಿಕ್ಕ ಗುಡಿಸಿಲು ಕಟ್ಟಿಕೊಂಡು ಇರುತ್ತಿದ್ದಳು. ಆಕೆಯ ಗುಡಿಸಿಲಿಗೆ ಹೋಗಿ ಆಕೆ ಅಡುಗೆ ಮಾಡುವುದನ್ನ ನೋಡುವುದೆಂದರೆ ನಂಗೆ ಮಾಜಿಕ್ ಶೋ ನೋಡಿದಷ್ಟೇ ಖುಷಿ. ಕೆಲವೇ ಮಣ್ಣಿನ ಪಾತ್ರೆಗಳು ಕಟ್ಟಿಗೆಯ ಸೌಟು , ಮೂರು ಇಟ್ಟಿಗೆಯನ್ನ ಒಟ್ಟಿ ಮಾಡಿನ ಒಲೆ. ಬಟ್ಟೆಯ ಗಂಟಿನಲ್ಲಿ ಕಟ್ಟಿ ಇಡುತ್ತಿದ್ದ ಕಿರಾಣಿ ಸಾಮಾನುಗಳು.

ಅದೆಲ್ಲಕ್ಕಿಂತ ಆಕೆ ಸಕ್ಕರೆ ಚಾಪುಡಿ ಹಾಕಿಡುತ್ತಿದ್ದ ಆ ಡಬ್ಬಿ ಮತ್ತು ಚಮಚೆಯಂತೆ ಆಕೆ ಬಳಸುತ್ತಿದ್ದ ಕಪ್ಪೆಚಿಪ್ಪು. ಗದ್ದೆಯಲ್ಲಿ ಕೂಲಿ ಮಾಡಿ ಸಂಜೆ ಸುಸ್ತಾಗಿ ಬರುತ್ತಿದ್ದ ಆಕೆ ಗುಡಿಸಿಲಿನ ಬಾಗಿಲು ಸರಿಸಿ ಒಳ ಹೊಕ್ಕಳೆಂದರೆ ಅದೆಂಥದೋ ಆಹ್ಲಾದ ಆಕೆಯನ್ನು ಆವರಿಸುತ್ತಿತ್ತು. ಇಂಥ ಹೊತ್ತಿನಲ್ಲೇ ನಾನೂ ಬೆಕ್ಕಿನ ಮರಿಯಂತೆ ಆ ಒಂದಂಗಳದ ಮನೆಯೊಳಗೆ ಸೇರಿಕೊಂಡು ಚಂದ್ರವ್ವನ ಒಲೆ ಮುಂದೆ ಊದುಗೊಳವೆ ಹಿಡಿದು ಕೂಡುತ್ತಿದ್ದೆ.

ಒಲೆಯ ಮೂಲೆಗೆ ಬರುತ್ತಲೇ ಚೈತನ್ಯಭರಿತಳಾಗುತ್ತಿದ್ದಳು ದಿವಿನಾಗಿ ಹತ್ತಿಕೊಂಡ ಆಯಾ ಒಲೆಯಮುಂದೆ ಮಂಡಿಮಡಚಿ ಕೂತು ರೊಟ್ಟಿ ಬಡಿಯುತ್ತಿದ್ದರೆ ಆ ಬೆಂಕಿಯ ಹಿತವಾದ ಬೆಳಕು ಆಕೆಯ ಮುಖಕ್ಕೆ ಅದೆಂಥದೋ ಒಂದು ತೇಜ ತಂದು ಕೊಡುತ್ತಿತ್ತು.

ದಿನವಿಡೀ ದುಡಿದು ದಣಿದು ಬರುತ್ತಿದ್ದ ಆಕೆ ಅಡುಗೆ ವಿಷಯ ಬಂದಾಗ ಮಾತ್ರ ಶ್ರಾವಣದ ನವಿಲಾಗುತ್ತಿದ್ದಳು ಒಮ್ಮೆಯೂ ಬೇಸರ ಪಟ್ಟಿದ್ದೆ ನಾನು ನೋಡಿರಲಿಲ್ಲ. ಏನೋ ಒಂದು ತರಕಾರಿ ಅಥವಾ ಹೊಲದ ಬದುವಿನಿಂದ ಹೆಕ್ಕಿ ಕಿತ್ತು ಉಡಿತುಂಬ ತುಂಬಿಸಿಕೊಂಡು ಬರುತ್ತಿದ್ದ ಕೀರ್ಕಸಾಲಿ, ಗೋಳಿ, ಹಕ್ಕರಿಕೆ, ಕೊಳವೆ ಸೊಪ್ಪು, ಗದ್ದೆ ಮೆಂತೆ, ಕೆರೆಸೊಪ್ಪು, ಚಳಿಗಾಲದಲ್ಲಿ ಕಡಲೆ ಸೊಪ್ಪಿನ ಕುಡಿ, ಹೀಗೇ ಏನೇನೋ.

ಆ ಜೋಳಿಗೆಯಲ್ಲಿ ಕೈ ಹಾಕಿದರೆ ಆಕೆಗಷ್ಟೇ ದಕ್ಕುತ್ತಿದ್ದ ಮಸಾಲೆ ಪುಡಿ, ಖಾರದ ಪುಡಿಗಳನ್ನ ಬೆಂದ ತರಕಾರಿ, ಸೊಪ್ಪಿಗೆ ಸೇರಿಸಿ ಮೇಲಿಂದ ಒಂದಷ್ಟು ಗುರೆಳ್ಳು ಪುಡಿ ಉದುರಿಸಿದರೆ ಆಕೆಯ ಅಡುಗೆ ಮುಗಿಯುತ್ತಿತ್ತು.

ಆಕೆ ಮಾಡುತ್ತಿದ್ದ ಆ ಮೂರುವರೆ ರೊಟ್ಟಿಯಲ್ಲಿ ನನಗೂ ಪಾಲಿತ್ತು. ಅದರ ರುಚಿಯನ್ನು ವಿವರಿಸಲಾರೆ! ಆಕೆಯ ಅಡುಗೆ ಮನೆಯ ಸನ್ನಿಧಿಯಲ್ಲಿ ಖುಷಿ ತೃಪ್ತಿ ಆನಂದ ಅನ್ನುವ ಪದಗಳ ನಡುವೆ ಓಲಾಡುವ ಅದ್ಯಾವುದೋ ಒಂದು ಅವರ್ಣನೀಯ ಭಾವ ನನ್ನ ಪಾಲಿಗೆ ಒದಗಿ ಬರುತಿತ್ತು.

ಮೂರೇ ಮಡಿಕೆಯ - ಪಾತ್ರೆ ಇರುವ ಚಂದ್ರವ್ವನ ಅಡುಗೆ ಮನೆಗೆ ಸಂತೆಯಿಂದ ಇನ್ನೊಂದೆರಡು ಹೊಸ ಗಡಿಗೆ ತಂದು ಕೊಡಬೇಕು ಮತ್ತು ಅಷ್ಟು ದುಡ್ಡು ಕೂಡಿಸಬೇಕು ಎಂದು ನಾನು ಪ್ರತಿಜ್ಞೆ ಮಾಡಿಕೊಂಡಿದ್ದೆ.

ಅಮ್ಮನೊಂದಿಗೆ ಸಂತೆಗೆ ಹೋದಾಗಲೆಲ್ಲ '' ನನಗೊಂದು ಮಡಕೆ ಕೊಡಿಸು'' ಎಂದು ಗಂಟುಬಿದ್ದು ಬಯ್ಯಿಸಿಕೊಳ್ಳುತ್ತಿದ್ದೆ.

ನನ್ನ ಅಜ್ಜಿ, ಅಮ್ಮ ಮಾತ್ರ ಆಕೆಯ ಖೋಲಿಗೆ ನಾ ಹೋಗ್ತೀನಿ ಅಂದ್ರೆ ಬಯ್ಯುತ್ತಿದ್ದರು. 'ಪಾಪ ಆಕೆಗೇ ಆಗುವಷ್ಟು ಇರುತ್ತದೋ ಇಲ್ವೋ, ಅದರ ಮಧ್ಯ ನೀನೂ ಹೋಗಿ ರೊಟ್ಟಿಯಲ್ಲಿ ಪಾಲು ತಗೊಳ್ತಿ' ಎಂದು ನನ್ನ ತಡೆಯುತ್ತಿದ್ದರು.

'ಅಮ್ಮಾರ, ಹುಡುಗಿ ಬರ್ಲಿ ಬಿಡ್ರಿ, ಯಾಕ್ ತಡೀತೀರಿ'' ಅಂದು ಚಂದ್ರವ್ವ ಅಜ್ಜಿ ಅಮ್ಮನಿಗೆ ಒಪ್ಪಿಸಿ ನಾನು ಮತ್ತೆ ಆಕೆಯ ಮಾಯಾ ಜಗತ್ತಿಗೆ ಮರಳುವಂತೆ ಮಾಡುತ್ತಿದ್ದಳು.

ಎರಡು ವರ್ಷಗಳ ನಂತರ ಚಂದ್ರವ್ವನ ಮಗಳು ಆಕೆಯನ್ನು ತನ್ನೊಂದಿಗೆ ಬಂದು ಇರುವಂತೆ ಒತ್ತಾಯ ಮಾಡಿ ಕರೆದುಕೊಂಡು ಹೋದಳು. ಗೊಬ್ಬರದ ಗಿಡದ ದಂಟು ಬಳಸಿ ಮಾಡಿದ ಆಕೆಯ ಗುಡಿಸಲ ಗೋಡೆಗಳು ಆಗಾಗ ಚಿಗುರೊಡೆಯುತ್ತಿತ್ತು. ನಾನೂ ಚಂದ್ರವ್ವ ಸೇರಿ ಒಳಬದಿಗೆ ಬಂದ ಚಿಗುರು ಮುರಿದು ಆ ಮರದ ಗೋಡೆಯನ್ನು ಮಟ್ಟಸ ಮಾಡುತ್ತಿದ್ದೆವು. ಆಕೆ ಆ ಜಾಗ ಬಿಟ್ಟು ಹೋದ ನಂತರ ಆ ಗೊಬ್ಬರದ ಗಿಡಗಳು ಮತ್ತೆ ಚಿಗುರಿ, ಹೂವು ಕೂಡ ಅರಳಿಸಿಕೊಂಡು ನಿಂತು ನನ್ನ ನೋಡಿ ನಗುತ್ತಿತ್ತು.

ಚಂದ್ರವ್ವ ಅದ್ಯಾವುದೋ ಮಾಯಕದಲ್ಲಿ ನನಗೂ ಅಡುಗೆ ಹುಚ್ಚು ಹತ್ತಿಸಿಬಿಟ್ಟಳು. ಜೊತೆಗೆ ಅಮ್ಮ, ನನ್ನ ಇಬ್ಬರೂ ಅಜ್ಜಿಯರು, ಅತ್ತೆ, ಚಿಕ್ಕಮ್ಮಂದಿರು ಅಡುಗೆಯನ್ನು ಡ್ಯೂಟಿ ಎಂಬಂತೆ ಮಾಡದೆ ಖುಷಿ ಖುಷಿಯಾಗಿ ಮಾಡುತ್ತಾ ಅದರಲ್ಲೇ ಕಳೆದು ಹೋಗುವ ಪರಿ ನನ್ನ ಅದ್ಯಾವ ಪರಿ ಆಕರ್ಷಿಸಿತ್ತು ಎಂದರೆ ಆರನೇ ಕ್ಲಾಸ್ ಇರುವಾಗಲೇ ನಾನು ಅಡುಗೆ ಮಾಡುವುದನ್ನ ಕಲಿತೆ.

ವಿದೇಶಕ್ಕೆ ಬಂದು ನೆಲೆಸಿದ ಮೇಲೆ ಇಲ್ಲಿ ಸಿಗುವ ತರಕಾರಿಗಳು, ದಿನಸಿಗಳು, ಅಡುಗೆ ಮನೆ ರೂಪುರೇಷೆ ಪೂರ್ತಿ ಬೇರೆಯೇ. ಆದರೂ ಚಂದ್ರವ್ವನ ಅಡುಗೆ ಮನೆ ಮತ್ತು ರೊಟ್ಟಿ ಸುಟ್ಟು ಒಳ್ಳೆಣ್ಣೆ ಸವರಿ ಚಿಟಿಕೆ ಖಾರದ ಪುಡಿ ಹಾಕಿ ಕೊಡುತ್ತಿದ್ದ ಆ ರೊಟ್ಟಿಯ ರುಚಿ ಮತ್ತು ಆಕೆಯ ಮೂರಿಟ್ಟಿಗೆಯ ಒಲೆಯ ಶಾಖ ಈಗಲೂ ನನ್ನ ಅಡುಗೆ ಪ್ರೀತಿಯನ್ನು ಬೆಚ್ಚಗೆ ಕಾಪಿಟ್ಟು ಕಾದಿದೆ. ನನ್ನ ಮಟ್ಟಿಗೆ ಅಡುಗೆ ಎಂಬುದು ಜನರ ಮನಸಿಗೆ ತಲುಪುವ ಸೇತುವೆಯಂತೆ ಕೆಲಸ ಮಾಡಿದೆ ಒಂದು ರಾಶಿ ಒಳ್ಳೆ ಸ್ನೇಹಿತರನ್ನ ಗಡಿಯ ಹಂಗಿಲ್ಲದೆ ಒದಗಿಸಿ ಕೊಟ್ಟಿದೆ.

❖

ಟೆಸ್ಟೋಸ್ಟಿರಾನ್ ನಿರ್ವಹಣೆ

ಮನುಷ್ಯನ ಜೀವನದಲ್ಲಿ ವಯಸ್ಸು ಎಂಬುದು ಸಹಜ ಪ್ರಕ್ರಿಯೆ. ಇದು ಜೀವನದ ಪ್ರತಿ ಹಂತದಲ್ಲಿಯೂ ದೇಹದಲ್ಲಿ ಹಲವು ಬದಲಾವಣೆಗಳನ್ನು ತರುತ್ತವೆ. ವಯಸ್ಸಾದಂತೆ ಟೆಸ್ಟೊಸ್ಟಿರಾನ್ ಹಾರ್ಮೋನ್ ಇಳಿಮುಖವಾಗುತ್ತದೆ. ಟೆಸ್ಟೊಸ್ಟಿರಾನ್ ಪುರುಷರಲ್ಲಿನ ಪ್ರಮುಖ ಹಾರ್ಮೋನ್ . ಮಹಿಳೆಯರಲ್ಲಿ ಇದು ಅಲ್ಪ ಪ್ರಮಾಣದಲ್ಲಿ ಇರುತ್ತದೆ. ಸ್ನಾಯು, ಮೂಳೆಯ ತೂಕ, ಕೆಂಪು ರಕ್ತ ಕಣದ ಮಟ್ಟ ಹಾಗೂ ಜೀವನದ ಸಂತೋಷದಲ್ಲಿ ಈ ಹಾರ್ಮೋನ್ ಪ್ರಮುಖ ಪಾತ್ರವಹಿಸುತ್ತದೆ.

ಪ್ರತಿ ಡೆಸಿಲೀಟರ್‌ಗೆ 300 ನ್ಯಾನೋಗ್ರಾಂ ಟೆಸ್ಟೊಸ್ಟಿರಾನ್ ಹಾರ್ಮೋನ್ ಪುರುಷರಲ್ಲಿರುವುದು ಸಾಮಾನ್ಯ. ಇದಕ್ಕಿಂತ ಕಡಿಮೆ ಪ್ರಮಾಣದ ಟೆಸ್ಟೊಸ್ಟಿರಾನ್ ಇದ್ದರೆ, ಈ ಹಾರ್ಮೋನಿನ ಇಳಿಕೆಯನ್ನು ಸೂಚಿಸುತ್ತದೆ. 19 ಅಥವಾ ಹೆಚ್ಚಿನ ವರ್ಷದ ಮಹಿಳೆಯರಲ್ಲಿ, 15–17 ನ್ಯಾನೋಗ್ರಾಂನಷ್ಟು ಹಾರ್ಮೋನ್ ಪ್ರಾಥಮಿಕವಾಗಿ ಉತ್ಪಾದನೆಯಾಗುತ್ತದೆ. ಪ್ರಾಥಮಿಕವಾಗಿ ಪುರುಷರ ವೃಷಣದಲ್ಲಿ ಈ ಹಾರ್ಮೋನ್ ಉತ್ಪತ್ತಿಯಾಗುತ್ತದೆ. ಮಹಿಳೆಯರ ಅಂಡಾಶಯದಲ್ಲಿ ಅಲ್ಪ ಪ್ರಮಾಣದ ಟೆಸ್ಟೊಸ್ಟಿರಾನ್ ಉತ್ಪತ್ತಿಯಾಗುತ್ತದೆ. ಪುರುಷರ ಸ್ನಾಯು, ಮೂಳೆಯ ಬೆಳವಣಿಗೆ, ದೇಹದ ಕೂದಲುಗಳು ಹಾಗೂ ಸ್ವರದ ಬದಲಾವಣೆ, ಲೈಂಗಿಕತೆ, ಮಾನಸಿಕ ಸ್ಥಿತಿಯ ಮೇಲೆ ಈ ಹಾರ್ಮೋನ್ ಪ್ರಭಾವವನ್ನು ಬೀರುತ್ತದೆ.

30 ವರ್ಷ ದಾಟಿದ ನಂತರ ಪುರುಷರಲ್ಲಿ ಶೇ 1ರಷ್ಟು ಹಾರ್ಮೋನ್ ಪ್ರತಿ ವರ್ಷ ಇಳಿಮುಖವಾಗುತ್ತದೆ. ಇದು ಲೈಂಗಿಕ ನಿರಾಸಕ್ತಿ ತಂದೊಡ್ಡುತ್ತದೆ. ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಇದು ಪರಿಣಾಮ ಬೀರುತ್ತದೆ. ಈ ಹಾರ್ಮೋನ್ ಇಳಿಮುಖಗೊಂಡರೆ ನಿದ್ರಾಹೀನತೆ, ನಿದ್ರೆಯ ವೇಳಾಪಟ್ಟಿಯಲ್ಲಿ ಬದಲಾವಣೆ, ಒಂದೆಡೆ ಗಮನವಿಡಲು ಸಾಧ್ಯವಾಗದೇ ಇರುವುದು, ಮಾಂಸಖಂಡವು ಬಲಹೀನಗೊಳ್ಳುವುದನ್ನು ಗಮನಿಸಬಹುದು. ಮೂಳೆಯ ಶಕ್ತಿ ಕುಂದುವುದು ಮೂಳೆ ಮುರಿತ ಹಾಗೂ ಎದೆಯ ಭಾಗದ ಬೆಳವಣಿಗೆ ಕಾರಣವಾಗುತ್ತದೆ. ಹಾರ್ಮೋನ್ ಬದಲಾವಣೆಯಿಂದ ಖಿನ್ನತೆ ಹಾಗೂ ನಿಃಶ್ಯಕ್ತಿ ಉಂಟಾಗಬಹುದು. ಕೆಳಕಂಡ ಕೆಲವು ಸೂಚನೆಗಳನ್ನು ಪಾಲಿಸುವುದರಿಂದ ಇದನ್ನು ಹತೋಟಿಗೆ ತರಬಹುದು.

ನಿಯಮಿತ ವ್ಯಾಯಾಮ: ಆರೋಗ್ಯ ಜೀವನ ಶೈಲಿಗಾಗಿ ನಿಯಮಿತ ವ್ಯಾಯಾಮ ಅಗತ್ಯ. ಇದರಿಂದ ಮಾಂಸಖಂಡಗಳ ಬೆಳವಣಿಗೆಯ ಜತೆಗೆ, ಹಾರ್ಮೋನ್‌ಗಳ ಹೆಚ್ಚಳಕ್ಕೆ ಸಹಾಯ ಮಾಡುತ್ತದೆ. ಟೆಸ್ಟೊಸ್ಟಿರಾನ್ ರೀತಿಯ ಪ್ರೋಟಿನ್ ಬಿಡುಗಡೆ ಮಾಡುತ್ತದೆ. ಸ್ಕ್ವಾಟ್, ಡೆಡ್‌ಲಿಫ್ಟ್, ಚೆಸ್ಟ್ ಪ್ರೆಸ್‌ನಂತಹ ವ್ಯಾಯಾಮಗಳು ಮಾಂಸಖಂಡಗಳನ್ನು ಬಲಗೊಳಿಸಲು ಸಹಾಯಮಾಡುವ ಮೂಲಕ ಆರೋಗ್ಯ ಜೀವನ ಶೈಲಿಗೆ ಸಹಾಯಮಾಡುತ್ತವೆ.

ಸಮತೋಲಿತ ಆಹಾರ ಬಳಕೆ: ದೈಹಿಕ ಆರೋಗ್ಯದ ದೃಷ್ಟಿಯಿಂದ ಸಮತೋಲಿತ ಆಹಾರ ಅಗತ್ಯ. ಹೆಚ್ಚಿನ ಪ್ರೋಟಿನ್ ಹೊಂದಿರುವ, ಹಣ್ಣು, ತರಕಾರಿ, ಕಾಳುಗಳು ಹಾಗೂ ಕೊಬ್ಬಿನ ಅಂಶವಿರುವ ಆಹಾರ ಸೇವನೆ ಮಾಡಬೇಕು. ನೀರಿನ ಪ್ರಮಾಣ ಸಮತೋಲಿತವಾಗಿರುವಂತೆ ಇರಬೇಕು. ಪ್ರೋಟಿನ್ ಅಂಶ ನಿಯಂತ್ರದಲ್ಲಿಟ್ಟುಕೊಳ್ಳುವುದರ ಜತೆಗೆ ವಿಟಮಿನ್ ಹಾಗೂ ಖನಿಜಯುಕ್ತ ಹಸಿರು ಆಹಾರ ಸೇವನೆ ಮಾಡಬೇಕು.

ಸರಿಯಾದ ನಿದ್ದೆ: 7ರಿಂದ 9ಗಂಟೆ ನಿದ್ದೆಮಾಡದ ಪುರುಷರಲ್ಲಿ ಟೆಸ್ಟೊಸ್ಟಿರಾನ್ ಮಟ್ಟ ಕಡಿಮೆಯಿರುತ್ತದೆ. ಇದು ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ನಿದ್ರಾ ವೇಳಾಪಟ್ಟಿಯನ್ನು ಸರಿಯಾಗಿ ಪಾಲಿಸುವುದರ ಜತೆಗೆ ನಿದ್ದೆಗೆ ಅವಶ್ಯಕವಿರುವ ವಾತಾವರಣ ನಿರ್ಮಿಸಿಕೊಳ್ಳಬೇಕು.

ಒತ್ತಡ ನಿರ್ವಹಣೆ: ಒತ್ತಡವು ಹಾರ್ಮೋನಿನ ಮೇಲೆ ಪರಿಣಾಮವನ್ನು ಬೀರುತ್ತದೆ. ಕಡಿಮೆ ಪ್ರಮಾಣದ ಟೆಸ್ಟೊಸ್ಟಿರಾನ್ ಉತ್ಪತ್ತಿಯು ದೈಹಿಕ ಒತ್ತಡಕ್ಕೆ ಕಾರಣವಾಗುತ್ತದೆ. ನಿರಂತರವಾದ ವ್ಯಾಯಾಮದಿಂದ ಎಂಡೋಫಿನ್ ಹಾರ್ಮೋನ್ ಅನ್ನು ಬಿಡುಗಡೆಯಾಗುತ್ತದೆ. ಇದು ಟೆಸ್ಟೊಸ್ಟಿರಾನ್ ಉತ್ಪತ್ತಿಯನ್ನು ಹೆಚ್ಚಿಸುತ್ತದೆ ಹಾಗೂ ಒತ್ತಡವನ್ನು ಕಡಿಮೆ ಮಾಡುತ್ತದೆ.

ದೇಹದ ತೂಕ ನಿರ್ವಹಣೆ: ಅತಿಯಾದ ತೂಕ, ಹೊಟ್ಟೆಯ ದಪ್ಪವನ್ನು ನಿರಂತರವಾದ ವ್ಯಾಯಾಮದಿಂದ ಕಡಿಮೆ ಮಾಡಬೇಕು. ಆಗ ಟೆಸ್ಟೊಸ್ಟಿರಾನ್ ಮಟ್ಟವನ್ನು ನಿರ್ವಹಿಸಬಹುದು. ಸರಿಯಾದ ಆಹಾರ ಕ್ರಮದ ಮತ್ತು ಯೋಗ ಮತ್ತು ವ್ಯಾಯಾಮದಿಂದ ದೇಹದ ತೂಕವನ್ನು ನಿಯಂತ್ರಣದಲ್ಲಿರಿಸಬೇಕು.

ಡಾ.ವೆಂಕಟೇಶ್ ಗಿರಿ, ಶ್ರೀ ಮಕ್ಕಳ ಆಸ್ಪತ್ರೆ

ಗುಣಲಕ್ಷಣಗಳಿಲ್ಲದ ಸರ್ಕೋಮಾ

ಮೂಳೆ, ಸ್ನಾಯು ಮತ್ತು ಕೊಬ್ಬಿನ ಸಂಯೋಜಿತ ಅಂಗಾಂಶಗಳಿಂದ ಸರ್ಕೋಮಾ ಕ್ಯಾನ್ಸರ್ ಉಂಟಾಗುತ್ತದೆ. ಒಟ್ಟು ಕ್ಯಾನ್ಸರ್ ಪ್ರಕರಣಗಳಲ್ಲಿ ಕೇವಲ ಶೇ 1ರಷ್ಟು ಮಾತ್ರ ಈ ಕ್ಯಾನ್ಸರ್ ಕಂಡುಬರುತ್ತದೆ.

ಅಸ್ಪಷ್ಟ ಹಾಗೂ ಯಾವುದೇ ಗುಣಲಕ್ಷಣಗಳಿಲ್ಲದೇ ಈ ರೋಗ ಬಹುಬೇಗ ಬೆಳವಣಿಗೆಯ ಹಂತವನ್ನು ಕಾಣಬಹುದು. ಹಾಗಾಗಿ ಪತ್ತೆ ಹಚ್ಚುವುದು ಕಷ್ಟ. ಸರ್ಕೋಮಾ ಜಾಗೃತ ಮಾಸ ನಡೆಯುತ್ತಿರುವ ಸಂದರ್ಭದಲ್ಲಿ ಇದರ ಬಗ್ಗೆ ಅರಿವು ಪಡೆಯುವುದು ಅಗತ್ಯ.

ಊತ, ನೋವು, ತೂಕ ನಷ್ಟ, ದಣಿವು ಮತ್ತು ಹಸಿವಿನ ಗುಣಲಕ್ಷಣಗಳನ್ನು ಪ್ರಾರಂಭಿಕ ಹಂತದಲ್ಲಿಯೇ ಗುರುತಿಸುವುದು ವೈದ್ಯರಿಗೆ ಸವಾಲಾಗಿದೆ. ಸರ್ಕೋಮಾ ಸಾಮಾನ್ಯವಾಗಿ ಕಾರ್ಸಿನೋಮಾಗಳಿಗಿಂತ ಹೆಚ್ಚು ಭಿನ್ನವಾಗಿರುವ ಕ್ಯಾನ್ಸರ್. ಹಾಗಾಗಿ ವಿಶೇಷ ಜಾಗೃತಿಯ ಅಗತ್ಯವಿದೆ.

ಈ ರೋಗವು ಸರ್ಕೋಮಾ ಮೆಸೆಂಚೈಮಲ್ ಕೋಶಗಳಿರುವ ಆನುವಂಶಿಕ ರೂಪಾಂತರಿಗಳಿಂದ ಬೆಳವಣಿಗೆಯನ್ನು ಹೊಂದುತ್ತದೆ. ನಂತರ ಇಡೀ ದೇಹದ ಮೇಲೆ ಪರಿಣಾಮ ಬೀರುತ್ತದೆ. ಪ್ರಾಥಮಿಕವಾಗಿ ಶ್ವಾಸಕೋಶ ಮತ್ತು ಯಕೃತ್ತಿನ ಭಾಗದಲ್ಲಿ ಹರಡುತ್ತದೆ. ಮತ್ತು ದಗ್ಧರಸ ಗ್ರಂಥಿಗಳಿಗೂ ಹರಡುತ್ತದೆ. ವಯಸ್ಸಾದವರಲ್ಲಿ ಕಾಣಿಸಿಕೊಳ್ಳುವ ಕರ್ಸಿನೋಮಾಗಳಿಗೆ ಹೋಲಿಸಿದರೆ ಸರ್ಕೋಮಾಗಳು ಕಡಿಮೆಯಾಗಿರುತ್ತವೆ.

ಆಸ್ಟಿಯೋಸರ್ಕೋಮಾ ಮತ್ತು ಎವಿಂಗ್ಸ್ ಸರ್ಕೋಮಾದ ವಿವಿಧ ಬಗೆಗಳು ಮಕ್ಕಳು ಹಾಗೂ ಹದಿಹರೆಯವರಲ್ಲಿ, ಲಿಪೋಸಾರ್ಕೋವಾ ಮತ್ತು ಲಿಯೋಮಿಯೋ ಸರ್ಕೋಮಾಗಳು ವಯಸ್ಕರಲ್ಲಿ ಕಾಣಿಸಿಕೊಳ್ಳುತ್ತವೆ.

ಸರ್ಕೋಮಾಗೆ ಕಾರಣವಿನ್ನು ಪತ್ತೆಯಾಗಿಲ್ಲ. ಆದರೆ ಇದರಲ್ಲಿ ರೇಡಿಯೇಶನ್ ಹಾಗೂ ಆನುವಂಶಿಕ ಪ್ರವೃತ್ತಿಗಳನ್ನೊಳಗೊಂಡಂತೆ ಕೆಲವು ಅಪಾಯಕಾರಿ ಅಂಶಗಳನ್ನು ಗುರುತಿಸಲಾಗಿದೆ. ಕೈಗಾರಿಕೆಗಳ ರಾಸಾಯನಿಕಗಳು ಇದಕ್ಕೆ ಕಾರಣವಾಗುವ ಸಾಧ್ಯತೆಯಿದೆ. ಸರ್ಕೋಮಾಗಳು ನಯವಾಗಿ ಹಾಗೂ ದುಂಡಾದ ರಚನೆಯಿಂದ ಕಂಡುಬರುತ್ತದೆ.

ವಿವಿಧ ಹಂತಗಳಲ್ಲಿ ಕಂಡುಬರುವ ಸರ್ಕೋಮಾ ಕ್ಯಾನ್ಸರ್‌ನ ತೀವ್ರತೆಯ ಆಧಾರದ ಮೇಲೆ ಚಿಕಿತ್ಸಾ ವಿಧಾನ ಅವಲಂಬನೆಗೊಂಡಿರುತ್ತದೆ. ತಡವಾಗಿ ಪತ್ತೆಯಾದರೆ ಗುಣಪಡಿಸುವ ಪ್ರಮಾಣ ಕಡಿಮೆ ಇರುತ್ತದೆ. ಮಕ್ಕಳಲ್ಲಿ ಕಂಡುಬರುವ ಈ ರೋಗವನ್ನು ಕಡಿಮೆ ಮಾಡುವ ಪ್ರಮಾಣ ಹೆಚ್ಚಿದೆ. ಸದ್ಯಕ್ಕೆ ಅತ್ಯುತ್ತಮ ಚಿಕಿತ್ಸೆಗಳು ದೊರಕುವುದರಿಂದ ರೋಗಿಗಳ ಜೀವನಮಟ್ಟ ಹಿಂದಿಗಿಂತಲೂ ಉತ್ತಮವಾಗಿದೆ.

ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಯಾಗಿ ತಜ್ಞ ವೈದ್ಯರಿಂದ ವಿಶೇಷ ಕೇಂದ್ರಗಳಲ್ಲಿ ಚಿಕಿತ್ಸೆ ಸಿಗಬೇಕು. ಧೂಮಪಾನ, ಮದ್ಯಪಾನ ಚಟಗಳಿಂದ ಹಿಂದೆ ಸರಿದು ಉತ್ತಮ ಜೀವನ ಶೈಲಿ ಅಳವಡಿಸಿಕೊಳ್ಳಬೇಕು.

ಡಾ. ರಾಧೇಶ್ಯಾಂ, ಬೋನ್ ಮ್ಯಾರೋ ಟ್ರಾನ್ಸ್‌ಪ್ಲಾಂಟ್ ತಜ್ಞ,ಸಂಪ್ರದಾ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ❖

ಕಾಳಜಿ

ಫ್ಯಾಟಿ ಲಿವರ್ ಎಚ್ಚರ ತಪ್ಪದಿರಿ

ಒಂದು ಗುಟುಕು ಆಲ್ಕೋಹಾಲ್ ಕುಡಿಯದೆಯೂ ಯಕೃತ್ತು (ಲಿವರ್) ಹಾನಿಗೆ ಒಳಗಾಗುವ ಸಾಧ್ಯತೆ ಇರುತ್ತದೆ. ಇದನ್ನು ನಾನ್ ಆಲ್ಕೊಹಾಲಿಕ್ ಫ್ಯಾಟಿ ಲಿವರ್ ಡಿಸಿಸ್ (NAFLD) ಎನ್ನಲಾಗುತ್ತದೆ. ಹೆಚ್ಚಾಗಿ ಬೊಜ್ಜು ಇರುವವರಲ್ಲಿ ಈ ಸಮಸ್ಯೆ ಕಾಣಿಸಿಕೊಳ್ಳಬಹುದು.

ವಿಪರೀತ ಎನ್ನುವಷ್ಟು ಬೊಜ್ಜು ಶೇಖರಣೆಯಾಗುವುದರಿಂದ ಲಿವರ್ ಎನ್ನುವ ಅಂಗವು ಕೈಗೊಳ್ಳುವ ಚಟುವಟಿಕೆಗಳ ಮೇಲೆ ವ್ಯತಿರಿಕ್ತವಾದ ಪರಿಣಾಮ ಬೀರುತ್ತದೆ. ಇದರಿಂದ ಲಿವರ್‌ನ ಕಾರ್ಯವೈಖರಿಯಲ್ಲಿ ಅಡ್ಡಿ ಉಂಟಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಫ್ಯಾಟಿ ಲಿವರ್ ಸಮಸ್ಯೆ ಅಧಿಕಗೊಳ್ಳುತ್ತಿದ್ದು, ಜೀವನಶೈಲಿಯೇ ಇದಕ್ಕೆ ಪ್ರಮುಖ ಕಾರಣ. ಕೊಬ್ಬಿದ ಯಕೃತ್ತಿನ ಕಾಯಿಲೆ (NAFLD) ಅಪರೂಪಕ್ಕೆ ಆಲ್ಕೋಹಾಲ್ ಸೇವಿಸುವವರಲ್ಲಿಯೂ ಕಾಣಿಸಿಕೊಳ್ಳಬಹುದು.

ಜಾಗತಿಕ ಮಟ್ಟದಲ್ಲಿಯೂ ಫ್ಯಾಟಿ ಲಿವರ್ ದೊಡ್ಡ ಸಮಸ್ಯೆಯಾಗಿದ್ದೂ ಸಣ್ಣ ಪ್ರಮಾಣದ ಸ್ಟಿಟೋಸಿಸ್‌ನಿಂದ ಹಿಡಿದು ಸ್ಟೀಟೋಹೈಪಟೈಟಿಸ್‌ನವರೆಗೂ ಯಕೃತ್ತಿನ ಸಮಸ್ಯೆ ಗಂಭೀರಗೊಳ್ಳುವ ಸಾಧ್ಯತೆ ಹೆಚ್ಚು. ಮೆಟಬಾಲಿಕ್ ಡಿಸ್‌ಫಂಕ್ಷನ್- ಅಸೋಸಿಯೇಟೆಡ್ ಸ್ಟಿಟೋಟಿಕ್ ಲಿವರ್ ಡಿಸೀಸ್ (MASLD) ಕ್ರಮೇಣ ಮೆಟಾಬಾಲಿಕ್ ಡಿಸ್ಫಂಕ್ಷನ್- ಅಸೋಸಿಯೇಟೆಡ್ ಸ್ಟಿಟೊಹೆಪಟೈಟಿಸ್ (MASH) ಗಂಭೀರ ಸ್ವರೂಪಕ್ಕೆ ತಿರುಗಬಹುದು.

ಏನಿದು ಸ್ಟೀಟೋಹೈಪಟೈಟಿಸ್?

ಯಕೃತ್ತಿನಲ್ಲಿ ಯಥೇಚ್ಛವಾಗಿ ಕೊಬ್ಬು ಶೇಖರಣೆಯಾಗುತ್ತದೆ. ಅತಿಯಾದ ಕುಡಿತ ಇರುವವರಲ್ಲಿ ಉಂಟಾಗುವಂತೆಯೇ ಯಕೃತ್ತಿನ ಊರಿಯೂತ, ನಂತರದ ಹಂತವಾಗಿ ಸಿರೋಸಿಸ್ ಉಂಟಾಗಬಹುದು. ಕ್ರಮೇಣ ಯಕೃತ್ತಿನಲ್ಲಿ ಕ್ಯಾನ್ಸರ್ ಉಂಟಾಗಲು ಕಾರಣವಾಗಬಹುದು. ಹಾಗಾಗಿ ಇದನ್ನು ನಿರ್ಲಕ್ಷ್ಯಿಸುವಂತಿಲ್ಲ.

ಸಾಮಾನ್ಯವಾಗಿ ಎಂಎಎಸ್‌ಎಲ್‌ಡಿ ಲಕ್ಷಣರಹಿತವಾಗಿರುತ್ತದೆ. ತೀವ್ರಗೊಂಡಾಗ ಆಯಾಸ, ಅಸ್ವಸ್ಥತೆ, ಪದೇ ಪದೇ ಜ್ವರ ಬರುವುದು. ಮೇಲಿನ ಬಲ ಭಾಗದ ಹೊಟ್ಟೆಯಲ್ಲಿ ಅತಿಯಾದ ನೋವು ಉಂಟಾಗಬಹುದು. ಎಂಎಎಸ್‌ಎಚ್ ಮತ್ತು ಸಿರೋಸಿಸ್ ಉಂಟಾದರೆ ಚರ್ಮ ತುರಿಕೆ, ಕಿಬ್ಬೊಟ್ಟೆಯ ಊತ, ಉಸಿರಾಟದ ತೊಂದರೆ, ಕಾಲುಗಳ ಊತ, ಚರ್ಮದಡಿಯಲ್ಲಿ ಜೇಡದಂಥ ರಕ್ತನಾಳಗಳು ಕಾಣಿಸಿಕೊಳ್ಳಬಹುದು. ಅಂಗೈನಲ್ಲಿ ಕೆಂಪು ದದ್ದು ಉಂಟಾಗಬಹುದು. ಚರ್ಮ ಹಾಗೂ ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗುತ್ತದೆ.

ಕೊಬ್ಬಿನಿಂದ ಕೂಡಿದ ಯಕೃತ್ತುಗಳಿಗೆ ಗಂಭೀರ ಸ್ವರೂಪದ ಎಂಎಎಸ್‌ಎಚ್ ಹೇಗೆ ಉಂಟಾಗುತ್ತದೆ ಎಂಬುದಕ್ಕೆ ನಿಖರ ಕಾರಣ ಇನ್ನೂ ಕಂಡು ಹಿಡಿಯಲು ಸಾಧ್ಯವಾಗಿಲ್ಲ. ವಂಶವಾಹಿನಿ, ಅಧಿಕತೂಕ ಅಥವಾ ಬೊಜ್ಜು, ಇನ್ಸುಲಿನ್ ಬಳಕೆ, ಟೈಪ್ 2 ಡಯಾಬಿಟಿಸ್, ಕೊಬ್ಬಿನ ಮಟ್ಟ ಇವೆಲ್ಲವೂ ಕಾರಣಗಳಾಗಬಹುದು. ಇವುಗಳಲ್ಲದೇ ಕೆಲವು ಕಾರಣಗಳು ಹೀಗಿವೆ...

- ಅತಿಯಾದ ಫಾಸ್ಟ್‌ಫುಡ್‌ಗಳ ಸೇವನೆ
- ಹಣ್ಣು ಹಾಗೂ ತರಕಾರಿ ಸೇವನೆ ಕಡಿಮೆ ಮಾಡುವುದು
- ಅನಾರೋಗ್ಯಕರ ಮತ್ತು ವ್ಯಾಯಾಮರಹಿತ ಜೀವನ
- ಸುಲಭವಾಗಿ ಸಿಗುವ ಔಷಧಿಗಳ ಸೇವನೆಯಿಂದಲೂ ಯಕೃತ್ತು ಹಾನಿಗೊಳಗಾಗಬಹುದು.

ಡಾ. ಲಾರೆನ್ಸ್ ಪೀಟರ್, ಗ್ಯಾಸ್ಟ್ರೋಎಂಟ್ರಾಲಜಿ ಮತ್ತು ಹೆಪಟಾಲಜಿ ವಿಭಾಗದ ಮುಖ್ಯಸ್ಥ, ಸಾಕ್ರಾ ವರ್ಲ್ಡ್ ಆಸ್ಪತ್ರೆ.]



ತಡೆಗಟ್ಟುವುದು ಹೇಗೆ?



ನಿಯಮಿತವಾಗಿ ಹಾಗೂ ಕ್ರಮಬದ್ಧವಾಗಿ ಸತ್ವಯುತ ಆಹಾರ ಸೇವನೆ ಮಾಡುವುದರಿಂದ ಬೊಜ್ಜಿನ ಸಮಸ್ಯೆಯನ್ನು ನಿವಾರಿಸಬಹುದು. ಅತಿಯಾದ ಒತ್ತಡದಿಂದಲೂ ಪದೇ ಪದೇ ಹಸಿವಾಗುವ ಸಾಧ್ಯತೆ ಇರುತ್ತದೆ. ಇಂಥ ಸಮಯದಲ್ಲಿ ಯಾವ ಆಹಾರ ತಿನ್ನಬೇಕು ಎಂಬುದರ ಬಗ್ಗೆ ಅರಿವಿರಬೇಕು. ಇಲ್ಲವಾದರೆ ತಾತ್ಕಾಲಿಕ ಹಸಿವು ನಿವಾರಣೆಗೆ ಜಂಕ್‌ಫುಡ್‌ಗಳನ್ನು ಸೇವನೆ ಮಾಡುವುದರಿಂದ ದೇಹದಲ್ಲಿ ಕೊಬ್ಬಿನಂಶ ಶೇಖರಣೆಯಾಗುತ್ತದೆ.

ಆರೋಗ್ಯಕರ ತೂಕವನ್ನು ನಿರ್ವಹಣೆ ಮಾಡುವುದು ಮುಖ್ಯ. ಕೆಲವರಿಗೆ ಹೆಚ್ಚು ಆಹಾರ ತಿಂದರೂ ತೂಕ ಹೆಚ್ಚುವುದಿಲ್ಲ. ಕೆಲವರಿಗೆ ಸ್ವಲ್ಪ ತಿಂದರೂ ದೇಹದ ತೂಕ ಹೆಚ್ಚುತ್ತದೆ. ಹಾಗಾಗಿ ಆಹಾರವನ್ನು ಯಾವ ಪ್ರಮಾಣದಲ್ಲಿ ಸೇವಿಸಬೇಕು ಎಂಬುದರ ಸ್ಪಷ್ಟ ಅರಿವಿರಬೇಕು. ತೂಕ ಅತಿಯಾದ ಕೂಡಲೇ ಅದರ ನಿರ್ವಹಣೆಗೆ ಮುಂದಾಗುವುದು ಒಳಿತು. ಬೊಜ್ಜು ದೇಹದ ವಿವಿಧ ಅಂಗಗಳ ಸಮರ್ಪಕ ಕಾರ್ಯಚಟುವಟಿಕೆಗಳಿಗೆ ಅಡ್ಡಿಯನ್ನು ಉಂಟು ಮಾಡಬಹುದು.

ಅತಿ ಕ್ಯಾಲೋರಿ ಇರುವ, ಕೊಬ್ಬಿನಂಶ ಇರುವ ಆಹಾರಪದಾರ್ಥಗಳನ್ನು ತ್ಯಜಿಸಿ. ಹೆಚ್ಚು ಹಸಿರು ತರಕಾರಿ, ಹಣ್ಣು, ಬೇಳೆಕಾಳುಗಳನ್ನು ಸೇವಿಸಿ. ಹಾಗೆ ಬಿಳಿ ಬ್ರೆಡ್, ಬಿಳಿ ಅನ್ನ ಹಾಗೂ ಆಲೂಗಡ್ಡೆಯನ್ನು ತ್ಯಜಿಸಿ.

ಸಕ್ಕರೆ ಸೇವನೆ ಪ್ರಮಾಣಕ್ಕೆ ಕಡಿವಾಣ ಹಾಕಿ. ಸಾಫ್ಟ್ ಡ್ರಿಂಕ್ಸ್, ಅತಿಸಕ್ಕರೆ ಇರುವ ಕಾಫಿ, ಟೀ, ಜ್ಯೂಸ್‌ಗಳನ್ನು ತ್ಯಜಿಸಿ. ಚೆನ್ನಾಗಿ ನೀರು ಕುಡಿಯಿರಿ.

ಇದರ ಜತೆಗೆ ಕುಡಿಯುವ ಅಭ್ಯಾಸವಿದ್ದರೆ ಅದನ್ನು ತ್ಯಜಿಸಿ ಬಿಡಿ. ಇದರಿಂದ ಯಕೃತ್ತಿಗೆ ಇನ್ನಷ್ಟು ತೊಂದರೆಯಾಗುವುದನ್ನು ತಪ್ಪಿಸಬಹುದು.

ಯಕೃತ್ತಿನ ಆರೋಗ್ಯಕ್ಕೆ ಓಟ, ಈಜು, ಸೈಕ್ಲಿಂಗ್ ಮಾಡಬಹುದು. ಜತೆಗೆ ಏರೋಬಿಕ್ ವ್ಯಾಯಾಮಗಳು ಯಕೃತ್ತಿನ ಆರೋಗ್ಯಕ್ಕೆ ಪೂರಕವಾಗಿವೆ. ಇಂಥ ವ್ಯಾಯಾಮಗಳಿಂದ ಯಕೃತ್ತಿಗೆ ರಕ್ತದ ಹರಿವು ಹೆಚ್ಚುಗೊಳ್ಳುವುದಲ್ಲದೇ, ಶೇಖರಣೆಗೊಂಡ ಕೊಬ್ಬಿನ ಅಂಶವನ್ನು ವಿಭಜನೆ ಮಾಡಲು ಸಹಕರಿಸುತ್ತದೆ.

ಶನಿವಾರ, ಜುಲೈ 20, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 201 | ಪುಟ 24
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಆ ದಿನಗಳ
ರಜೆ ಬೇಕೆ ಬೇಡವೆ
ಎಂಬ ಜಿಜ್ಞಾಸೆ
ಆಗದಿರಲಿ ಸಜೆ
ಎಂಬುದೇ ಆಕಾಂಕ್ಷೆ

ಕಿರುನಿದ್ರೆಗಾಗಿ ಶಾಸಕರಿಗೆ ವಿಶೇಷ ಆಸನ! 10
ನೀಟ್ ಇರಬೇಕೇ ಬೇಡವೇ?
ಮೈಕ್ರೊಸಾಫ್ಟ್ ದಿಢೀರ್ ಸ್ತಬ್ಧ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,604	24,530	₹76,200 (ಬೆಂಗಳೂರು)	₹92,700 (ಬೆಂಗಳೂರು)	83.70

‘ಲೋಕಾ’ ಕೋಟಿ ಬೇಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದ ಮೇಲೆ 11 ಮಂದಿ ಸರ್ಕಾರಿ ಅಧಿಕಾರಿಗಳು ಹಾಗೂ ಒಬ್ಬ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಸೇರಿದ 60 ಸ್ಥಳಗಳಲ್ಲಿ ಶುಕ್ರವಾರ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ಒಟ್ಟು ₹1.20 ಕೋಟಿ ನಗದು ವಶಪಡಿಸಿಕೊಂಡಿದ್ದಾರೆ.

ಆರೋಪಿಗಳ ಬಳಿ ಒಟ್ಟು ₹49.85 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ ಮಾಡಲಾಗಿದೆ. ಈ ಪೈಕಿ ₹33.85 ಕೋಟಿ ಮೌಲ್ಯದ ಸ್ಥಿರಾಸ್ತಿ, ₹5.70 ಕೋಟಿ ಮೌಲ್ಯದ ಚಿನ್ನಾಭರಣ, ₹2.05 ಕೋಟಿ ಮೌಲ್ಯದ ವಾಹನಗಳು, ₹4.05 ಕೋಟಿ ಮೌಲ್ಯದ ಇತರ ಸ್ವತ್ತುಗಳು ಸೇರಿವೆ ಎಂದು ಲೋಕಾಯುಕ್ತ ಪೊಲೀಸ್ ವಿಭಾಗದ ಪ್ರಕಟಣೆ ತಿಳಿಸಿದೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಶಿವಮೊಗ್ಗ, ತುಮಕೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 12 ಎಫ್‌ಐಆರ್ ದಾಖಲಿಸಲಾಗಿದೆ.

10ನೇ ಪುಟ ನೋಡಿ

ಹ್ಯೂಬ್ಲೊ ವಾಚ್, ಬಂದೂಕು ವಶ

ವಾಣಿಜ್ಯ ತೆರಿಗೆ ಇಲಾಖೆಯ ಹೆಚ್ಚುವರಿ ನಿರ್ದೇಶಕರಾಗಿದ್ದು, ನಿಯೋಜನೆ ಮೇಲೆ ಇನ್ವೆಸ್ಟ್ ಕರ್ನಾಟಕ ಫೋರಂನಲ್ಲಿ ಕಾರ್ಯನಿರ್ವಹಿಸು-ತ್ತಿರುವ ಸಿ.ಟಿ. ಮುದ್ದುಕುಮಾರ್ ಅವರ ಬ್ಯಾಂಕ್ ಲಾಕರ್‌ನಲ್ಲಿ ದುಬಾರಿ ಬೆಲೆಯ ಹ್ಯೂಬ್ಲೊ ಮತ್ತು ಫಾಸಿಲ್ ಕೈಗಡಿಯಾರಗಳು ಪತ್ತೆಯಾಗಿವೆ.

ಸಿ.ಟಿ ಮುದ್ದುಕುಮಾರ್ ಅವರ ಮನೆಯಲ್ಲಿ ಪತ್ತೆಯಾದ ದುಬಾರಿ ಬೆಲೆಯ ಕೈಗಡಿಯಾರಗಳು

ಮುದ್ದುಕುಮಾರ್ ಅವರ ತೋಟದ ಮನೆಯಲ್ಲಿ ಪಿಸ್ತೂಲ್ ಮತ್ತು ಏರ್ ಗನ್ ಕೂಡ ಪತ್ತೆಯಾಗಿವೆ. ಕೆಐಎಡಿಬಿಯಿಂದಲೇ ವಸಂತ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ₹3 ಕೋಟಿ ಮೌಲ್ಯದ ಕೈಗಾರಿಕಾ ಶೆಡ್ ಪಡೆದಿರುವುದು ಪತ್ತೆಯಾಗಿದೆ.

ಕೆ.ಜಿ.ಗಟ್ಟಲೆ ಚಿನ್ನ ಎಸೆದ ಅಧಿಕಾರಿ

ಲೋಕಾಯುಕ್ತ ಪೊಲೀಸರು ದಾಳಿ ನಡೆಸಿರುವುದು ಗೊತ್ತಾಗುತ್ತಿದ್ದಂ-ತೆಯೇ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಚೀಲವೊಂದರಲ್ಲಿ ಹಾಕಿ ಪಕ್ಕದ ಮನೆಯ ಆವರಣಕ್ಕೆ ಅಧಿಕಾರಿ ಮೀರ್ ಅಕ್ತರ್ ಅಲಿ ಎಸೆದಿದ್ದರು. ‘ಆರೋಪಿಯು ಚೀಲವನ್ನು ಎಸೆದ ಶಬ್ದ ಅಧಿಕಾರಿಗಳಿಗೆ ಕೇಳಿಸಿತ್ತು. ಚೀಲವನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ–2ರ ಎಸ್‌ಪಿ ಕೆ. ವಂಶಿಕೃಷ್ಣ ತಿಳಿಸಿದರು.

ವಿ.ಎಯಿಂದ ₹1.10 ಕೋಟಿ ವಶ

ರಾಮದುರ್ಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಹಲಗತ್ತಿ ಚೆಕ್ ಪೋಸ್ಟ್ ಬಳಿ ಗ್ರಾಮ ಲೆಕ್ಕಾಧಿ-ಕಾರಿಯೊಬ್ಬರು (ವಿ.ಎ) ದಾಖಲೆ ಇಲ್ಲದೇ ಸಾಗಿಸುತ್ತಿದ್ದ ₹1.10 ಕೋಟಿಗೂ ಅಧಿಕ ನಗದನ್ನು ರಾಮದುರ್ಗ ಪೊಲೀಸರು ಶುಕ್ರವಾರ ವಶಕ್ಕೆ ಪಡೆದರು.

ನಿಪ್ಪಾಣಿಯ ಗ್ರಾಮ ಲೆಕ್ಕಾಧಿಕಾರಿ, ರಾಮದುರ್ಗ ತಾಲ್ಲೂಕಿನ ಹೊಸೂರು ಗ್ರಾಮದ ವಿಠ್ಠಲ ಶಿವಪ್ಪ ಢವಳೇಶ್ವರ ಅವರು ತಮ್ಮ ಕಾರಿನಲ್ಲಿ ಈ ಹಣ ಸಾಗಿಸುತ್ತಿ-ದ್ದರು. ಬಾಗಲಕೋಟೆಗೆ ಹಣ ಸಾಗಣೆ ಆಗುತಿತ್ತು. ಖಚಿತ ಮಾಹಿತಿ ಆಧಾರದಲ್ಲಿ ಕಾರು ಪರಿಶೀಲಿಸಿದ ಪೊಲೀಸರಿಗೆ ₹1.10 ಕೋಟಿ ನಗದು ಸಿಕ್ಕಿದೆ. ಹಣವನ್ನು ಪೊಲೀಸರು ವಶಕ್ಕೆ ಪಡೆದು, ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಒಪ್ಪಿಸಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಅಕ್ರಮಕ್ಕೆ ಯೂನಿಯನ್ ಬ್ಯಾಂಕ್ ಕಾರಣ: ಸಿ.ಎಂ

ನಿರ್ಮಲಾ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರದ ಸ್ವಾಮ್ಯದ ಯೂನಿಯನ್ ಬ್ಯಾಂಕ್‌ನಲ್ಲಿರುವ ಖಾತೆಯಿಂದ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮವಾಗಿ ವರ್ಗಾವಣೆಯಾಗಿದೆ. ಹಗರಣದ ಹೊಣೆಹೊತ್ತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರಾಜೀನಾಮೆ ಕೊಡಲಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.

ಸಿದ್ದರಾಮಯ್ಯ

ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆ ಆಗಿರುವ ಹಗರಣ ಕುರಿತು ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಶುಕ್ರವಾರ ಉತ್ತರ ನೀಡಿದ ಅವರು, ‘ಬ್ಯಾಂಕ್ ಅಧಿಕಾರಿಗಳಿಂದಲೇ ಅಕ್ರಮ ನಡೆದಿದೆ ಎಂದು ಯೂನಿಯನ್ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಗಿರೀಶ್ ಚಂದ್ರ ಜೋಶಿ ಸಿಬಿಐ ಅಧಿಕಾರಿಗಳಿಗೆ ಬರೆದ ಪತ್ರದಲ್ಲಿ ಒಪ್ಪಿಕೊಂಡಿದ್ದಾರೆ. ಬ್ಯಾಂಕ್ ಕೇಂದ್ರ ಸರ್ಕಾರದ ಹಣಕಾಸು ಇಲಾಖೆಯ ಅಧೀನದಲ್ಲಿದೆ. ಕೇಂದ್ರ ಹಣಕಾಸು ಸಚಿವರು ಈ ಹಗರಣದ ಹೊಣೆ ಹೊರುತ್ತಾರೆಯೇ’ ಎಂದು ಪ್ರಶ್ನಿಸಿದರು.

₹ 25 ಲಕ್ಷ ಪರಿಹಾರ ಘೋಷಣೆ

ವಾಲ್ಮೀಕಿ ಅಭಿವೃದ್ಧಿ ನಿಗಮದ ಲೆಕ್ಕಾಧೀಕ್ಷಕ, ಆತ್ಮಹತ್ಯೆ ಮಾಡಿಕೊಂಡಿರುವ ಪಿ. ಚಂದ್ರಶೇಖರನ್ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ ₹25 ಲಕ್ಷ ಪರಿಹಾರ ನೀಡಲಾಗುವುದು ಎಂದು ಸಿದ್ದರಾಮಯ್ಯ ಪ್ರಕಟಿಸಿದರು.

11ನೇ ಪುಟ ನೋಡಿ

ಗೌರವಾನ್ವಿತ ನಗರಾಭಿವೃದ್ಧಿ ಮತ್ತು ಪಟ್ಟಣ ಯೋಜನಾ ಸಚಿವರು
ಸನ್ಮಾನ್ಯ ಶ್ರೀ. ಬೈರತಿ ಸುರೇಶ್
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
ಶುಭಕೋರುವವರು
ಆನಂದ್ ಮತ್ತು ಸಂಜಯ್

ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ಹೇಳಿಕೆ

‘11 ಇಂದಿರಾ ಕ್ಯಾಂಟೀನ್ ಪುನರಾರಂಭ’

ಬೆಂಗಳೂರು: ದಕ್ಷಿಣ ವಲಯದಲ್ಲಿ ಮುಚ್ಚಿದ್ದ 11 ಇಂದಿರಾ ಕ್ಯಾಂಟೀನ್‌ಗಳು ಜುಲೈ 19ರಂದು ಪುನರಾರಂಭಗೊಂಡಿವೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಶ್ ಕಿಶೋರ್ ತಿಳಿಸಿದ್ದಾರೆ.

ಗುತ್ತಿಗೆದಾರರು ಕ್ಯಾಂಟೀನ್‌ಗಳನ್ನು ಪುನರಾರಂಭ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಈ ರೀತಿ ಮುಚ್ಚುವುದು ಪುನರಾವರ್ತನೆಗೊಂಡಲ್ಲಿ ಕಾನೂನು ರೀತಿ ಕ್ರಮಕೈಗೊಂಡು, ಪರ್ಯಾಯ ವ್ಯವಸ್ಥೆ ಕೈಗೊಳ್ಳಲಾಗುವುದು ಎಂದು ಸಂಸ್ಥೆಯವರಿಗೆ ಎಚ್ಚರಿಕೆ ನೀಡಲಾಗಿದೆ ಎಂದಿದ್ದಾರೆ.



‘ಗುತ್ತಿಗೆ ಪಡೆದಿರುವ ಸಂಸ್ಥೆಯು ಸಲ್ಲಿಸಿರುವ ಬಿಲ್ಲುಗಳಲ್ಲಿ ಬಾಕಿ ಮೊತ್ತ ಅಂದಾಜು ₹40 ಕೋಟಿ ಪಾವತಿಸದಿರುವುದರಿಂದ, ನೀರು ಹಾಗೂ ವಿದ್ಯುತ್ ಬಿಲ್ ಪಾವತಿಸಿಲ್ಲ. ಅದರ ಸಂಪರ್ಕ ಕಡಿತಗೊಂಡಿದೆ. 2021ರ ನವೆಂಬರ್‌ರಿಂದ ಈವರೆಗೆ ಎಲ್ಲ ಇಂದಿರಾ ಕ್ಯಾಂಟೀನ್‌ಗಳಿಗೆ ಹಣ ಪಾವತಿ ಮಾಡಲಾಗಿದೆ. ಆದರೆ, ದಕ್ಷಿಣ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯವರು ಇಂದಿರಾ ಕ್ಯಾಂಟೀನ್‌ಗಳಲ್ಲಿ ನಾಗರಿಕರಿಗೆ ಒದಗಿಸಿರುವ ಆಹಾರಕ್ಕಿಂತ ಹೆಚ್ಚಿನ ಮೊತ್ತದ ಬಿಲ್ ಸಲ್ಲಿಸಿರುವುದರಿಂದ ಅನುದಾನವನ್ನು ಕಡಿತಗೊಳಿಸಲಾಗಿರುತ್ತದೆ’ ಎಂದು ಮಾಹಿತಿ ನೀಡಿದ್ದಾರೆ.

‘ಗುತ್ತಿಗೆದಾರರ ಜೊತೆ ಮಾಡಿಕೊಂಡಿರುವ ಒಡಂಬಡಿಕೆಯ ಪ್ರಕಾರ ನೀರು ಮತ್ತು ವಿದ್ಯುತ್ ಬಿಲ್ ಅನ್ನು ಸಂಬಂಧಪಟ್ಟ ಸಂಸ್ಥೆಯವರೇ ಪಾವತಿಸಬೇಕಾಗಿರುತ್ತದೆ. ಮುಖ್ಯ ಆರೋಗ್ಯಾಧಿಕಾರಿ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಸಂಸ್ಥೆಯವರ ಪ್ರತಿನಿಧಿ, ದಕ್ಷಿಣ ವಲಯ ಆರೋಗ್ಯಾಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ. 11 ಇಂದಿರಾ ಕ್ಯಾಂಟೀನ್‌ಗಳನ್ನು ಪುನರಾರಂಭಿಸುವಂತೆ ಸೂಚಿಸಲಾಗಿದೆ’ ಎಂದು ವಿಕಾಸ್ ಹೇಳಿದ್ದಾರೆ.

ಉದ್ಯೋಗ ಮೇಳಕ್ಕೆ ಉತ್ತಮ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ಷಣಾ ಸಚಿವಾಲಯದ ಪುನರ್ವಸತಿ ಮಹಾನಿರ್ದೇಶನಾಲಯ (ಡಿಜಿಆರ್), ಮಾಜಿ ಸೈನಿಕರ ಕಲ್ಯಾಣ ಇಲಾಖೆ ಮತ್ತು ರಕ್ಷಣಾ ಸಚಿವಾಲಯ ವತಿಯಿಂದ ಮಾಜಿ ಯೋಧರಿಗಾಗಿ ಶುಕ್ರವಾರ ಜಾಲಹಳ್ಳಿಯ ವಾಯುಪಡೆ ನಿಲ್ದಾಣ (ಎಂಟಿ ಕಾಂಪ್ಲೆಕ್ಸ್)ದಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳ ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಯ 1,662 ಮಾಜಿ ಸೈನಿಕರು ತಮ್ಮ ಇಎಸ್‌ಎಂ ಗುರುತಿನ ಚೀಟಿ ಮತ್ತು ಸ್ವವಿವರದೊಂದಿಗೆ ಹೆಸರು ನೋಂದಾಯಿಸಿಕೊಂಡರು. 48 ಕಂಪನಿಗಳು ಭಾಗವಹಿಸಿದ್ದು, 1,125 ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿವೆ.

ಕಂಪನಿಯ ಪ್ರತಿನಿಧಿಗಳು ದಾಖಲೆಗಳ ಪರಿಶೀಲನೆ ನಡೆಸಿದರು. ಬಳಿಕ ಅಂತಿಮ ಪಟ್ಟಿಯಲ್ಲಿರುವವರ ಸಂದರ್ಶನ ನಡೆಸಿ, ಹಿರಿಯ ಮೇಲ್ವಿಚಾರಕರು ಸೇರಿದಂತೆ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವರು. ಬಿಇಎಲ್ ಕಂಪನಿ ಪ್ರತಿನಿಧಿಗಳು ಸ್ಥಳದಲ್ಲೇ ನೇಮಕಾತಿ ಪತ್ರ ನೀಡಿದರು.

ಮೇಳವನ್ನು ಕಾರ್ಯದರ್ಶಿ (ಇಎಸ್‌ಡಬ್ಲ್ಯು) ಡಾ.ನಿತಿನ್ ಚಂದ್ರ ಉದ್ಘಾಟಿಸಿದರು. ಸಿಐಐ ಕರ್ನಾಟಕ ರಾಜ್ಯ ಕೌನ್ಸಿಲ್ ಉಪಾಧ್ಯಕ್ಷ ರವೀಂದ್ರ ಶ್ರೀಕಂಠನ್ ಗೌರವ, ವಾಯುಪಡೆಯ ಆರ್‌.ವಿ. ರಾಮ್ ಕಿಶೋರ್, ರಕ್ಷಣಾ ಸಚಿವಾಲಯದ ಪುನರ್ವಸತಿ ಮಹಾನಿರ್ದೇಶನಾಲಯದ ಮೇಜರ್ ಜನರಲ್ ಎಸ್‌ಬಿಕೆ ಸಿಂಗ್, ಬ್ರಿಗೇಡಿಯರ್ ರೋಹಿತ್ ಮೆಹ್ತ್, ಜಾಲಹಳ್ಳಿಯ ಎಒಸಿ ವಾಯುಪಡೆ ನಿಲ್ದಾಣದ ಏರ್ ಕಮಾಂಡರ್ ಸಂತೋಷ್ ಕೆ.ಪಿ.ಹೆಗ್ಡೆ ಪಾಲ್ಗೊಂಡಿದ್ದರು.

ಕಮ್ಮಟಕ್ಕೆ ಕಲಾವಿದರು, ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆಯಡಿ ಕಲಾಶಿಬಿರ, ತರಬೇತಿ ಕಾರ್ಯಾಗಾರ ಹಾಗೂ ಕಮ್ಮಟಕ್ಕೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕಲಾವಿದರು ಮತ್ತು ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಚಿತ್ರಕಲೆಯಲ್ಲಿ ಪರಿಣತಿ ಹೊಂದಿರುವ ಅರ್ಹ ಕಲಾವಿದರು, ಚಿತ್ರಕಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅವಕಾಶ ನೀಡಲು ನಿರ್ಧರಿಸಲಾಗಿದೆ. ಅರ್ಹರು ಸ್ವವಿವರ, ಪಾಸ್‌ಪೋರ್ಟ್ ಅಳತೆಯ ಎರಡು ಇತ್ತೀಚಿನ ಭಾವಚಿತ್ರಗಳು ಹಾಗೂ 5X6 ಅಳತೆಯ ನಾಲ್ಕು ಕಲಾಕೃತಿಗಳ ಛಾಯಾಚಿತ್ರವನ್ನು ಆ.14ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು–560002 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 080 22480297

ಭಾರತ ಸರಕಾರ
ರಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ
ಔಷಧೀಯ ಇಲಾಖೆ
प्रधानमंत्री भारतीय जन औषधि परियोजना

ಜನ ಔಷಧಿ
ನೀಡುತ್ತಿದೆ
ಗುಣಮಟ್ಟದ ಔಷಧ
ಅದೂ
ಕೈಗೆಟುಕುವ ದರಗಳಲ್ಲಿ

ವರೆಗೆ
50% ನಿಂದ 90%
ವಿನಾಯ್ತಿ ದರ ಬ್ರ್ಯಾಂಡೆಡ್ ಔಷಧಗಳಿಗೆ ಹೋಲಿಸಿದರೆ

ನಿಮ್ಮ ಹತ್ತಿರದ ಜನ ಔಷದಿ ಕೇಂದ್ರಕ್ಕೆ ಭೇಟಿ ನೀಡಿ
ಡೌನ್‌ಲೋಡ್ ಮಾಡಿ ಜನ ಔಷಧಿ ಸುಗಮ್ ಮೊಬೈಲ್ ಆ್ಯಪ್
ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ರಾಷ್ಟ್ರೀಯ ಟೋಲ್ ರಹಿತ ಸಹಾಯವಾಣಿ 1800 180 8080

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

ASSISTANT MANAGER ACCOUNTS PAYABLE

Qualification : Minimum Graduate in Commerce
Experience : 5-7 years (Max Age: 30 years)
Location : Kumbalgodu (Bangalore)

REQUIREMENT:
* Around 5 - 7 years' experience in payable management in organization having turnover of 200 Cr +
* Experience in working in SAP environment.
* Basic knowledge of taxation related to vendor payments.
* Working knowledge of excel.
* Basic communication skills in English.

SALARY: Open for Discussion

Please send your application for the above position mentioning the job applied for (subject of the e-mail) and along with updated resume to:

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

TEACHING
In Small Batches
of 100 students only
for Personal Attention

- 800+hrs Foundation Classes(Video backup)
- 250+hrs QIP/Revision Classes(Video backup)
- Comprehensive Study Material (Foundation + Current Affairs)

70 YEARS
COMMITMENT ACHIEVEMENT TRUST
RAU'S IAS STUDY CIRCLE
Since 1953

PERSONAL MENTORING
for Revision & Practice

- Daily Active Revision through ARM UP workbooks.
- Prelims & Mains Test Series (80+ tests)
- Performance Review & Feedback

Comprehensive **UPSC IAS 2025**
GS FOUNDATION COURSE
+ 1 Additional Year of Test Series & QIP classes Complimentary

UPCOMING BATCHES | ADMISSION OPEN

	Delhi Campus	Bengaluru Campus	LIVE-ONLINE
Regular Morning	30 AUG	26 JULY	26 JULY
Regular Evening	To Be Announced	26 JULY	2 AUG
Weekend	27 JULY	3 AUG	To Be Announced

Course Details

OUR UPSC CSE 2023 Toppers
AIR 1 ADITYA SRIVASTAVA IGP
AIR 4 P K SIDHARTH RAMKUMAR GSI QIP
AIR 5 RUHANI IGP
AIR 6 SRISHTI DABAS GSI FOUNDATION
AIR 7 ANMOL RATHORE IGP
AIR 34 ZUFISHAN HAQUE GSI QIP
AIR 37 TEJAS AGNIHOTRI GSI FOUNDATION
AIR 54 KASHISH BAKSHI GSI QIP
AIR 59 BENJO P JOSE GSI FOUNDATION
& Many More...

www.rauias.com | compass.rauias.com | 011 – 4078 6050 | 080 – 4142 6050

ಸಾಕ್ರ ವರ್ಲ್ಡ್ ಹಾಸ್ಪಿಟಲ್, ದೇಶದ ಪ್ರಥಮ ಇಂಡೋ-ಜಪಾನೀ ಆಸ್ಪತ್ರೆ, ತನ್ನ ‘ಮೂತ್ರಪಿಂಡ ವಿಜ್ಞಾನ ವಿಭಾಗಕ್ಕೆ’ ಪರಿಣಿತ ವೈದ್ಯರ ಹೊಸ ತಂಡವನ್ನು ಸಂತೋಷದಿಂದ ಸ್ವಾಗತಿಸುತ್ತದೆ.

SAKRA WORLD HOSPITAL
JV by SECOM & TOYOTA TSUSHO, JAPAN

ಮೂತ್ರಶಾಸ್ತ್ರ, ಮೂತ್ರಪಿಂಡ ಕಸಿಯಲ್ಲಿ, ದಶಕಗಳ ಅನುಭವ ಮತ್ತು ರೋಗಿಗಳ ಆರೈಕೆಯಲ್ಲಿ ತೀವ್ರೋತ್ಸಾಹವುಳ್ಳ ನಮ್ಮ ಮೂತ್ರಶಾಸ್ತ್ರ ವಿಶೇಷ ತಜ್ಞರು ರೋಗಿಗಳ ಕಾಯಕಲ್ಪಕ್ಕೆ ಬದ್ಧರಾಗಿದ್ದಾರೆ.

ಡಾ. ಗೋವರ್ಧನ್ ಕೆ ರೆಡ್ಡಿ
ಡೈರೆಕ್ಟರ್-ಕಿಡ್ನಿ ಕಸಿ ಮತ್ತು ಯೂರೋ ಆಂಕೋಲಜಿ ಮೂತ್ರಶಾಸ್ತ್ರ ಮತ್ತು ಆ್ಯಂಡ್ರಾಲಜಿ
ಎಂ.ಎಸ್ (ಜನರಲ್ ಸರ್ಜರಿ)
ಡಿಎನ್‌ಬಿ (ಮೂತ್ರಶಾಸ್ತ್ರ), ಎನ್‌ಬಿಇಎಂ, ನ.ದೆಹಲಿ,
ಎಂಆರ್‌ಸಿಎಸ್, ಎಫ್‌ಇಬಿಯು

- ಮೂತ್ರಪಿಂಡ ಕಸಿ
- ರೊಬೊಟಿಕ್–ಶಸ್ತ್ರಚಿಕಿತ್ಸೆಗಳು
- ಯೂರೋ ಆಂಕೋಲಜಿ
- ಮೂತ್ರವ್ಯವಸ್ಥೆಯ ಪುನಾರಚನೆ
- ಪ್ರಾಸ್ಟೇಟ್–ಎಚ್‌ಒಎಲ್‌ಇಪಿ (ಲೇಸರ್)

ಡಾ. ವಿನಯ್ ಪಾಟೀಲ್
ಸೀನಿಯರ್ ಕನ್ಸಲ್ಟೆಂಟ್-ಮೂತ್ರಶಾಸ್ತ್ರ ಮತ್ತು ಮೂತ್ರಪಿಂಡ ಕಸಿ
ಎಂ.ಎಸ್ (ಜನರಲ್ ಸರ್ಜರಿ)
ಎಂಸಿಎಚ್ (ಮೂತ್ರಶಾಸ್ತ್ರ)

- ಮೂತ್ರಪಿಂಡ ಕಸಿ
- ಕಲ್ಲುಗಳಿಗೆ ಕನಿಷ್ಠ ಛೇದನ ಪ್ರಕ್ರಿಯೆ
- ಪ್ರಾಸ್ಟೇಟ್‌ಗೆ ಲೇಸರ್ ಶಸ್ತ್ರಚಿಕಿತ್ಸೆ
- ಪುರುಷ ಬಂಜೆತನ ಚಿಕಿತ್ಸೆ (ಆ್ಯಂಡ್ರಾಲಜಿ ಕೇರ್)
- ಮೂತ್ರವ್ಯವಸ್ಥೆಯ ಪುನಾರಚನೆ

ಡಾ. ಸಂಜೀವ್ ಎಸ್ ತೊನ್ನಾಲ್
ಕನ್ಸಲ್ಟೆಂಟ್-ಮೂತ್ರಶಾಸ್ತ್ರ ಮತ್ತು ಮೂತ್ರಪಿಂಡ ಕಸಿ
ಎಂ.ಎಸ್ (ಜನರಲ್ ಸರ್ಜರಿ)
ಡಿಎನ್‌ಬಿ (ಮೂತ್ರಶಾಸ್ತ್ರ), ಎನ್‌ಬಿಇಎಂ, ನ.ದೆಹಲಿ

- ಎಂಡೋಯೂರಾಲಜಿ
- ಮೂತ್ರಪಿಂಡ ಕಸಿ
- ಯೂರೋ ಆಂಕೋಲಜಿ
- ಆ್ಯಂಡ್ರಾಲಜಿ
- ಮೂತ್ರವ್ಯವಸ್ಥೆಯ ಪುನಾರಚನೆ

ಭೇಟಿಗಾಗಿ ಸಂಪರ್ಕಿಸಿ: 080 4969 4969, +91 87922 40367 | info@sakraworldhospital.com | www.sakraworldhospital.com
52/2 & 52/3 ದೇವರಬೀಸನಹಳ್ಳಿ, ವರ್ತೂರು ಹೋಬ್ಳಿ (ಇಂಟೆಲ್ ಎದುರು, ಹೊರ ವರ್ತುಲ ರಸ್ತೆ, ಮಾರತಹಳ್ಳಿ), ಬೆಂಗಳೂರು – 560 103

ಆ ದಿನಗಳ ರಜೆ ಆಗದಿರಲಿ ಸಜೆ

ಮಹಿಳಾ ಉದ್ಯೋಗಿಗಳ ಮುಂದೆ ಎರಡು ಅಲಗಿನ ಕತ್ತಿಯಂತೆ ನಿಂತಿದೆ ಆ ದಿನಗಳ ಕಡ್ಡಾಯ ರಜೆಯ ಚರ್ಚೆ. ಮುಟ್ಟಿನ ರಜೆ ಆ ದಿನಗಳ ಕಸಿವಿಸಿ, ನೋವು, ಸಂಕಟದ ಸಮಯದಲ್ಲಿ ವಿಶ್ರಾಂತಿ ನೀಡುವ ಜೊತೆಗೆ ಮುಂದಿನ ಕೆಲಸಕ್ಕೆ ಸಜ್ಜುಗೊಳ್ಳಲು ಬಲ ತುಂಬಬಹುದೇನೊ ನಿಜ. ಆದರೆ, ಇದು ಮಹಿಳಾ ಉದ್ಯೋಗಿಗಳ ಔದ್ಯೋಗಿಕ ಭವಿಷ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಅಪಾಯವೂ ಇದೆ ಎನೊ ಎನ್ನುವ ಕಳವಳ ಮನೆ ಮಾಡಿದೆ...



ಸುಶೀಲಾ ಡೋಣೂರ

ತುಂಬಾ ಮುಖ್ಯವಾದ ಮೀಟಿಂಗಿಗೆ ತಯಾರಿ ನಡೀತಿತ್ತು, ಇದ್ದಕ್ಕಿದ್ದಂತೆ ಕಿಬ್ಬೊಟ್ಟೆಯಲ್ಲಿ ಚಿರಪರಿಚಿತ ನೋವು. ಬೆನ್ನ ಹುರಿಯಲ್ಲಿ ಅಸಾಧ್ಯ ಸೆಳೆತ... ಮೀಟಿಂಗ್ ಬಿಟ್ಟು ಅರ್ಧಕ್ಕೇ ಮನೆಗೆ ಹೋದರೆ ನನ್ನನ್ನು ನಾನು ನಿರೂಪಿಸುವ ಅವಕಾಶವೊಂದನ್ನು ನಾನೇ ಕೈಬಿಟ್ಟ ಹಾಗೆ... ಅಲ್ಲದೆ, ಆಫೀಸಿನಿಂದ ಮನೆ ತಲುಪಲು ಒಂದೂವರೆ ಗಂಟೆ ಬೇಕು. ಆ ಸಮಯದಲ್ಲಿ ನೋವಿನ ತೀವ್ರತೆ ಕಡಿಮೆಯಾಗಬಹುದು... ಇದರ ಬದಲು ಒಂದರ್ಧ ಗಂಟೆ ರಿಲ್ಯಾಕ್ಸ್ ಆಗಿ ಬರಲು ಕೆಲಸದ ಸ್ಥಳದಲ್ಲೇ ರೆಸ್ಟ್ ರೂಮ್ ಒಂದಿದ್ದರೆ ನೋವೂ ಉಪಶಮನವಾಗುತ್ತಿತ್ತು... ಕೆಲಸಕ್ಕೂ ತಡೆಯಾಗುತ್ತಿರಲಿಲ್ಲ...

ರಿಯಲ್ ಎಸ್ಟೇಟ್ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿರುವ ನಳಿನಿ ಹೇಳಿದ ಮಾತುಗಳಿವು.

'ಇಡೀ ದಿನ ಇರುವ ನೋವಲ್ಲ ಅಂತ ಗೊತ್ತು... ಒಂದೆರಡು ಗಂಟೆ ರಿಲ್ಯಾಕ್ಸ್ ಆಗಿ ಮತ್ತೆ ಕೆಲಸದಲ್ಲಿ ತೊಡಗಬಹುದು. ಈ ಸಮಯದಲ್ಲಿ ವರ್ಕ್ ಫ್ರಮ್ ಹೋಮ್‌ಗೆ ಅವಕಾಶವಿದ್ದರೆ ಸಾಕು' ಎನ್ನುವುದು ಜಾಹೀರಾತು ಏಜೆನ್ಸಿಯಲ್ಲಿ ಡಿಸೈನರ್ ಆಗಿರುವ ಪ್ರತಿಭಾ ಅವರ ಅಭಿಮತ.

ಋತುಚಕ್ರದ ಸಮಯದಲ್ಲಿ ಮಹಿಳಾ ಉದ್ಯೋಗಿಗಳಿಗೆ ಕಡ್ಡಾಯ ರಜೆ ಬೇಕು ಎನ್ನುವ ಕೂಗು ಪ್ರಬಲವಾಗುತ್ತಿರುವ ಈ ಹೊತ್ತು ಬೇಕಾಗಿರುವುದು ಇಂತಹ ಪರಿಹಾರಾತ್ಮಕ ಮಾರ್ಗಗಳೇ ಹೊರತು, ರಜೆ ಎನ್ನುವ ತೂಗುಕತ್ತಿಯಲ್ಲ ಎನ್ನುವುದು ಅನೇಕ ಮಹಿಳಾ ಉದ್ಯೋಗಿಗಳ ಅಭಿಪ್ರಾಯವೂ ಆಗಿದೆ. ಮುಟ್ಟಿನ ರಜೆ ಬೇಡ ಎನ್ನುವುದಲ್ಲ, ಅದೊಂದು ಆಯ್ಕೆಯಾಗಿ ಇರಲಿ. ತೀರಾ ಅಗತ್ಯವಿದ್ದವರು ಉಪಯೋಗಿಸಿಕೊಳ್ಳಲಿ ಎನ್ನುವ ನಿಲುವುಳ್ಳವರೂ ಸಾಕಷ್ಟು ಜನರಿದ್ದಾರೆ. ಹೆರಿಗೆ ರಜೆಗಳು, ಮಕ್ಕಳ ಪೋಷಣೆಯ ರಜೆಗಳು, ಕಡ್ಡಾಯ ರಜೆಗಳು ಸೇರಿ ಉದ್ಯೋಗಿಗಳ ಅವಕಾಶಗಳನ್ನು ಕಡಿತಗೊಗೊಳಿಸುವ ವಾತಾವರಣ ನಿರ್ಮಾಣವಾಗುವುದೇನೊ ಎನ್ನುವ ಕಳವಳ ಕೆಲವರಲ್ಲಿದೆ. ವಿನಾಯತಿಗಿಂತ ಒಂದಷ್ಟು ಸಡಿಲಿಕೆ ಬೇಕು ಅನ್ನುವವರೇ ಹೆಚ್ಚು.

***

'ಆ ದಿನಕ್ಕೊಂದು ರಜೆ ಕೊಡಿ' ಎನ್ನುವ ಕೂಗು ಹಳೆಯದೇ. ಮಹಿಳಾ ಉದ್ಯೋಗಿಗಳಿಗೆ ಮುಟ್ಟಿನ ಕಡ್ಡಾಯ ರಜೆ ನೀಡುವ ವಿಚಾರ ಕುರಿತು 2023ರಲ್ಲಿಯೇ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಈಗ ಈ ವಿಚಾರ 'ಸುಪ್ರೀಂ' ಬಾಗಿಲು ತಟ್ಟಿ, ಅಲ್ಲಿಂದ ಮತ್ತೆ ಕೇಂದ್ರದ ಮುಂದೆ ಹೋಗಿ ನಿಂತಿದೆ.

ಮಹಿಳಾ ಉದ್ಯೋಗಿಗಳಿಗೆ ಮುಟ್ಟಿನ ಕಡ್ಡಾಯ ರಜೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠವು, 'ಕಡ್ಡಾಯ ಮುಟ್ಟಿನ ರಜೆ ನೀಡುವಂತೆ ಆದೇಶ ಹೊರಡಿಸಿದಲ್ಲಿ ಅದು ಮಹಿಳಾ ಉದ್ಯೋಗಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಅಪಾಯವೂ ಇದೆ' ಎನ್ನುವ ಆತಂಕವನ್ನು ಹೊರಹಾಕಿದೆ. 'ಇದು ನೀತಿ ನಿರೂಪಣೆಗೆ ಸಂಬಂಧಿಸಿದ ವಿಷಯವಾದ್ದರಿಂದ ಇದಕ್ಕೊಂದು ಸ್ಪಷ್ಟ ನೀತಿ ರೂಪಿಸಬೇಕಾದ ಅಗತ್ಯವಿದೆ' ಎಂದೂ ಹೇಳಿದೆ. ಅದಕ್ಕೂ ಮುನ್ನ ರಜೆಯ ಬದಲು ಪರ್ಯಾಯ ಮಾರ್ಗಗಳಿಗಾಗಿ ದುಡಿಯುವ ಹೆಣ್ಣುಮಕ್ಕಳ ಮನಸುಗಳು ತುಡಿಯುತಿವೆ.

ಉಪಶಮನದತ್ತ ಗಮನ ಕೊಡಿ

ನೋವಿಗೆ ಪರಿಹಾರ ಅಂತ ಇರೋದಿಲ್ಲ. ಆದರೆ ಉಪಶಮನ ಖಂಡಿತ ಸಾಧ್ಯ. ಮುಟ್ಟಿನ ನೋವಿಗೆ ರಜೆ ಪಡೆದು ಕೆಲಸದಿಂದ ತಪ್ಪಿಸಿಕೊಳ್ಳುವ ಬದಲು, ಆ ನೋವನ್ನು ಉಪಶಮನ ಮಾಡಿಕೊಂಡು ನಮ್ಮ ಕೆಲಸದಲ್ಲಿ ನಾವು ಮಗ್ನರಾಗುವಂತೆ ಮಾಡುವ ದಾರಿಗಳನ್ನು ಕಂಡುಕೊಳ್ಳಬೇಕು.

ದೈಹಿಕ ವ್ಯಾಯಾಮ, ಉಸಿರಾಟದ ವ್ಯಾಯಾಮ, ಯೋಗ ಮಾಡುವುದರಿಂದ ಮನಸ್ಸು ಮತ್ತು ದೇಹ ಸುಸ್ಥಿಯಲ್ಲಿರುತ್ತವೆ. ಒತ್ತಡ ಕಡಿಮೆಯಾಗುತ್ತದೆ ಮತ್ತು ಸ್ನಾಯುಗಳನ್ನು ಬಲಪಡಿಸುತ್ತದೆ, ಸೆಳೆತವನ್ನು ನಿವಾರಿಸಲು ಸಹಾಯ ಮಾಡುತ್ತದೆ.

ಹೀಟಿಂಗ್ ಪ್ಯಾಡ್ ಅಥವಾ ಬಿಸಿನೀರಿನ ಬ್ಯಾಗ್‌ಗಳನ್ನು ಬೆನ್ನು ಮತ್ತು ಕೆಳ ಹೊಟ್ಟೆಯ ಮೇಲೆ ಇಟ್ಟುಕೊಳ್ಳುವುದು ಹಿತವಾದ ಅನುಭವವನ್ನು ನೀಡುತ್ತದೆ. ಉಷ್ಣತೆಯು ಸ್ನಾಯುಗಳ ವಿಶ್ರಾಂತಿಗೆ ಮತ್ತು ನೋವು ನಿವಾರಣೆಗೆ ಸಹಾಯ ಮಾಡುತ್ತದೆ. ಇದನ್ನು ಕೆಲಸ ಮಾಡುವ ಸ್ಥಳಗಳಲ್ಲಿಯೂ ಬಳಸಬಹುದು.

ಈ ಸಮಯದಲ್ಲಿ ಸಮತೋಲಿತ ಪೌಷ್ಟಿಕಾಂಶ ಸೇವಿಸಿ. ಅಗಸೆ ಬೀಜಗಳು, ಮೀನು, ಆವಕಾಡೊಗಳಂತಹ ಒಮೆಗಾ 3 ಕೊಬ್ಬಿನಾಮ್ಲಗಳನ್ನು ಬಳಸುವುದರಿಂದ ಉರಿಯೂತ ಕಡಿಮೆಯಾಗುತ್ತದೆ. ಸಾಕಷ್ಟು ನೀರು ಹಾಗೂ ಜ್ಯೂಸ್ ಕುಡಿಯಿರಿ. ಡಾರ್ಕ್ ಚಾಕೊಲೇಟ್ ಸಹ ಈ ಅವಧಿಯ ನೋವು ಶಮನಕ್ಕೆ ಸಹಾಯಕಾರಿ.

ಈ ಅವಧಿಯಲ್ಲಿ ಕನಿಷ್ಠ 8 ಗಂಟೆ ಸಮರ್ಪಕ ನಿದ್ದೆ ಮಾಡಿ. ಮುಂದಿನ ಕೆಲಸಕ್ಕೆ ಇದು ಹೆಚ್ಚು ಚೈತನ್ಯವನ್ನು ನೀಡುತ್ತದೆ. ಬಿಸಿನೀರಿನ ಎಣ್ಣೆ ಸ್ನಾನ ದೇಹದ ಸ್ನಾಯುಗಳು ರಿಲ್ಯಾಕ್ಸ್ ಆಗಲು ಸಹಾಯ ಮಾಡುತ್ತದೆ. ನೋವು ಸಹಿಸಲಸಾಧ್ಯವಾಗಿರುವ ಸಂದರ್ಭದಲ್ಲಿ ಮಾತ್ರ ನಿಮ್ಮ ವೈದ್ಯರನ್ನು ಸಂಪರ್ಕಿಸಿ ಮಾತ್ರೆಗಳನ್ನು ತೆಗೆದುಕೊಳ್ಳಿ.

ಡಾ. ಪ್ರಿಯಾ ಎಸ್.ಪಿ. ಪಾಟೀಲ
ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ

ಮುಟ್ಟು- ಅದೇನು ವಿಶೇಷ?

'ಮುಟ್ಟು' ಹೆಣ್ಣಿನ ಅಸ್ಮಿತೆ- ಸಹಜಕ್ರಿಯೆ, ಸ್ವಾಭಾವಿಕ. ಅನೂಚಾನವಾಗಿ ಶತ ಶತಮಾನಗಳಿಂದ ನಡೆದುಕೊಂಡು ಬಂದಿರುವ ಸ್ರಾವ. ಹಿಂದೆಲ್ಲ ಅಪರಿಮಿತ ಮನೆಗೆಲಸ, ಹೊಲದ ದುಡಿಮೆಯ ಸಂದರ್ಭದಲ್ಲಿ ಅವಳಿಗೆ ವಿಶ್ರಾಂತಿ-ರಜೆ ಬೇಕೆಂದರೂ ಸಾಧ್ಯವಿತ್ತೇ? ಹೆಣ್ಣು ಒಳ-ಹೊರಗೆ ಪುರುಷನಿಗೆ ಸರಿಮಿಗಿಲಾಗಿ ಹೆಜ್ಜೆ ಇಡುತ್ತಿರುವ ದಿನಮಾನಗಳಲ್ಲಿ ಅವಳಿಗದು ಅಂಥ ವಿಷಮಸಮಸ್ಯೆ ಏನೂ ಅಲ್ಲ. ಈಗಾಗಲೇ ಸರ್ಕಾರಿ ಉದ್ಯೋಗಗಳಲ್ಲಿ ತಿಂಗಳಿಗೆ ಹದಿನೈದು ದಿನಗಳು ಸಾಂದರ್ಭಿಕ ರಜೆ, 30 ದಿನ ಗಳಿಕೆರಜೆ, 2 ದಿನ ಪರಿಮಿತ ರಜೆ ಮತ್ತು 18 -20 ಹಬ್ಬಗಳ-ವಿಶೇಷ ಜಯಂತಿಗಳ ರಜೆಗಳು ಇದ್ದೇ ಇವೆ. ಜೊತೆಗೆ ಯಾರಾದರೂ ದೇಶದ, ರಾಜ್ಯದ ಪ್ರಮುಖವ್ಯಕ್ತಿಗಳು ಮರಣಿಸಿದರೆ ವರ್ಷಕ್ಕೆ ಒಂದೆರಡು ರಜಗಳು ದೊರಕುತ್ತವೆ. ಧಂಡಿಯಾಗಿ ರಜೆಗಳು ಇರುವುದರಿಂದ, ಸ್ತ್ರೀಯರಿಗೆ, ತೀವ್ರ ಮುಟ್ಟಿನ ತೊಂದರೆಯಾದಾಗ ತಮ್ಮ ಸ್ವಂತದ ರಜೆಗಳನ್ನು ಬಳಸಿಕೊಳ್ಳಲು ಯಾರದೇನು ಅಡ್ಡಿ?

ವೈ.ಕೆ.ಸಂಧ್ಯಾ ಶರ್ಮ,
ಲೇಖಕಿ, ರಂಗಕರ್ಮಿ

ಸಡಿಲಿಕೆ ಇರಲಿ...

ಮುಟ್ಟಿನ ನೋವು, ಅದರ ತೀವ್ರತೆ ಒಬ್ಬರಿಂದ ಒಬ್ಬರಿಗೆ ಭಿನ್ನವಾಗಿರುತ್ತದೆ. ಆದ್ದರಿಂದ ಮುಟ್ಟಿನ ಕಡ್ಡಾಯ ರಜೆ ಬದಲು, ಅದೊಂದು ಆಯ್ಕೆ ರಜೆಯಾಗಿ ಇರಲಿ. ಆ ಅವಧಿಯಲ್ಲಿ ಕೆಲಸದಲ್ಲಿ ತೊಡಗಲು ಸಾಧ್ಯವೇ ಇಲ್ಲ ಎನ್ನುವವರಿಗೆ ಅನುಕೂಲ. ಇನ್ನೂ ಕೆಲವರಿಗೆ ಈ ಅವಧಿಯ ನೋವು ಕೆಲಸಕ್ಕೆ ತೊಂದರೆಯಾಗುಷ್ಟು ಇರುವುದಿಲ್ಲ. ಅಂಥವರಿಗೆ ಕೆಲಸದ ಅವಧಿಯಲ್ಲಿ, ಸಮಯದಲ್ಲಿ ಒಂದಷ್ಟು ಸಡಿಲಿಕೆ ಅಥವಾ ವರ್ಕ್ ಫ್ರಮ್ ಹೋಮ್ ಅನುಕೂಲ ಮಾಡಿಕೊಟ್ಟರೆ ಸಾಕು.

ಡಿ. ಯಶೋದಾ,
ಬರಹಗಾರ್ತಿ

ಮುಟ್ಟು ಅಸ್ತ್ರವಾಗದಿರಲಿ...

ಈದೀಗ ಚರ್ಚೆಗೆ ಬಂದಿರುವ ಮಹಿಳಾ ಉದ್ಯೋಗಿಗಳ ಕಡ್ಡಾಯ ರಜೆಯ ವಿಷಯ ನನ್ನನ್ನು ಪುಳಕಗೊಳಿಸಬೇಕಿತ್ತು. ಆದರೆ, ಮನಸು ಅದರಾಚೆಗಿನ ಸವಾಲುಗಳನ್ನು ಮೆಲುಕು ಹಾಕುತ್ತಿದೆ. ತುಂಬಾ ಹಿಂದೆ ಪ್ರಸಿದ್ಧ ಮ್ಯಾಗಝೀನ್ ಒಂದರಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಸಂದರ್ಶನ ಪ್ರಕಟವಾಗಿತ್ತು. ತೀಕ್ಷ್ಣ ಆಡಳಿತಗಾರ್ತಿಯಾಗಿದ್ದ ಇಂದಿರಾ ಆ ದಿನಗಳನ್ನು ಹೇಗೆ ನಿಭಾಯಿಸುತ್ತಾರೆ ಎನ್ನುವ ಪ್ರಶ್ನೆಯದು. 'ಅಂತಹ ದಿನಗಳಲ್ಲೂ ನನ್ನ ದೃಢತೆ ಏನೂ ಕಡಿಮೆಯಗುವುದಿಲ್ಲ' ಎಂದಿದ್ದರು. ಒಂದು ಕಡೆ ಪಿ.ಟಿ ಊಷಾ ಕೂಡ ಇದೇ ರೀತಿಯ ಅಭಿಪ್ರಾಯ ಹೊರಹಾಕಿದ್ದರು. ಕೂಲಿ ಕಾರ್ಮಿಕರ, ಮನೆಗೆಲಸದವರ ಕಾರ್ಯಾಗಾರವೊಂದರಲ್ಲಿ ಈ ಬಗ್ಗೆ ಕೇಳಿದಾಗ, 'ಅದರ ಪಾಡಿಗೆ ಅದು ಬರುತ್ತೆ ಹೋಗುತ್ತೆ, ನಮ್ಮ ಕೆಲಸ ನಾವು ಮಾಡ್ತೀವಿ' ಎಂದ ಅವರ ಮಾತು ಕಿವಿಯಲ್ಲಿ ಅನುರಣಿಸುತ್ತಿದೆ...

ನಂತರದ ದಿನಗಳಲ್ಲಿ ಸಾಮಾಜಿಕ ಜಾಲತಾಣ, ಫ್ಯಾಮಿಲಿ ಕೋರ್ಟಿನ ಕಾರಿಡಾರ್, ರೀಲ್ಸ್, ಕಥೆ ಪುಸ್ತಕಗಳು ಎಲ್ಲೆಲ್ಲೂ ಮುಟ್ಟು ಎಂದರೆ ಮಾನಸಿಕ ಅಸ್ವಸ್ಥೆಯಾಗುವ ದಿನ ಎಂತಲೇ ಬಿಂಬಿತವಾಗಿರುವುದನ್ನು ವಾಕರಿಕೆ ಬರುವಷ್ಟು ಕಂಡಿದ್ದೇನೆ. ಆಗೆಲ್ಲಾ ಅನ್ನಿಸಿದ್ದು, ದೇಶವನ್ನಾಳಿದ ಇಂದಿರಮ್ಮ, ದೇಶಕ್ಕೆ ಕೀರ್ತಿ ತಂದುಕೊಟ್ಟ ಉಷಾ, ಕಾರ್ಮಿಕ ವರ್ಗ ಇವರಿಗೆಲ್ಲಾ ಇಲ್ಲದ ಮುಟ್ಟಿನ ಸಂಕಟ ನಮಗೇಕೆ? ಆ ಸಂಕಟವನ್ನೇ ಇಟ್ಟುಕೊಂಡು ವಿಶೇಷ ರಿಯಾಯಿತಿ ಪಡೆಯುವ ಹುರುಪಿನಲ್ಲಿ ನಾವು ನಮ್ಮ ಅವಕಾಶಗಳಿಂದ ವಂಚಿತರಾಗುವುದಿಲ್ಲವೆ? ಸಂಬಳ ಸಹಿತ ಮುಟ್ಟಿನ ರಜೆಯನ್ನು ಎಂದಿನಿಂದಲೋ ನೀಡುತ್ತಿರುವ ಜಪಾನ್‌ನಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎನ್ನುವ ಅಂಶ ಈ ಕೂಗಿಗೆ ಹಿನ್ನೆಲೆಯಾಗಿ ಕೇಳಿಸುತ್ತಿದೆ... ಮುಟ್ಟು ಎನ್ನುವುದನ್ನು ಅಸ್ತ್ರವನ್ನಾಗಿ ಬಳಿಸಿಕೊಳ್ಳುವ ಎಲ್ಲಾ ಹೆಣ್ಣುಮಕ್ಕಳಿಗೂ ತಿಳಿದಿದೆ ಅದೊಂದು ಪ್ರಾಕೃತಿಕವಾಗಿ ಒದಗಿ ಬಂದಿರುವ ಗುರಾಣಿ ಎಂದು. ವೈಜ್ಞಾನಿಕವಾಗಿ ಮುಟ್ಟು ದೈಹಿಕ ಮತ್ತು ಮಾನಸಿಕವಾಗಿ ಹಿಂಸಾತ್ಮಕವಾಗಿ ಕಾಡುವುದು ಶೇ 3ರಷ್ಟು ಜನರನ್ನು ಮಾತ್ರ. ಮುಟ್ಟಿನ ರಜೆಯನ್ನು ತನ್ನ ಲಾಭಕ್ಕೆ ಹೇಗೆ ಬಳಿಸಿಕೊಳ್ಳಬೇಕೆಂದು ವ್ಯವಸ್ಥೆಗೂ ಗೊತ್ತಿದೆ, ಕಾರ್ಪೊರೇಟ್ ಸಂಸ್ಕೃತಿಗೂ ಗೊತ್ತಿದೆ, ಗಂಡಾಳಿಕೆಯ ಮನಸ್ಥಿತಿಗೂ ಗೊತ್ತಿದೆ. ಅದಕ್ಕೆ ಅವಕಾಶ ಕೊಡದಂತೆ ನಾವು ಎಚ್ಚರ ವಹಿಸಬೇಕು. ಮುಟ್ಟು ಎಂದು ಅಂತರದಲ್ಲಿ ಉಳಿಯುವ ಬದಲು, ಪೌಷ್ಟಿಕ ಆಹಾರ ಸೇವಿಸಿ, ನೈರ್ಮಲ್ಯದತ್ತ ಗಮನ ಕೊಡಿ, ಕೆಲಸ ಮುಗಿಸಿ ಬಂದು ತುಸು ಆರಾಮಾಗಿ ರಿಲ್ಯಾಕ್ಸ್ ಆಗಿ.

ಅಂಜಲಿ ರಾಮಣ್ಣ
ಮಹಿಳೆ ಮತ್ತು ಮಕ್ಕಳ ಹಕ್ಕುಗಳ ವಕೀಲರು ಮತ್ತು ಲೇಖಕಿ

ಮೇಕೆ ಮಾಂಸದ ಖಾದ್ಯ

ಎಂ.ಎಸ್.ಧರ್ಮೇಂದ್ರ, ದೊಡ್ಡಮಗ್ಗೆ.

ರಸಾಸ್ವಾದ

ಮೇಕೆ ಕಾಲಿನ ಸೂಪ್

ಬೇಕಾಗುವ ಸಾಮಗ್ರಿಗಳು: ಮೇಕೆ ಕಾಲು 3, ಶುಂಠಿ-ಬೆಳ್ಳುಳ್ಳಿ ಪೇಸ್ಟ್ 1 ಚಮಚ, ಕೊತ್ತಂಬರಿ ಸ್ವಲ್ಪ, ಪುದೀನ ಸ್ವಲ್ಪ, ಹಸಿ ಮೆಣಸಿನಕಾಯಿ 2, ಕಾಳು ಮೆಣಸಿನ ಪುಡಿ 1/4 ಚಮಚ, ಜೀರಿಗೆ ಪುಡಿ 1/4 ಚಮಚ, ಈರುಳ್ಳಿ 1, ಟೊಮೆಟೊ 1, ಎಣ್ಣೆ, ತುಪ್ಪ, ಸಾಸಿವೆ, ಉಪ್ಪು.

ತಯಾರಿಸುವ ವಿಧಾನ: ಎಣ್ಣೆ ಮತ್ತು ತುಪ್ಪವನ್ನು ಸಮ ಪ್ರಮಾಣದಲ್ಲಿ ಹಾಕಿ ಕಾದ ನಂತರ ಸಾಸಿವೆ ಸಿಡಸಿ, ಈರುಳ್ಳಿ, ಹಸಿ ಮೆಣಸಿನಕಾಯಿ, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಟೊಮೆಟೊ, ಮೇಕೆಕಾಲು, ಜೀರಿಗೆ ಪುಡಿ, ಕಾಳು ಮೆಣಸಿನ ಪುಡಿ, ಕೊತ್ತಂಬರಿ, ಪುದೀನ, ಉಪ್ಪನ್ನು ಹಾಕಿ ಫ್ರೈ ಮಾಡಿ ನಂತರ ನೀರು ಸೇರಿಸಿ ಸ್ವಲ್ಪ ಬೇಯಿಸಿದ ತರುವಾಯ ಕುಕ್ಕರ್ ಮುಚ್ಚಳ ಮುಚ್ಚಿ 15 ವಿಷಲ್ ಹಾಕಿಸಿ.

ಮೇಕೆ ತಲೆ ಮಾಂಸದ ಸಾರು

ಬೇಕಾಗುವ ಸಾಮಗ್ರಿಗಳು: ಮೇಕೆ ತಲೆಮಾಂಸ 1 ಕೆ.ಜಿ, ಶುಂಠಿ 3 ಇಂಚು, ಬೆಳ್ಳುಳ್ಳಿ 3 ಹುಂಡೆ, ಕೊತ್ತಂಬರಿ ಸೊಪ್ಪು ಸ್ವಲ್ಪ, ಪುದೀನಾ ಸೊಪ್ಪು ಸ್ವಲ್ಪ, ಕಸೂರಿ ಮೇಥಿ 1 ಚಮಚ, ಧನಿಯಾ ಪುಡಿ 2 ಚಮಚ, ಖಾರದಪುಡಿ 2 ಚಮಚ, ಅರಿಶಿನ ಪುಡಿ ಸ್ವಲ್ಪ, ಕಾಳುಮೆಣಸು 10, ಲವಂಗ 5, ಚಕ್ಕೆ 2 ಇಂಚು ಉದ್ದದ್ದು, ಗಸೆಗಸೆ ಸ್ವಲ್ಪ, ಜಾಯಿಕಾಯಿ ಸ್ವಲ್ಪ, ಹುರಿಗಡಲೆ 1 ಚಮಚ, ಈರುಳ್ಳಿ 4, ಟೊಮ್ಯಾಟೊ 3, ಕಾಯಿ 1/2 ಹೋಳು, ಸಾಸಿವೆ, ಎಣ್ಣೆ, ತುಪ್ಪ, ಉಪ್ಪು.

ತಯಾರಿಸುವ ವಿಧಾನ: ಈರುಳ್ಳಿ ಖಾರಕ್ಕೆ : ಈರುಳ್ಳಿ, ಕೊತ್ತಂಬರಿ ಸೊಪ್ಪು, ಪುದೀನಾ, ಅರಿಶಿನ ಪುಡಿ, ಶುಂಠಿ, ಬೆಳ್ಳುಳ್ಳಿಗೆ ಸ್ವಲ ನೀರು ಹಾಕಿ ರುಬ್ಬಿಟ್ಟುಕೊಳ್ಳಿ.

- ಮಸಾಲೆಗೆ: ಟೊಮೆಟೊ, ಧನಿಯಾಪುಡಿ, ಖಾರದಪುಡಿಗೆ, ಕಾಯಿ, ಜಾಯಿಕಾಯಿ, ಹುರಿಗಡಲೆ, ಗಸೆಗಸೆ, ಕಾಳುಮೆಣಸು, ಲವಂಗ, ಚಕ್ಕೆಗೆ ನೀರು ಹಾಕಿ ರುಬ್ಬಿಟ್ಟುಕೊಳ್ಳಿ.
- ಕುಕ್ಕರ್‌ಗೆ ಎಣ್ಣೆ ಮತ್ತು ತುಪ್ಪ ಸಮ ಪ್ರಮಾಣದಲ್ಲಿ ಹಾಕಿ ಸಾಸಿವೆ ಸಿಡಸಿ ಮಾಂಸಕ್ಕೆ ಉಪ್ಪು ಹಿಡಿಯುವ ತನಕ ಫ್ರೈ ಮಾಡಿದ ನಂತರ ಈರುಳ್ಳಿ ಖಾರ ಮಿಶ್ರಣ ಹಾಕಿ ಸ್ವಲ್ಪ ಪ್ರಮಾಣದಲ್ಲಿ ನೀರು ಹಾಕಿ ಕುಕ್ಕರ್ ಮುಚ್ಚಳ ಮುಚ್ಚಿ ಮೂರು ವಿಷಲ್ ಹಾಕಿಸಿ, ಮುಚ್ಚಳ ತೆಗೆದು ಮಸಾಲೆ ಹಾಕಿ ಚೆನ್ನಾಗಿ ಬೇಯಿಸಿ, ಬೆಂದ ನಂತರ ಕಸೂರಿಮೇಥಿ ಉದುರಿಸಿ.

ಮಟನ್ ಬಿರಿಯಾನಿ

ಬೇಕಾಗುವ ಸಾಮಗ್ರಿಗಳು: ಮೇಕೆ ಮಾಂಸ ಅರ್ಧ ಕೆ.ಜಿ, ಸೋನಾ ಮಸೂರಿ ಅಕ್ಕಿ 1/4 ಕೆ.ಜಿ, ಬಾಸುಮತಿ ಅಕ್ಕಿ 1/4 ಕೆ.ಜಿ, ಶುಂಠಿ - ಬೆಳ್ಳುಳ್ಳಿ ಪೇಸ್ಟ್ 2 ಚಮಚ, ಕೊತ್ತಂಬರಿ, ಪುದೀನ ಸೊಪ್ಪು, ಹಸಿಮೆಣಸಿನಕಾಯಿ 15, ಮೊಸರು 2 ಚಮಚ, ಖಾರದಪುಡಿ 2 ಚಮಚ, ಧನಿಯಾಪುಡಿ 1 ಚಮಚ, ಅರಿಶಿನ ಪುಡಿ ಸ್ವಲ್ಪ, ಬಿರಿಯಾನಿ ಮಸಾಲೆ (ಮನೆಯಲ್ಲಿ ತಯಾರಿಸಿದ್ದು) 2 ಚಮಚ, ಪತ್ರೆ 2 ಎಸಳು, ಗೋಡಂಬಿ 10, ಕಾಳು ಮೆಣಸು(ಪೆಪ್ಪರ್) 20, ಏಲಕ್ಕಿ 2, ಲವಂಗ 5, ಚಕ್ಕೆ 2 ಇಂಚು ಉದ್ದದ್ದು, ಪಲಾವ್ ಎಲೆ 2, ಮೊರಾಠಿ ಮೊಗ್ಗು 2, ಈರುಳ್ಳಿ 5, ಟೊಮ್ಯಾಟೊ 3, ಎಣ್ಣೆ, ತುಪ್ಪ(ನಂದಿನಿ), ಸಾಸಿವೆ, ಉಪ್ಪು ರುಚಿಗೆ ತಕ್ಕಷ್ಟು.

ತಯಾರಿಸುವ ವಿಧಾನ: ಮಾಂಸಕ್ಕೆ ಅರಿಶಿನ ಪುಡಿ, ಖಾರದಪುಡಿ, ನೀರು, ಸ್ವಲ್ಪ ಉಪ್ಪನ್ನು ಬೆರೆಸಿ ಕುಕ್ಕರ್‌ನಲ್ಲಿ ಚೆನ್ನಾಗಿ ಬೇಯಿಸಿಕೊಳ್ಳಿ.

- ಈರುಳ್ಳಿ, ಹಸಿಮೆಣಸಿನಕಾಯಿ, ಟೊಮ್ಯಾಟೊ (ದಪ್ಪದಪ್ಪವಾಗಿ) ಕತ್ತರಿಸಿಟ್ಟುಕೊಳ್ಳಿ.
- ಕೊತ್ತಂಬರಿ ಮತ್ತು ಪುದೀನಗಳನ್ನು ರುಬ್ಬಿಟ್ಟುಕೊಳ್ಳಿ.
- ಅಗಲವಾದ ತೆರೆದ ಪಾತ್ರೆಗೆ ಎಣ್ಣೆ ಮತ್ತು ತುಪ್ಪ ಸಮ ಪ್ರಮಾಣದಲ್ಲಿ ಹಾಕಿ ಕಾದ ನಂತರ ಸಾಸಿವೆ ಸಿಡಸಿ ಚಕ್ಕೆ, ಲವಂಗ, ಮೆಣಸು, ಏಲಕ್ಕಿ, ಪತ್ರೆ, ಪಲಾವ್ ಎಲೆ, ಮೊರಾಠಿ ಮೊಗ್ಗು, ಹಸಿಮೆಣಸಿನಕಾಯಿ, ಗೋಡಂಬಿ, ಈರುಳ್ಳಿ ಹಾಕಿ ಕಂದು ಬಣ್ಣ ಬರುವರೆಗೆ ಫ್ರೈ ಮಾಡಿದ ನಂತರ ಬೆಂದ ಮಾಂಸ, ಶುಂಠಿ - ಬೆಳ್ಳುಳ್ಳಿ ಪೇಸ್ಟ್, ಉಪ್ಪು, ಬಿರಿಯಾನಿ ಮಸಾಲೆ, ಖಾರದಪುಡಿ, ಧನಿಯಾಪುಡಿ, ಅರಿಶಿನ ಪುಡಿ, ರುಬ್ಬಿದ ಕೊತ್ತಂಬರಿ ಮತ್ತು ಪುದೀನ, ಮೊಸರು ಹಾಕಿ ಹಸಿವಾಸನೆ ಹೋಗುವ ತನಕ ಫ್ರೈ ಮಾಡಿದ ನಂತರ ಟೊಮೆಟೊ ಹಾಕಿ ಸ್ವಲ್ಪ ಫ್ರೈ ಮಾಡಿ, ಒಂದಕ್ಕೆ ಎರಡಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ನೀರನ್ನು ಹಾಕಿ (ಮಾಂಸ ಬೇಯಿಸಿದ ನೀರನ್ನು ಬಳಸಿಕೊಳ್ಳಿ). ಅಕ್ಕಿಯನ್ನು ಈ ಮಿಶ್ರಣಕ್ಕೆ ಸೇರಿಸಿ ರುಚಿ ನೋಡಿ ಕಡಿಮೆಯಿದ್ದನ್ನು ಸೇರಿಸಿ. ಅಕ್ಕಿ ಮುಕ್ಕಾಲು ಭಾಗ ಬೆಂದಾಗ ಕತ್ತರಿಸಿದ ಕೊತ್ತಂಬರಿ ಮತ್ತು ಪುದೀನವನ್ನು ಉದುರಿಸಿ ಮುಚ್ಚಳ ಮುಚ್ಚಿ ಪಾತ್ರೆಯನ್ನು ತವಾದ ಮೇಲೆ ಬೇಯಲು ಇಡಿ. ಒಂದು ಪಾತ್ರೆಯಲ್ಲಿ ಬಿಸಿನೀರನ್ನು ಕಾಯಿಸಿ ಮುಚ್ಚಳದ ಮೇಲೆ ಬಿರಿಯಾನಿ ಬೇಯುವ ತನಕ ಇಡಿ ಬೆಂದ ನಂತರ ಮುಚ್ಚಳ ತೆಗೆದು ಚೆನ್ನಾಗಿ ಮಿಕ್ಸ್ ಮಾಡಿ.

ಗೌರವ ತೋರಿಸದ ಮಕ್ಕಳದ್ದು ವರ್ತನೆಯ ಸಮಸ್ಯೆಯೇ?

ಅಂತರಂಗ

ಅಕ್ಷರ ದಾಮ್ಲೆ

ನನ್ನ ಮಗಳಿಗೆ ಯಾವುದೇ ಕಷ್ಟ ಸೋಕದಂತೆ ಬೆಳೆಸುತ್ತಿದ್ದೇನೆ. ಅವಳು ಕೇಳಿದ್ದೆಲ್ಲವನ್ನೂ ಕೊಡಿಸುತ್ತೇನೆ. ಆದರೂ ಅವಳಿಗೆ ಅಪ್ಪ ಅಮ್ಮ ಅಂದರೆ ಗೌರವವಿಲ್ಲ. ಕೊಡಿಸಿರುವ ಅನುಕೂಲಗಳ ಬಗ್ಗೆಯೂ ಗೌರವವಿಲ್ಲ. ಮುಚ್ಚಟೆಯಿಂದ ಕಾಪಿಡುವುದು ಗೊತ್ತಿಲ್ಲ. ಇವೆಲ್ಲವೂ ವರ್ತನೆಯ ಸಮಸ್ಯೆಗಳೇ?

ಈ ಪ್ರಶ್ನೆಯಲ್ಲಿ ಅನೇಕ ಕಿರುಪ್ರಶ್ನೆಗಳು ಅಡಗಿವೆ. ಒಂದು, ಮಕ್ಕಳು ಕೇಳಿದ್ದನ್ನೆಲ್ಲಾ ಕೇಳಿದ ಕೂಡಲೇ ಒದಗಿಸಬೇಕಾ? ಮಕ್ಕಳಿಗೆ ಹೆಚ್ಚಿನ ಐಷಾರಾಮಿ ಜೀವನದ ರುಚಿಯನ್ನು ಎಳವೆಯಲ್ಲೇ ಕೊಡಬೇಕಾ? ಅಥವಾ ಮಕ್ಕಳಿಗೆ ಸಣ್ಣದಿರುವಾಗಿನಿಂದಲೇ ಕಷ್ಟವನ್ನು ಕಲಿಸಬೇಕಾ? ಹೀಗೆ ಬಗೆಯುತ್ತಾ ಹೋದರೆ, ಮುಗಿಯದಷ್ಟು ಪ್ರಶ್ನೆಗಳು ಬರುತ್ತಾ ಹೋಗುತ್ತವೆ. ಯಾವುದು ಸರಿ ಯಾವುದು ತಪ್ಪು ಎಂದು ಸಾಮಾನ್ಯವಾಗಿ ಹೇಳುವುದು ಸಾಧ್ಯವಿಲ್ಲ. ಆದರೂ ಮೇಲಿನ ಪ್ರಶ್ನೆಯನ್ನು ಗಮನದಲ್ಲಿಟ್ಟುಕೊಂಡು ಒಂದಷ್ಟು ತರ್ಕಿಸುವುದಾದರೆ, ಹೆತ್ತವರು ಎರಡು ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

1. ನಿಮ್ಮ ಬಿಡುವಿಲ್ಲದ ಕೆಲಸಗಳ ನಡೆವೆಯೂ ಮಕ್ಕಳೊಂದಿಗೆ ಸಮಯವನ್ನು ವಿನಿಯೋಗಿಸಿ. ಮಕ್ಕಳಿಗೆ ಗ್ಯಾಜೆಟ್‌ಗಳನ್ನು ಕೊಟ್ಟು ಮೌನವಾಗಿರಿಸುವುದು ಯಾವ ದೊಡ್ಡ ಸಾಧನೆಯೂ ಅಲ್ಲ. ಬದಲಾಗಿ ಅದರಿಂದಾಗುವ ತೊಡಕುಗಳೇ ಜಾಸ್ತಿ. ಅದೇ ಈ ಪ್ರಶ್ನೆಯಲ್ಲೂ ಕಂಡಿರುವುದು.

2. ನಿಮ್ಮ ಬಾಲ್ಯ ಜೀವನದಲ್ಲಿ ಕಂಡ ಕಷ್ಟಗಳು ಯಾವುವೂ ನಿಮ್ಮ ಮಕ್ಕಳಿಗೆ ಸಿಗಬಾರದು ಎಂಬ ಮನಃಸ್ಥಿತಿಯನ್ನು ಬಿಡಿ. ಯಾಕೆಂದರೆ, ಕಷ್ಟಪಟ್ಟ ಕೂಡಲೇ, ಮಕ್ಕಳು ಕುಂದಿ ಹೋಗುವುದಿಲ್ಲ. ಆ ಕಷ್ಟಗಳನ್ನು ಎದುರಿಸುವ ಕೌಶಲಗಳನ್ನು ಕಲಿಯುತ್ತಾರೆ. ಸಣ್ಣವರಿದ್ದಾಗಿಂದ ಕಷ್ಟವೇ ಕಾಣದ ಮಕ್ಕಳಿಗೆ ಜೀವನದ ಮೌಲ್ಯಗಳೂ ಅರಿವಾಗುವುದಿಲ್ಲ. ಮತ್ತು ಆಮೇಲೆ ಜೀವನ ಪಾಠ ಕಲಿಸುವಾಗ, ತಮ್ಮ ಮನೋಬಲದ ಅಭಾವದಿಂದ ತೀವ್ರತೆರನಾದಂತಹ ಕೆಲವು ಅಹಿತಕರ ಘಟನೆಗಳಿಗೆ ಕಾರಣವಾಗುತ್ತವೆ.

ಆದ್ದರಿಂದ ಮಕ್ಕಳಿಗೆ ಅವರುಗಳು ಅಪೇಕ್ಷಿಸಿದ ವಸ್ತುಗಳನ್ನು ಒದಗಿಸುವ ಮೊದಲು ಹೆತ್ತವರಾಗಿ ನಿಮ್ಮದೇ ಆದಂತಹ ವಿಮರ್ಶೆಯನ್ನು ನಡೆಸಿ. ಒಂದು ವೇಳೆ ಕೊಡಿಸುವ ಅಗತ್ಯವಿಲ್ಲ ಎಂದು ಕಂಡು ಬಂದರೆ, ತಂದೆ- ತಾಯಿ ಇಬ್ಬರೂ ಒಟ್ಟಾಗಿ ನಿರ್ಧಾರವನ್ನು ತೆಗೆದುಕೊಳ್ಳಿ ಮತ್ತು ಆ ನಿರ್ಧಾರಕ್ಕೆ ಬದ್ಧರಾಗಿರಿ. ಒಂದು ವೇಳೆ ನಿಮ್ಮ ಮಧ್ಯೆ ಭಿನ್ನಾಭಿಪ್ರಾಯ ಇದ್ದಲ್ಲಿ ಅದನ್ನು ಮಕ್ಕಳು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಾರೆ. ಒಂದು ವೇಳೆ ನೀವು ಕೊಡಿಸುವ ನಿರ್ಧಾರಕ್ಕೆ ಬಂದರೆ, ಸ್ವಲ್ಪ ನಿಧಾನಿಸಿಯೇ ಕೊಡಿಸಿ. ಇವತ್ತಿನ ಇ-ಕಾಮರ್ಸ್ ಯುಗದಲ್ಲಿ ದೇಶದ ಮೂಲೆ ಮೂಲೆಯಿಂದಲೂ ಕ್ಲಿಕ್ಕಿಸಿ ಒಂದು ದಿನದಲ್ಲಿ ತಪ್ಪಿದರೆ ಎರಡು ದಿನಗಳಲ್ಲಿ ವಸ್ತುಗಳನ್ನು ಮನೆಯ ಬಾಗಿಲಿನಲ್ಲಿ ಸ್ವೀಕರಿಸುವ ಅವಕಾಶಗಳಿದ್ದರೂ, ಆ ಕೊಂಡುಕೊಳ್ಳುವಿಕೆಯ ಹಿಂದೆ ಒಂದು ಪರಿಶ್ರಮ ಇದೆ ಎನ್ನುವುದನ್ನು ಮಕ್ಕಳಿಗೆ ಅರಿವಾಗಿಸಿ. ಸೈಕಾಲಜಿಯಲ್ಲಿ ಒಂದು ಡಿಲೇಯ್ಡ್ ಗ್ರಾತಿಫಿಚತಿಒನ್ ಅನ್ನುವ ಪರಿಕಲ್ಪನೆ ಇದೆ. ಅಂದರೆ ವಿಳಂಬಿತ ತೃಪ್ತಿ. ಯಾವಾಗ ಮಕ್ಕಳಿಗೆ ನಾವು ಈ ಪರಿಪಾಠವನ್ನು ಮಾಡುತ್ತೇವೆಯೋ ಆವಾಗ ಅವರುಗಳಿಗೆ ಪರಾಜಯವನ್ನೂ ತಡೆದುಕೊಳ್ಳುವ ಶಕ್ತಿ ಬರುತ್ತದೆ. ಹಾಗಾಗಿ ಮಕ್ಕಳಿಗೆ ಅಗತ್ಯವಾಗಿ ಏನೇನೆಲ್ಲಾ ಕೊಡಿಸಬೇಕೋ ಅವೆಲ್ಲವನ್ನೂ ಖಂಡಿತವಾಗಿ ಕೊಡಿಸಿ. ಆದರೆ ಅವರು ಕೇಳಿದ್ದೆಲ್ಲವನ್ನಲ್ಲ.

ಕನ್ನಡಕದಲ್ಲಿ ಕಂಡೀರಾ ಇಷ್ಟೆಲ್ಲಾ ವಿಧ

ಫ್ಯಾಷನ್

ಪವಿತ್ರಾ ಭಟ್

ಕಣ್ಣಿನ ಸಮಸ್ಯೆ ಇರುವವರು ಮಾತ್ರ ಕನ್ನಡ ಧರಿಸಬೇಕು ಎನ್ನುವ ಕಾಲವೊಂದಿತ್ತು. ಆದರೆ ಇತ್ತೀಚೆಗೆ ಕನ್ನಡಕ ಧರಿಸುವುದೇ ಟ್ರೆಂಡ್ ಆಗಿದೆ. ಕಣ್ಣಿಗೆ ಹಿತವಾದ, ಸ್ಟೈಲಿಷ್ ಲುಕ್ ನೀಡುವ ಕನ್ನಡಕಗಳು ಯುವ ಜನರಿಗೆ ಅಚ್ಚುಮೆಚ್ಚು. ಸಂದರ್ಭಗಳಿಗೆ ಅನುಸಾರವಾಗಿ ಉಡುಪಿಗೊಪ್ಪುವ ಕನ್ನಡ ಧರಿಸಿ ಒಂದು ಫೋಟೊ ಕ್ಲಿಕ್ಕಿಸಿಕೊಂಡರೆ ಖುಷಿ. ನಿಮಗೆ ಗೊತ್ತಾ ಕನ್ನಡಕದಲ್ಲೂ ಹಲವು ವಿಧಗಳಿವೆ. ಫ್ಯಾಷನ್‌ಗೆ ಸರಿಹೊಂದುವಂತಹ ಗ್ಲಾಸ್ ಧರಿಸಿ ಕಣ್ಣುಗಳನ್ನೂ ರಕ್ಷಿಸಿಕೊಳ್ಳಬಹುದು.

ನೀಲಿ ಬೆಳಕನ್ನು ತಡೆಯುವ ಕನ್ನಡಕ: ಡಿಜಿಟಲ್ ಸಾಧನಗಳಿಂದ ಹೊರಸೂಸುವ ನೀಲಿ ಬೆಳಕನ್ನು ಫಿಲ್ಟರ್ ಮಾಡುವ ಮೂಲಕ ಒತ್ತಡವನ್ನು ಕಡಿಮೆ ಮಾಡಲು ಮತ್ತು ನಿದ್ರೆಯ ಗುಣಮಟ್ಟವನ್ನು ಸುಧಾರಿಸಲು ಈ ಕನ್ನಡಕ ಸಹಾಯ ಮಾಡುತ್ತದೆ. ಬೇರೆ ಬೇರೆ ಆಕಾರದಲ್ಲಿ ಸಿಗುವ ಈ ಕನ್ನಡಕ ಸದಾ ಗಣಕಯಂತ್ರ ಕುಟ್ಟುವ, ಮೊಬೈಲ್ ನೋಡುವವರಿಗೆ ಉತ್ತಮ ಗೆಳೆಯ. ಹೀಗಾಗಿ ಕಚೇರಿಗಳಿಗೆ ತೆರಳುವವರಿಗೆ ಗುಡ್ ಲುಕ್ ನೀಡುತ್ತದೆ.

ಝೀರೋ ಲೆನ್ಸ್ ಕನ್ನಡಕ: ವೈದ್ಯರ ಸಲಹೆ ಇಲ್ಲದೆಯೇ ಫ್ಯಾಷನ್‌ಗಾಗಿಯೇ ಕನ್ನಡಕಗಳನ್ನು ಧರಿಸುತ್ತಾರೆ. ಅಂತಹವರಿಗೆ ಝೀರೊ ಲೆನ್ಸ್ ಕನ್ನಡಕ ಉತ್ತಮ. ವೃತ್ತಾಕಾರಾದ ಗ್ಲಾಸ್‌ಗಳು, ಬಣ್ಣದ ಬಣ್ಣದ ಫ್ರೇಮ್‌ಗಳನ್ನು ಹೊಂದಿರುವ ಕನ್ನಡಕಗಳು ಹೊಸ ಲುಕ್ ನೀಡುತ್ತವೆ.

ಪೋಲರೈಸ್ಡ್ ಗ್ಲಾಸ್: ಈ ವಿಶೇಷ ಕನ್ನಡ ನೀರು ಅಥವಾ ರಸ್ತೆಯ ಮೇಲ್ಮೈಗಳು ಹೊಳೆಯುವಂತೆ ಕಾಣುವುದನ್ನು ಕಡಿಮೆ ಮಾಡುತ್ತದೆ. ಹೀಗಾಗಿ ಬೇಸಿಗೆ ಕಾಲದಲ್ಲಿ ಇದು ಉತ್ತಮ ಆಯ್ಕೆಯಾಗಿದೆ. ಅಲ್ಲದೆ ವಾಹನ ಚಾಲನೆ ಮಾಡುವವರಿಗೆ ಇದು ಹೇಳಿ ಮಾಡಿಸಿದ ಕನ್ನಡಕ. ಸ್ಟೈಲಿಷ್ ಆಗಿಯೂ, ಕಣ್ಣಿಗೆ ಹಿತವಾಗಿಯೂ ಇರುತ್ತದೆ.

ವೇಫೇರರ್ ಸನ್‌ಗ್ಲಾಸ್: ಕಣ್ಣುಗಳನ್ನು ಪೂರ್ತಿಯಾಗಿ ಸುತ್ತುವರಿಯುವ ಈ ಕನ್ನಡಕಗಳು ಮುಖಕ್ಕೆ ಹೊಸ ಲುಕ್ ನೀಡುತ್ತದೆ. ತ್ರಿಕೋನ ಅಥವಾ ವೃತ್ತಾಕಾರದ ಮುಖ ಇರುವವರಿಗೆ ಈ ವೇಫೇರರ್ ಶೈಲಿಯ ಸನ್‌ಗ್ಲಾಸ್‌ಗಳು ಹೇಳಿ ಮಾಡಿಸಿದಂತವು.

ಮಿರರ್ ಸನ್‌ಗ್ಲಾಸ್: ನೀವೇನಾದರೂ ಟ್ರೆಂಡಿ ಸನ್‌ಗ್ಲಾಸ್ ಹುಡುಕುತ್ತಿದ್ದರೆ ಮಿರರ್ ಸನ್‌ಗ್ಲಾಸ್ ಉತ್ತಮ ಆಯ್ಕೆಯಾಗಿದೆ. ಗಾಢ ಬೆಳಕಿನಿಂದ ಕಣ್ಣನ್ನು ರಕ್ಷಿಸಿ, ಆರಾಮದಾಯಕ ಅನುಭವ ನೀಡುತ್ತದೆ. ಸಮುದ್ರ ತೀರಗಳು, ಚಾರಣಕ್ಕೆ ಹೋಗುವಾಗ ಈ ಕನ್ನಡಕ ನೆರವಾಗುತ್ತದೆ.

ಏವಿಯೇಟರ್ ಕನ್ನಡ: ಇದನ್ನು ಸಾಮಾನ್ಯವಾಗಿ ಪೈಲಟ್‌ಗಳು ಬಳಸುತ್ತಾರೆ. ಇದು ಪೋಲರೈಸ್ಡ್ ಗ್ಲಾಸ್‌ನಂತೆ ಇದ್ದು, ಹೊಳೆಯುವ ಬೆಳಕಿನ ಕಿರಣಗಳಿಂದ ಕಣ್ಣುಗಳನ್ನು ರಕ್ಷಿಸುತ್ತವೆ. ಏವಿಯೇಟರ್ ಕನ್ನಡಕಗಳನ್ನು ಓಡುವಾಗ, ಆಟವಾಡುವಾಗ, ಹೊರಾಂಗಣಕ್ಕೆ ಹೋದಾಗ ಧರಿಸಬಹುದು. ಈ ಕನ್ನಡದಲ್ಲಿ ಕಪ್ಪು, ನೀಲಿ, ಕೇಸರಿ, ಹಳದಿ ಸೇರಿ ಹಲವು ಬಣ್ಣಗಳ ಗ್ಲಾಸ್ ಪಡೆಯಬಹುದು. ಹೀಗಾಗಿ ಫ್ಯಾಷನ್ ಪ್ರಿಯರಿಗೆ ಇದು ಬೆಸ್ಟ್.

ವಿವಿಧ ಫ್ರೇಮ್‌ಗಳ ಕನ್ನಡಕಗಳು: ಗ್ಲಾಸ್‌ಗಳ ಸುತ್ತಲೂ ಚೌಕಟ್ಟಿರುವ ಕನ್ನಡಕವನ್ನು ಫುಲ್ ರಿಮ್ ಗ್ಲಾಸ್ ಎನ್ನುತ್ತಾರೆ ಇವುಗಳಲ್ಲಿ ವೃತ್ತಾಕಾರದ ದೊಡ್ಡದಾದ ಕನ್ನಡಕಗಳೂ ಸಿಗುತ್ತವೆ. ಬಾಲಿವುಡ್ ನಟ ಕರಣ ಜೋಹರ್ ಧರಿಸುತ್ತಾರಲ್ಲ ಆ ರೀತಿಯದ್ದು.

ಇನ್ನು, ಗ್ಲಾಸ್‌ಗಳ ಮೇಲ್ಭಾಗದಲ್ಲಿ ಮಾತ್ರ ಚೌಕಟ್ಟಿರುವ ಸೆಮಿ ರಿಮ್, ಗ್ಲಾಸ್‌ಗಳಿಗೆ ಚೌಕಟ್ಟಿಲ್ಲದ ರಿಮ್‌ಲೆಸ್ ಕನ್ನಡಕಗಳು, ಬೆಕ್ಕಿನ ಕಣ್ಣುಗಳ ಆಕಾರದಲ್ಲಿರುವ ಕನ್ನಡಕಗಳೂ ದೊರೆಯುತ್ತವೆ.

1. ಮೈದುಂಬುತ್ತಿರುವ ತುಂಗಭದ್ರೆ... ಮಲೆನಾಡು ಭಾಗದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಕೊಪ್ಪಳದ ತುಂಗಭದ್ರಾ ಜಲಾಶಯದಲ್ಲಿ ಒಳಹರಿವು ಹೆಚ್ಚುತ್ತಿದ್ದು, ಶುಕ್ರವಾರ ಕಂಡ ಜಲಾಶಯದ ನೋಟ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ 2. ಉಡುಪಿ ಜಿಲ್ಲೆ ಪಡುಬಿದ್ರಿಯ ಪಾದಬೆಟ್ಟುವಿನ ಹೊಯ್ಗೆ ಪರಿಸರದಲ್ಲಿ ಜಲಾವೃತಗೊಂಡ ಮನೆಗಳಲ್ಲಿದ್ದ ಜನರನ್ನು ಗೃಹರಕ್ಷಕದ ದಳದ ಸಿಬ್ಬಂದಿ ಶುಕ್ರವಾರ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಿದರು –ಪ್ರಜಾವಾಣಿ ಚಿತ್ರ/ಹಮೀದ್ ಪಡುಬಿದ್ರಿ 3. ಮೈಸೂರು ಜಿಲ್ಲೆಯ ಸುತ್ತೂರಿಗೆ ಸಂಪರ್ಕ ಕಲ್ಪಿಸುವ ಸೇತುವೆಯು ಕಪಿಲಾ ನದಿ ಪ್ರವಾಹದಿಂದ ಶುಕ್ರವಾರ ಮುಳುಗಿತ್ತು ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಕಪಿಲಾ ನದಿಪಾತ್ರದಲ್ಲಿ ಪ್ರವಾಹ • ಕೆಆರ್‌ಎಸ್ ಜಲಾಶಯದಿಂದ ಕಾವೇರಿ ನದಿಗೆ ಹರಿದ 1 ಸಾವಿರ ಕ್ಯುಸೆಕ್ ನೀರು

ಸತತ ಮಳೆ: ಹಲವೆಡೆ ರಸ್ತೆ ಸಂಪರ್ಕ ಕಡಿತ

ಪ್ರಜಾವಾಣಿ ವಾರ್ತೆ

ಮಂಗಳೂರು/ಮೈಸೂರು: ಮೈಸೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಶುಕ್ರವಾರವೂ ಮಳೆ–ಗಾಳಿ ಆರ್ಭಟ, ಮಣ್ಣು ಕುಸಿತ ಮುಂದುವರಿಯಿತು. ನದಿಗಳು ತುಂಬಿ ಹರಿಯುತ್ತಿದ್ದು, ಪ್ರವಾಹ ಪರಿಸ್ಥಿತಿ ಉಲ್ಬಣಗೊಂಡಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ತುಂಗಾ ಮತ್ತು ಭದ್ರಾ ನದಿಗಳು ಮೈದುಂಬಿ ಹರಿಯುತ್ತಿವೆ. ಇದರಿಂದಾಗಿ ಹಲವು ರಸ್ತೆಗಳ ಸಂಪರ್ಕ ಕಡಿತಗೊಂಡಿವೆ. ಶೃಂಗೇರಿಯಲ್ಲಿ ತುಂಗಾ ನದಿ ಭೋರ್ಗರೆದು ಹರಿಯುತ್ತಿದೆ. ಶೃಂಗೇರಿ–ಮಂಗಳೂರು ಸಂಪರ್ಕ ಕಡಿತಗೊಂಡಿದ್ದು, ಗುಲುಗುಂಜಿ ಮನೆ ಮತ್ತು ಕೊರಕನಹಳ್ಳ ಸೇತುವೆಗಳ ಮೇಲೆ ನೀರು ಹರಿಯುತ್ತಿದೆ.

ಬಾಳೆಹೊನ್ನೂರು ಸಮೀಪದ ಮಾಗುಂಡಿ–ಮಹಲ್ ಗೋಡು–ಕಳಸ ಸಂಪರ್ಕ ರಸ್ತೆ ಕಡಿತಗೊಂಡಿದೆ. ಈ ರಸ್ತೆಯಲ್ಲಿ ಸೇತುವೆ ಮೇಲೆಯೇ ನೀರು ಹರಿಯುತ್ತಿದ್ದು, ಎರಡೂ ಬದಿಯಲ್ಲಿದ್ದ ತಡೆ ಕಂಬಗಳು ಕೊಚ್ಚಿ ಹೋಗಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಬಂದಾರು ಗ್ರಾಮದ ಕುಂಟಾಲಪಲ್ಕೆ ಸೇತುವೆ ಬಳಿ ಕಲ್ಲರ್ಬಿ ಎಂಬಲ್ಲಿ ಭಾರಿ ಪ್ರಮಾಣದಲ್ಲಿ ಗುಡ್ಡ ಕುಸಿತವಾಗಿದೆ, ಬಂಟ್ವಾಳ ತಾಲ್ಲೂಕಿನ ಬುರಾಲು ಎಂಬಲ್ಲಿ ಧರೆ ಕುಸಿದಿದೆ. ಪುತ್ತೂರು ತಾಲ್ಲೂಕಿನ ಮಚ್ಚಿಮಲೆ– ಬಂಗಾರಡ್ಕ ರಸ್ತೆಯಲ್ಲಿ ಮಚ್ಚಿಮಲೆ ಎಂಬಲ್ಲಿ ರಸ್ತೆ ಬದಿಯ ಧರೆ 50 ಅಡಿ ಆಳಕ್ಕೆ ಕುಸಿದಿದೆ. ಈ ಮೂರು ರಸ್ತೆಗಳಲ್ಲಿ ಸಂಚಾರ ನಿಷೇಧಿಸಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಕುಮಾರಧಾರಾ ನದಿಯ ಪ್ರವಾಹದಿಂದಾಗಿ ಸ್ನಾನಘಟ್ಟ, ದರ್ಪಣ ತೀರ್ಥ ಸೇತುವೆ ಮುಳುಗಿವೆ.

ಉಡುಪಿ ಹೊರವಲಯದ ಕೆಮ್ಮೂರಿನಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಹಲವು ಮನೆಗಳಿಗೆ ನೆರೆ ನೀರು ನುಗ್ಗಿದೆ. ಎರಡು ಮನೆಗಳಲ್ಲಿದ್ದವರನ್ನು ಅಗ್ನಿಶಾಮಕ ದಳದವರು ಬೋಟ್ ಮೂಲಕ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಿದ್ದಾರೆ. ಎಡೆಬಿಡದೆ ಸುರಿದ ಬಿರುಸಿನ ಮಳೆಗೆ ನಗರದ ಹಲವು ರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರು ತೊಂದರೆ ಅನುಭವಿಸಿದರು.

ಬ್ರಹ್ಮಾವರ ತಾಲ್ಲೂಕಿನಲ್ಲಿ ಮತ್ತೆ ಪ್ರವಾಹ ಉಂಟಾಗಿದೆ. ಕೆಲವೆಡೆ ಕೃಷಿ ಭೂಮಿ ಜಲಾವೃತಗೊಂಡಿದೆ. ಹಲವಾರು ಮನೆಗಳ ಸುತ್ತಲೂ ಪ್ರವಾಹದ ನೀರು ನಿಂತಿದೆ. ಆರೂರು. ಉಪ್ಪೂರು ಉಗ್ಗೇಲ್ ಬೆಟ್ಟು ಗ್ರಾಮದಲ್ಲಿಯೂ ಮಡಿಸಾಲು ಹೊಳೆ ಉಕ್ಕಿ ಹರಿಯುತ್ತಿದ್ದು ಅನೇಕ ಮನೆಗಳು ಜಲಾವೃತಗೊಂಡಿದೆ.

ಪಡುಬಿದ್ರಿಯ ಪಾದಬೆಟ್ಟುವಿನ ಹೊಯ್ಗೆ ಪರಿಸರದಲ್ಲಿ ಜಲಾವೃತಗೊಂಡ ಐದು ಮನೆಗಳ ಒಟ್ಟು 15 ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ.

ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ಆಗಿದ್ದು, ಕರಾವಳಿಯಲ್ಲಿ ಗಾಳಿಯೊಂದಿಗೆ ಮಳೆಯಾಗುವ ಸಾಧ್ಯತೆ ಇದೆ. ಸಮುದ್ರ ಪ್ರಕ್ಷುಬ್ಧಗೊಂಡಿದ್ದು, ಮೀನುಗಾರರು ಕಡಲಿಗೆ ಇಳಿಯದಂತೆ ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

90 ಮಂದಿ ಸ್ಥಳಾಂತರ: ಕೊಡಗಿನಲ್ಲಿ 90 ಮಂದಿಯನ್ನು ಸ್ಥಳಾಂತರಿಸಿದ್ದು, 4 ಕಾಳಜಿ ಕೇಂದ್ರಗಳಲ್ಲಿ 35 ಮಂದಿಯನ್ನಿರಿಸಲಾಗಿದೆ. 30 ಮನೆಗಳು ಕುಸಿದು, 50 ವಿದ್ಯುತ್ ಕಂಬಗಳು ನೆಲಕಚ್ಚಿವೆ.

ಕುಶಾಲನಗರದ ಗೊಂದಿಬಸವನಹಳ್ಳಿಯ ರೊಂಡೆ ಕೆರೆಯ ಏರಿ ಕುಸಿದು ನೀರು ಜಮೀನುಗಳಿಗೆ ನುಗ್ಗಿದ್ದು, ಯುವಕರು ಮೀನು ಹಿಡಿದು ಸಂಭ್ರಮಿಸಿದರು. ಕುಶಾಲನಗರದಲ್ಲಿ ಏಳು ಬಡಾವಣೆಗಳಿಗೆ ನೀರು ನುಗ್ಗಿದೆ. ಮಡಿಕೇರಿ– ವಿರಾಜಪೇಟೆ ನಡುವಿನ ಬೇತ್ರಿಯಲ್ಲಿ ಕಾವೇರಿ ಹರಿವು ಹೆಚ್ಚಳಗೊಂಡಿದೆ.

ಹಾರಂಗಿ ಜಲಾಶಯದಿಂದ 20 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ. ಮಂಗಳೂರು– ಮಡಿಕೇರಿ ರಸ್ತೆಯ ಕರ್ತೋಜಿಯಲ್ಲಿ ರಾತ್ರಿ ಸಂಚಾರವನ್ನು ನಿರ್ಬಂಧಿಸಿದ ವಿಷಯ ತಿಳಿಯದವರು ಚೆಕ್‌ಪೋಸ್ಟ್‌ಗಳಲ್ಲಿ ಕಿ.ಮೀಗಟ್ಟಲೆ ನಿಂತಿದ್ದರು.

ಮೈಸೂರು ಜಿಲ್ಲೆಯ ಕಪಿಲಾ ನದಿಪಾತ್ರದಲ್ಲಿ ಪ್ರವಾಹ ಉಂಟಾಗಿದ್ದು, ನಂಜನಗೂಡಿನ 70ಕ್ಕೂ ಹೆಚ್ಚು ಮನೆಗಳಿಗೆ ಹಾಗೂ ಶ್ರೀಕಂಠೇಶ್ವರ ದೇವಾಲಯದ ಶಿವನ ಪ್ರತಿಮೆಯ ಸ್ಥಳದವರೆಗೆ ನೀರು ನುಗ್ಗಿದೆ. ನಿವಾಸಿಗಳನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ತಾಲ್ಲೂಕಿನ ಮಲ್ಲನಮೂಲೆ ಮಠದ ಬಸವೇಶ್ವರ ದೇವಾಲಯ ಜಲಾವೃತಗೊಂಡಿದೆ. ಸುತ್ತೂರು ಬಳಿ ಸೇತುವೆ ಮುಳುಗಿದ್ದು, ಸಂಪರ್ಕ ಕಡಿತಗೊಂಡಿದೆ.

ನೆರೆಯ ಕೇರಳದ ವಯನಾಡು ಪ್ರದೇಶದಲ್ಲಿ ಮಳೆ ಮುಂದುವರಿದಿರುವುದರಿಂದ, ಕಬಿನಿ ಜಲಾಶಯದಿಂದ ಹೆಚ್ಚಿನ ನೀರು ಹರಿಸಲಾಗುತ್ತಿದ್ದು, ಕಪಿಲಾ ನದಿಯು ಅಪಾಯಕಾರಿಯಾಗಿ ಹರಿಯುತ್ತಿದೆ. ಮೈಸೂರು- ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಾಲ್ಕು ಅಡಿಗೂ ಹೆಚ್ಚು ನೀರು ಬಂದಿದ್ದು, ಸಂಚಾರ ನಿರ್ಬಂಧಿಸಲಾಗಿದೆ. ಮೈಸೂರು–ನಂಜನಗೂಡು ನಡುವೆ ಸಂಚರಿಸುವವರು ಪರ್ಯಾಯ ಮಾರ್ಗವನ್ನು ಅವಲಂಬಿಸಿದ್ದಾರೆ.

ಶಿವಮೊಗ್ಗ ವರದಿ: ಜಿಲ್ಲೆಯಲ್ಲಿ ಶುಕ್ರವಾರವೂ ಮುಂದುವರೆದಿರುವ ಮಳೆಯಿಂದಾಗಿ ತುಂಗಾ, ಭದ್ರಾ, ಶರಾವತಿ, ವರದಾ, ಕುಮದ್ವತಿ ನದಿಗಳು ಉಕ್ಕಿ ಹರಿಯುತ್ತಿವೆ. ಹಳ್ಳ- ಕೊಳ್ಳ, ಕೆರೆ– ಕುಂಟೆಗಳು ಭೋರ್ಗರೆಯುತ್ತಿವೆ.

ದಾವಣಗೆರೆ ವರದಿ: ಈ ಮುಂಗಾರಿನಲ್ಲೇ ಮೊದಲ ಬಾಶರಿ ಜಿಲ್ಲೆಯಲ್ಲಿ ದಿನವಿಡೀ ಮಳೆ ಸುರಿದಿದ್ದರಿಂದ ಜನರು ಮನೆಯಿಂದ ಹೊರಬರಲು ಸಾಧ್ಯವಾಗಲಿಲ್ಲ. ಧಾರಾಕಾರ ಮಳೆಯಿಂದಾಗಿ ಜಿಲ್ಲೆಯ ಹಲವೆಡೆ ರಸ್ತೆಗಳು, ಜಮೀನುಗಳು ಜಲಾವೃತಗೊಂಡಿವೆ. ಕೆರೆ–ಕಟ್ಟೆಗಳು ತುಂಬಿ ಹರಿಯುತ್ತಿವೆ.

ಹರಿಹರ ತಾಲ್ಲೂಕಿನ ಕಡರನಾಯ್ಕನಹಳ್ಳಿ ಸಮೀಪದ ಉಕ್ಕಡಗಾತ್ರಿ ಬಳಿ ತುಂಗಭದ್ರಾ ನದಿಯ ಪ್ರವಾಹದಿಂದಾಗಿ ತೋಟ, ಗದ್ದೆಗಳು ಜಲಾವೃತಗೊಂಡಿವೆ. ಪತ್ತೇಪುರ-ಉಕ್ಕಡ-ಗಾತ್ರಿ ರಸ್ತೆ ಜಲಾವೃತವಾಗಿ ಸಂಪರ್ಕ ಕಡಿತಗೊಂಡಿದೆ. ವಿದ್ಯುತ್ ಕಂಬಗಳೂ ಜಲಾವೃತಗೊಂಡಿದ್ದು, ಅಪಾಯ ಆಹ್ವಾನಿಸುತ್ತಿವೆ.

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ರಾಯಚೂರು, ಬೀದರ್, ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಸಾಧಾರಣವಾಗಿ ಮಳೆಯಾಗಿದೆ.

ಕಲಬುರಗಿ ನಗರದ, ಚಿಂಚೋಳಿ, ಕಾಳಗಿ, ಕಮಲಾಪುರದಲ್ಲಿ ಕೆಲಕಾಲ ಉತ್ತಮವಾಗಿ ಮಳೆ ಸುರಿಯಿತು. ಬೀದರ್ ಜಿಲ್ಲೆಯ ಬೀದರ್, ಹುಲಸೂರ, ಭಾಲ್ಕಿ ಹಾಗೂ ಹುಮನಾಬಾದ್ ತಾಲ್ಲೂಕಿನಲ್ಲಿ ಶುಕ್ರವಾರ ಜಿಟಿಜಿಟಿ ಮಳೆಯಾಗಿದೆ.

ಕಾರವಾರ ವರದಿ: ಉತ್ತರ ಕನ್ನಡ ಜಿಲ್ಲೆಯಾದ್ಯಂತ ಶುಕ್ರವಾರವೂ ಮಳೆ ಆರ್ಭಟ ಮುಂದುವರೆದಿದ್ದು, ಭೂಕುಸಿತ ಸೇರಿ ಹಲವು ಹಾನಿ ಸಂಭವಿಸಿದೆ.ಕುಮಟಾ ತಾಲ್ಲೂಕಿನ ಉಳ್ಳೂರಮಠ ಸಮೀಪ ಕುಮಟಾ–ಸಿದ್ದಾಪುರ ರಾಜ್ಯ ಹೆದ್ದಾರಿ–68ರಲ್ಲಿ ಭಾರಿ ಪ್ರಮಾಣದಲ್ಲಿ ಭುಕುಸಿತ ಉಂಟಾಗಿ ರಸ್ತೆಗೆ ಮಣ್ಣಿನ ರಾಶಿ ಆವರಿಸಿಕೊಂಡಿತು. ಇದರಿಂದ ಈ ಮಾರ್ಗದಲ್ಲಿ ಸಂಚಾರ ಸ್ಥಗಿತವಾಯಿತು. ಹೊನ್ನಾವರ ತಾಲ್ಲೂಕಿನ ಗೇರುಸೊಪ್ಪ ಬಳಿ ಮರ ರಸ್ತೆಗೆ ಉರುಳಿದ್ದು ಹೊನ್ನಾವರ ಹೆದ್ದಾರಿ–69 ರಲ್ಲಿ ಕೆಲ ಗಂಟೆ ಸಂಚಾರ ಸ್ಥಗಿತಗೊಂಡಿತ್ತು.

ಶಿರಸಿ–ಕುಮಟಾ ರಾಷ್ಟ್ರೀಯ ಹೆದ್ದಾರಿ–766ಇ ಮಾರ್ಗದ ಮೊಸಳೆಗುಂಡಿ, ಸಂಪಕಂಡ, ಚಕ್ಕಡಿ, ಬಂಡಲ ಗ್ರಾಮಗಳ ಬಳಿ ಭೂಕುಸಿತ ಉಂಟಾಗಿ ಮಣ್ಣು, ಮರಗಳು ರಸ್ತೆಯ ಮೇಲೆ ಬಿದ್ದಿದ್ದವು. ಕುಮಟಾ ತಾಲ್ಲೂಕಿನ ಬರ್ಗಿಯಲ್ಲಿ ಗುರುವಾರ ಭೂಕುಸಿತ ಉಂಟಾಗಿದ್ದ ಜಾಗದಲ್ಲಿ ಶುಕ್ರವಾರವೂ ಕುಸಿತ ಉಂಟಾಯಿತು.

ಅಬ್ಬರದ ಮಳೆಗೆ ಶುಕ್ರವಾರ ಧುಮ್ಮಿಕ್ಕುತ್ತಿರುವ ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ಉಂಚಳ್ಳಿ ಜಲಪಾತ

ಶ್ರೀರಂಗಪಟ್ಟಣದ ರಂಗನತಿಟ್ಟು ಪಕ್ಷಿಧಾಮದ ದೋಣಿ ವಿಹಾರವನ್ನು ಜುಲೈ 19ರಿಂದ ಸ್ಥಗಿತಗೊಳಿಸಲಾಗಿದೆ. ಪಕ್ಷಿಧಾಮದ ವೀಕ್ಷಣೆಗಷ್ಟೇ ಅವಕಾಶವಿದೆ

ಬಿ.ಎಂ. ಶರಣ ಬಸಪ್ಪ, ಮೈಸೂರು ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ

ಮಳೆ ಅವಘಡ; 4 ಸಾವು

- **ನದಿ ಪಾಲು:** ಸೊರಬ ತಾಲ್ಲೂಕಿನ ಯಡಗೊಪ್ಪ-ಯಲವಾಟ ಗ್ರಾಮಗಳ ಬಳಿ ವಡ್ಡಿಗೆರೆ ಗ್ರಾಮದ ಯಲ್ಲಪ್ಪ (50) ಎಂಬವರು ಮೀನು ಹಿಡಿಯಲು ಹೋಗಿ ದಂಡಾವಳಿ ನದಿಯಲ್ಲಿ ಕೊಚ್ಚಿ ಹೋಗಿದ್ದಾರೆ.
- **ಗೃಹಿಣಿ ಸಾವು:** ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು ಕಗ್ಗುಂಡಿ ಗ್ರಾಮದಲ್ಲಿ ಮನೆಯ ಮಣ್ಣಿನ ಗೋಡೆ ಕುಸಿದು ಗೃಹಿಣಿ ಹೇಮಲತಾ (22) ಮೃತಪಟ್ಟಿದ್ದು, 2 ವರ್ಷದ ಮಗು ಪಾರಾಗಿದೆ. ಮನೆಯ ಹೊರಗಿದ್ದ ಶೌಚಾಲಯಕ್ಕೆ ಹೋಗಿ ಬರುವಾಗ ಗೋಡೆ ಕುಸಿಯುತ್ತಿರುವುದು ಗೊತ್ತಾಗುತ್ತಿದ್ದಂತೆಯೇ, ಮಗುವನ್ನು ಹೊರಗಡೆ ತಳ್ಳಿ ಜೀವ ಉಳಿಸಿದ್ದಾರೆ.
- ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಬಿದರಕೆರೆ ಲಂಬಾಣಿ ಹಟ್ಟಿಯಲ್ಲಿ ಮನೆಯೊಂದು ಕುಸಿದು ಬಿದ್ದಿದ್ದು, ಜಯಾನಾಯ್ಕ (49) ಶುಕ್ರವಾರ ಸಾವಿಗೀಡಾಗಿದ್ದಾರೆ.
- **ವಿದ್ಯುತ್ ತಗುಲಿ ವಿದ್ಯಾರ್ಥಿನಿ ಸಾವು:** ದಕ್ಷಿಣ ಕನ್ನಡ ಜಿಲ್ಲೆಯ ಮೂಳೂರು ಗ್ರಾಮದ ಕಲ್ಲಕಲಂಬಿ ಎಂಬಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಕಾಲೇಜು ವಿದ್ಯಾರ್ಥಿನಿ ಆಶ್ನಿ ಶೆಟ್ಟಿ (21) ಮೃತಪಟ್ಟಿದ್ದಾರೆ.

91 ಗ್ರಾಮಗಳಲ್ಲಿ ಪ್ರವಾಹ ಸಾಧ್ಯತೆ

ಮಂಡ್ಯ: ಇಲ್ಲಿನ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಶುಕ್ರವಾರ ಸಂಜೆ 118 ಅಡಿ ತಲುಪಿದೆ. 120 ಅಡಿ ದಾಟಿದ ಕೂಡಲೇ ಅಣೆಕಟ್ಟೆ ಸುರಕ್ಷತೆ ದೃಷ್ಟಿಯಿಂದ ನೀರನ್ನು ಕಾವೇರಿ ನದಿಗೆ ಹರಿಸಲಾಗುವುದು. ನದಿಪಾತ್ರದಲ್ಲಿರುವ ಜನ ಮುನ್ನೆಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದ್ದಾರೆ.

ಒಂದು ಲಕ್ಷಕ್ಕಿಂತ ಹೆಚ್ಚಿನ ಕ್ಯುಸೆಕ್ ನೀರು ಬಿಡುಗಡೆ ಮಾಡಿದರೆ, ನದಿ ಪಾತ್ರದಲ್ಲಿರುವ ಶ್ರೀರಂಗಪಟ್ಟಣ ತಾಲ್ಲೂಕಿನ- 53, ಪಾಂಡವಪುರ- 15, ಮಳವಳ್ಳಿ- 21 ಹಾಗೂ ಹೇಮಾವತಿ ಜಲಾಶಯ ವ್ಯಾಪ್ತಿಯ ಕೆ.ಆರ್. ಪೇಟೆ- 3 ಗ್ರಾಮಗಳಲ್ಲಿ ಪ್ರವಾಹ ಉಂಟಾಗಿ ತೊಂದರೆ-ಯಾಗಬಹುದು ಎಂದು ಜಿಲ್ಲಾಡಳಿತ ಅಂದಾಜಿಸಿದೆ. ಈ ಗ್ರಾಮಗಳಿಗೆ ಅಧಿಕಾರಿಗಳು ಭೇಟಿ ನೀಡಿ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಪರಿಶೀಲಿಸಬೇಕು ಎಂದು ಸೂಚಿಸಿದ್ದಾರೆ. ಈ ಸಂಬಂಧ ಕಂಟ್ರೋಲ್ ರೂಂ ಸ್ಥಾಪಿಸಲಾಗಿದೆ. ಕೆಆರ್‌ಎಸ್ ಜಲಾಶಯದಿಂದ ಕಾವೇರಿ ನದಿಗೆ ಶುಕ್ರವಾರ ಸಂಜೆ 7 ಗಂಟೆ ವೇಳೆಗೆ ಒಂದು ಸಾವಿರ ಕ್ಯುಸೆಕ್ ನೀರನ್ನು ಹರಿಸಲಾಯಿತು.

ಹಾಸನ: ಜಿಲ್ಲೆಯಲ್ಲಿ ಮಳೆಯ ಅಬ್ಬರ ತಗ್ಗಿದ್ದರೂ ಹೆದ್ದಾರಿ ಬದಿಯ ಬೆಟ್ಟಗಳು ಕುಸಿಯುವ ಆತಂಕ ಎದುರಾಗಿದೆ. ಶಿರಾಡಿ ಘಾಟ್‌ನ ದೊಡ್ಡತಪ್ಲೆ ಗ್ರಾಮದ ಬಳಿ ಹೆದ್ದಾರಿಯ ಮೇಲೆ ಕುಸಿದಿದ್ದ ಮಣ್ಣು ತೆರವು ಕಾರ್ಯಾಚರಣೆ ನಡೆಯುತ್ತಿದೆ. ಬಾಣಗೇರಿ ಹೊಳೆಯು ಸೇತುವೆ ಮೇಲೆ ಹರಿಯುತ್ತಿದ್ದು, ಸಕಲೇಶಪುರ– ಮಾಗೇರಿ– ಸೋಮವಾರಪೇಟೆ ರಸ್ತೆ ಸಂಪರ್ಕ ಕಡಿತವಾಗಿದೆ.

ಶಿರಾಡಿ: ಹಗಲಿನಲ್ಲಿ ವಾಹನಗಳ ಸಂಚಾರಕ್ಕೆ ಅನುವು

ಹಾಸನ: ಬೆಂಗಳೂರು–ಮಂಗಳೂರು ಹೆದ್ದಾರಿಯ ಶಿರಾಡಿ ಘಾಟ್ ರಸ್ತೆಯಲ್ಲಿ ಬೆಳಿಗ್ಗೆ 6 ರಿಂದ ಸಂಜೆ 6 ಗಂಟೆಯವರೆಗೆ ಎಲ್ಲ ರೀತಿಯ ವಾಹನಗಳ ಸಂಚಾರಕ್ಕೆ ಅವಕಾಶ ನೀಡಿದ್ದು, ಸಂಜೆ 6 ರಿಂದ ಬೆಳಿಗ್ಗೆ 6 ಗಂಟೆಯವರೆಗೆ ನಿಷೇಧಿಸಲಾಗಿದೆ.

ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ಗುರುವಾರ ಭೂಕುಸಿತದ ನಂತರ, ರಸ್ತೆ ದುರಸ್ತಿಯಾಗುವವರೆಗೆ ರಾಷ್ಟ್ರೀಯ ಹೆದ್ದಾರಿ–75 ರ ಹಾಸನ–ಮಾರನಹಳ್ಳಿವರೆಗಿನ ರಸ್ತೆಯಲ್ಲಿ ವಾಹನ ಸಂಚಾರ ನಿಷೇಧಿಸಿ ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶವನ್ನು ಮಾರ್ಪಡಿಸಲಾಗಿದೆ.

ರಾಜ್ಯದ 6 ಜಿಲ್ಲೆಗಳಿಗೆ 'ರೆಡ್ ಅಲರ್ಟ್'

ಬೆಂಗಳೂರು: ರಾಜ್ಯದಲ್ಲಿ ಶನಿವಾರವೂ ಭಾರಿ ಮಳೆಯಾಗಲಿದ್ದು, ಹವಾಮಾನ ಇಲಾಖೆಯು ಕರಾವಳಿ ಮತ್ತು ಮಲೆನಾಡಿನ ಆರು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಘೋಷಿಸಿದೆ.ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ನಿರಂತರ ಗಾಳಿಯೊಂದಿಗೆ ಧಾರಾಕಾರ ಮಳೆ ಮುಂದುವರಿಯುವ ಸಂಭವವಿದೆ. ಹಾಸನ ಜಿಲ್ಲೆಗೆ 'ಆರೆಂಜ್ ಅಲರ್ಟ್', ಯಾದಗಿರಿ, ಬೆಳಗಾವಿ, ಬೀದರ್, ಕಲಬುರಗಿ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಮಳೆ: ಎಲ್ಲಿ, ಎಷ್ಟು?	
ಕ್ಯಾಸಲ್ ರಾಕ್, ಉತ್ತರ ಕನ್ನಡ	23 ಸೆಂ.ಮೀ
ಆಗುಂಬೆ, ಶಿವಮೊಗ್ಗ	22 ಸೆಂ.ಮೀ
ಭಾಗಮಂಡಲ, ಕೊಡಗು	22 ಸೆಂ.ಮೀ.
ಮಂಕಿ, ಉತ್ತರ ಕನ್ನಡ	21 ಸೆಂ.ಮೀ
ಕಾರ್ಕಳ, ಉಡುಪಿ ಜಿಲ್ಲೆ	18 ಸೆಂ.ಮೀ
ಗೇರುಸೊಪ್ಪೆ, ಉತ್ತರ ಕನ್ನಡ	18 ಸೆಂ.ಮೀ
ಕೊಟ್ಟಿಗೆಹಾರ, ಚಿಕ್ಕಮಗಳೂರು	17 ಸೆಂ.ಮೀ.

ಹುಬ್ಬಳ್ಳಿಯ ಉಣಕಲ್ ಕೆರೆ ಶುಕ್ರವಾರ ಕೋಡಿ ಹರಿಯಿತು ಪ್ರಜಾವಾಣಿ ಚಿತ್ರ –ಗೋವಿಂದರಾಜ ಜವಳಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)				
ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್ ಎಸ್ *	124.80	118.46	46,165	2,732
ಹಾರಂಗಿ	2,859	2,854.83	23,760	20,000
ಕಬಿನಿ	2,284.00	2,280.41	46,064	40,000
ಹೇಮಾವತಿ	2,922	2,916.10	35,871	25,000
ಲಿಂಗನಮಕ್ಕಿ	1,819	1,791.50	87,496	-
ಸೂಪಾ (ಮೀ)	564	540.85	47,389	-
ಮಾಣಿ	595	580.94	559	-
ತುಂಗಭದ್ರಾ	1,633	1,618.03	1,06,723	404
ಮಲಪ್ರಭಾ	2,079.5	2,059.20	10,935	194
ಘಟಪ್ರಭಾ	2175	2,147.85	21,455	1,680
ಭದ್ರಾ	186	157.11	49,555	181
ಆಲಮಟ್ಟಿ (ಮೀ)	519.6	517.98	43,478	65,480
ನಾರಾಯಣಪುರ (ಮೀ)	492.25	491.61	62,000	68,810

* ನೆಲಮಟ್ಟದಿಂದ

ಮನೆ ಕುಸಿತ: ಅವಳಿ ಮಕ್ಕಳು ಸೇರಿ ಮೂವರು ಸಾವು

ಪ್ರಜಾವಾಣಿ ವಾರ್ತೆ

ಸವಣೂರು (ಹಾವೇರಿ ಜಿಲ್ಲೆ): ಜಿಲ್ಲೆಯ ಬಹುತೇಕ ಕಡೆ ನಿರಂತರ ಮಳೆಯಾಗುತ್ತಿದ್ದು, ಸವಣೂರು ತಾಲ್ಲೂಕಿನ ಕಾರಡಗಿ ಬಳಿ ಮಾದಾಪುರದಲ್ಲಿ ಮನೆ ಕುಸಿದು ಬಿದ್ದು ಅವಳಿ ಮಕ್ಕಳು ಸೇರಿ ಮೂವರು ಮೃತಪಟ್ಟಿದ್ದಾರೆ.

'ಗ್ರಾಮದ ಚನ್ನಮ್ಮ ದೊಡ್ಡಬಸಪ್ಪ ಹರಕುಣಿ (38), 18 ತಿಂಗಳ ಅವಳಿ ಮಕ್ಕಳಾದ ಅಮೂಲ್ಯ ಮುತ್ತಪ್ಪ ಹರಕುಣಿ ಮತ್ತು ಅನುಶ್ರೀ ಮುತ್ತಪ್ಪ ಹರಕುಣಿ ಮೃತರು. ಚನ್ನಮ್ಮ ಅವರ ತಾಯಿ ಯಲ್ಲಮ್ಮ (70), ಅವಳಿ ಮಕ್ಕಳ ಪೋಷಕರಾದ ಮುತ್ತಪ್ಪ ಮತ್ತು ಸುನೀತಾ ಅವರಿಗೆ ಗಾಯಗಳಾಗಿವೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕೃಷಿಕ ಮುತ್ತಪ್ಪ ಅವರ ಅಕ್ಕ ಚನ್ನಮ್ಮ ಸೇರಿ ಕುಟುಂಬದ ಎಲ್ಲಾ ಸದಸ್ಯರು ಮನೆಯಲ್ಲಿ ಮಲಗಿದ್ದರು. ಶುಕ್ರವಾರ ನಸುಕಿನಲ್ಲಿ ಚಾವಣಿ ಸಮೇತ ಮನೆ ಕುಸಿದಿದೆ. ಮನೆಯ ಅವಶೇಷಗಳಡಿ ಸಿಲುಕಿ ಚನ್ನಮ್ಮ, ಅಮೂಲ್ಯ ಹಾಗೂ ಅನುಶ್ರೀ ಮೃತಪಟ್ಟರು' ಎಂದು ಅವರು ತಿಳಿಸಿದ್ದಾರೆ.

ಅವಶೇಷಗಳಡಿ ಸಿಲುಕಿದ ಯಲ್ಲಮ್ಮ ಅವರನ್ನು ರಕ್ಷಿಸಿದ ಸ್ಥಳೀಯರು, ಜಿಲ್ಲಾಸ್ಪತ್ರೆಗೆ ದಾಖಲಿಸಿದರು. ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹಗಳನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಿದರು.

ಸಿಯಾಚಿನ್ ಯುದ್ಧಭೂಮಿಗೆ ಮೈಸೂರಿನ ಸುಪ್ರಿತಾ ಆಯ್ಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ವಲ್ಲಭಬಾಯಿ ನಗರದ ನಿವಾಸಿ, ಭಾರತೀಯ ವಾಯು ಸೇನೆಯ ಕ್ಯಾಪ್ಟನ್ ಸುಪ್ರಿತಾ ಸಿ.ಟಿ. ಅವರು, ಪ್ರಪಂಚದ ಅತಿ ಎತ್ತರದ ಯುದ್ಧಭೂಮಿ ಸಿಯಾಚಿನ್‌ನಲ್ಲಿ ಕರ್ತವ್ಯ ನಿರ್ವಹಿಸಲು ಆಯ್ಕೆಯಾಗಿದ್ದಾರೆ. ಅಲ್ಲಿಗೆ ಆಯ್ಕೆಯಾದ ದೇಶದ ಮೊದಲ ಮಹಿಳಾ ಯೋಧೆ ಎಂಬುದು ವಿಶೇಷ. ವಾಯು ಸೇನೆಯ ಅಧಿಕೃತ ವೆಬ್‌ಸೈಟ್ ಇದನ್ನು ಖಚಿತಪಡಿಸಿದೆ.

ತಲಕಾಡು ಪಿಎಸ್‌ಐ ತಿರುಮಲ್ಲೇಶ್ ಹಾಗೂ ನಿರ್ಮಲಾ ದಂಪತಿ ಪುತ್ರಿಯಾದ ಅವರು, ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಎಲ್‌ಎಲ್‌ಬಿ ಪದವಿ ಹಾಗೂ ಎನ್‌ಸಿಸಿ 'ಸಿ' ಸರ್ಟಿಫಿಕೇಟ್ ಪಡೆದಿದ್ದರು.

ಸಿಯಾಚಿನ್‌ನಲ್ಲಿ ಸುಪ್ರಿತಾ

2021ರಲ್ಲಿ ಸೇನಾ ಪಡೆಯಲ್ಲಿ ಲೆಫ್ಟಿನೆಂಟ್ ಆಗಿ ಆಯ್ಕೆಯಾಗಿ ತರಬೇತಿಯ ನಂತರ ವಾಯುಪಡೆಗೆ ನಿಯೋಜನೆಯಾಗಿದ್ದರು. 2024ರಲ್ಲಿ ಪತಿ ಮೇಜರ್ ಜೆರ್ರಿ ಬ್ಲೇಜ್ ಅವರೊಂದಿಗೆ ರಾಜಪಥ್ ಪರೇಡ್‌ನಲ್ಲಿ ಭಾಗವಹಿಸಿದ್ದರು. ಅನಂತನಾಗ್, ಜಬ್ಬಾಲ್ಪುರ್ ಹಾಗೂ ಲೇಹ್‌ನಲ್ಲಿ ಕರ್ತವ್ಯ ನಿರ್ವಹಿಸಿದ ಬಳಿಕ ಕಠಿಣ ತರಬೇತಿಯಲ್ಲಿ ತೇರ್ಗಡೆಯಾಗಿ ಅವರು ಸಿಯಾಚಿನ್‌ಗೆ ಆಯ್ಕೆಯಾಗಿದ್ದಾರೆ.

ಸಿಇಟಿ ಕೌನ್ಸೆಲಿಂಗ್‌ಗೆ ಪರಿಶೀಲನಾ ಚೀಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಸಿಇಟಿ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಪರಿಶೀಲನಾ ಚೀಟಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತನ್ನ ವೆಬ್‌ಸೈಟ್‌ನಲ್ಲಿ ಶುಕ್ರವಾರ ಲಿಂಕ್ ಬಿಡುಗಡೆ ಮಾಡಿದ್ದು, ವಿದ್ಯಾರ್ಥಿಗಳು ತಮ್ಮ ಸಿಇಟಿ ಅರ್ಜಿ ಸಂಖ್ಯೆ, ಹೆಸರು, ಜನ್ಮದಿನ ನಮೂದಿಸಿ, ಪರಿಶೀಲನಾ ಚೀಟಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು, ಇಚ್ಛೆಗಳನ್ನು ದಾಖಲಿಸಲು ಅನುಕೂಲವಾಗುವ 'ರಹಸ್ಯ ಸಂಖ್ಯೆ' ಇದ್ದು, ಯಾರ ಬಳಿಯೂ ಹಂಚಿಕೊಳ್ಳಬಾರದು ಎಂದು ಕೆಇಎ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಸಭೆಯ ಚಿತ್ರೀಕರಣ ಮಾಡಿದ ವಿದ್ಯಾರ್ಥಿಗೆ ಬೆದರಿಕೆ; ವಿಡಿಯೊ ಡಿಲೀಟ್

ಸಿಯುಕೆ ಅಂಗಳದಲ್ಲಿ ಆರ್‌ಎಸ್‌ಎಸ್ ಗೀತೆ!

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಅತಿಥಿಗೃಹದಲ್ಲಿ ಕುಲಪತಿ, ಕುಲಸಚಿವರು, ಹಿರಿಯ ಪ್ರಾಧ್ಯಾಪಕರ ಉಪಸ್ಥಿತಿಯಲ್ಲೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸಭೆ ನಡೆದಿದೆ. ಕೊನೆಯಲ್ಲಿ ಸಂಘದ ಗೀತೆ 'ನಮಸ್ತೆ ಸದಾ ವತ್ಸಲೆ...' ಮೊಳಗಿದ್ದು, ಎಲ್ಲರೂ ಎದ್ದು ನಿಂತು ಆರ್‌ಎಸ್‌ಎಸ್ ಕಾರ್ಯಕರ್ತರಂತೆ ಕೈ ಎದೆಗೆ ಅಡ್ಡ ಹಿಡಿದು ನಿಂತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸಭೆಯ ವಿಡಿಯೊ ಚಿತ್ರೀಕರಣ ಮಾಡುತ್ತಿರುವುದು ಗಮನಕ್ಕೆ ಬರುತ್ತಿದ್ದಂತೆಯೇ ಚಿತ್ರೀಕರಣ ಮಾಡಿದ ವಿದ್ಯಾರ್ಥಿಗೆ ಬೆದರಿಕೆ ಹಾಕಿ, ಮೊಬೈಲ್ ಕಸಿದುಕೊಂಡು ವಿಡಿಯೊ ಡಿಲೀಟ್ ಮಾಡಲಾಗಿದೆ ಎಂಬ ಆರೋಪಗಳು ಕೇಳಿ ಬಂದಿವೆ.

ಶೈಕ್ಷಣಿಕ ಚಟುವಟಿಕೆಗಳಿಗೆ ಮೀಸಲಾದ ವಿಶ್ವವಿದ್ಯಾಲಯದಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳು ಹಿಂದೆಯೂ ನಡೆದಿದ್ದ ಆರೋಪಗಳು ಕೇಳಿ ಬಂದಿದ್ದವು. ಇದನ್ನು ವಿರೋಧಿಸಿ ವಿದ್ಯಾರ್ಥಿ ಹಾಗೂ ಪ್ರಗತಿಪರ ಸಂಘಟನೆಗಳು ವಿಶ್ವವಿದ್ಯಾಲಯದ ಎದುರು ಪ್ರತಿಭಟನೆ ನಡೆಸಿದ್ದವು.

ಬೇರೆ ರಾಜ್ಯದಿಂದ ಬಂದಿದ್ದ ಐದಾರು ಜನ ಆರ್‌ಎಸ್‌ಎಸ್ ಪ್ರಮುಖರು ಗುರುವಾರ ವಿಶ್ವವಿದ್ಯಾಲಯದ ಅತಿಥಿಗೃಹದಲ್ಲಿ ಸಭೆ ನಡೆಸಿದ್ದಾರೆ. ಆರ್‌ಎಸ್‌ಎಸ್ ಜನ್ಮತಾಳಿ 2025ಕ್ಕೆ 100 ವರ್ಷಗಳು ತುಂಬಲಿದ್ದು, ಅದಕ್ಕೆ ಪೂರ್ವಭಾವಿಯಾಗಿ ಕಲಬುರಗಿ ಭಾಗದಲ್ಲಿ ಸಂಘದ ಚಟುವಟಿಕೆಗಳನ್ನು ವಿಸ್ತರಿಸುವ ಬಗ್ಗೆ ಚರ್ಚೆಗಳು ನಡೆದವು. ಯಾವ ಸರ್ಕಾರಕ್ಕೂ, ಸಚಿವರಿಗೂ ಹೆದರುವ ಅವಶ್ಯಕತೆ ಇಲ್ಲ. ಸಂಘವನ್ನು ಕೇಂದ್ರೀಯ ವಿ.ವಿ.ಯಿಂದಲೇ ಗಟ್ಟಿಗೊಳಿಸಬೇಕು. ಕಲಬುರಗಿ ವಿಮಾನ ನಿಲ್ದಾಣದ ಬಳಿ ಮುಂದಿನ ದಿನಗಳಲ್ಲಿ ಬೃಹತ್ ಸಮಾವೇಶ ನಡೆಸಬೇಕು ಎಂಬ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು ಎಂದು ಮೂಲಗಳು 'ಪ್ರಜಾವಾಣಿ'ಗೆ ಮಾಹಿತಿ ನೀಡಿವೆ.

ಕಲಬುರಗಿ ಜಿಲ್ಲೆ ಕಡಗಂಚಿಯ ಕರ್ನಾಟಕ ಕೇಂದ್ರೀಯ ವಿ.ವಿ.ಯಲ್ಲಿ ಆರ್‌ಎಸ್‌ಎಸ್ ಗೀತೆಗೆ ಧ್ವನಿಗೂಡಿಸಿದ ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು

ಸಭೆಯ ಕೊನೆಯಲ್ಲಿ ಆರ್‌ಎಸ್‌ಎಸ್ ಗೀತೆಯನ್ನು ಸಾಮೂಹಿಕವಾಗಿ ಹಾಡಲಾಯಿತು. ಅತಿಥಿಗೃಹದಲ್ಲಿ ಸಂಘದ ಭಗವಾ ಧ್ವಜವನ್ನು ಇರಿಸಲಾಗಿತ್ತು. ಈ ಬಗ್ಗೆ ವಿಡಿಯೊ ಮಡುತ್ತಿರುವುದನ್ನು ಗಮನಿಸಿದ ಆರ್‌ಎಸ್‌ಎಸ್‌ನ ಕೆಲ ಕಾರ್ಯಕರ್ತರು ವಿಡಿಯೊವನ್ನು ಡಿಲೀಟ್ ಮಾಡಿಸಿದರು ಎಂದು ಸಂಶೋಧನಾ ವಿದ್ಯಾರ್ಥಿ ಪಿ. ನಂದಕುಮಾರ್ ಆರೋಪಿಸಿದರು.

'ಆರ್‌ಎಸ್‌ಎಸ್ ಸಭೆ ನಡೆದಿದ್ದು ನಿಜ. ನಾನೂ ಸಭೆಯ ಕೊನೆಯಲ್ಲಿ ಹೋಗಿದ್ದೆ. ರಾಷ್ಟ್ರೀಯ ಚಿಂತನೆಯ ವಿಚಾರಗಳ ಬಗ್ಗೆ ಆರ್‌ಎಸ್‌ಎಸ್‌ನವರು ಕೆಲ ಮಾಹಿತಿಗಳನ್ನು ಹಂಚಿಕೊಂಡರು. ಇದರಲ್ಲಿ ತಪ್ಪೇನಿದೆ' ಎಂದು ವಿ.ವಿ.ಯ ಉನ್ನತ ಅಧಿಕಾರಿಯೊಬ್ಬರು ಪ್ರಶ್ನಿಸಿದರು.

ಸಭೆಯ ಕುರಿತು 'ಪ್ರಜಾವಾಣಿ'ಯು ವಿ.ವಿ. ಕುಲಸಚಿವ ಪ್ರೊ. ಆರ್.ಆರ್. ಬಿರಾದಾರ ಅವರನ್ನು ಸಂಪರ್ಕಿಸಿದಾಗ, ಪ್ರತಿಕ್ರಿಯಿಸಲು ನಿರಾಕರಿಸಿದರು.

ಪ್ರವಾಸೋದ್ಯಮ ಇಲಾಖೆ ಹಗರಣ: ಆರು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಪ್ರವಾಸೋದ್ಯಮ ಇಲಾಖೆಯ ₹2.47 ಕೋಟಿ ಹಣ ವಿವಿಧ ಖಾತೆಗೆ ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡ ಪ್ರಕರಣದಲ್ಲಿ ಮತ್ತೆ ಆರು ಮಂದಿಯನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

'ಬ್ಯಾಂಕ್ ಉದ್ಯೋಗಿ ಸೂರಜ್ ಸಗರ ಸ್ನೇಹಿತರ ಖಾತೆಗಳಿಗೆ ಪ್ರವಾಸೋದ್ಯಮ ಇಲಾಖೆಯ ಹಣ ವರ್ಗಾವಣೆ ಮಾಡಿದ್ದರು. ಇಲಾಖೆಯ ಹಣವನ್ನು ತಮ್ಮ ಖಾತೆಗಳಿಗೆ ಹಾಕಿಸಿಕೊಂಡು ಲಾಭ ಪಡೆದ ಆರೋಪದ ಮೇಲೆ ಮಹೇಶ ಜಾಲವಾದಿ, ಕಿರಣ ಝಿಂಗಾಡೆ, ಮಂಜುನಾಥ ಕೋಟಿ, ಪ್ರವೀಣ ವೇತಾಳ, ಅರುಣ ನಾಯ್ಕರ, ಶರಣಪ್ಪ ಬಸನಗೌಡರ ಎಂಬುವರನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರಡ್ಡಿ ತಿಳಿಸಿದ್ದಾರೆ.

'ಸೂರಜ್ ಸಗರ ಪೊಲೀಸ್ ಕಸ್ಟಡಿಯಲ್ಲಿದ್ದು, ವಿಚಾರಣೆ ಮುಂದುವರೆದಿದೆ' ಎಂದು ಅವರು ತಿಳಿಸಿದ್ದಾರೆ.

ಅಧಿಕೃತ ಡೀಲರ್ಸ್: ಬೆಂಗಳೂರು: ಶಾಂತಲಕ್ಷ್ಮಿ ಎಲೆಕ್ಟ್ರಿಕಲ್ಸ್ ✆9845505597 | ಶ್ರೀ ಮಾರುತಿ ಎಂಟರ್‌ಪ್ರೈಸಸ್ ✆9731358294 | ಗುರು ಅಸೋಸಿಯೇಟ್ಸ್ 9480826460 | ಜೆ.ವಿ.ಬಿ. ಫ್ಲೋಟೆಕ್ 9845446176 | ಎ.ಎನ್. ಎಂಟರ್‌ಪ್ರೈಸಸ್ ✆9901163007 | ಸಿಂಟ್ರಾನ್‌ಸೇಲ್ಸ್ ಕಾರ್ಪೋರೇಷನ್ ✆9844425588 | ತಿರುಮಲ ಎಂಟರ್‌ಪ್ರೈಸಸ್ ✆9886091121 | ಶ್ರೀ ಮಂಜುನಾಥ ಏಜೆನ್ಸಿಸ್ ✆7892648452 | ಇ.ಎಸ್.ಪಿ.ಆರ್. ಎಲೆಕ್ಟ್ರಿಕಲ್ ಸರ್ವೀಸ್ಸ್ ✆9845469172 | ವಿನಾಯಕ ಮಾರ್ಕೆಟಿಂಗ್ ✆9448379398 | ವಿಎಸ್‌ಪಿ ಪಂಪ್ಸ್ ✆9880165527 | ಎಎಸ್ ಆಗ್ರೋಟೆಕ್ ✆9740166606 | ಮಂಜುನಾಥ್ ಎಂಟರ್ ಪ್ರೈಸಸ್ ✆9880871679 | ರಾಮನಗರ : ಮಂಜುಶ್ರೀ ಎಲೆಕ್ಟ್ರಿಕಲ್ಸ್ ✆9242220554 | ರಾಜಾನಕುಂಟೆ : ಮಂಜುನಾಥ ಟ್ರೇಡರ್ಸ್ ✆9343736456 | ದೇವನಹಳ್ಳಿ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 | ವಿಜಯಪುರ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 | ಹೊಸಕೋಟೆ : ಪ್ರಭು ಎಲೆಕ್ಟ್ರಿಕಲ್ಸ್ ✆9448081876 | ಕನಕಪುರ : ಶ್ರೀ ಮಂಜುನಾಥೇಶ್ವರ ಎಂಟರ್‌ಪ್ರೈಸಸ್ ✆9972049822 | ಕೆಂಗೇರಿ: ಎಸ್.ಎಲ್.ವಿ. ಪಂಪ್ಸ್ ✆9448513248 | ಪೀಣ್ಯ: ವಿನಾಯಕ ಎಂಟರ್‌ಪ್ರೈಸಸ್ ✆9741414592 | ನೆಲಮಂಗಲ : ಗುರು ಅಸೋಸಿಯೇಟ್ಸ್ ✆9448373404 | ಕೋಲಾರ : ಉಮಾ ಎಲೆಕ್ಟ್ರಿಕಲ್ಸ್ ✆9902808605 | ಓಂಕಾರ ಏಜೆನ್ಸಿಸ್ ✆9880190749 | ಶ್ರೀನಿವಾಸಪುರ : ವಿಜಯಲಕ್ಷ್ಮಿ ಏಜೆನ್ಸಿಸ್ ✆9845141512 | ಬಂಗಾರಪೇಟೆ : ವರದರಾಜ ಏಜೆನ್ಸಿಸ್ ✆8971981066 | ಬಾಗೇಪಲ್ಲಿ : ಮಾರುತಿ ಎಂಟರ್‌ಪ್ರೈಸಸ್ ✆9844406508 | ಚಿಕ್ಕಬಳ್ಳಾಪುರ : ಮಂಜುನಾಥ ಎಲೆಕ್ಟ್ರಿಕಲ್ಸ್ ✆9448886619 | ಚಿಂತಾಮಣಿ : ರಾಜೇಶ್ವರಿ ಟ್ರೇಡರ್ಸ್ ✆9880156246 | ಶಿಡ್ಲಘಟ್ಟ : ರಾಜೇಶ್ವರಿ ಎಂಟರ್‌ಪ್ರೈಸಸ್ ✆9880856246 | ಗುಡಿಬಂಡೆ : ನಾಗರಾಜ ಎಂಟರ್‌ಪ್ರೈಸಸ್ ✆9880104195 | ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ಸ್ಟೋರ್ಸ್ ✆9448664483 | ಹೆಚ್.ಕ್ರಾಸ್ : ಉಮಾ ಇಂಜಿನಿಯರಿಂಗ್ ವರ್ಕ್ಸ್ ✆9448165195 | ಗೌರಿಬಿದನೂರು : ಶ್ರೀನಿವಾಸ ಎಲೆಕ್ಟ್ರಿಕ್ ಸ್ಟೋರ್ಸ್ ✆9448314982 | ಮಾಲೂರು : ಶ್ರೀದೇವಿ ಎಲೆಕ್ಟ್ರಿಕಲ್ಸ್ ✆9961320501 | ಚೇಳೂರು : ಮಾರುತಿ ಎಲೆಕ್ಟ್ರಿಕಲ್ಸ್ ✆9448950429 | ತುಮಕೂರು : ಗುರು ಏಜೆನ್ಸಿಸ್ ✆8095242587 | ಸಿರಾ : ಗುರು ಎಂಟರ್ ಪ್ರೈಸಸ್ ✆9448093767 | ಮಧುಗಿರಿ : ಪ್ರಸಾದ ಎಂಟರ್‌ಪ್ರೈಸಸ್ ✆9448250601 | ತಿಪಟೂರು : ಶ್ರೀನಿವಾಸ ಎಂಟರ್‌ಪ್ರೈಸಸ್ ✆9448106005 | ಚಿಕ್ಕನಾಯಕನಹಳ್ಳಿ : ಸಿದ್ಧಶ್ರೀ ಟ್ರೇಡರ್ ✆7624844129 | ಪೇರಸಂದ್ರಾ : ಶ್ರೀ ನಂಜುಡೇಶ್ವರ ಎಂಟರ್‌ಪ್ರೈಸಸ್ ✆9886534395 | ದೊಡ್ಡಬಳ್ಳಾಪುರ : ಕಾರ್ಪತಿ ಏಜೆನ್ಸಿಸ್ ✆9880165527 | ವಿ.ಎಸ್.ಪಿ ಪಂಪ್ಸ್ ✆9448379398 | ಮುಳಬಾಗಿಲು : ರೆಡ್ಡಿ ಎಲೆಕ್ಟ್ರಿಕಲ್ಸ್ ✆9986995862 |

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

Reebok SPORTS CARNIVAL
BUY 3 @ 66% OFF*
*T&C APPLY
Reebok Store, Opp. Conrad Hotel, Ulsoor 080-40940022

REAL ESTATE SELLING

Sites

Anjanapura

40X60 WEST Facing, BDA SITE SALE, Anjanapura 9th Block, Good Location, Brokers Excuse, Call: 9448121223.

Banashankari

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

BSK 6TH Stage, 9th Block, 1600 Sqft S/W Corner 60ft Road and 10th Block 30x50 West Contact: 9945964049, 9663184766

BANASHANKARI 6TH Stage,4th Block,BDA Site Sale 30x40,South Facing,Genuine Buyers Contact; 8904210201

BANASHANKARI 6TH Stage, 4th 'T' Block, 30x40 site for sale. Contact:- 9844006666.

Bommasandra

BOMMASANDRA HOSUR ROAD KAIDB INDUSTRIAL CONVERTED LAND 1 ACRE 25 GUNTAS WITH 60FT ROAD PRICE 6500/- PERSFT: 9945195134

Bannerghatta Road

HULIMAVU 20,000 SFT WITH 43FT ROAD SUITABLE FOR APPARTMENT SHOPING COMPLEX ETC PRICE 6500/- PERSFT: 9945195134

Kanakapura Road

KANAKAPURA ROAD 10000 Square feet Conversion 30x40, 40x60, 50x80, BDA, BMRDA Sites For Sale: 9916817739

Magadi Road

40*60 PLOT FOR SALE SF 40 FT ROAD RS 10500/- BEL LAYOUT II STAGE NEAR EAST WEST COLLEGE MAGADI ROAD CONTACT: 7892059756

Rajarajeshwari Nagar

SITE FOR SALE KANAKAPURA ROAD & RR NAGAR 5th STAGE 30x45 CALL: 8951748434/ 9986401915

BEML LAYOUT, 3rd Stage,40x60,South Facing, Semi Commercial, Full Cheque Payment Contact: 8904210201

Vishweshwariah Layout

VISVESWARAIAH LAYOUT 5th block near KLE College, BDA W/F 30*40 Site immediate Sale. HN: 9900339878/ 9844039878

AVAILABLE 30X40 BDA Site Vishweshwariah Layout 2nd Block 40ft Road Good Location Genuine Buyers: 9844603127

AVAILABLE BDA Site Vishweshwariah Layout 5th Block 40X60 North Facing 40feet Road Good Location Genuine Buyers: 9743381719

DIRECT OWNER 30x40 BDA N/F Sites Sale VISHVESWARAIAH LAYOUT, close to 100 feet-road,Prime Location.9742681666

DIRECT OWNER, 30X40, 40X60 site for sale. Vishweswaraiah Layout, Near RTO Office. Contact: 8971851966, 9880781399

House

Basavanagudi

SALE OLD House Duplex 30x32 SF A Khata Near Jain Temple Thyagaraja Nagar Basavanagudi 8050705145

Frazer Town

HOUSE FOR SALE- 5 Bedroom Independent Duplex house with 1650 sft site, Near Coles Park & St. German Academy, Frazer Town. Call: 8748077009/ 9141419653.

Flat

Vidyaranyapura

2BHK FLAT SALE 52 LAKHS Including Registration and Carpark. Near BEL Factory Doddabomsandra: 9035813667/ 9538599224

Agricultural Land Converted

Ramanagar

RESIDENTIAL CONVERTED and Approved Site For Sale near Ramanagar 10000Sq.Ft Developed Area 1650/- P.Sqft Clear Titles. Owner- 9900115519

REAL ESTATE BUYING

Industrial & Factory

Devanahalli

NEED INDUSTRIAL land or industrial convertible land of 2 to 3 acres in 10 km surrounding of Devenhalli airport or Dodballapur. Interested sellers may call on below number. 9886020888

Sites

Kanakapura Road

WANTED SITE 30x40, 40x60 Anjanapura BDA, Kanakapura Road, Banashankari 6`Stage, Gubblala BCCHS Layout. Agent Excuse. Contact: 9663454878

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI, 9900268073 9448068073.

BUILDERS ESSENTIAL

Roofing Materials

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

ISHAN INSTITUTE FOR SELF HEALING THROUGH ACUPRESSURE & NATUROPATHY
#3124, Nandi Enclave,1st Main,2nd cross, Bhuvaneshwari Nagar Banashankari 3rd stage, Bengaluru 560085
ADMISSION OPEN TO LEARN ACUPRESSURE
CONDUCTED BY:
ACUPRESSURE SHODH PRASHIKSHAN EVAM UPCHAR SANSTHAN, PRAYAGRAJ
COURSES OFFERED
- CERTIFICATION COURSE (SIX MONTHS)
- DIPLOMA (TWO SEMESTERS OF SIX MONTHS)
- ADVANCE DIPLOMA (FOUR SEMESTERS OF SIX MONTHS)
- MASTER ADVANCE DIPLOMA (SIX SEMESTERS OF SIX MONTHS)
- MASTER DIPLOMA HONOURS (TEN SEMESTERS OF SIX MONTHS)

45 hours of online classes in English or Hindi and additional supplementary classes and revision classes will be provided
EXCELLENT OPPOURTUNITY TO LEARN ACUPRESSURE
ELIGIBILITY: 10TH PASS FOR CERTIFICATION COURSE
12TH PASS FOR DIPLOMA COURSE
This fusion will turn an ordinary learner into a dynamic professional.
Classes will commence from 3rd week of August.
FEES: Rs 7000/- inclusive of tuition fees, study materials and examination fees
FOR ADMISSION AND FURTHER DETAILS
CONTACT: 94834 30564 / 90198 74611

Don't miss to explore one of the LARGEST & Most Stunning AQUARIUMS in BENGALURU
ರಾಷ್ಟ್ರೀಯ ಗ್ರಾಹಕರ ಮೇಳ
New Version
AQUA TUNNEL SHOW

Unforgettable Aquatic Experiences
Scan for Location
Daily: 4pm - 9pm
July & August 2024
Call: 8904727123
Opp. Royal County, Jambusavari Dinne Main Road, Behind GR Apartment, JP Nagar 8th Phase

RENTAL PROPERTIES

Accommodation Available

Commercial

SCHOOL BUILDING for Rent Location: Mahalakshmi layout, Vidyaranyapura Available for Coaching Classes Timing: After 4.30 Pm Contact: 9880522554

AVAILABLE FOR RENT Ground + 3 Floors, 11,200 Sqft with Industrial Lift, at Kengeri Mailasandra, Behind Water Purifier Plant on Mysore Road, 12 KM from City Market. Contact: 9845194722/ 9341225745

House

GROUND FLOOR, 2BHK.Independent House For Rent Near Metro Hosahalli , and Metro Vijayanagar 9945193725

BUSINESS

Business to Business

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

Business Offers

Finance

PVT BUSINESS owners loan Unsecured within 48hrs 20 Lakhs up to 5cr monthly GST turn over 40 Lakhs above. 9840261786

OTHERS

Auction Sale

UNDER INSTRUCTION from National Institute of Animal Nutrition & Physiology, Adugodi, Bangalore-560030, auction will be held on 22.07.2024 at 11:30 AM, for Harvesting Green Grass & old unserviceable items. Auction in NIANP Campus by Royal Auctioneers.

EDUCATIONAL

Admission

JOIN/ COMPLETE 10th 12th Diploma., B.Com. BBA. B.Ed. BCA. D.Pharma. AMIIE. B.Tech. MBA. LLB. 9341273990.

JOB OPPORTUNITIES

Engg/ Production Technical

WANTED LEADING Constn. Co. wants Experienced Civil Engineers 5 years and above for immediate appointment for projects in and around Bangalore. Contact:- 080- 42212228/ 9845047577. Email: jayemengineering@gmail.com

Teachers/ Professors

WANTED BE / Diploma / ITI in Electrical, Electronics Mechanical to take part time / Full time Diploma Day & Evening classes and M.A, B.A, B.Ed, for English and Social for High school classes. Contact personally with resume, original documents. Nadgir Institute Near Modi Hospital Rajajinagar Bangalore – 560010. Ph: 23387333, 8867065525, 9731721446

WANTED SCIENCE and Social Subject Teachers for CBSE Syllabus with relevant experience for Vidya Samrat International School, Mail CV to: vidyasamratschool@gmail.com Contact: 6366104518, 9945551423.

AUTOMOTIVE

Four Wheelers Selling

Benz

FOR SALE Benz E`220D LWB`(2018, 42000Kms), Well maintained Excellent condition Vehicle 39.50 Lakhs Contact: 9880591059

PERSONAL

Change of Name

I, SMT. SARASWATHI, C/o. Sethuraman, aged about 39 years, residing at No.18 Ground floor, 3rd Cross 3rd Main, Manjushree Layout, Bengaluru Karnataka-560036 have changed my son's name from Master. A. ABDUL RASHEED to Master. NIHITH vide affidavit dated 17.07.2024 sworn before Advocate & Notary Y.R. Chandrashekar, Bangalore

I, JAPAMANI, R/a #.6/2, Mariamma, 2nd cross, Annipura, Sudhamanagar, Bangalore- 560027 Have Changed My Name to S. MANI Vide Affidavit Dated 16/07/2024 before Notary Aravind Patil G.G Bangalore.

I, ATHEEK UR RAHAMAN H M, ATHEEKURREHMAN H M, ATHEEKUR REHMAN, ATHEEKUR REHMAN H M S/o.Mohammed Siddiq R/o#35/9 Akshaya Nilaya,`4th Cross Opp.Model Primary School,Hebbal Bengaluru- 560024 have`changed my Name to ATHEEK UR REHAMAN H M vide`affidavit dated:13.7.2024 sworn`before Notary Sivakumara`MN Bengaluru

I, ASIA PARVEEN KHANUM W/o.Atheek Ur Rehaman H M R/o#35/9, Govt.Model Primary School Road,Hebbal Bengaluru- 560024 have`changed my`Name to AYESHA PARVEEN KHANUM vide`affidavit dated:20.7.2024 sworn before Notary YR.Chandrasekar Bangalore

Lost

DOCUMENT LOST

I, **VENKATARAMANAPPA,** Residing at # 802, 3rd Cross, Kidwayi Layout, Anjanapura, Bengaluru, have lost **my original sale deed agreement Doucment / Identification: Katha No. 53/1, Sy No.99.** While travelling. If found please contact: **8553383796**

LOST AND FOUND

I, **Mr B. Harish,** would like to inform the general public that I have misplaced my original Sale Deed Document of Survey No.73, Site No. 63, bearing no 4328 / 2019-2020, registered at Sub- Registrar Office, Vijayanagar, Bengaluru

If anyone finds it, kindly contact me at **Mobile : 9632988822**

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

RERA No.PRM/KA/RERA/1251/310/PR/190506/002548
RAJESHWARI AASHIRVAD
your dreams! our go

BMRDA APPROVED
ಅನುಮೋದನೆ ಅದ ವಸತಿ
ನಿವೇಶನಗಳು
ಕೆಂಗೇರಿಯಿಂದ
ಕೆಲವೇ ನಿಮಿಷದ ಪ್ರಯಾಣ
ಮೈಸೂರು ರಸ್ತೆ
ದೊಡ್ಡ ಆಲದಮರದ ಬಳಿ
ನಮ್ಮ ಕುಟುಂಬ ರಾಜೇಶ್ವರಿ ಆಶೀರ್ವಾದ್ ಸಂಸ್ಥೆಯ ಹೊಸ ಲೇಔಟ್ ಗೆ ಭೇಟಿ ನೀಡಿ ಅತ್ಯುತ್ತಮ ನಿವೇಶನವನ್ನು ಖರೀದಿ ಮಾಡಿದ್ದೇವೆ...
RERA & BMRDA APPROVED Site
Site for Sale
ಸುಸಜ್ಜಿತವಾಗಿ, ಅಭಿವೃದ್ಧಿಯಾದ ಸೈಟಿನ ಮೇಲೆ ಇನ್ವೆಸ್ಟ್ ಮಾಡಿ
* conditions apply
Special Offer
Rs. 2 Lakh
Discount on Spot Booking
ಲೇಔಟ್ ವಿಶೇಷತೆಗಳು :
•ಸೈಟುಗಳು ನೋಂದಣಿಗೆ ಸಿದ್ಧವಾಗಿದೆ
•ನಿವೇಶನಗಳು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ
•ನಿವೇಶನ ಖರೀದಿಸಲು ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ
•ಲೇಔಟ್ ಅಭಿವೃದ್ಧಿಯಾಗಿ ಆಕರ್ಷಕವಾಗಿದೆ
•ಎಲ್ಲಾ ಕಾನೂನಾತ್ಮಕ ದಾಖಲೆಗಳನ್ನು ಹೊಂದಿದೆ
•ಅತ್ಯುತ್ತಮ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ
ಸೈಟು ವೀಕ್ಷಣೆ ಮಾಡಲು ಉಚಿತ ಪಿಕಪ್, ಡ್ರಾಪ್ ಮತ್ತು ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ:
63 99 88 99 11
Site Sizes 30x40, 30x50


manasum LUXURY SENIOR LIVING
www.manasum.com
SCAN FOR OUR WEBSITE
"The freedom from everyday chores allows me to fully immerse myself in my passion. Surrounded by a vibrant, intergenerational community, I find inspiration and connection."
Gowri Murali (Artist)
Experience manasum Luxury Senior Living Communities
WELCOME
JOIN OUR WALK-IN EVENT
+91 - 9513 815 815
20th & 21st July
Malleswaram
GM Rejoyz Hall 10 am - 6 pm
Our Communities

avighna
A home that promises the timelessness of the good life
South Bangalore

BANYAN AT GODREJ ROYALE WOODS
Intergenerational Living community
North Bangalore (Near Airport)

GOA IKIGAI
Goa's 1st Lifestyle Senior Community
North Goa (Near Panjim)
LAUNCHING SOON Mysore | South Banglore | Northwest Banglore

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕ ನೇಮಕಾತಿ 2021, ನೇಮಕಾತಿ ಆದೇಶ ನೀಡಲು ಆಗ್ರಹಿಸಿ ಶುಕ್ರವಾರ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಜಿಟಿ ಜಿಟಿ ಮಳೆಯ ನಡುವೆ ಕೊಡೆ ಹಿಡಿದು ಮುಷ್ಕರ ನಡೆಸಿದ ಸಹಾಯಕ ಪ್ರಾಧ್ಯಾಪಕರು — ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ನೇಮಕಾತಿ ಆದೇಶ ನೀಡಲು ಆಗ್ರಹ

ಸಹಾಯಕ ಪ್ರಾಧ್ಯಾಪಕರ ಹುದ್ದೆ: ಮಳೆಯಲ್ಲೇ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು, ನ್ಯಾಯಾಲಯದ ತೀರ್ಪಿಗೆ ಒಳಪಟ್ಟು ನೇಮಕಾತಿ ಆದೇಶ ನೀಡುವಂತೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು. ಮಳೆಯಲ್ಲಿ ಕೊಡೆ ಹಿಡಿದು ಪ್ರತಿಭಟನೆ ನಡೆಸಿ, ಆಕ್ರೋಶ ಹೊರಹಾಕಿದರು.

ಲೋಕಸಭೆ ಚುನಾವಣೆ ನೀತಿ ಸಂಹಿತೆ ಕಾರಣದಿಂದ ಸ್ಥಳ ನಿಯುಕ್ತಿ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಇಲಾಖೆ ಮುಂದೂಡಿತ್ತು. ಲೋಕಸಭಾ ಚುನಾವಣೆ ಮುಕ್ತಾಯವಾಗಿ ಒಂದೂವರೆ ತಿಂಗಳು ಕಳೆದರೂ ಸ್ಥಳ ನಿಯುಕ್ತಿ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಇಲಾಖೆ ಪ್ರಕಟಿಸಿಲ್ಲ. ನಾನಾ ಕಾರಣದಿಂದ ನೇಮಕಾತಿ ಆದೇಶ ನೀಡದೇ ದಿನಾಂಕ ಮುಂದೂಡಲಾಗುತ್ತಿದೆ. ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾದವರ ಭವಿಷ್ಯ ಡೋಲಾಯಮಾನ ಆಗಿದೆ ಎಂದು ಅಭ್ಯರ್ಥಿಗಳು ಅಳಲು ತೋಡಿಕೊಂಡರು.

'ಕಲ್ಯಾಣ ಕರ್ನಾಟಕ ಮೀಸಲಾತಿ ವಿಚಾರವು ಹೈಕೋರ್ಟ್‌ನಲ್ಲಿದ್ದು, ಪ್ರಕರಣ ಮುಕ್ತಾಯವಾದ ಮೇಲೆ ನೇಮಕಾತಿ ಮುಂದುವರೆಸುತ್ತೇವೆ' ಎಂದು ಉನ್ನತ ಶಿಕ್ಷಣ ಸಚಿವರು ಹಾಗೂ ಇಲಾಖೆ ಅಧಿಕಾರಿಗಳು ಹೇಳಿದ್ದರು. ಆದರೆ, ವಾಸ್ತವವಾಗಿ ಹೈಕೋರ್ಟ್ ಮಧ್ಯಂತರ ಆದೇಶದಲ್ಲಿ ಕೌನ್ಸೆಲಿಂಗ್ ನಡೆಸಲು ಅವಕಾಶ ನೀಡಿ ಆದೇಶ ನೀಡಿದೆ. ಆದರೂ, ಕೌನ್ಸೆಲಿಂಗ್ ನಡೆಸುತ್ತಿಲ್ಲ ಎಂದು ಅಳಲು ತೋಡಿಕೊಂಡರು.

'ಕಲ್ಯಾಣ ಕರ್ನಾಟಕ ಮೀಸಲಾತಿ ವಿಚಾರವಾಗಿ ಹೈಕೋರ್ಟ್‌ನಲ್ಲಿ ಹಲವು ಪ್ರಕರಣಗಳು ವಿಚಾರಣೆ ಹಂತದಲ್ಲಿದ್ದರೂ ಇತರೆ ಇಲಾಖೆಗಳಲ್ಲಿ ನ್ಯಾಯಾಲಯದ ತೀರ್ಪಿಗೆ ಒಳಪಟ್ಟು ಆದೇಶ ನೀಡಲಾಗಿದೆ. ಅದರಂತೆ ನಮಗೂ ಆದೇಶ ಪ್ರತಿ ನೀಡಿ' ಎಂದು ಅಭ್ಯರ್ಥಿಗಳು ಆಗ್ರಹಿಸಿದರು.

2021ರಲ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ 26 ವಿಷಯಗಳ 1,242 ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. 2023ರ ಮಾರ್ಚ್ 3ರಂದು 1,208 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ. ಈ ಆಯ್ಕೆ ಪಟ್ಟಿಯಲ್ಲಿ ಒಟ್ಟು 1,208 ಅಭ್ಯರ್ಥಿಗಳು ಆಯ್ಕೆ ಆಗಿದ್ದಾರೆ.

ಮುಖ್ಯಾಂಶಗಳು

- **ಕೌನ್ಸೆಲಿಂಗ್: ಮಧ್ಯಂತರ ಆದೇಶದಲ್ಲಿ ಅವಕಾಶ**
- **ಸ್ಥಳ ನಿಯುಕ್ತಿ: ಲೋಕಸಭಾ ಚುನಾವಣೆ ಮುಗಿದರೂ ವೇಳಾಪಟ್ಟಿ ಪ್ರಕಟಿಸಿಲ್ಲ– ದೂರು**

ಎಸ್‌ಐಟಿ ತನಿಖೆ ಮೇಲೆ ವಿಶ್ವಾಸವಿದೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆ ಮಾಡಿರುವ ಪ್ರಕರಣದಲ್ಲಿ ವಿಶೇಷ ತನಿಖಾ ದಳ (ಎಸ್‌ಐಟಿ) ನಡೆಸುತ್ತಿರುವ ತನಿಖೆಯ ಮೇಲೆ ರಾಜ್ಯ ಸರ್ಕಾರಕ್ಕೆ ಸಂಪೂರ್ಣ ವಿಶ್ವಾಸವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಪಿ. ಚಂದ್ರಶೇಖರನ್ ಮೇ 26ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಮೇ 31ರಂದು ನಾಲ್ವರು ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿತ್ತು. ತನಿಖಾ ತಂಡವು ಈವರೆಗೆ 12 ಜನರನ್ನು ಬಂಧಿಸಿ, ₹34 ಕೋಟಿ ಮೌಲ್ಯದ ನಗದು, ಇತರ ಸ್ವತ್ತುಗಳನ್ನು ವಶಕ್ಕೆ ಪಡೆದಿದೆ. ಎಸ್‌ಐಟಿ ತನಿಖೆ ಸರಿಯಾದ ಹಾದಿಯಲ್ಲಿದೆ' ಎಂದರು.

ಸರ್ಕಾರಿ ಅಧಿಕಾರಿಯಲ್ಲ: ಈ ಪ್ರಕರಣದಲ್ಲಿ ಶಿವಕುಮಾರ್ ಎಂಬ ಹೆಸರಿನಲ್ಲಿ ನಿಗಮದ ಕಿರಿಯ ಲೆಕ್ಕಾಧಿಕಾರಿ ಎಂದು ಬಿಂಬಿಸಿಕೊಂಡು ಬ್ಯಾಂಕ್ ಖಾತೆಯ ನಿರ್ವಹಣೆಯ ಅಧಿಕಾರ ಪಡೆದಿದ್ದವರು ಸರ್ಕಾರಿ ನೌಕರನೇ ಅಲ್ಲ. ಹೈದರಾಬಾದ್‌ನ ಸಾಯಿತೇಜ ಎಂಬಾತನನ್ನೇ ಶಿವಕುಮಾರ್ ಎಂದು ಬಿಂಬಿಸಿ, ನಕಲಿ ದಾಖಲೆ ಸೃಷ್ಟಿಸಿ ಅಕ್ರಮ ಎಸಗಿರುವುದು ಎಸ್‌ಐಟಿ ತನಿಖೆಯಲ್ಲಿ ಪತ್ತೆಯಾಗಿದೆ ಎಂದು ತಿಳಿಸಿದರು.

WONDERLA HOLIDAYS LIMITED

CIN: L55101KA2002PLC031224

Regd. Office: 28th KM, Mysore Road, Bengaluru-562109, Karnataka. Website: www.wonderla.com, Email Id: investors@wonderla.com, Ph: +91 80 37230372

NOTICE

Notice of 22nd Annual General Meeting, Remote E-Voting and Book Closure

Notice is hereby given that the 22nd Annual General Meeting (AGM) of the Company will be held at 11.00 a.m. on Wednesday, 21st August, 2024, through Video Conferencing ("VC") / Other Audio Visual Means ("OAVM") in compliance with all the applicable provisions of the Companies Act, 2013 and the Rules made thereunder and the Securities and Exchange Board of India ("SEBI") (Listing Obligations and Disclosure Requirements) Regulations, 2015, read with General Circular No. 09/2023 dated September 25, 2023, issued by the Ministry of Corporate Affairs (MCA) and Circular SEBI/HO/CFD/CFD-PoD-2/P/CIR/2023/167 dated October 7, 2023 issued by SEBI (hereinafter collectively referred to as "the Circulars"), to transact the business as detailed in the Notice of AGM. Members participating through the VC / OAVM facility shall be reckoned for the purpose of quorum under Section 103 of the Companies Act, 2013.

Board of Directors at their Meeting held on Thursday, May 16, 2024, recommended Final Dividend of Rs. 2.50/- per equity share having nominal value of Rs. 10/- each for the financial year ended March 31, 2024.

The Final Dividend shall be credited to the eligible member(s) directly to their respective bank accounts through the available electronic modes.

Pursuant to the provisions of Section 108 of the Companies Act, 2013 read with Rule 20 of the Companies (Management and Administration) Amendment Rules, 2015 and Regulation 44 of SEBI (Listing Obligations and Disclosure Requirements) Regulations 2015, the Company is pleased to provide members facility to exercise their right to vote for the 22nd AGM by electronic means and the business may be transacted through e-Voting services provided by National Securities Depository Limited (NSDL). The members who have cast their vote(s) by remote e-voting may also attend the AGM but shall not be entitled to cast their vote(s) again at the AGM.

The e-voting period commences on Saturday, August 17, 2024 (9:00 am) and ends on Tuesday, August 20, 2024 (5:00 pm). During this period shareholders of the Company, holding shares either in physical form or in dematerialized form, as on the cut-off date (record date) 14th August, 2024, may cast their votes electronically. The e-voting module shall be disabled by NSDL for voting thereafter. Once the vote on a resolution is cast by the shareholder, the shareholder shall not be allowed to change it subsequently. In case of any queries, you may refer the Frequently Asked Questions (FAQs) for Shareholders and e-voting user manual for Shareholders available at www.evoting.nsdl.com.

In case a person has become Member of the Company after the dispatch of AGM Notice but on or before the cut-off date i.e. 14th August, 2024, the member may approach NSDL for issuance of User ID and Password. In case of queries or grievances regarding e-voting Members may write to evoting@nsdl.co.in or to Company at investors@wonderla.com. The Notice of 22nd AGM and the Annual Report for 2023-24 will also be available on Company's website http://www.wonderla.com/investor-relations.

The Register of Members and the Share Transfer books of the Company shall remain closed from Friday, August 16, 2024 to Wednesday, August 21, 2024 (both days inclusive) for the purpose of AGM.

The Dividend, if declared, will be paid to the Equity Shareholders on or after Thursday, August 22, 2024. The record date for the purpose of final dividend is 9th August, 2024.

Date: 19.07.2024
Place: Bengaluru

For Wonderla Holidays Limited
Sd/-
Srinivasulu Raju Y
Company Secretary

IN THE COURT OF THE XXV ADDL. CITY CIVIL & SESSIONS JUDGE BENGALURU

P & SC NO. 285/2024 [CCH No. 23]

BETWEEN: SMT. VIJAYA SRIVATSA, W/o Sri. Srivatsa. G, aged about 53 years, R/a: No. 113, Ganesh Mandir, Tyagarajanagar, 2nd Block, Bengaluru – 560 028 ... **Petitioner**

AND: -NIL- .... Respondent

PUBLIC NOTICE

Whereas the above named Petitioner has made a Petition to this Court U/s 276 of Indian Succession Act, 1925, praying for issue of Probate in respect of the property described hereunder bequeathed under the registered Will dated 22.11.2023 duly registered in the office of the Sub – Registrar, Chamarajapet, Bengaluru bearing document no. CMP – 3 – 00269 – 2023 – 24, Book – 3 registered on 23.11.2023 left by the said M. R. Venkatesh Murthy.

The said M. R. Venkatesh Murthy died on 17.04.2024.

The said case stands posted on **05-08-2024** and interested parties desirous of opposing the issue of the Probate asto the said Will may do so by appearing in this Court in person or by a Pleader duly instructed on **05-08-2024** at **11** o'clock inform to show cause against the petitioner failing wherein the appearance will be heard and declared as Ex-parte.

SCHEDULE

All that piece and parcel of the property bearing No. 71/96, PID No. 49-63-96 situated at Gandhi Bazaar Main Road, Basavanagudi, Ward No. 46, Bengaluru – 560 004 measuring East to West 30 feet and North to South 88 feet, inclusive of common passage with two independent buildings thereon, one is residential house comprising of about 12 squares building with RCC roofing and tiled flooring constructed on an area of 26 feet X 75 feet, and another is a commercial building with RCC roof and mosaic flooring with ground and first floor measuring 340 sq.ft., each and in the second floor 412 sq.ft., abutting to the Gandhi Bazaar Main Road and bounded on: **East by:** Property of Mrs. Nagarathna Sadshiv and B. S. Nagamani, **West by:** Property of Seetha Rama Shetty, **North by:** Property of Gayathri Panduranga, **South by:** Gandhi Bazaar Main Road

Given under my hand and seal of the Court this 19-07-2024.

By order of the Court, Senior Sheristedar, City Civil Court, Bengaluru

Advocate for Petitioner: **Shashikumar .S**
No 30, Rajappa layout, Santhe Beedhi, Jigani, Anekal Taluk, Bangalore-560105.

PUBLIC NOTICE

Our client intends to purchase all that piece and parcel of residential property bearing Municipal No. 5 (Old No. 507/5), situated at 9th Cross Road, Sadashiv Nagar, Ward No. 35-Armane Nagar, Bangalore (PID No. 99-8-5) (earlier BDA Site bearing No. 507, Palace Upper Orchards Extension, Bangalore) **("Schedule Property")** from S.P. Hombannason of Padmaraj, residing at 507/5, 9th Cross, Upper Palace Orchards, opposite to Yoga Shala, Sadashivanagar, Bangalore 560080 **("Owner")**.

Any person or persons asserting any right, title, interest or claim in the Schedule Property or any part thereof, in any manner whatsoever or having any claim against the Schedule Property or the documents thereof or against the Owner or objecting to such sale in favour of our client, should write to the undersigned within **7 (Seven) days** from the date of issuance of this notice with all documentary proof on which they are basing and asserting their rights with regard to Schedule Property or any part thereof, after which period our client shall proceed on the basis that there are no claims of whatsoever nature with regard to the Schedule Property.

SCHEDULE

All that piece and parcel of residential property bearing Municipal No. 5 (Old No. 507/5), situated at 9th Cross Road, Sadashiv Nagar, Ward No. 35-Armane Nagar, Bangalore (PID No. 99-8-5) (earlier BDA Site bearing No. 507, Palace Upper Orchards Extension, Bangalore) measuring from East to West about 50 feet (15.24 metres) and North to South about 30 feet (9.144 metres) and in all measuring about 1500 square feet (139.35 square metres) with building thereon measuring 4400 square feet and bounded as follows:- ON THE EAST: Private Property bearing Site No.497; WEST: Road; NORTH: Private Property bearing Site No.506 and SOUTH: Private Property bearing Site No.508 .

Sd/- (R.Sunitha), Advocate, Induslaw
#101, 1st Floor, Embassy Classic,
#11 Vittal Mallya Road, Bengaluru-560 001
Phone: +91 80 40726600

ROUNAQH

ನಿವಾಸಿ ವೈದ್ಯರು: ಶಿಷ್ಯವೇತನ ಹೆಚ್ಚಳಕ್ಕೆ ಆಗ್ರಹ

ಬೆಂಗಳೂರು: 'ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವಾಸಿ ವೈದ್ಯರ ಶಿಷ್ಯವೇತನ ಹೆಚ್ಚಳ ಮಾಡಬೇಕು' ಎಂದು ಕರ್ನಾಟಕ ಅಸೋಸಿಯೇಷನ್ ಆಫ್ ರೆಸಿಡೆಂಟ್ ಡಾಕ್ಟರ್ಸ್ (ಕೆಎಆರ್‌ಡಿ) ಸರ್ಕಾರಕ್ಕೆ ಆಗ್ರಹಿಸಿದೆ.

'ಶಿಷ್ಯವೇತನ ಹೆಚ್ಚಳ ಸಂಬಂಧ ಹಲವು ಬಾರಿ ಮನವಿ ಮಾಡಿದರೂ ಸರ್ಕಾರ ಮೌನವಹಿಸಿದೆ. ಇದರಿಂದ ನಿವಾಸಿ ವೈದ್ಯರು ಆರ್ಥಿಕ ಮತ್ತು ವೃತ್ತಿಪರ ಒತ್ತಡಕ್ಕೆ ಸಿಲುಕಿದ್ದಾರೆ. ಇದರ ಪರಿಣಾಮ ರೋಗಿಗಳ ಆರೈಕೆಯ ಮೇಲೆಯೂ ಬೀಳಲಿದೆ. ವಿರಾಮವಿಲ್ಲದೆ ಕೆಲಸ ಮಾಡುತ್ತಿರುವ ನಿವಾಸಿ ವೈದ್ಯರು ಅರ್ಹತೆಗಿಂತ ಕಡಿಮೆ ಶಿಷ್ಯವೇತನ ಪಡೆಯುತ್ತಿದ್ದಾರೆ' ಎಂದು ಕೆಎಆರ್‌ಡಿ ಅಧ್ಯಕ್ಷ ಡಾ. ಸಿರೀಶ್ ಶಿವರಾಮಯ್ಯ ತಿಳಿಸಿದ್ದಾರೆ.

'ಇತರ ರಾಜ್ಯಗಳಲ್ಲಿ ಪ್ರತಿ ಮೂರು ವರ್ಷಗಳಿಗೆ ಒಮ್ಮೆ ವೇತನ ಹೆಚ್ಚಳ ಮಾಡಲಾಗುತ್ತದೆ. ಕರ್ನಾಟಕದಲ್ಲಿ ಹೋರಾಟ ಮಾಡದೆ ವೇತನ ಹೆಚ್ಚಳ ಆಗಿರುವ ಉದಾಹರಣೆಯೇ ಇಲ್ಲ. ಏರುತ್ತಿರುವ ಹಣದುಬ್ಬರದಲ್ಲಿ ಜೀವನ ನಿರ್ವಹಣೆ ಕಷ್ಟವಾಗಿದೆ. ಶಿಷ್ಯವೇತನ ಹೆಚ್ಚಳಕ್ಕೆ ಸರ್ಕಾರ ಕೂಡಲೇ ಕ್ರಮಕೈಗೊಳ್ಳಬೇಕು. ಇಲ್ಲವಾದಲ್ಲಿ ರಾಜ್ಯದಾದ್ಯಂತ ಸರ್ಕಾರಿ ವೈದ್ಯಕೀಯ ಕಾಲೇಜುಗಳ ನಿವಾಸಿ ವೈದ್ಯರು ಪ್ರತಿಭಟನೆ ಕೈಗೊಳ್ಳಲಿದ್ದು, ತುರ್ತು ಅಲ್ಲದ ಎಲ್ಲ ಸೇವೆಗಳನ್ನು ಅನಿರ್ದಿಷ್ಟಕಾಲ ಸ್ಥಗಿತಗೊಳಿಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/03/2024–25 | ದಿನಾಂಕ: 18–07–2024

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮ

ಕ್ರ. ಸಂ.	ಭೂ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ
1.	ಶ್ರೀ ಚೆನ್ನಿಕಲಾ ನಾಗರಾಜು ಬಿನ್ ಚೆನ್ನಿಕಲಾ ಪೆದ್ದಾ ಮುನಿಕೊಂಡಯ್ಯ	140/4	00–09 1/2
2.	ಶ್ರೀಮತಿ ಗೋವಿಂದಮ್ಮ ಜಿ	140/5	00–09
3.	ಶ್ರೀಮತಿ ನೂತಲಪತಿ ಸರಸ್ವತಿ ಮತ್ತು ಶ್ರೀಮತಿ ಬೊಬ್ಬ ಸುಕನ್ಯ	140/8	00–08 1/4
4.	ಶ್ರೀ ಕೃಷ್ಣಪ್ಪ ಎನ್	140/9	00–05 1/4
5.	ಶ್ರೀ ರಾಮು ಎನ್. ಬಿನ್ ರಾಮಯ್ಯ	140/10	00–01
6.	ಶ್ರೀಮತಿ ಗಾಯತ್ರಿ ಕೋಂ. ಸುರೇಶ್‌ಗೊಲ್ಲ	140/11	00–05

ಷರಾ:– ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/977/ಅಡ್ವರ್ಟೋರ್/2024–25

ವಿಮಾನ ನಿಲ್ದಾಣದ ಅಧಿಕೃತ ಗೀತೆ ಬಿಡುಗಡೆ

ದೇವನಹಳ್ಳಿ: ವಿಮಾನ ಪ್ರಯಾಣವನ್ನು ಮಾಧುರ್ಯವಾಗಿಸಲು ಹಾಗೂ ಕಾಯುವಿಕೆ ಸಮಯವನ್ನು ಸುಮಧುರಗೊಳಿಸಲು ಕೆಂಪೇಗೌಡ ವಿಮಾನ ನಿಲ್ದಾಣ ತನ್ನ ಅಧಿಕೃತ ಹಾಡನ್ನು ಶುಕ್ರವಾರ ಬಿಡುಗಡೆಗೊಳಿಸಿದೆ. ಗ್ರ್ಯಾಮಿ ಪ್ರಶಸ್ತಿ ಪುರಸ್ಕೃತ ರಿಕಿ ಕೇಜ್ ಈ ಹಾಡಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಲೋನಿ ಪಾರ್ಕ್ ಮತ್ತು ಗಾಯಕ ಸಿದ್ಧಾರ್ಥ ಬೆಳ್ಮಣ್ ಅವರು ದನಿ ನೀಡಿದ್ದಾರೆ.

ಪ್ರೆಸ್ಟೋನಿಕ್ ಇಂಜಿನಿಯರಿಂಗ್ ಲಿಮಿಟೆಡ್

PRESSTONIC — You visualize... We realize

CIN: L28995KA2021PLC145718

ನೋಂದಾಯಿತ ಕಛೇರಿ ವಿಳಾಸ: ಸ. ನಂ. 2, ಖಾತಾ ನಂ. 145, ಹೊಯ್ಸಳ ಮುಖ್ಯ ರಸ್ತೆ, ಪಿಳ್ಳಪ್ಪ ಕೈಗಾರಿಕಾ ಬಡಾವಣೆ, ಶ್ರೀಗಂಧದಕವಲು, ಸುಂಕದಕಟ್ಟೆ, ವಿಶ್ವನೀಡಂ, ಬೆಂಗಳೂರು - 560091, ಕರ್ನಾಟಕ, ಭಾರತ ದೂರವಾಣಿ ಸಂಖ್ಯೆ : 080-23480001
ಇ-ಮೇಲ್: cs@presstonengg.co ವೆಬ್‌ಸೈಟ್: www.presstonic.com

3ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ಪ್ರೆಸ್ಟೋನಿಕ್ ಎಂಜಿನಿಯರಿಂಗ್ ಲಿಮಿಟೆಡ್ ("ಕಂಪನಿ") ಸದಸ್ಯರ ಮೂರನೇ ವಾರ್ಷಿಕ ಸಾಮಾನ್ಯ ಸಭೆ ("AGM")ಅನ್ನು **2024 ರ ಆಗಸ್ಟ್ 16 ರ ಶುಕ್ರವಾರ ಮಧ್ಯಾಹ್ನ 2.30 ಕ್ಕೆ** ವಿಡಿಯೋ ಕಾನ್ಫರೆನ್ಸಿಂಗ್ (ವಿಸಿ) ಅಥವಾ ಇತರ ಆಡಿಯೋ-ವಿಶುವಲ್ ಮೀನ್ಸ್ (ಒಎವಿಎಂ) ಮೂಲಕ ಈ ಕೆಳಗಿನ ವ್ಯವಹಾರವನ್ನು ನಡೆಸಲು ಈ ಮೂಲಕ ಸೂಚನೆ ನೀಡಲಾಗಿದೆ:

1. ಲೆಕ್ಕಪರಿಶೋಧಕರ ವರದಿ ಮತ್ತು ಮಂಡಳಿಯ ವರದಿಯೊಂದಿಗೆ 2023-24ರ ಹಣಕಾಸು ವರ್ಷಕ್ಕೆ ಕಂಪನಿಯ ಲೆಕ್ಕಪರಿಶೋಧಿತ ಹಣಕಾಸು ಹೇಳಿಕೆಗಳನ್ನು ಸ್ವೀಕರಿಸುವುದು, ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು.
2. ರೊಟೇಶನ್ ಮೂಲಕ ನಿವೃತ್ತರಾಗುವ ಮತ್ತು ಅರ್ಹರಾಗಿರುವ ನಿರ್ದೇಶಕ ಶ್ರೀ ಹೆರ್ಗ ಪೂರ್ಣಚಂದ್ರ ಕೆದಿಲಾಯ (ಡಿಐಎನ್ : 09120129) ಅವರ ಸ್ಥಾನಕ್ಕೆ ನಿರ್ದೇಶಕರನ್ನು ನೇಮಿಸಲು ಕೋರಲಾಗಿದೆ.
3. 3ನೇ ವಾರ್ಷಿಕ ಸಾಮಾನ್ಯ ಸಭೆಯ ಮುಕ್ತಾಯದಿಂದ ಸತತ ಐದು ವರ್ಷಗಳ ಅವಧಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.

ಟಿಪ್ಪಣಿಗಳು:

ಎ) ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ") ತನ್ನ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ರ ಏಪ್ರಿಲ್ 8, 2020, ಸಂಖ್ಯೆ 17/2020 ದಿನಾಂಕ ಏಪ್ರಿಲ್ 13, 2020, ಸಂಖ್ಯೆ 20/2020 ದಿನಾಂಕ ಮೇ 5, 2020, ಸಂಖ್ಯೆ 10/2020 ರ ಮೂಲಕ ವಾರ್ಷಿಕ ಸಭೆಯನ್ನು ನಡೆಸಲು ಅನುಮತಿ ನೀಡಿತ್ತು. ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿಯಿಲ್ಲದೆ. ಕಂಪನಿಗಳ ಕಾಯ್ದೆ, 2013 ("ಕಾಯ್ದೆ") ನಿಬಂಧನೆಗಳಿಗೆ ಅನುಸಾರವಾಗಿ ಮತ್ತು ಎಂಸಿಎ ಸುತ್ತೋಲೆಗಳಿಗೆ ಅನುಸಾರವಾಗಿ, ಕಂಪನಿಯ ಮೂರನೇ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಸಿ/ಒಎವಿಎಂ ಮೂಲಕ ನಡೆಸಲಾಗುತ್ತಿದೆ. ಕಂಪನಿಯ ಸದಸ್ಯರು V C / O A V M ಮೂಲಕ ಸಭೆಯಲ್ಲಿ ಭಾಗವಹಿಸಬಹುದು.

ಬಿ) ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಏಪ್ರಿಲ್ 08, 2020 ರ ಸುತ್ತೋಲೆ ಸಂಖ್ಯೆ 14/2020 ಕ್ಕೆ ಅನುಸಾರವಾಗಿ ಸದಸ್ಯರಿಗೆ ಹಾಜರಾಗಲು ಮತ್ತು ಮತ ಚಲಾಯಿಸಲು ಪ್ರಾಕ್ಸಿಯನ್ನು ನೇಮಿಸುವ ಸೌಲಭ್ಯವು ಮೂರನೇ ವಾರ್ಷಿಕ ಸಾಮಾನ್ಯ ಸಭೆಗೆ (ಎಜಿಎಂ) ಲಭ್ಯವಿಲ್ಲ. ಆದ್ದರಿಂದ, ಪ್ರಾಕ್ಸಿ ಫಾರ್ಮ್ ಅನ್ನು ಈ ನೋಟಿಸ್ ಗೆ ಲಗತ್ತಿಸಲಾಗಿಲ್ಲ.

ಸಿ) ಏಪ್ರಿಲ್ 13, 2020 ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ (ಎಂಸಿಎ) ಸುತ್ತೋಲೆ ಸಂಖ್ಯೆ 17/2020 ಗೆ ಅನುಗುಣವಾಗಿ, ಎಜಿಎಂ ಕರೆಯುವ ನೋಟಿಸ್ ಅನ್ನು ಕಂಪನಿಯ ವೆಬ್ ಸೈಟ್ ನಲ್ಲಿ https://www.presstonic.com ಅಪ್ಲೋಡ್ ಮಾಡಲಾಗಿದೆ. ನೋಟಿಸ್ ಅನ್ನು ಸ್ಟಾಕ್ ಎಕ್ಸ್ ಚೇಂಜ್ ವೆಬ್ ಸೈಟ್ www.nseindia.com ಗಳಾದ ನ್ಯಾಷನಲ್ ಸ್ಟಾಕ್ ಎಕ್ಸ್ ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (ಎನ್‌ಎಸ್‌ಇ-ಎಮರ್ಜ್) ವೆಬ್ ಸೈಟ್ ಗಳಿಂದ ಸಹ ಪಡೆಯಬಹುದು ಮತ್ತು ಎಜಿಎಂ ನೋಟಿಸ್ ಎನ್.ಎಸ್.ಡಿ.ಎಲ್ (ರಿಮೋಟ್ ಇ-ಮತದಾನ ಸೌಲಭ್ಯವನ್ನು ಒದಗಿಸುವ ಏಜೆನ್ಸಿ) ವೆಬ್ ಸೈಟ್ www.evoting.nsdl.com ನಲ್ಲಿ ಲಭ್ಯವಿದೆ.

ಡಿ) ವಿದ್ಯುನ್ಮಾನ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಈ ಸೌಲಭ್ಯವನ್ನು ಪಡೆಯಲು ಆಯಾ ಡಿಪಾಸಿಟರಿ ಠೇವಣಿದಾರರನ್ನು ಸಂಪರ್ಕಿಸಬಹುದು.

ಇ) ವಿಸಿ ಮೂಲಕ ಎಜಿಎಂಗೆ ಸೇರುವ ಸದಸ್ಯರು ರಿಮೋಟ್ ಇ-ಮತದಾನ ಸೌಲಭ್ಯವನ್ನು ಬಳಸಿಕೊಂಡು ಮತ ಚಲಾಯಿಸದಿದ್ದರೆ, ಎಜಿಎಂನಲ್ಲಿ ಇ-ಮತದಾನ ಸೌಲಭ್ಯವನ್ನು ಬಳಸಿಕೊಂಡು ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅನುಮತಿಸಲಾಗುವುದು. ರಿಮೋಟ್ ಇ-ಮತದಾನ ಸೌಲಭ್ಯವನ್ನು ಬಳಸಿಕೊಂಡು ಎಜಿಎಂಗೆ ಮುಂಚಿತವಾಗಿ ಮತ ಚಲಾಯಿಸಿದ ಸದಸ್ಯರು ಸಹ ವಿಸಿ ಮೂಲಕ ಎಜಿಎಂಗೆ ಸೇರಬಹುದು, ಆದರೆ ಎಜಿಎಂನಲ್ಲಿ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

ರಿಮೋಟ್ ಇ-ಮತದಾನ ಅವಧಿಯು 2024 ರ ಆಗಸ್ಟ್ 13 ರ ಮಂಗಳವಾರ ಬೆಳಿಗ್ಗೆ 9:00 ಗಂಟೆಗೆ ಪ್ರಾರಂಭವಾಗುತ್ತದೆ ಮತ್ತು 2024 ರ ಆಗಸ್ಟ್ 15 ರ ಗುರುವಾರ ಸಂಜೆ 5:00 ಗಂಟೆಗೆ ಕೊನೆಗೊಳ್ಳುತ್ತದೆ. ನಂತರ ಮತದಾನಕ್ಕಾಗಿ ರಿಮೋಟ್ ಇ-ಮತದಾನ ಮಾಡ್ಯೂಲ್ ಅನ್ನು ಎನ್.ಎಸ್.ಡಿ.ಎಲ್ ನಿಷ್ಕ್ರಿಯಗೊಳಿಸುತ್ತದೆ. **ಕಟ್ ಆಫ್ ದಿನಾಂಕದಂದು ಅಂದರೆ 2024 ರ ಆಗಸ್ಟ್ 9 ರ ಶುಕ್ರವಾರದಂದು ಸದಸ್ಯರು / ಲಾಭದಾಯಕ ಮಾಲೀಕರ ರಿಜಿಸ್ಟರ್‌ನಲ್ಲಿ ಹೆಸರುಗಳು ಕಾಣಿಸಿಕೊಂಡಿರುವ ಸದಸ್ಯರು ತಮ್ಮ ಮತವನ್ನು ವಿದ್ಯುನ್ಮಾನ ಮುಖಾಂತರ ಚಲಾಯಿಸಬಹುದು.** ಷೇರುದಾರರ ಮತದಾನದ ಹಕ್ಕು ಕಂಪನಿಯ ಪಾವತಿಸಿದ ಈಕ್ವಿಟಿ ಷೇರು ಬಂಡವಾಳದಲ್ಲಿ ಅವರ ಪಾಲಿನ ಅನುಪಾತದಲ್ಲಿರುತ್ತದೆ. **ಕಟ್ ಆಫ್ ದಿನಾಂಕ, ಶುಕ್ರವಾರ, ಆಗಸ್ಟ್ 9, 2024.** 2023-24ರ ಹಣಕಾಸು ವರ್ಷದ ವಾರ್ಷಿಕ ವರದಿ ಅಥವಾ ವಾರ್ಷಿಕ ಸಾಮಾನ್ಯ ಸಭೆಗೆ ಸಂಬಂಧಿಸಿದಂತೆ ಅಗತ್ಯವಿರುವ ಯಾವುದೇ ಪ್ರಶ್ನೆ / ಸ್ಪಷ್ಟೀಕರಣ ಅಥವಾ ಸಹಾಯಕ್ಕಾಗಿ ಸದಸ್ಯರು cs@presstonengg.co ಗೆ ಪತ್ರ ಬರೆಯಬಹುದು.

ಪ್ರೆಸ್ಟೋನಿಕ್ ಎಂಜಿನಿಯರಿಂಗ್ ಲಿಮಿಟೆಡ್ ನ ಪರವಾಗಿ
ದಿನಾಂಕ : 20ನೇ ಜುಲೈ, 2024
ಸ್ಥಳ : ಬೆಂಗಳೂರು
ಸಹಿ/-
ಹೆರ್ಗ ಪೂರ್ಣಚಂದ್ರ ಕೆದಿಲಾಯ - ವ್ಯವಸ್ಥಾಪಕ ನಿರ್ದೇಶಕರು

ಇಂಡೋ–ಟಿಬೆಟಿಯನ್ ಬಾರ್ಡರ್ ಪೊಲೀಸ್ ಫೋರ್ಸ್

(ಗೃಹ ವ್ಯವಹಾರಗಳ ಸಚಿವಾಲಯ)

ಭಾರತ ಸರ್ಕಾರ

ಕಾನ್ಸ್ಟೇಬಲ್ / ಟ್ರೇಡ್ಸ್‌ಮನ್ (ಕ್ಷೌರಿಕ, ಸಫಾಯಿ ಕರ್ಮಚಾರಿ ಮತ್ತು ಮಾಲಿ) ಹುದ್ದೆಗೆ ನೇಮಕಾತಿ – 2024

ಇಂಡೋ–ಟಿಬೆಟಿಯನ್ ಬಾರ್ಡರ್ ಪೊಲೀಸ್ ಫೋರ್ಸ್ ಕಾನ್ಸ್ಟೇಬಲ್/ ಟ್ರೇಡ್ಸ್‌ಮನ್ (ಕ್ಷೌರಿಕ, ಸಫಾಯಿ ಕರ್ಮಚಾರಿ ಮತ್ತು ಮಾಲಿ), ಜನರಲ್ ಸೆಂಟ್ರಲ್ ಸರ್ವಿಸ್, ಗ್ರೂಪ್ 'ಸಿ' ನಾನ್–ಗೆಜೆಟೆಡ್ (ಸಚಿವಾಲಯೇತರ) **ಹುದ್ದೆಗಳನ್ನು ತಾತ್ಕಾಲಿಕ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಪುರುಷ ಮತ್ತು ಮಹಿಳಾ ಭಾರತೀಯ ನಾಗರಿಕರಿಂದ (ನೇಪಾಳ ಮತ್ತು ಭೂತಾನ್ ಪ್ರಜೆಗಳು ಸೇರಿದಂತೆ)** ಆನ್ಲೈನ್ ಅರ್ಜಿಗಳನ್ನು ಆಹ್ವಾನಿಸಿದೆ. ಪೇ ಮ್ಯಾಟ್ರಿಕ್ಸ್‌ನಲ್ಲಿ ಲೆವೆಲ್–3 ರೂ.21,700– 69, I 00/- (7111 CPC ಪ್ರಕಾರ) ಖಾಯಂ ಆಗುವ ಸಾಧ್ಯತೆಯಿದೆ. ಆಯ್ಕೆಯಾದ ಅಭ್ಯರ್ಥಿಗಳು ಭಾರತ ಅಥವಾ ವಿದೇಶದಲ್ಲಿ ಎಲ್ಲಿಯಾದರೂ ಸೇವೆ ಸಲ್ಲಿಸಲು ಸಿದ್ಧರಿರಬೇಕು.. ನಂತರದಲ್ಲಿ ನಿರಾಶೆಯನ್ನು ತಪ್ಪಿಸಲು ಅರ್ಜಿದಾರರು ಅರ್ಜಿ ಸಲ್ಲಿಸುವ ಮೊದಲು ತಮ್ಮ ಅರ್ಹತೆಯನ್ನು ಪರಿಶೀಲಿಸಲು ಸೂಚಿಸಲಾಗಿದೆ.

2. ಹುದ್ದೆ ಆಧಾರಿತ ರೋಸ್ಟರ್ ಪ್ರಕಾರ ಖಾಲಿ ಹುದ್ದೆಗಳ ವಿವರಗಳು ಈ ಕೆಳಗಿನಂತಿವೆ:–

ಹುದ್ದೆಯ ಹೆಸರು	ಒಟ್ಟು ಖಾಲಿ ಹುದ್ದೆ	ವಿವರಗಳು	ಕೆಟಗರಿ					ಒಟ್ಟು
			ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯುಎಸ್	
ಕಾನ್ಸ್ಟೇಬಲ್ (ಕ್ಷೌರಿಕ)	5	ಪುರುಷ	0	0	4	0	0	**4**
		ಮಹಿಳೆ	0	0	1	0	0	**1**
ಕಾನ್ಸ್ಟೇಬಲ್ (ಸಫಾಯಿ ಕರ್ಮಚಾರಿ)	101	ಪುರುಷ	41	0	26	9	10	**86**
		ಮಹಿಳೆ	7	0	4	2	2	**15**
ಕಾನ್ಸ್ಟೇಬಲ್ (ಮಾಲಿ)	37	ಪುರುಷ	18	3	5	3	3	**32**
		ಮಹಿಳೆ	3	0	1	1	0	**5**

ಸೂಚನೆ:–

ಎ) ಖಾಲಿ ಹುದ್ದೆಗಳು ತಾತ್ಕಾಲಿಕವಾಗಿವೆ ಮತ್ತು ಯಾವುದೇ ಸೂಚನೆಯಿಲ್ಲದೆ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು. ಖಾಲಿ ಹುದ್ದೆಗಳ ಸಂಖ್ಯೆಯಲ್ಲಿ ಯಾವುದೇ ಬದಲಾವಣೆಯನ್ನು ಐಟಿಬಿಪಿಎಫ್ ನೇಮಕಾತಿ ವೆಬ್ಸೈಟ್ https://recruitment.itbpolice.nic.in ಮೂಲಕ ತಿಳಿಸಲಾಗುತ್ತದೆ.

ಬಿ) ಈ ಜಾಹೀರಾತನ್ನು ಪ್ರಕಟಿಸಿದ ನಂತರ ನೇಮಕಾತಿ ಪ್ರಕ್ರಿಯೆಯ ಅನುಕ್ರಮದಲ್ಲಿ ಬದಲಾವಣೆಗಳನ್ನು ಮಾಡುವ ಹಕ್ಕನ್ನು ಐಟಿಬಿಪಿಎಫ್ ಕಾಯ್ದಿರಿಸಿದೆ. ಆಡಳಿತಾತ್ಮಕ ಕಾರಣಗಳಿಂದಾಗಿ ಯಾವುದೇ ಹಂತದಲ್ಲಿ ನೇಮಕಾತಿಯನ್ನು ರದ್ದುಗೊಳಿಸುವ ಅಥವಾ ಮುಂದೂಡುವ ಹಕ್ಕನ್ನು ಸಹ ಐಟಿಬಿಪಿಎಫ್ ಕಾಯ್ದಿರಿಸಿದೆ.

ಸಿ) ಖಾಲಿ ಹುದ್ದೆಗಳಲ್ಲಿ 10% ಅನ್ನು ಆಯಾ ಹುದ್ದೆ / ವರ್ಗದಲ್ಲಿ ಮಾಜಿ ಸೈನಿಕರಿಗೆ ಕಾಯ್ದಿರಿಸಲಾಗಿದೆ

ಡಿ) ಅರ್ಜಿ ಶುಲ್ಕ: ರೂ. 100/– (ನೂರು (ರೂಪಾಯಿಗಳು ಮಾತ್ರ). ಮಹಿಳೆಯರು, ಮಾಜಿ ಸೈನಿಕರು ಮತ್ತು ಪರಿಶಿಷ್ಟ ಜಾತಿ (ಎಸ್ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್ಟಿ) ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.

3. **ಅರ್ಹತೆ ನಿಬಂಧನೆಗಳು:**

ಶೈಕ್ಷಣಿಕ ಅರ್ಹತೆ ಮತ್ತು ವಯೋಮಿತಿ

ಹುದ್ದೆಯ ಹೆಸರು	ವಯೋಮಿತಿ	ಕನಿಷ್ಠ ಶೈಕ್ಷಣಿಕ ಮತ್ತು ಇತರ ಅರ್ಹತೆ
ಕಾನ್ಸ್ಟೇಬಲ್ (ಕ್ಷೌರಿಕ ಮತ್ತು ಸಫಾಯಿ ಕರ್ಮಚಾರಿ)	18 ರಿಂದ 25 ವರ್ಷ	i) ಮಾನ್ಯತೆ ಪಡೆದ ಶಾಲೆ ಅಥವಾ ಸಂಸ್ಥೆಯಿಂದ ಮೆಟ್ರಿಕ್ಯುಲೇಷನ್; ii) ಅಭ್ಯರ್ಥಿಗಳು ವೃತ್ತಿಯಲ್ಲಿ ಪ್ರಾಯೋಗಿಕ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗುತ್ತದೆ.
ಕಾನ್ಸ್ಟೇಬಲ್ ಮಾಲಿ	18ರಿಂದ 23 ವರ್ಷ	i) ಮಾನ್ಯತೆ ಪಡೆದ ಮಂಡಳಿಯಿಂದ 10 ನೇ ತರಗತಿ ಉತ್ತೀರ್ಣರಾಗಿರಬೇಕು; ii) ಮಾನ್ಯತೆ ಪಡೆದ ಸಂಸ್ಥೆಯಿಂದ ಸಂಬಂಧಿತ ವೃತ್ತಿಯಲ್ಲಿ ಎರಡು ವರ್ಷಗಳ ಕೆಲಸದ ಅನುಭವ; ಅಥವಾ iii) ಕೈಗಾರಿಕಾ ತರಬೇತಿ ಸಂಸ್ಥೆ / ವೃತ್ತಿಪರ ಸಂಸ್ಥೆಯಿಂದ ಒಂದು ವರ್ಷದ ಪ್ರಮಾಣಪತ್ರ ಮತ್ತು ವೃತ್ತಿಯಲ್ಲಿ ಕನಿಷ್ಠ ಒಂದು ವರ್ಷದ ಅನುಭವ; ಅಥವಾ iv) ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್ ಸ್ಟಿಟ್ಯೂಟ್ ನಿಂದ ಎರಡು ವರ್ಷಗಳ ಡಿಪ್ಲೊಮಾ.

4. ಅಭ್ಯರ್ಥಿಗಳಿಂದ ಅರ್ಜಿಗಳನ್ನು https://recruitment.itbpolice.nic.in ನಲ್ಲಿಆನ್ಲೈನ್ ಮೂಲಕ ಮಾತ್ರ ಸ್ವೀಕರಿಸಲಾಗುತ್ತದೆ. ಅಂಚೆ ಮೂಲಕ ಯಾವುದೇ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ. ವಯೋಮಿತಿ ಸಡಿಲಿಕೆ, ಅರ್ಹತಾ ಷರತ್ತುಗಳು, ಅರ್ಜಿ ನಮೂನೆಯನ್ನು ಭರ್ತಿ ಮಾಡುವ ವಿಧಾನ, ನೇಮಕಾತಿ ಕಾರ್ಯವಿಧಾನ, ಪರೀಕ್ಷೆಗಳು ಮತ್ತು ವೇತನ ಮತ್ತು ಭತ್ಯೆಗಳು ಇತ್ಯಾದಿಗಳ ಬಗ್ಗೆ ವಿವರವಾದ ಮಾಹಿತಿಗಾಗಿ ಅರ್ಜಿದಾರರು ಐಟಿಬಿಪಿಎಫ್ ನೇಮಕಾತಿ ವೆಬ್ಸೈಟ್ನಲ್ಲಿ ಇರುವ ವಿವರವಾದ ಜಾಹೀರಾತನ್ನು ನೋಡಲು ಸೂಚಿಸಲಾಗಿದೆ https://recruitment.itbpolice.nic.in ಈ ನೇಮಕಾತಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಮಾಹಿತಿ / ಅಧಿಸೂಚನೆಯನ್ನು ಐಟಿಬಿಪಿಎಫ್ ನೇಮಕಾತಿ ವೆಬ್‌ಸೈಟ್‌ನಲ್ಲಿ ಮಾತ್ರ ಮಾಡಲಾಗುತ್ತದೆ. ಆದ್ದರಿಂದ, ಅರ್ಜಿದಾರರು ಕಾಲಕಾಲಕ್ಕೆ ಐಟಿಬಿಪಿಎಫ್ ನೇಮಕಾತಿ ವೆಬ್ಸೈಟ್‌ಗೆ ಲಾಗಿನ್ ಆಗಲು ಸೂಚಿಸಲಾಗಿದೆ ಮತ್ತು ನಂತರದ ಹಂತದಲ್ಲಿ ನಿರಾಶೆಯನ್ನು ತಪ್ಪಿಸಲು ಅರ್ಜಿ ಸಲ್ಲಿಸುವ ಮೊದಲು ಅರ್ಹತಾ ಮಾನದಂಡಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಲು ಸೂಚಿಸಲಾಗಿದೆ.
5. ಅರ್ಜಿಗಳು ಕ್ರಮಬದ್ಧವಾಗಿ ಕಂಡುಬರುವ ಅಭ್ಯರ್ಥಿಗಳಿಗೆ ನೇಮಕಾತಿ ಪರೀಕ್ಷೆಗಳಿಗೆ ಹಾಜರಾಗಲು ಪ್ರವೇಶ ಪತ್ರಗಳನ್ನು (ಆನ್ಲೈನ್) ನೀಡಲಾಗುವುದು. ಅಭ್ಯರ್ಥಿಗಳು ಐಟಿಬಿಪಿಎಫ್ ನೇಮಕಾತಿ ವೆಬ್ಸೈಟ್ನಿಂದ ಅಂದರೆ https://recruitment.itbpolice.nic.in ಪ್ರವೇಶ ಪತ್ರವನ್ನು ಡೌನ್ಲೋಡ್ ಮಾಡಿಕೊಳ್ಳಬೇಕು. ಆದ್ದರಿಂದ ಅಭ್ಯರ್ಥಿಗಳು ಆನ್ಲೈನ್ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಸಮಯದಲ್ಲಿ ನೈಜ ಮತ್ತು ಕಾರ್ಯನಿರತ ಇಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆಯನ್ನು ಒದಗಿಸಬೇಕು. ತಾಂತ್ರಿಕ ಮತ್ತು ಇತರ ಕಾರಣಗಳಿಂದಾಗಿ ಪ್ರವೇಶ ಪತ್ರವನ್ನು ಸ್ವೀಕರಿಸದಿದ್ದರೆ ಅದಕ್ಕೆ ಐಟಿಬಿಪಿಎಫ್ ಜವಾಬ್ದಾರನಾಗುವುದಿಲ್ಲ.
6. ಆಯ್ಕೆ ಪ್ರಕ್ರಿಯೆಯು ದೈಹಿಕ ದಕ್ಷತೆ ಪರೀಕ್ಷೆ (ಪಿಇಟಿ), ದೈಹಿಕ ಮಾನದಂಡ ಪರೀಕ್ಷೆ (ಪಿಎಸ್ಟಿ), ಲಿಖಿತ ಪರೀಕ್ಷೆ, ಟ್ರೇಡ್ ಟೆಸ್ಟ್, ಮೂಲ ದಾಖಲೆಗಳ ಪರಿಶೀಲನೆ, ವಿವರವಾದ ವೈದ್ಯಕೀಯ ಪರೀಕ್ಷೆ (ಡಿಎಂಇ) ಮತ್ತು ಪರಿಶೀಲನಾ ವೈದ್ಯಕೀಯ ಪರೀಕ್ಷೆ (ಆರ್‌ಎಂಇ) ಒಳಗೊಂಡಿರುತ್ತದೆ.
7. ಅಭ್ಯರ್ಥಿಗಳ ಫಿಟ್ನೆಸ್ ಅನ್ನು ನಿರ್ಣಯಿಸಲು ವೈದ್ಯಕೀಯ ಪರೀಕ್ಷೆಯನ್ನು ಸಿಎಪಿಎಫ್ ಮತ್ತು ಎಆರ್‌ಗಳಲ್ಲಿ ಜಿಒಗಳು ಮತ್ತು ಎನ್ಜಿಒಗಳಿಗೆ ನೇಮಕಾತಿಗಾಗಿ ಏಕರೂಪದ ಮಾರ್ಗಸೂಚಿಗಳಾದ MHA U.O. No. A.YI-1/20 14-Rectt (SSB) ದಿನಾಂಕ 20.05.2015 ಮತ್ತು ಎ. ವೈ.ಎಲ್/14–ನೇಮಕಾತಿ (ಎಸ್.ಎಸ್.ಬಿ.) ದಿನಾಂಕ 24.08.20 1 5 ಮತ್ತು ಸರ್ಕಾರವು ಕಾಲಕಾಲಕ್ಕೆ ತಿದ್ದುಪಡಿ ಮಾಡಿದ ಪ್ರಕಾರ ನಡೆಸಲಾಗುವುದು.

ಆನ್ಲೈನ್ ಅರ್ಜಿ ಮೋಡ್ ಅನ್ನು ಜುಲೈ 28, 2024 (28/07/2024) ರಂದು ಬೆಳಿಗ್ಗೆ 00:01 ಕ್ಕೆ ತೆರೆಯಲಾಗುವುದು ಮತ್ತು 26/08/2024 ರಂದು ರಾತ್ರಿ 11:59 ಕ್ಕೆ ಮುಚ್ಚಲಾಗುವುದು.

CBC 19143/11/0010/2425 — ಡಿಐಜಿ (ನೇಮಕಾತಿ)

ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ: ಎಸ್ಕಾಂಗಳಿಗೆ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ನೋಟಿಸ್

‘ವನ್ಯಜೀವಿಗಳಿಗೆ ಕಂಟಕವಾದ ವಿದ್ಯುತ್ ತಂತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವನ್ಯಜೀವಿಗಳ ಸಾವಿಗೆ ಅರಣ್ಯದಲ್ಲಿ ಅಳವಡಿಸಿರುವ ವಿದ್ಯುತ್ ತಂತಿಗಳು ಮುಖ್ಯ ಕಾರಣವಾಗಿವೆ. ಈ ತಂತಿಗಳ ನಿಗದಿತ ನಿರ್ವಹಣೆ ಆಗುತ್ತಿಲ್ಲ. ಅರಣ್ಯದಂಚಿನ ಕೃಷಿ ಭೂಮಿಗಳಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳಲಾಗುತ್ತಿದೆ. ನಿಗದಿತ ಎತ್ತರಕ್ಕಿಂತಲೂ ಕಡಿಮೆ ಎತ್ತರದಲ್ಲಿ ತಂತಿಗಳನ್ನು ಅಳವಡಿಸಲಾಗಿದೆ. ಇದು ವನ್ಯಜೀವಿಗಳ ಬದುಕಿಗೆ ಕಂಟಕ ತಂದೊಡ್ಡಿದೆ’ ಎಂದು ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ಅರುಹಿದೆ.

‘ರಾಜ್ಯದಲ್ಲಿ ಆನೆಗಳು ಅಸಹಜ ಸಾವಿಗೆ ಈಡಾಗುತ್ತಿವೆ’ ಎಂಬ ಸುದ್ದಿ ಮಾಧ್ಯಮಗಳ ವರದಿ ಆಧರಿಸಿ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ

ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಅವರು ಈ ಕುರಿತಂತೆ ನ್ಯಾಯಪೀಠಕ್ಕೆ ವಸ್ತುಸ್ಥಿತಿ ವರದಿ ಸಲ್ಲಿಸಿ, ‘ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಅರಣ್ಯ ಇಲಾಖೆಯಿಂದ ಸಾಕಷ್ಟು ಬಾರಿ ಪತ್ರ ಬರೆಯಲಾಗಿದೆ. ಆದರೆ, ಈವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಮತ್ತು ನಿರ್ವಹಣೆಯ ಕೆಲಸವನ್ನೂ ಆರಂಭಿಸಿಲ್ಲ’ ಎಂದು ಆಕ್ಷೇಪಿಸಿದರು.

ವರದಿಯಲ್ಲಿ ಏನಿದೆ?: ‘ಆನೆಗಳನ್ನು ಅರಣ್ಯದಿಂದ ಹೊರಬರದಂತೆ ನಿಯಂತ್ರಿಸಲು ಹಳೆಯ ರೈಲ್ವೆ ಕಂಬಿಗಳಿಂದ ಬ್ಯಾರಿಕೇಡ್ ನಿರ್ಮಿಸಲಾಗಿದೆ. ಕ್ಯಾಂಪ್‌ಗಳಲ್ಲಿ ಕಾಡಾನೆಗಳನ್ನು ತಂದು ತರಬೇತಿ ನೀಡಲಾಗುತ್ತಿದೆ. ಹಾವಳಿಗೆ ನಿಗಾ ವಹಿಸಲು ಕೇಂದ್ರೀಕೃತ ವ್ಯವಸ್ಥೆ ರೂಪಿಸಲಾಗಿದ್ದು, ಈ ಮೂಲಕ ಡ್ಯಾಷ್ ಬೋರ್ಡ್‌ನಲ್ಲಿ ಯಾರು ಬೇಕಾದರೂ ಆನ್‌ಲೈನ್‌ನಲ್ಲಿ ಸ್ಥಳೀಯರಿಗೆ ಎಚ್ಚರಿಕೆ ನೀಡಬಹುದಾಗಿದೆ’ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಸೋಲಾರ್ ಫೆನ್ಸಿಂಗ್: ‘ಆನೆಗಳೂ ಸೇರಿದಂತೆ ಇತರೆ ವನ್ಯಜೀವಿಗಳ ರಕ್ಷಣೆಗಾಗಿ ಅರಣ್ಯ ಭಾಗದ ಸುತ್ತಲೂ ಮೂರು ಮೀಟರ್‌ನಷ್ಟು ಆಳವಾದ 2,420 ಕಂದಕಗಳನ್ನು ನಿರ್ಮಿಸಲಾಗಿದೆ. ಒಟ್ಟು 3,426 ಕಿಲೋ ಮೀಟರ್ ಉದ್ದದ ಸೋಲಾರ್ ಫೆನ್ಸಿಂಗ್ ಹಾಕಲಾಗಿದೆ. ಪ್ರತಿ ಒಂದು ಕಿಲೋ ಮೀಟರ್‌ಗೆ ಸುಮಾರು ₹1.6 ಕೋಟಿ ವೆಚ್ಚವಾಗುತ್ತಿದೆ. ಆನೆಗಳು ನಾಡಿಗೆ ಬರದಂತೆ ಹಾಗೂ ಮಾನವ-ಆನೆ ಸಂಘರ್ಷ ತಡೆಯಲು ಕೊಡಗು, ಹಾಸನ, ಚಿಕ್ಕಮಗಳೂರು, ಮೈಸೂರು, ಚಾಮರಾಜನಗರ, ರಾಮನಗರ, ಬಂಡೀಪುರ ಮತ್ತು ಬನ್ನೇರುಘಟ್ಟ ಸೇರಿದಂತೆ 8 ಜಿಲ್ಲೆಗಳಲ್ಲಿ ಆನೆ ಕಾರ್ಯಪಡೆ ರಚನೆ ಮಾಡಲಾಗಿದೆ’ ಎಂದು ತಿಳಿಸಲಾಗಿದೆ.

ಕಳ್ಳಬೇಟೆಗೆ ತಡೆ: ‘ವನ್ಯಜೀವಿಗಳ ಕಳ್ಳಬೇಟೆ ತಡೆಗಾಗಿ ಶಿಬಿರಗಳನ್ನು ಪ್ರಾರಂಭಿಸಲಾಗಿದ್ದು ಇದಕ್ಕಾಗಿ 1,922 ಸಿಬ್ಬಂದಿ ನಿಗಾ ವಹಿಸಿದ್ದಾರೆ. ಆನೆಗಳ ವರ್ತನೆ ಮತ್ತು ಅವುಗಳ ಚಲನವಲನದ ಮೇಲೆ ನಿಗಾ ಇರಿಸಲು ರೇಡಿಯೊ ಕಾಲರ್ ಅಳವಡಿಸಲಾಗುತ್ತಿದ್ದು, ಆನೆ-ಮಾನವ ಸಂಘರ್ಷ ತಡೆಗಾಗಿ ಗಸ್ತು ತಿರುಗಲು 2,730 ಸಿಬ್ಬಂದಿ ನೇಮಕ ಮಾಡಲಾಗಿದೆ. ವನ್ಯಜೀವಿಗಳ ಆವಾಸ ಸ್ಥಾನ ಅಭಿವೃದ್ಧಿಗೊಳಿಸಲು ಹುಲ್ಲುಗಾವಲು, ಬಿದಿರು ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಕೇರಳ, ತಮಿಳುನಾಡು ಮತ್ತು ಕರ್ನಾಟಕದ ಅಧಿಕಾರಿಗಳೊಂದಿಗೆ ಅಂತರರಾಜ್ಯ ಸಮಿತಿ ರಚಿಸಲಾಗಿದೆ’ ಎಂದು ವಿವರಿಸಲಾಗಿದೆ.

ನೋಟಿಸ್: ಕೆಲಕಾಲ ವಾದ ಆಲಿಸಿದ ನ್ಯಾಯಪೀಠ, ರಾಜ್ಯದ ಎಲ್ಲಾ ಎಸ್ಕಾಂಗಳನ್ನು ಅರ್ಜಿಯಲ್ಲಿ ಪ್ರತಿವಾದಿಗಳನ್ನಾಗಿಸಲು ಆದೇಶಿಸಿತು. ಎಲ್ಲ ಎಸ್ಕಾಂಗಳಿಗೂ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆಯನ್ನು ಆಗಸ್ಟ್ 12ಕ್ಕೆ ಮುಂದೂಡಿತು.

ರಾಜ್ಯದಲ್ಲಿ ಆನೆಗಳ ಸಂತತಿ ಹೆಚ್ಚಳ

ವಿಚಾರಣೆ ವೇಳೆ ಪ್ರಕರಣದ ಅಮಿಕಸ್ ಕ್ಯೂರಿ ಹೈಕೋರ್ಟ್‌ನ ಹಿರಿಯ ವಕೀಲ ರಮೇಶ್ ಪುತ್ತಿಗೆ ಅವರು, ‘ದೇಶದಲ್ಲಿ 2023ರಲ್ಲಿ ನಡೆದ ಆನೆ ಗಣತಿ ಪ್ರಕಾರ 27 ಸಾವಿರ ಆನೆಗಳಿವೆ. ಇವುಗಳಲ್ಲಿ ಕರ್ನಾಟಕದಲ್ಲೇ 7 ಸಾವಿರದಷ್ಟಿವೆ. ರಾಜ್ಯದಲ್ಲಿ ಆನೆ ಸಂತತಿ ಹೆಚ್ಚಾಗಿದ್ದು, ಗಂಡಾನೆ ಮತ್ತು ಹೆಣ್ಣಾನೆಗಳು ಸಮಾನ ಸಂಖ್ಯೆಯಲ್ಲಿವೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

‘ವಯಸ್ಕ ಆನೆಗಳ ಸರಾಸರಿಯಲ್ಲಿ ಸಾಕಷ್ಟು ವ್ಯತ್ಯಾಸವಿದ್ದು, ಗಂಡಾನೆಗಳಿಗಿಂತಲೂ ಹೆಣ್ಣಾನೆಗಳ ಪ್ರಮಾಣ ಶೇ 50ರಷ್ಟು ಕಡಿಮೆ ಇದೆ. ಗಂಡಾನೆಗಳನ್ನು ಕೊಂದು; ದಂತ ಮತ್ತು ಮೂಳೆಗಳನ್ನು ಅಕ್ರಮ ವ್ಯಾಪಾರಕ್ಕೆ ಬಳಕೆ ಮಾಡಲಾಗುತ್ತಿದೆ’ ಎಂದರು.

‘ಅಶ್ವತ್ಥಾಮ ಆನೆ ಅನಾರೋಗ್ಯದಿಂದ ಮೃತಪಟ್ಟಿದೆ ಎಂದು ಹೇಳಲಾಗಿತ್ತು. ಆದರೆ, ಮರಣೋತ್ತರ ಪರೀಕ್ಷೆಯಲ್ಲಿ ಸೋಲಾರ್ ತಂತಿ ತಗುಲಿ ಸಾವಿಗೀಡಾಗಿದೆ ಎಂಬುದು ಗೊತ್ತಾಗಿದೆ. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಸೋಲಾರ್ ವಿದ್ಯುತ್ ತಡೆಗೋಡೆ ಹಾಕುವುದಕ್ಕೂ ನಿರ್ಬಂಧವಿದೆ’ ಎಂದು ವಿವರಿಸಿದರು.

ಸುದ್ದಿ 2 ನಿಮಿಷ

ಸಮರ್ಪಕವಾಗಿ ನಡೆಯದ ತನಿಖೆ: ಷೇರುದಾರರ ಆರೋಪ

ಬೆಂಗಳೂರು: ‘ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಹಗರಣದ ತನಿಖೆ ಸಮರ್ಪಕವಾಗಿ ನಡೆಯುತ್ತಿಲ್ಲ. ಹಣ ದುರ್ಬಳಕೆ ಮಾಡಿದವರ ಮೇಲೆ ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆ ಆರೋಪಿಸಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಪ್ರಧಾನ ಕಾರ್ಯದರ್ಶಿ ಹರೀಶ್ ವಿ., ‘ಬ್ಯಾಂಕಿನ ಠೇವಣಿದಾರ ಹಿತಾಸಕ್ತಿ ಕಾಪಾಡುವಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ಪಾತ್ರ ನಿರ್ವಹಿಸಿದ್ದರೆ, ಷೇರುದಾರರು ಹಾಗೂ ಠೇವಣಿದಾರರು ವಂಚನೆಗೆ ಒಳಗಾಗುತ್ತಿರಲಿಲ್ಲ. ಆದ್ದರಿಂದ ಆರ್‌ಬಿಐ ನಮ್ಮೆಲ್ಲರ ಮೊತ್ತವನ್ನು ಪಾವತಿಸಬೇಕು. ಹಗರಣದ ಎಲ್ಲ ಆರೋಪಿಗಳು ನ್ಯಾಯಾಲಯದಲ್ಲಿ ಜಾಮೀನು ಪಡೆದು, ಅಕ್ರಮವಾಗಿ ಗಳಿಸಿದ ಹಣದಿಂದ ಜೀವನ ಸಾಗಿಸುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಬ್ಯಾಂಕಿನ ಹಣಕಾಸಿನ ಸ್ಥಿತಿ ದಿನೇ ದಿನೇ ಕ್ಷೀಣಿಸುತ್ತಿದೆ. ಸಾಲಗಾರರ ಪಟ್ಟಿ ಸಿದ್ಧಪಡಿಸಲು ಆಡಳಿತಾಧಿಕಾರಿಗಳು ಸಂಪೂರ್ಣ ವಿಫಲರಾಗಿದ್ದಾರೆ. ಸಾಲ ವಸೂಲಾತಿಗೆ ಕ್ರಮ ಕೈಗೊಳ್ಳುತ್ತಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಾಲ್ಮೀಕಿ ನಿಗಮದ ಹಗರಣ ಖಂಡಿಸಿ ಪ್ರತಿಭಟನೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಭ್ರಷ್ಟಾಚಾರ ಖಂಡಿಸಿ ಅಖಿಲ ಕರ್ನಾಟಕ ನಾಯಕ ಮಹಾಸಭಾದಿಂದ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು.

ಮುಖ್ಯಮಂತ್ರಿ ಸೇರಿದಂತೆ ಸಚಿವರ ಮನೆಗೆ ಮುತ್ತಿಗೆ ಹಾಕಲು ಮುಂದಾದ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು ಬಿಡುಗಡೆ ಮಾಡಿದರು.

‘ಈ ಭ್ರಷ್ಟಾಚಾರವು ತಳ ಸಮುದಾಯದವರ ಆಶಾಕಿರಣವನ್ನೇ ಕಸಿದುಕೊಂಡಿದೆ. ಪ್ರಾಮಾಣಿಕ ಅಧಿಕಾರಿಯೊಬ್ಬರು ಆತ್ಮಹತ್ಯೆ ಮಾಡಿಕೊಳ್ಳದೇ ಇದ್ದರೆ, ಹಗರಣ ಗೊತ್ತಾಗುತ್ತಿರಲಿಲ್ಲ. ಹಣಕಾಸು ಇಲಾಖೆಯ ಗಮನಕ್ಕೆ ಬಾರದೇ ಅಕ್ರಮ ನಡೆಯಲು ಹೇಗೆ ಸಾಧ್ಯ? ಹಣಕಾಸು ಖಾತೆ ಮುಖ್ಯಮಂತ್ರಿ ಬಳಿಯಿದೆ. ಅವರೇ ನೈತಿಕಹೊಣೆ ಹೊರಬೇಕು’ ಎಂದು ಪ್ರತಿಭಟನಕಾರರು ಹೇಳಿದರು.

ವೇದಿಕೆಯ ರಾಜಣ್ಣ, ಲಕ್ಷ್ಮಿಸಾಗರ, ಪಿ.ಪ್ರಕಾಶ್, ಕೆ.ಸಿ.ನಾಗರಾಜು, ಆರ್.ತಿಮ್ಮರಾಜು, ಗಣೇಶ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಅನುದಾನ ಬಾಕಿ ಬಿಡುಗಡೆ ಕೋರಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆಯಡಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 2019ರಲ್ಲಿ ಮಂಜೂರಾದ ಅನುದಾನದಲ್ಲಿ ಬಾಕಿ ಇರುವ ₹78 ಕೋಟಿ ಮೊತ್ತವನ್ನು ಶೀಘ್ರ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಸ್ಥಳೀಯ ಶಾಸಕ ಎಸ್. ಮುನಿರಾಜು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಶಾಸಕ ಎಸ್. ಮುನಿರಾಜು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್. ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

‘ಅಭಿವೃದ್ಧಿ ಯೋಜನೆಗಳಿಗೆ ಅಗತ್ಯ ಅನುದಾನ ಬಿಡುಗಡೆ ಮಾಡುವುದು, ಸಂದರ್ಭಾನುಸಾರ ಯೋಜನೆ, ಅನುದಾನ ರದ್ದುಪಡಿಸುವುದು, ತಡೆ ಹಿಡಿಯುವುದು, ಮಾರ್ಪಾಡು ಮಾಡುವುದು ಚುನಾಯಿತ ಸರ್ಕಾರದ ವಿವೇಚನಾ ಅಧಿಕಾರವಾಗಿರುತ್ತದೆ. ಇದನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮೂಲಕ ಪ್ರಶ್ನಿಸುವುದು ಸೂಕ್ತವಲ್ಲ. ಅರ್ಜಿದಾರರು ಶಾಸಕರಾಗಿದ್ದು, ಶಾಸನಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಬಹುದು’ ಎಂದ ನ್ಯಾಯಪೀಠ ಅರ್ಜಿ ವಜಾಗೊಳಿಸಿತು.

‘ನಾಯಕರ ಮಾತಿನ ಮೇಲೆ ಹಿಡಿತವಿರಲಿ’

ಬಿಜೆಪಿ ಶಾಸಕ ಡಾ.ವೈ. ಭರತ್ ಶೆಟ್ಟಿ ಭಾಷಣಕ್ಕೆ ಹೈಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಭರತ್ ಶೆಟ್ಟಿ

ಬೆಂಗಳೂರು: ‘ಒಂದು ಸಮಾಜದಲ್ಲಿ ಜನರು ಬಳಸುವ ಭಾಷೆಯ ಘನತೆ ಕುಸಿದರೆ ಅದು ನಾಗರಿಕತೆಯ ಅವಸಾನದ ಸಂಕೇತ. ಜನನಾಯಕರು ತಮ್ಮ ಮಾತುಗಳ ಮೇಲೆ ಹಿಡಿತ ಹೊಂದಿರಬೇಕು’ ಎಂದು ಹೈಕೋರ್ಟ್, ಮಂಗಳೂರು ಉತ್ತರ ಕ್ಷೇತ್ರದ ಶಾಸಕ ಡಾ. ವೈ.ಭರತ್ ಶೆಟ್ಟಿ ಮಾತುಗಳಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

‘ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ನಿಂದನಾತ್ಮಕ ಭಾಷಣ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಕಾವೂರು ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸಬೇಕು’ ಎಂದು ಕೋರಿ ಭರತ್ ಶೆಟ್ಟಿ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ‘ಭರತ್ ಶೆಟ್ಟಿ ಯಾವುದೇ ಧರ್ಮಗಳ ಮಧ್ಯೆ ಸಂಘರ್ಷ ಉಂಟು ಮಾಡುವಂತಹ ಹೇಳಿಕೆ ನೀಡಿಲ್ಲ’ ಎಂದು ಸಮರ್ಥಿಸಿಕೊಳ್ಳಲು ಮುಂದಾದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಜನಪ್ರತಿನಿಧಿಗಳು ತಾವು ಆಡುವ ಮಾತಿನ ಮೇಲೆ ಹಿಡಿತ ಇಟ್ಟುಕೊಂಡಿರಬೇಕು. ನಾಲಗೆಯನ್ನು ಬೇಕಾಬಿಟ್ಟಿ ಹರಿಬಿಡಬಾರದು. ಇವರನ್ನೆಲ್ಲಾ ಗಮನಿಸುವ ಮಕ್ಕಳು ಭವಿಷ್ಯದಲ್ಲಿ ತಮ್ಮ ಮೇಷ್ಟ್ರು, ಪೋಷಕರ ವಿರುದ್ಧವೂ ಇಂತಹುದೇ ಭಾಷೆ ಬಳಸಲಾರಂಭಿಸುತ್ತಾರೆ. ಭಾಷೆಯನ್ನು ಯಾವತ್ತೂ ಸುಂದರವಾಗಿ ಬಳಸಬೇಕು’ ಎಂದು ಕಾಳಜಿ ವ್ಯಕ್ತಪಡಿಸಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಚಾರಣಾ ನ್ಯಾಯಾಲಯದಲ್ಲಿನ ಮುಂದಿನ ನ್ಯಾಯಿಕ ಪ್ರಕ್ರಿಯೆಗಳಿಗೆ ಮಧ್ಯಂತರ ತಡೆ ನೀಡಿದ ಪೀಠ ವಿಚಾರಣೆಯನ್ನು ನಾಲ್ಕು ವಾರ ಮುಂದೂಡಿತು.

ಭಾಷಣದಲ್ಲಿ ಹೇಳಿದ್ದೇನು?

‘ಇದೇ 8ರಂದು ಬೆಳಿಗ್ಗೆ ಕಾವೂರು ಜಂಕ್ಷನ್‌ನಲ್ಲಿ ಏರ್ಪಡಿಸಲಾಗಿದ್ದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಶಾಸಕ ಭರತ್ ಶೆಟ್ಟಿ ಬಾಷಣ ಮಾಡಿದ್ದರು. ರಾಹುಲ್ ಗಾಂಧಿ ಒಬ್ಬ ಹುಚ್ಚ. ಅವನನ್ನು ಸಂಸತ್‌ನಿಂದ ಹೊರಹಾಕಬೇಕು. ಆತನ ಮಾತಿನ ಶೈಲಿ ನೋಡಿದರೆ ಹಿಂದೂ ಆದ ನಾನು ಲೋಕಸಭೆಗೆ ಹೋಗಿ ಕೆನ್ನೆಗೆ ಎರಡು ಹೊಡೆಯಬೇಕು ಎನಿಸುತ್ತದೆ. ಹಿಂದುತ್ವದ ವಿಚಾರ ಮಾತನಾಡಿದರೆ ಶಸ್ತ್ರಾಸ್ತ್ರ ಉಪಯೋಗಿಸಿ ಯಾವುದೇ ಹೋರಾಟಕ್ಕೂ ಸಿದ್ಧರಿದ್ದೇವೆ...’ ಎಂದು ಸುದೀರ್ಘ ಭಾಷಣ ಮಾಡಿದ್ದಾಗಿ ಆರೋಪಿಸಲಾಗಿತ್ತು.

ಈ ಸಂಬಂಧ ಮಂಗಳೂರಿನ ಅನಿಲ್ ಕುಮಾರ್, ಕಾವೂರು ಠಾಣೆಗೆ ದೂರು ನೀಡಿದ್ದರು. ದೂರನ್ನು ಆಧರಿಸಿ, ಭರತ್ ಶೆಟ್ಟಿ ಮತ್ತು ಇತರರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ-2023ರ ಕಲಂ 351 (3) (ಕ್ರಿಮಿನಲ್ ಬೆದರಿಕೆ), 353 (ಪ್ರಚೋದನೆ) ಅಡಿ ಎಫ್‌ಐಆರ್ ದಾಖಲಿಸಲಾಗಿತ್ತು.

ಸೌಲಭ್ಯಕ್ಕಾಗಿ ಪ್ರತಿಭಟನೆ

32 ಕುಟುಂಬಗಳ ಸಮೀಕ್ಷಾ ವಿವರವನ್ನು ಸಫಾಯಿ ಕರ್ಮಚಾರಿ ಪೋರ್ಟಲ್‌ನಲ್ಲಿ ನಮೂದಿಸುವಂತೆ ಆಗ್ರಹಿಸಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಮದ್ರಾಸಿ ಕಾಲೊನಿ ನಿವಾಸಿಗಳು ದೇವಿ ಸುಂಕಲಮ್ಮ ಎಸ್‌ಸಿ ಹಾಗೂ ಎಸ್‌ಟಿ ಮಾದಿಗ ಸೇವಾ ಅಭಿವೃದ್ಧಿ ಸಂಘದ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು. ಸಮೀಕ್ಷಾ ವಿವರ ನಮೂದಿಸದ ಕಾರಣಕ್ಕೆ ಸೌಲಭ್ಯಗಳು ತಲುಪುತ್ತಿಲ್ಲ ಎಂದು ಅಳಲು ತೋಡಿಕೊಂಡರು – ಪ್ರಜಾವಾಣಿ ಚಿತ್ರ

ರಾತ್ರಿ ವೇಳೆ ಶೂ ಕಳವು: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಎದುರು ಬಿಚ್ಚಿಟ್ಟಿದ್ದ ಶೂ, ಗ್ಯಾಸ್ ಸಿಲಿಂಡರ್ ಹಾಗೂ ವಾಹನಗಳ ಬ್ಯಾಟರಿ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗಂಗಾಧರ ಅಲಿಯಾಸ್ ಗಂಗ ಹಾಗೂ ಯಲ್ಲಪ್ಪ ಬಂಧಿತರು.

ಬಂಧಿತರಿಂದ ₹10.75 ಲಕ್ಷ ಮೌಲ್ಯದ 715 ಜೊತೆ ಶೂ, ಎರಡು ಗ್ಯಾಸ್ ಸಿಲಿಂಡರ್, ಎಲೆಕ್ಟ್ರಿಕ್ ವಾಹನದ ಒಂದು ಬ್ಯಾಟರಿ ಹಾಗೂ ಕಳವು ಮಾಡಿದ್ದ ವಸ್ತುಗಳನ್ನು ಸಾಗಿಸಲು ಬಳಸಿದ್ದ ಆಟೊ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

‘ಬಿಇಎಲ್ ಲೇಔಟ್‌ನ ವ್ಯಕ್ತಿಯೊಬ್ಬರು ಮನೆ ಎದುರು ಬಿಚ್ಚಿಟ್ಟಿದ ನಾಲ್ಕು ಜತೆ ಶೂ ಹಾಗೂ ಎರಡು ಗ್ಯಾಸ್ ಸಿಲಿಂಡರ್ ಅನ್ನು ಆರೋಪಿಗಳು ಕಳ್ಳತನ ಮಾಡಿದ್ದರು. ಆರೋಪಿಗಳು ಶೂ ರ‍್ಯಾಕ್‌ನಲ್ಲಿಟ್ಟಿದ್ದ ಶೂ ಅನ್ನು ಚೀಲದೊಳಗೆ ತುಂಬಿ ಪರಾರಿಯಾಗಿದ್ದ ದೃಶ್ಯ ಮನೆಯ ಸಿ.ಸಿ ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಜುಲೈ 15ರಂದು ಮನೆ ಮಾಲೀಕರು ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಿ, ವಿಚಾರಣೆ ನಡೆಸಿದಾಗ ಆರೋಪಿಗಳು ರಾತ್ರಿ ವೇಳೆ ವಿವಿಧ ಬಡಾವಣೆಗಳಲ್ಲಿ ಸಂಚಾರ ನಡೆಸಿ ಬೆಲೆಬಾಳುವ ಶೂಗಳನ್ನು ಕಳ್ಳತನ ಮಾಡುತ್ತಿರುವುದಾಗಿ ಬಾಯ್ಬಿಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

ಪ್ರಯಾಣಿಕರ ಗಮನ ಬೇರೆಡೆ ಸೆಳೆದು ಆಭರಣ ಕಳವು ಮಾಡುತ್ತಿದ್ದ ಆರೋಪಿಗಳು

ಮಹಿಳೆಯರಿಬ್ಬರ ಬಂಧನ: 899 ಗ್ರಾಂ ಚಿನ್ನ ವಶ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪ್ರಯಾಣಿಕರ ಗಮನ ಬೇರೆಡೆ ಸೆಳೆದು ಚಿನ್ನಾಭರಣ ದೋಚುತ್ತಿದ್ದ ಇಬ್ಬರು ಮಹಿಳೆಯರನ್ನು ಬಂಧಿಸಿ, ₹ 80 ಲಕ್ಷ ಮೌಲ್ಯದ ಚಿನ್ನಾಭರಣವನ್ನು ವಶಕ್ಕೆ ಪಡೆಯಲಾಗಿದೆ.

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕುಪ್ಪಂ ತಾಲ್ಲೂಕಿನ ಲಾವಣ್ಯ ಮತ್ತು ಮೀನಾ ಎಂಬುವರನ್ನು ಬಂಧಿಸಿ, ಬ್ಯಾಂಕ್‌ನಲ್ಲಿ ಅಡವಿಟ್ಟಿದ್ದ 855 ಗ್ರಾಂ ಹಾಗೂ ಮನೆಯಲ್ಲಿ ಬಚ್ಚಿಟ್ಟಿದ್ದ 44 ಗ್ರಾಂ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕೆ.ಆರ್. ಪುರ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು ಕಳೆದ ವರ್ಷ ಅಕ್ಟೋಬರ್ 18ರಂದು ಬಸ್ ನಿಲ್ದಾಣದಲ್ಲಿ ಊರಿಗೆ ಹೋಗಲು ಬಸ್ ಹತ್ತುವ ವೇಳೆ ಅವರ ಬ್ಯಾಗ್‌ನಲ್ಲಿದ್ದ 156 ಗ್ರಾಂ ಚಿನ್ನದ ಆಭರಣಗಳನ್ನು ಕಳವು ಮಾಡಲಾಗಿತ್ತು. ತನಿಖೆ ನಡೆಸಿದ ಪೊಲೀಸರು, ಸಿ.ಸಿ ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿದರು.

ಖಚಿತ ಮಾಹಿತಿ ಮೇರೆಗೆ ಗಾಂಧಿನಗರದಲ್ಲಿರುವ ಸಾಯಿ ಯಾತ್ರಿ ನಿವಾಸ್ ಲಾಡ್ಜ್‌ನಲ್ಲಿ ಇಬ್ಬರು ಮಹಿಳೆಯರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಯಿತು.

ಆರೋಪಿಗಳು ಬಸ್ ನಿಲ್ದಾಣಗಳಲ್ಲಿ ಮಹಿಳೆಯರ ಗಮನವನ್ನು ಬೇರೆಡೆ ಸೆಳೆದು, ಬ್ಯಾಗ್‌ನಿಂದ ಆಭರಣ ಕಳವು ಮಾಡುತ್ತಿರುವುದನ್ನು ಒಪ್ಪಿಕೊಂಡಿದ್ದಾರೆ. ಕರೂರು ವೈಶ್ಯ ಬ್ಯಾಂಕ್ ತಿರಪತ್ತೂರಿನಲ್ಲಿ ಅಡವಿಟ್ಟಿದ್ದ ಹಾಗೂ ಆರೋಪಿ ಮನೆಯಿಂದ ಆಭರಣಗಳನ್ನು ವಶಕ್ಕೆ ಪಡೆಯಲಾಗಿದೆ. ಕೆ.ಆರ್. ಪುರ ಠಾಣೆ 4, ಮಹದೇವಪುರ ಪೊಲೀಸ್ ಠಾಣೆ 2, ಯಶವಂತಪುರ ಹಾಗೂ ರಾಮಮೂರ್ತಿ ನಗರ ಠಾಣೆ ವ್ಯಾಪ್ತಿಯಲ್ಲಿ ತಲಾ ಒಂದು ಪ್ರಕರಣಗಳು ಪತ್ತೆಯಾಗಿವೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಆರು ಮಂದಿ ಬಂಧನ: ಮನೆ ಬೀಗ ಒಡೆದು ಕಳವು ಮಾಡುತ್ತಿದ್ದ ಪಶ್ಚಿಮ ಬಂಗಾಳದ ಲಾಡಿಯಾ ಗ್ಯಾಂಗ್‌ನ ಆರು ಮಂದಿಯನ್ನು ಬಂಧಿಸಿರುವ ಪೀಣ್ಯ ಪೊಲೀಸರು, ₹27 ಲಕ್ಷ ಮೌಲ್ಯದ 452 ಗ್ರಾಂ ತೂಕದ ಚಿನ್ನಾಭರಣಗಳನ್ನು ಜಪ್ತಿ ಮಾಡಿದ್ದಾರೆ.

ಪಶ್ಚಿಮ ಬಂಗಾಳದ ಲಾಡಿಯಾ ಜಿಲ್ಲೆಯ ಸುವೇಂಶರ್ ಶೀಲ್, ಹರಿದಾಸ್ ಸೋಮನ್ ಸೇರಿ ಆರು ಮಂದಿ ಎರಡು ಆಭರಣ ಅಂಗಡಿಯಲ್ಲಿ ಅಡವಿಟ್ಟಿದ್ದ ಚಿನ್ನಾಭರಣಗಳನ್ನು ವಶಕ್ಕೆ ಪಡೆದಿದ್ದಾರೆ. ಕದ್ದ ವಸ್ತು ಅಡವಿಟ್ಟುಕೊಂಡಿದ್ದ ಅಂಗಡಿ ಮಾಲೀಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ತಿಳಿಸಿದ್ದಾರೆ.

ಪೀಣ್ಯದ ಗೃಹಲಕ್ಷ್ಮೀ ಬಡಾವಣೆಯ ಮನೆಗೆ ಬೀಗ ಹಾಕಿಕೊಂಡು ಅಮೆರಿಕದಲ್ಲಿರುವ ಮಗಳ ಮನೆಗೆ ಹೋಗಿದ್ದ ತಂದೆಯು ಅಣ್ಣನಿಗೆ ಕರೆ ಮಾಡಿ ಮನೆಯ ಸಿ.ಸಿ ಟಿ.ವಿ ಕ್ಯಾಮೆರಾ ಕಾರ್ಯನಿರ್ವಹಿಸುತ್ತಿಲ್ಲವೆಂದು ಹೇಳಿದ್ದಾರೆ. ಅವರು ಮನೆ ಬಳಿ ಹೋಗಿ ನೋಡಿದಾಗ ಮನೆಯ ಹಿಂಬಾಗಿಲ ಬೀಗ ಮುರಿದು, ಆಭರಣ ಕಳವು ಮಾಡಿರುವುದು ಗೊತ್ತಾಗಿದೆ.

ಕೃತ್ಯ ನಡೆದ ಸ್ಥಳ ಪರಿಶೀಲನೆ ನಡೆಸಿದ ಪೊಲೀಸರು, ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ, ಮೂವರು ಆರೋಪಿಗಳನ್ನು ಎಚ್.ಎಂ.ಟಿ ಲೇಔಟ್‌ನಲ್ಲಿ ಬಂಧಿಸಿ ವಿಚಾರಣೆಗೊಳಪಡಿಸಿದರು. ಬಳಿಕ ಆರೋಪಿಗಳೊಂದಿಗೆ ಪಶ್ಚಿಮ ಬಂಗಾಳಕ್ಕೆ ತೆರಳಿ ತಲೆಮರೆಸಿಕೊಂಡಿದ್ದ ಮತ್ತೊಬ್ಬ ಹಾಗೂ ಅಂಗಡಿ ಮಾಲೀಕರಿಬ್ಬರನ್ನು ಬಂಧಿಸಿದರು.

ಆರೋಪಿಗಳ ಬಂಧನದಿಂದ ಪೀಣ್ಯ ಪೊಲೀಸ್ ಠಾಣೆಯ-3, ರಾಮಮೂರ್ತಿನಗರ-2, ಬಾಗಲಗುಂಟೆ, ಸೋಲದೇವನಹಳ್ಳಿ, ಬಾಣಸವಾಡಿ, ಇಂದಿರಾನಗರ, ಕೊಡಿಗೇಹಳ್ಳಿ ಪೊಲೀಸ್ ಠಾಣೆಯ ತಲಾ ಒಂದು ಸೇರಿ 9 ಪ್ರಕರಣಗಳು ಪತ್ತೆಯಾಗಿವೆ ಎಂದು ಹೇಳಿದರು.

ರಾಜಸ್ಥಾನದ ಆರೋಪಿ ಸೆರೆ

ಬೆಂಗಳೂರು: ಅಶ್ವತ್ಥನಗರದ ಸ್ವಸ್ತಿಕ್ ಚಿನ್ನಾಭರಣ ಮಳಿಗೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ರಾಜಸ್ಥಾನದ ಆರೋಪಿ ಪ್ರಮೋದ್‌ಕುಮಾರ್‌ನನ್ನು ಸಂಜಯ್‌ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹20.75 ಲಕ್ಷ ಮೌಲ್ಯದ 300 ಗ್ರಾಂ ಚಿನ್ನಾಭರಣ ಹಾಗೂ 954 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ. ಚಿನ್ನಾಭರಣ ಮಳಿಗೆಯಲ್ಲಿ ಆರೋಪಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದ. ಮಾಲೀಕರು ಹೊರಗೆ ಹೋಗುವಾಗ ಮಳಿಗೆ ಜವಾಬ್ದಾರಿಯನ್ನು ಪ್ರಮೋದ್ ಕುಮಾರ್ ಅವರಿಗೆ ವಹಿಸಲಾಗಿತ್ತು. ಆಗ ಚಿನ್ನವನ್ನು ಕದ್ದು ಸಾಗಣೆ ಮಾಡಲಾಗಿದೆ. ಮಾರ್ಚ್‌ನಲ್ಲಿ ಪ್ರಮೋದ್ ಏಕಾಏಕಿ ಕೆಲಸ ಬಿಟ್ಟು ಹೋಗಿದ್ದ. ಅದಾದ ಮೇಲೆ ಮಾಲೀಕರು ಚಿನ್ನಾಭರಣ ಪರಿಶೀಲಿಸಿದಾಗ ಕಳವು ನಡೆದಿರುವುದು ಗೊತ್ತಾಗಿತ್ತು ಎಂದು ಪೊಲೀಸರು ಹೇಳಿದರು.

₹8.2 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ: ಮನೆ ಬಾಗಿಲಿಗೆ ಬೀಗ ಹಾಕಿ ಕೀಯನ್ನು ಕಿಟಕಿ ಪಕ್ಕ, ಪಾಟ್‌ಗಳಲ್ಲಿ ಇಟ್ಟು ಹೋಗುವ ಮನೆಗಳನ್ನೇ ಗುರಿಯಾಗಿಸಿ ಮನೆಯಲ್ಲಿ ಚಿನ್ನಾಭರಣ ಕಳವು ಮಾಡುತ್ತಿದ್ದ ಕಳ್ಳನನ್ನು ಚೆನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸರ್ಜಾಪುರದ ಚಿಕ್ಕಹೊಸ ಹಳ್ಳಿಯ ಲಕ್ಷ್ಮಣ್ (40) ಬಂಧಿತ ಆರೋಪಿಯಿಂದ ₹8.2 ಲಕ್ಷ ಮೌಲ್ಯದ 109 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಇತ್ತೀಚೆಗೆ ಚನ್ನಮ್ಮನ ಕೆರೆ ಅಚ್ಚುಕಟ್ಟುವಿನ ಇಟ್ಟಮಡುವಿನಲ್ಲಿ ಮನೆ ಮಾಲೀಕರೊಬ್ಬರು ಮನೆಗೆ ಬೀಗವನ್ನು ಹಾಕಿ, ಕೀಯನ್ನು ಕಿಟಕಿಯ ಪಕ್ಕದಲ್ಲಿ ಇಟ್ಟು ಹೋಗಿದ್ದರು. ಆ ಮನೆಗೆ ಬಂದಿದ್ದ ಆರೋಪಿ, ಕೀ ಹುಡುಕಾಡಿ ಬಾಗಿಲು ತೆರೆದು ಬೀರುವಿನಲ್ಲಿದ್ದ 35 ಗ್ರಾಂ ಚಿನ್ನಾಭರಣ ಕಳವು ಮಾಡಿ ಪರಾರಿಯಾಗಿದ್ದ. ಮನೆ ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ವಿಲಾಸಿ ಜೀವನಕ್ಕಾಗಿ ಕಳ್ಳತನ: ಕದ್ದ ಚಿನ್ನಾಭರಣ ಮಾರಿ, ಅದರಿಂದ ಬಂದ ದುಡ್ಡನ್ನು ಆರೋಪಿ ವಿಲಾಸಿ ಜೀವನಕ್ಕೆ ಖರ್ಚು ಮಾಡಿತ್ತಿದ್ದ. ಈ ಹಿಂದೆ ಕಗ್ಗಲಿಪುರದಲ್ಲಿರುವ ಜ್ಯೂವೆಲ್ಲರಿ ಶಾಪ್‌ನಲ್ಲಿ ಕಳವು ಮಾಡಿದ್ದ 109 ಗ್ರಾಂ ಚಿನ್ನಾಭರಣ ಮಾರಿರುವುದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ವಿವಿಧ ಸೇತುವೆಗಳ ಕಾಮಗಾರಿ ಹಮ್ಮಿಕೊಂಡಿರುವುದರಿಂದ ತಾತ್ಕಾಲಿಕವಾಗಿ ರದ್ದು

ಜುಲೈ 29ರಿಂದ ರೈಲು ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಯಾರ್ಡ್ ಸೇತುವೆ ಮತ್ತು ಬೆಂಗಳೂರು ಕಂಟೋನ್ಮೆಂಟ್-ಕೆಎಸ್‌ಆರ್ ಬೆಂಗಳೂರು ಮಧ್ಯದಲ್ಲಿರುವ ಸೇತುವೆಗಳ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜುಲೈ 29ರಿಂದ ರೈಲು ಸಂಚಾರ ವ್ಯತ್ಯಯವಾಗಲಿದೆ.

ಜುಲೈ 30, ಆಗಸ್ಟ್ 6 ಮತ್ತು 13ರಂದು ಕೆಎಸ್‌ಆರ್ ಬೆಂಗಳೂರು-ಎಂಜಿಆರ್ ಚೆನ್ನೈ ಸೆಂಟ್ರಲ್ ಡೈಲಿ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ಮತ್ತು ಜುಲೈ 31, ಆಗಸ್ಟ್ 7 ಮತ್ತು 14 ರಂದು ಎಂಜಿಆರ್ ಚೆನ್ನೈ ಸೆಂಟ್ರಲ್-ಕೆಎಸ್‌ಆರ್ ಬೆಂಗಳೂರು ಡೈಲಿ ಸೂಪರ್ ಫಾಸ್ಟ್ ಎಕ್ಸ್ ಪ್ರೆಸ್ ರೈಲು ಸಂಚಾರವನ್ನು ತಾತ್ಕಾಲಿಕವಾಗಿ ರದ್ದು ಮಾಡಲಾಗಿದೆ.

ಜುಲೈ 30, ಆಗಸ್ಟ್ 6 ಮತ್ತು 13ರಂದು ಎಂಜಿಆರ್ ಚೆನ್ನೈ ಸೆಂಟ್ರಲ್-ಕೆಎಸ್‌ಆರ್ ಬೆಂಗಳೂರು ಡೈಲಿ ಸೂಪರ್ ಫಾಸ್ಟ್ ಎಕ್ಸ್ ಪ್ರೆಸ್ ರೈಲು ವೈಟ್ ಫೀಲ್ಡ್-ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳ ನಡುವೆ, ನಾಂದೇಡ್-ಕೆಎಸ್‌ಆರ್ ಬೆಂಗಳೂರು ಡೈಲಿ ಎಕ್ಸ್‌ಪ್ರೆಸ್ ರೈಲು ಯಲಹಂಕ-ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳ ನಡುವೆ, ಎಸ್‌ಎಸ್‌ಎಸ್ ಹುಬ್ಬಳ್ಳಿ-ಕೆಎಸ್‌ಆರ್ ಬೆಂಗಳೂರು ಡೈಲಿ ಎಕ್ಸ್ ಪ್ರೆಸ್ ರೈಲು ಯಶವಂತಪುರ-ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳ ನಡುವೆ ಹಾಗೂ ಹೊಸಪೇಟೆ-ಕೆಎಸ್‌ಆರ್

ಬೆಂಗಳೂರು ಡೈಲಿ ಪ್ಯಾಸೆಂಜರ್ ಸ್ಪೆಷಲ್ ರೈಲು ಯಶವಂತಪುರ-ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳ್ಳಲಿವೆ.

ಜುಲೈ 31, ಆಗಸ್ಟ್ 7 ಮತ್ತು 14 ರಂದು ಕೆಎಸ್‌ಆರ್ ಬೆಂಗಳೂರು- ಎಸ್‌ಎಸ್‌ಎಸ್ ಹುಬ್ಬಳ್ಳಿ ಡೈಲಿ ಎಕ್ಸ್‌ಪ್ರೆಸ್ ರೈಲು ಕೆಎಸ್‌ಆರ್ ಬೆಂಗಳೂರು- ಯಶವಂತಪುರ ನಿಲ್ದಾಣಗಳ ನಡುವೆ, ಕೆಎಸ್‌ಆರ್ ಬೆಂಗಳೂರು-ಹೊಸಪೇಟೆ ಡೈಲಿ ಪ್ಯಾಸೆಂಜರ್ ಸ್ಪೆಷಲ್ ರೈಲು ಕೆಎಸ್‌ಆರ್ ಬೆಂಗಳೂರು- ಯಶವಂತಪುರ ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳ್ಳಲಿವೆ. ಈ ರೈಲುಗಳು ಯಶವಂತಪುರ ನಿಲ್ದಾಣದಿಂದ ನಿಗದಿತ ಸಮಯದಲ್ಲಿ ಪ್ರಾರಂಭವಾಗಲಿವೆ.

ಜುಲೈ 29, ಆಗಸ್ಟ್ 5 ಮತ್ತು 12ರಂದು ಲೋಕಮಾನ್ಯ ತಿಲಕ್ ಟರ್ಮಿನಸ್-ಕೊಯಮತ್ತೂರು ಡೈಲಿ ಎಕ್ಸ್‌ಪ್ರೆಸ್ ರೈಲು ಗೌರಿಬಿದನೂರು, ಬೈಯಪ್ಪನಹಳ್ಳಿ, ಎಸ್‌ಎಂವಿಟಿ ಬೆಂಗಳೂರು, ಬೈಯಪ್ಪನಹಳ್ಳಿ, ಹೊಸೂರು ಮಾರ್ಗದ ಮೂಲಕ ಸಂಚರಿಸಲಿದೆ. ಬೆಂಗಳೂರು ಪೂರ್ವ, ಬೆಂಗಳೂರು ಕಂಟೋನ್ಮೆಂಟ್, ಕೆಎಸ್‌ಆರ್ ಬೆಂಗಳೂರು ಮತ್ತು ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣಗಳಲ್ಲಿ ನಿಗದಿತ ನಿಲುಗಡೆ ಇರುವುದಿಲ್ಲ. ಬೆಂಗಳೂರಿನ ಎಸ್‌ಎಂವಿಟಿಯಲ್ಲಿ ಹೆಚ್ಚುವರಿ ನಿಲುಗಡೆ ಇರಲಿದೆ.

ಜುಲೈ 30, ಆಗಸ್ಟ್ 6 ಮತ್ತು 13 ರಂದು ಎಸ್‌ಎಂವಿಟಿ ಬೆಂಗಳೂರು-ಮೈಸೂರು ಡೈಲಿ ಪ್ಯಾಸೆಂಜರ್ ಸ್ಪೆಷಲ್ ರೈಲು ಎಸ್‌ಎಂವಿಟಿ ಬೆಂಗಳೂರು, ಬಾಣಸವಾಡಿ, ಹೆಬ್ಬಾಳ, ಯಶವಂತ ಪುರ, ಕೆಎಸ್‌ಆರ್ ಬೆಂಗಳೂರು ಮೂಲಕ ಸಂಚರಿಸಲಿದೆ. ಬೆಂಗಳೂರು ಕ್ಯಾಂಟ್ ನಲ್ಲಿ ನಿಗದಿತ ನಿಲುಗಡೆ ಇರುವುದಿಲ್ಲ. ಮೈಸೂರು-ಎಸ್‌ಎಂವಿಟಿ ಬೆಂಗಳೂರು ಡೈಲಿ ಪ್ಯಾಸೆಂಜರ್ ಸ್ಪೆಷಲ್ ರೈಲು ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ಹೆಬ್ಬಾಳ, ಬಾಣಸವಾಡಿ, ಎಸ್‌ಎಂವಿಟಿ ಬೆಂಗಳೂರು ಮೂಲಕ ಸಂಚರಿಸಲಿದೆ. ಬೆಂಗಳೂರು ಕಂಟೋನ್ಮೆಂಟ್ ನಲ್ಲಿ ನಿಗದಿತ ನಿಲುಗಡೆ ಇರುವುದಿಲ್ಲ.

ಕೆಎಸ್‌ಆರ್ ಬೆಂಗಳೂರು-ನಾಂದೇಡ್ ಡೈಲಿ ಎಕ್ಸ್ ಪ್ರೆಸ್ ರೈಲು ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ಯಲಹಂಕ ಮಾರ್ಗದ ಮೂಲಕ ಸಂಚರಿಸಲಿದೆ. ಬೆಂಗಳೂರು ಕಂಟೋನ್ಮೆಂಟ್‌ನಲ್ಲಿ ನಿಗದಿತ ನಿಲುಗಡೆ ಇರುವುದಿಲ್ಲ.

ಬಂಗಾರಪೇಟೆ-ಕೆಎಸ್‌ಆರ್ ಬೆಂಗಳೂರು ಮೆಮು ವಿಶೇಷ ರೈಲು ಕೃಷ್ಣರಾಜಪುರ, ಬೈಯಪ್ಪನಹಳ್ಳಿ, ಬಾಣಸವಾಡಿ, ಹೆಬ್ಬಾಳ, ಯಶವಂತಪುರ, ಕೆಎಸ್‌ಆರ್ ಬೆಂಗಳೂರು ಮೂಲಕ ಸಂಚರಿಸಲಿದೆ. ಬೆಂಗಳೂರು ಪೂರ್ವ ಮತ್ತು ಬೆಂಗಳೂರು ಕಂಟೋನ್ಮೆಂಟ್‌ನಲ್ಲಿ ನಿಗದಿತ ನಿಲುಗಡೆ ಇರುವುದಿಲ್ಲ.

ಮೈಸೂರು-ಡಾ.ಎಂಜಿಆರ್ ಚೆನ್ನೈ ಸೆಂಟ್ರಲ್ ಕಾವೇರಿ ಡೈಲಿ ಎಕ್ಸ್‌ಪ್ರೆಸ್ ರೈಲು ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ಹೆಬ್ಬಾಳ, ಬಾಣಸವಾಡಿ, ಬೈಯಪ್ಪನಹಳ್ಳಿ, ಕೃಷ್ಣರಾಜಪುರ ಮಾರ್ಗವಾಗಿ ಸಂಚರಿಸಲಿದೆ. ಬೆಂಗಳೂರು ಕಂಟೋನ್ಮೆಂಟ್‌ನಲ್ಲಿ ನಿಗದಿತ ನಿಲುಗಡೆ ಇರುವುದಿಲ್ಲ.

ಎಂಜಿಆರ್ ಚೆನ್ನೈ ಸೆಂಟ್ರಲ್-ಮೈಸೂರು ಕಾವೇರಿ ಡೈಲಿ ಎಕ್ಸ್ ಪ್ರೆಸ್ ರೈಲು ಕೃಷ್ಣರಾಜಪುರ, ಬೈಯಪ್ಪನಹಳ್ಳಿ, ಬಾಣಸವಾಡಿ, ಹೆಬ್ಬಾಳ, ಯಶವಂತಪುರ, ಕೆಎಸ್‌ಆರ್ ಬೆಂಗಳೂರು ಮೂಲಕ ಸಂಚರಿಸಲಿದೆ. ಬೆಂಗಳೂರು ಪೂರ್ವ ಮತ್ತು ಬೆಂಗಳೂರು ಕಂಟೋನ್ಮೆಂಟ್‌ನಲ್ಲಿ ನಿಗದಿತ ನಿಲುಗಡೆ ಇರುವುದಿಲ್ಲ.

ಜುಲೈ 30, ಆಗಸ್ಟ್ 6 ಮತ್ತು 13ರಂದು ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್-ಕೆಎಸ್‌ಆರ್ ಬೆಂಗಳೂರು ಉದ್ಯಾನ್ ಎಕ್ಸ್ ಪ್ರೆಸ್ ರೈಲು ಮಾರ್ಗ ಮಧ್ಯೆ 5 ನಿಮಿಷ, ಮೈಲಾಡುತುರೈ-ಮೈಸೂರು ಎಕ್ಸ್‌ಪ್ರೆಸ್ ರೈಲು ಮಾರ್ಗ ಮಧ್ಯೆ 45 ನಿಮಿಷ, ತಿರುಪತಿ-ಚಾಮರಾಜನಗರ ಎಕ್ಸ್‌ಪ್ರೆಸ್ ರೈಲು ಮಾರ್ಗಮಧ್ಯೆ 100 ನಿಮಿಷ ನಿಯಂತ್ರಿಸಲಾಗುತ್ತದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಬೆಂಗಳೂರು--ಮಂಗಳೂರು ನಡುವೆ ವಿಶೇಷ ರೈಲು ಸೇವೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಗುಡ್ಡ ಕುಸಿತದಿಂದಾಗಿ ಶಿರಾಡಿ ಘಾಟಿ ಮಾರ್ಗದಲ್ಲಿ ಸಂಜೆ 6 ರಿಂದ ಬೆಳಿಗ್ಗೆ 6ರ ವರೆಗೆ ಹಾಗೂ ಸಂಪಾಜೆ ಹೆದ್ದಾರಿಯಲ್ಲಿ ಇದೇ 22ರ ವರೆಗೆ ರಾತ್ರಿ 8ರಿಂದ ಬೆಳಿಗ್ಗೆ 6ರ ವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಹೀಗಾಗಿ ನೈರುತ್ಯ ರೈಲ್ವೆಯು ಬೆಂಗಳೂರು-ಮಂಗಳೂರು ಮಧ್ಯೆ ವಿಶೇಷ ರೈಲುಗಳನ್ನು ಓಡಿಸುತ್ತಿದೆ.

ವೇಳಾಪಟ್ಟಿ: ಬೆಂಗಳೂರು (ಎಸ್‌ಬಿಸಿ)–ಮಂಗಳೂರು ಸೆಂಟ್ರಲ್ (06547) ರೈಲು ಜುಲೈ 19ರಂದು ಬೆಂಗಳೂರಿನಿಂದ ರಾತ್ರಿ 11 ಗಂಟೆಗೆ ಹೊರಟು, ಶನಿವಾರ ಜುಲೈ 20ರಂದು ಬೆಳಿಗ್ಗೆ 11.40ಕ್ಕೆ ಮಂಗಳೂರು ಜಂಕ್ಷನ್ ತಲುಪಲಿದೆ.

ಮಂಗಳೂರು ಜಂಕ್ಷನ್-ಯಶವಂತಪುರ: ಜುಲೈ 20ರಂದು ಶನಿವಾರ ಮಧ್ಯಾಹ್ನ 1.40ಕ್ಕೆ ಮಂಗಳೂರು ಜಂಕ್ಷನ್‌ನಿಂದ ಹೊರಡುವ 06548 ಸಂಖ್ಯೆಯ ರೈಲು ಅದೇ ದಿನ ರಾತ್ರಿ 11.15ಕ್ಕೆ ಯಶವಂತಪುರ ಜಂಕ್ಷನ್ ತಲುಪಲಿದೆ.

ಯಶವಂತಪುರ –ಮಂಗಳೂರು ಜಂಕ್ಷನ್: ಜುಲೈ 21ಮತ್ತು 22ರಂದು 06549 ಸಂಖ್ಯೆಯ ರೈಲು ಯಶವಂತಪುರದಿಂದ ಮಧ್ಯರಾತ್ರಿ 12.30ಕ್ಕೆ (00.30)ಕ್ಕೆ ಹೊರಟು, ಬೆಳಿಗ್ಗೆ 11.24ಕ್ಕೆ ಮಂಗಳೂರು ಜಂಕ್ಷನ್ ತಲುಪುವುದು.

ಮಂಗಳೂರು ಜಂಕ್ಷನ್-ಯಶವಂತಪುರ: 06550 ಸಂಖ್ಯೆಯ ರೈಲು 22 ಮತ್ತು 22ರಂದು ಮಂಗಳೂರು ಜಂಕ್ಷನ್‌ನಿಂದ ಮಧ್ಯಾಹ್ನ 1.40ಕ್ಕೆ ಹೊರಟು, ರಾತ್ರಿ 11.15ಕ್ಕೆ ಯಶವಂತಪುರ ತಲುಪುವುದು.

ತಲಾ ಎರಡು ಸ್ಲಿಪರ್ ಕೋಚ್‌ಗಳು ಸೇರಿದಂತೆ ಈ ಎಲ್ಲ ರೈಲುಗಳಲ್ಲಿ ಒಟ್ಟು 18 ಕೋಚ್‌ಗಳು ಇರುತ್ತವೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಯುಟ್ಯೂಬ್ ವಾಹಿನಿ ಎಂ.ಡಿ ಆತ್ಮಹತ್ಯೆ

ಮಂಜುನಾಥ್

ನೆಲಮಂಗಲ: ಚಿಕ್ಕಬಾಣಾವರ ನಿವಾಸಿ, ಯುಟ್ಯೂಬ್ ವಾಹಿನಿ ಟಿವಿ–11 ರ ವ್ಯವಸ್ಥಾಪಕ ನಿರ್ದೇಶಕ ಮಂಜುನಾಥ್(38) ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತರಿಗೆ ಪತ್ನಿ ಲಕ್ಷ್ಮಿ, ತಾಯಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ತಾಲ್ಲೂಕಿನ ಸೋಲದೇವನಹಳ್ಳಿ ಬಳಿಯ ಧರ್ಮನಾಯಕನ ತಾಂಡ್ಯದಲ್ಲಿ ನಟಿ ಲೀಲಾವತಿ ಅವರು ನಿರ್ಮಿಸಿರುವ ಪಶುಆಸ್ಪತ್ರೆ ಹಿಂಭಾಗದ ನಿರ್ಜನ ಪ್ರದೇಶದಲ್ಲಿ ಗುರುವಾರ ಮರಕ್ಕೆ ನೇಣು ಹಾಕಿಕೊಂಡಿದ್ದರು. ಶುಕ್ರವಾರ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ‘ಸ್ಥಳದಲ್ಲಿ ಮರಣಪತ್ರ ದೊರೆತಿದ್ದು, ನನ್ನ ಸಾವಿಗೆ ನಾನೇ ಕಾರಣ, ಹಣಕಾಸಿನ ಸಮಸ್ಯೆ, ಇನ್ನಿತರೆ ಯಾವುದೇ ಸಮಸ್ಯೆಗಳಿಲ್ಲ. ನನ್ನನ್ನು ಕ್ಷಮಿಸಿಯೆಂದು ಬರೆಯಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣದ ಮೇಲಿನ ಚರ್ಚೆ

ಪರಿಷತ್‌ನಲ್ಲಿ ಶಮನವಾಗದ ಗದ್ದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಮೇಲಿನ ಚರ್ಚೆ ವಿಧಾನ ಪರಿಷತ್‌ನಲ್ಲಿ ಶುಕ್ರವಾರವೂ ಮುಂದುವರಿದು, ಆಡಳಿತ, ವಿರೋಧ ಪಕ್ಷಗಳ ನಡುವೆ ವಾದ-ಪ್ರತಿವಾದ ತಾರಕ್ಕೇರಿದ ಕಾರಣ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು.

ಬಿಜೆಪಿಯ ಎನ್.ರವಿಕುಮಾರ್ ಮಂಡಿಸಿದ ನಿಲುವಳಿ ಸೂಚನೆ ಮೇಲಿನ ಚರ್ಚೆಯಲ್ಲಿ ಕಾಂಗ್ರೆಸ್‌ನ ನಾಗರಾಜ್ ಯಾದವ್ ಮಾತನಾಡಿ, ಹಣಕಾಸು ಇಲಾಖೆ ಮುಖ್ಯಮಂತ್ರಿ ಬಳಿ ಇದೆ ಎಂದಾಕ್ಷಣ ವಿರೋಧ ಪಕ್ಷಗಳು ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುವುದು ಸರಿಯಲ್ಲ, ಹಗರಣದಲ್ಲಿ ರಾಷ್ಟ್ರೀಕೃತ ಬ್ಯಾಂಕ್ ಅಧಿಕಾರಿಗಳ ಪಾತ್ರವಿದೆ. ಹಾಗಂತ ನಾವು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರಾಜೀನಾಮೆ ಕೇಳುತ್ತಿದ್ದೇವೆಯೇ ಎಂದು ಪ್ರಶ್ನಿಸಿದರು.

ಈ ಮಾತಿಗೆ ಕೆರಳಿದ ಬಿಜೆಪಿ–ಜೆಡಿಎಸ್ ಸದಸ್ಯರು ನಾಗರಾಜ್ ಯಾದವ್ ಮಾತಿಗೆ ಅಡ್ಡಿಪಡಿಸಿದರು. ಆಗ ಬುದ್ಧಿಮಾತು ಹೇಳಿದ ಉಪ ಸಭಾಪತಿ ಪ್ರಾಣೇಶ್ ವಿರುದ್ಧ ತಿರುಗಿಬಿದ್ದ ಕಾಂಗ್ರೆಸ್ ಸದಸ್ಯರು, 'ಪೀಠದಲ್ಲಿದ್ದವರು ಪಕ್ಷಪಾತ ಮಾಡಬಾರದು, ವಿರೋಧ ಪಕ್ಷಗಳಿಗೆ ಹೆಚ್ಚು ಸಮಯ, ಆಡಳಿತ ಪಕ್ಷಕ್ಕೆ ಕಡಿಮೆ ಸಮಯ ಮಾತನಾಡಲು ನೀಡುತ್ತಿದ್ದೀರಿ. ಅಲ್ಲದೇ, ಹಿಂದೆ ಬಿಜೆಪಿ ಆಡಳಿತ ಪಕ್ಷದಲ್ಲಿ ಇದ್ದಾಗ ಮೂರು ಪಕ್ಷಗಳ ಸದಸ್ಯರಿಗೆ ಸಮಾನ ಅವಕಾಶ ನೀಡಲಾಗುತ್ತಿತ್ತು. ಈಗ ಹಾಗಿಲ್ಲ' ಎಂದು ಟೀಕಿಸಿದರು.

ಬಿಜೆಪಿಯ ಎನ್. ರವಿಕುಮಾರ್ ಮಾತನಾಡಿ, ಹಗರಣದ ₹20 ಕೋಟಿ ತೆಲಂಗಾಣ, ಬಳ್ಳಾರಿ ಚುನಾವಣೆಗೆ ಬಳಕೆಯಾಗಿದೆ ಎಂದರು. ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಸಚಿವರು, ಕಾಂಗ್ರೆಸ್ ಸದಸ್ಯರು ಆಧಾರವಿಲ್ಲದ ಆರೋಪಗಳನ್ನು ಕಡತದಿಂದ ತೆಗೆಸುವಂತೆ ಪಟ್ಟು ಹಿಡಿದರು. ಮಾತಿಗೆ ಮಾತು ಬೆಳೆದು ಗದ್ದಲದ ವಾತಾವರಣ ನಿರ್ಮಾಣವಾಯಿತು. ಕಲಾಪ ಮುಂದೂಡಲಾಯಿತು.

'ಕೈ' ಶಾಸಕರ ಕೂರಿಸಲು ಮುಖ್ಯ ಸಚೇತಕರ ಹರಸಾಹಸ

ಬೆಂಗಳೂರು: ವಿಧಾನಸಭೆಯಲ್ಲಿ ಧರಣಿ ನಿರತ ಬಿಜೆಪಿ ಸದಸ್ಯರ ವಿರುದ್ಧ ಮನಬಂದಂತೆ ಕಾಂಗ್ರೆಸ್ ಸದಸ್ಯರು ಮಾತನಾಡುವುದನ್ನು ತಡೆಯಲು ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ ಅವರು ಶುಕ್ರವಾರ ಹರಸಾಹಸಪಟ್ಟರು.

ಕಾಂಗ್ರೆಸ್‌ನ ಪ್ರದೀಪ್ ಈಶ್ವರ್, ಕೆ.ಎಂ.ಶಿವಲಿಂಗೇಗೌಡ, ನಯನಾ ಮೋಟಮ್ಮ ಅವರು ಅತಿವೃಷ್ಟಿಯ ಬಗ್ಗೆ ಮಾತನಾಡುವುದಕ್ಕೆ ಎದ್ದು ನಿಂತು ವಿಷಯಾಂತರ ಮಾಡಿ ಬಿಜೆಪಿಯ ಬಗ್ಗೆ ಟೀಕಾ ಪ್ರಹಾರ ನಡೆಸಲು ಆರಂಭಿಸಿದರು.

ಬಿಜೆಪಿ ಸದಸ್ಯರು 'ವಾಲ್ಮೀಕಿ ಹಗರಣದ ಬಗ್ಗೆಯೂ ಮಾತನಾಡಿ' ಎಂದು ಕಾಂಗ್ರೆಸ್ ಶಾಸಕರನ್ನು ಪುಸಲಾಯಿಸಲಾರಂಭಿಸಿದರು. ಚರ್ಚೆ ಹಳಿ ತಪ್ಪಲಾರಂಭಿಸಿತು. ಆಗ ಅವರನ್ನು ಕೂರಿಸಲು ಮುಖ್ಯಸಚೇತಕ ಅಶೋಕಪಟ್ಟಣ, ಪ್ರಿಯಾಂಕ್ ಖರ್ಗೆ ಮತ್ತು ಇತರರು ಹೆಣಗಾಡಿದರು. ಬಲವಂತವಾಗಿ ಕೈ ಹಿಡಿದು ಕೂರಿಸಿದರು.

ಆಗ ಬಿಜೆಪಿ ಸದಸ್ಯರು 'ಕಮಾನ್ ಪ್ರದೀಪ್', 'ಕಮಾನ್ ಶಿವಲಿಂಗೇಗೌಡ' 'ಮಾತಾಡಿ ಮಾತಾಡಿ' ಎಂದು ಮಾತನಾಡುವಂತೆ ಪ್ರಚೋದಿಸಿದರು.

ಉತ್ತೇಜಿತರಾದ ಕಾಂಗ್ರೆಸ್ ಸದಸ್ಯರು ಬಿಜೆಪಿಯನ್ನು ಟೀಕಿಸಲು ನಿಂತಾಗ ಬಿಜೆಪಿ ಸದಸ್ಯರು 'ಸಿದ್ರಾಮಣ್ಣ, ಸಿದ್ರಾಮಣ್ಣ ದಲಿತರ ಹಣ ನುಂಗಿದೆಯಣ್ಣ', 'ಏನಿಲ್ಲಾ, ಏನಿಲ್ಲಾ ಅರಸೀಕೆರೆಗೆ ಏನಿಲ್ಲ', 'ಚೊಂಬು ಚೊಂಬು, ಗ್ರ್ಯಾಂಟ್ ಇಲ್ಲ...', 'ಬುರುಡೆ ದಾಸ ಶಿವಲಿಂಗೇಗೌಡ' ಇತ್ಯಾದಿ ಘೋಷಣೆಗಳನ್ನು ಕೂಗಿದರು.

ಒಂದು ಹಂತದಲ್ಲಿ ಪ್ರದೀಪ್ ಈಶ್ವರ್ ಅವರನ್ನು ಅಶೋಕ ಪಟ್ಟಣ ಬಲವಂತವಾಗಿ ಕೂರಿಸಿದರು. ಆಗ ಬಿಜೆಪಿ ಸದಸ್ಯರು 'ಶಾಸಕರ ಧ್ವನಿಯನ್ನು ಅಡಗಿಸಲಾಗುತ್ತಿದೆ. ದೌರ್ಜನ್ಯ ಮಾಡಲಾಗುತ್ತಿದೆ. ಒತ್ತಾಯಪೂರ್ವಕವಾಗಿ ಕೂರಿಸುತ್ತಿದ್ದಾರೆ. ಇದು ಸರ್ವಾಧಿಕಾರಿ ನಡೆ. ಸಭಾಧ್ಯಕ್ಷರು ಶಾಸಕರ ರಕ್ಷಣೆಗೆ ಬರುತ್ತಿಲ್ಲ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಹರಿಹಾಯ್ದರು.

ಪ್ರದೀಪ್ ಈಶ್ವರ್ ಮತ್ತೆ ಎದ್ದು ನಿಂತು 'ಜೈ ಸಿದ್ರಾಮಯ್ಯ, ಜೈ ಸಿದ್ರಾಮಯ್ಯ' ಎಂದು ಏರಿದ ಧ್ವನಿಯಲ್ಲಿ ಕೂಗಲಾರಂಭಿಸಿದರು. ಆಗ ಅಶೋಕ ಪಟ್ಟಣ ಅವರು ಪ್ರದೀಪ್ ಬಳಿ ಹೋಗಿ ಕೈಮುಗಿದು, ಕೂರುವಂತೆ ಕೋರಿದರು.

150 ಹೆಚ್ಚುವರಿ ಹಾಸ್ಟೆಲ್

ಹಿಂದುಳಿದ ವರ್ಗಗಳ ಕಾಲೇಜು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಹೆಚ್ಚುವರಿಯಾಗಿ 150 ಹಾಸ್ಟೆಲ್ ಆರಂಭಿಸಲಾಗುತ್ತಿದೆ. ಬೆಂಗಳೂರು ನಗರ, ಮೈಸೂರಿನಲ್ಲಿ ತಲಾ 14, ಧಾರವಾಡ 15 ಸೇರಿದಂತೆ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಅಗತ್ಯಕ್ಕೆ ತಕ್ಕಂತೆ ಹಾಸ್ಟೆಲ್‌ಗೆ ವ್ಯವಸ್ಥೆ ಮಾಡಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಬಿಜೆಪಿಯ ತಳವಾರ್ ಸಾಬಣ್ಣ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಪ್ರಸ್ತುತ 1,277 ಮೆಟ್ರಿಕ್ ಪೂರ್ವ, 1,169 ಮೆಟ್ರಿಕ್ ನಂತರದ ಹಾಸ್ಟೆಲ್‌ಗಳು ಸೇರಿ 2,446 ಹಾಸ್ಟೆಲ್‌ಗಳಿವೆ. 2,28,761 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ ಎಂದರು.

ಸಿ.ಎಂ ರಾಜೀನಾಮೆ ಕೊಡುವ ದಿನ ಹತ್ತಿರ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡುವ ದಿನ ಹತ್ತಿರ ಬಂದಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ವಿಧಾನಸಭೆಯ ಕಲಾಪದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ಈ ಹಗರಣದಲ್ಲಿ ಹಣಕಾಸು ಸಚಿವರೂ ಆದ ಮುಖ್ಯಮಂತ್ರಿಯವರ ಸಮ್ಮತಿ ಇಲ್ಲದೇ, ಅವರ ಗಮನಕ್ಕೆ ಬಾರದೆ ಹಣ ವರ್ಗಾವಣೆ ಆಗಲು ಸಾಧ್ಯವೇ ಇಲ್ಲ ಎಂದು ಪ್ರತಿಪಾದಿಸಿದರು.

'ಮಾಜಿ ಸಚಿವ ನಾಗೇಂದ್ರ, ಶಾಸಕ ಬಸನಗೌಡ ದದ್ದಲ್ ಅವರಷ್ಟೇ ಅಲ್ಲ; ಇನ್ನೂ ದೊಡ್ಡವರ ಹೆಸರು ಮುಂದೆ ಬರಲಿದೆ. ಇದರಿಂದ ಆತಂಕಗೊಂಡಿರುವುದರಿಂದಲೇ ರಾಜ್ಯದ ಐವರು ಸಚಿವರು ಇ.ಡಿ ಮೇಲೆ ಆಪಾದನೆ ಮಾಡುವ ಪ್ರಯತ್ನ ನಡೆಸಿದ್ದಾರೆ. ಅಲ್ಲದೇ, ಮುಖ್ಯಮಂತ್ರಿ ಸದನದಲ್ಲಿ ಉತ್ತರ ನೀಡುವಾಗ ಸತ್ಯ ಸಂಗತಿ ಮರೆ ಮಾಚಿ, ಸದನ ಮತ್ತು ರಾಜ್ಯದ ಜನತೆಗೆ ತಪ್ಪು ಮಾಹಿತಿ ಕೊಡುವ ಪ್ರಯತ್ನ ಮಾಡಿದ್ದಾರೆ. ಮುಖ್ಯಮಂತ್ರಿಯವರು ಈ ಹಗರಣದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ' ಎಂದರು.

ಈಗಾಗಲೇ ಇ.ಡಿ, ಸಿಬಿಐ ತನಿಖೆ ನಡೆಯುತ್ತಿದ್ದು, ಇದಕ್ಕೆ ಮುಖ್ಯಮಂತ್ರಿ ಉತ್ತರ ನೀಡಲೇಬೇಕಾಗುತ್ತದೆ ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, 'ವಾಲ್ಮೀಕಿ ನಿಗಮದ ₹187 ಕೋಟಿಯನ್ನು ಶಾಸಕ, ಸಚಿವ, ಮುಖ್ಯಮಂತ್ರಿ ಸೇರಿ ಹಲವರು ಲೂಟಿ ಮಾಡಿ ಲೋಕಸಭಾ ಚುನಾವಣೆಗೆ ಬಳಸಿದ್ದಾರೆ. ಇದು ಜಾರಿ ನಿರ್ದೇಶನಾಲಯದ ಮಾಹಿತಿಯಿಂದ ಸ್ಪಷ್ಟವಾಗಿದೆ. ಲೂಟಿ ಆದ ಹಣ ಎಲ್ಲೆಲ್ಲಿ ಹೋಗಿದೆ? ಯಾವಾಗ ವಾಪಸ್ ತರುತ್ತೀರಿ' ಎಂದು ಪ್ರಶ್ನಿಸಿದರು.

'ಮುಖ್ಯಮಂತ್ರಿ ವೀರಾವೇಶದ ಭಾಷಣ ಮಾಡಿ ತಮ್ಮ ಸರ್ಕಾರ ಭಾಗಿಯಾಗಿಲ್ಲ ಎಂದಿದ್ದಾರೆ. ಹಾಗಿದ್ದರೆ ಸಚಿವರು ರಾಜೀನಾಮೆ ಕೊಟ್ಟಿದ್ದು ಯಾಕೆ? ಬುದ್ಧಿ ಇಲ್ಲದೇ ರಾಜೀನಾಮೆ ಕೊಟ್ಟರೆ? ₹89 ಕೋಟಿ ಲೂಟಿ ಆಗಿದೆ ಎಂದು ಒಪ್ಪಿಕೊಂಡಿದ್ದೀರಿ. ಆತ್ಮಹತ್ಯೆ, ಲೂಟಿಯ ತನಿಖೆ ಮಾಡುವುದು ಬಿಟ್ಟು, ನಿಮ್ಮ ಸರ್ಕಾರದಲ್ಲಿ ಹೀಗಾಗಿತ್ತು, ಹಾಗಾಗಿತ್ತು ಎಂದು ಹೇಳುವುದು ಎಷ್ಟು ಸರಿ? ಶೇ 40 ಸರ್ಕಾರ ಎಂದು ನಮ್ಮ ವಿರುದ್ಧ ಪೋಸ್ಟರ್ ಅಂಟಿಸಿದ್ದೀರಿ. 14 ತಿಂಗಳಾದರೂ ಆ ವಿಷಯದಲ್ಲಿ ಫಲಿತಾಂಶ ಬಂದಿದೆಯೇ?' ಎಂದು ಪ್ರಶ್ನಿಸಿದರು.

'ಧ್ವನಿ ಅಡಗಿಸಲು ಸಭಾಧ್ಯಕ್ಷರ ಯತ್ನ'

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಕುರಿತು ಬಿಜೆಪಿ ಸದಸ್ಯರು ಧ್ವನಿ ಎತ್ತಿದರೆ ಅವರನ್ನು ಒತ್ತಾಯಪೂರ್ವಕವಾಗಿ ಕೂರಿಸುವ ಕೆಲಸ ಸಭಾಧ್ಯಕ್ಷ ಯು.ಟಿ.ಖಾದರ್ ಮಾಡಿದ್ದಾರೆ ಎಂದು ವಿರೋಧಪಕ್ಷದ ನಾಯಕ ಆರ್. ಅಶೋಕ ದೂರಿದರು.

ಹಗರಣದ ವಿರುದ್ಧ ಧ್ವನಿ ಎತ್ತುವವರನ್ನು ದಮನ ಮಾಡಲು ಮಳೆ ಹಾನಿ ವಿಷಯವನ್ನು ಪ್ರಸ್ತಾವಕ್ಕೆ ಸಭಾಧ್ಯಕ್ಷರು ಅವಕಾಶ ನೀಡಿದರು. ಇದು ಸಭಾಧ್ಯಕ್ಷರಿಗೆ ಗೌರವ ತರುವ ಕೆಲಸವಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಸಭಾಧ್ಯಕ್ಷರು ಸದನ ನಡೆಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಇಂತಹ ಸಭಾಧ್ಯಕ್ಷರಿಂದ ನಾವು ಏನೂ ನಿರೀಕ್ಷೆ ಮಾಡಲಾಗುವುದಿಲ್ಲ. ಸೋಮವಾರ ಅಧಿವೇಶನದಲ್ಲಿ ಈ ಕುರಿತು ಬಿಜೆಪಿ ನಿರ್ಣಯ ತೆಗೆದುಕೊಳ್ಳಲಿದೆ' ಎಂದು ಹೇಳಿದರು.

ಪುಸ್ತಕ ಖರೀದಿ ಟೆಂಡರ್ ರದ್ಧತಿಗೆ ಮನವಿ

ಬೆಂಗಳೂರು: 'ಕಾಲೇಜು ಶಿಕ್ಷಣ ಇಲಾಖೆಯು ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನದಡಿ (ರೂಸಾ) ಪುಸ್ತಕ ಖರೀದಿಗೆ ನಡೆಸಿದ ಟೆಂಡರ್ ಪ್ರಕ್ರಿಯೆ ಅವೈಜ್ಞಾನಿಕವಾಗಿದೆ. ಆದ್ದರಿಂದ ಈ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಬೇಕು' ಎಂದು ಕರ್ನಾಟಕ ಪ್ರಕಾಶಕರ ಮತ್ತು ಪುಸ್ತಕ ವ್ಯಾಪಾರಿಗಳ ಸಂಘ ಸರ್ಕಾರಕ್ಕೆ ಮನವಿ ಮಾಡಿದೆ.

ಈ ಬಗ್ಗೆ ಸಂಘದ ಅಧ್ಯಕ್ಷ ಎ. ರಮೇಶ್ ಅವರು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರಿಗೆ ಪತ್ರ ಬರೆದಿದ್ದಾರೆ. 'ರಾಜ್ಯದಾದ್ಯಂತ ಎಲ್ಲ ಪದವಿ ಕಾಲೇಜುಗಳಿಗೆ ಕಾಲೇಜು ಶಿಕ್ಷಣ ಇಲಾಖೆಯು ಪುಸ್ತಕಗಳನ್ನು ಖರೀದಿಸುತ್ತಿದೆ. ಪುಸ್ತಕ ಖರೀದಿಯ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಪುಸ್ತಕಗಳ ಪಟ್ಟಿ ಬಿಡುಗಡೆಯಾಗಿದೆ. ಈ ಟೆಂಡರ್‌ನ ನಿಯಮ ಹಾಗೂ ನಿಬಂಧನೆಗಳು ಕೇವಲ ಇಬ್ಬರು ಪುಸ್ತಕ ವ್ಯಾಪಾರಿಗಳಿಗೆ ಅನುಕೂಲಕರವಾಗಿದೆ. ಇಲಾಖೆಯ ನಡೆಯಿಂದ ಉಳಿದ ಪುಸ್ತಕ ವ್ಯಾಪಾರಿಗಳು, ಪ್ರಕಾಶಕರು, ಲೇಖಕರಿಗೆ ಅನ್ಯಾಯವಾಗಿದೆ' ಎಂದು ತಿಳಿಸಿದ್ದಾರೆ.

'ಖರೀದಿಯಾಗುತ್ತಿರುವ ಶೇ 80 ರಷ್ಟು ಪುಸ್ತಕಗಳು ಎರಡು ಮೂರು ಪ್ರಕಾಶನಗಳಿಗೆ ಸೇರಿವೆ. ರಾಜ್ಯದಾದ್ಯಂತ ಸಾವಿರಾರು ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು, ಲೇಖಕರಿದ್ದು, ಇಲಾಖೆಯು ಏಕಸ್ವಾಮ್ಯದ ರೀತಿಯಲ್ಲಿ ನಡೆದುಕೊಂಡಿದೆ. ಈ ರೀತಿಯ ಟೆಂಡರ್ ಪ್ರಕ್ರಿಯೆ ಅಗತ್ಯ ಇರಲಿಲ್ಲ. ಬದಲಾಗಿ, ಆಯಾ ಕಾಲೇಜು ಪ್ರಾಂಶುಪಾಲರು ಕಾಲೇಜು ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಿ, ಖರೀದಿಸಿದ್ದರೆ ಎಲ್ಲ ಪ್ರಕಾಶಕರು ಪಾಲ್ಗೊಳ್ಳಲು ಸಾಧ್ಯವಾಗುತ್ತಿತ್ತು' ಎಂದು ಹೇಳಿದ್ದಾರೆ.

ಚಿಂತಾಮಣಿ ತಾಲ್ಲೂಕಿನ ಕೈವಾರದಲ್ಲಿ ಗುರುಪೂಜಾ ಸಂಗೀತೋತ್ಸವಕ್ಕೆ ಚಾಲನೆ ನೀಡುವ ಮುನ್ನ ಅಲಂಕೃತ ಪಲ್ಲಕ್ಕಿಯಲ್ಲಿ ತಾತಯ್ಯ ಅವರ ಮೂರ್ತಿಯನ್ನು ದೇವಾಲಯದಿಂದ ಮಂಗಳವಾದ್ಯಗಳ ಸಮೇತ ಸಂಗೀತ ಸಭಾಂಗಣಕ್ಕೆ ಕರೆತರಲಾಯಿತು

ಗುರುಪೂಜಾ ಸಂಗೀತೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಕೈವಾರದ ಯೋಗಿ ನಾರೇಯಣ ಮಠದಲ್ಲಿ ಗುರುಪೂರ್ಣಿಮೆ ಪ್ರಯುಕ್ತ ಹಮ್ಮಿಕೊಂಡಿರುವ ಗುರುಪೂಜಾ-ಸಂಗೀತೋತ್ಸವಕ್ಕೆ ಶುಕ್ರವಾರ ವಿದ್ಯುಕ್ತ ಚಾಲನೆ ದೊರೆಯಿತು.

ದೇವಾಲಯವನ್ನು ವಿವಿಧ ಬಗೆಯ ಹೂ, ಹಣ್ಣುಗಳಿಂದ ಅಲಂಕರಿಸಲಾಗಿದೆ. ಮಂಗಳವಾದ್ಯಗಳೊಂದಿಗೆ ಗೋಪೂಜೆ ನೆರವೇರಿಸಿ ಕೈವಾರ ತಾತಯ್ಯನವರ ಪ್ರಥಮ ದರ್ಶನ ಪೂಜೆ ನೆರವೇರಿಸಲಾಯಿತು. ತಾತಯ್ಯನವರ ಮೂಲ ವಿಗ್ರಹವನ್ನು ವಿಶೇಷವಾಗಿ ಹೂಗಳಿಂದ ಅಲಂಕರಿಸಲಾಗಿತ್ತು.

ಯೋಗಿನಾರೇಯಣ ಸಭಾಂಗಣದಲ್ಲಿ ಸಂಗೀತ ಕಛೇರಿ ವ್ಯವಸ್ಥೆ ಮಾಡಲಾಗಿದೆ. ವೇದಿಕೆಯನ್ನು ಅಮರನಾರೇಯಣಸ್ವಾಮಿ ವೇದಿಕೆ ಮತ್ತು ಭೀಮಲಿಂಗೇಶ್ವರ ವೇದಿಕೆ ಎಂದು ವಿಂಗಡಿಸಿ ಎರಡು ಬದಿಯಲ್ಲಿ ಸಂಗೀತಗಾರರು ಕುಳಿತು ಸಂಗೀತ ಸಮರ್ಪಣೆ ಮಾಡುವ ವ್ಯವಸ್ಥೆ ಮಾಡಲಾಗಿದೆ.

ಅಲಂಕೃತ ಪಲ್ಲಕ್ಕಿಯಲ್ಲಿ ತಾತಯ್ಯ ಮೂರ್ತಿಯನ್ನು ದೇವಾಲಯದಿಂದ ಮಂಗಳವಾದ್ಯಗಳ ಸಮೇತ ಸಂಗೀತ ಸಭಾಂಗಣಕ್ಕೆ ಕರೆತರಲಾಯಿತು. ಮೂರು ದಿನ ನಡೆಯುವ ಗುರುಪೂಜಾ ಸಂಗೀತೋತ್ಸವಕ್ಕೆ ಧರ್ಮಾಧಿಕಾರಿ ಎಂ.ಆರ್. ಜಯರಾಮ್ ಚಾಲನೆ ನೀಡಿದರು.

ಸಾಹಿತ್ಯವು ಜನಜೀವನ ನೋಡುವ ಕಿಟಕಿ

ಬ್ಯಾರಿ ಸಾಹಿತ್ಯ ಅಕಾಡೆಮಿಯ ಪದಗ್ರಹಣ ಕಾರ್ಯಕ್ರಮದಲ್ಲಿ ಖಾದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತ್ಯ ಕೇವಲ ಭಾಷೆಯಲ್ಲ, ಜನಜೀವನ, ಸಂಸ್ಕೃತಿಯನ್ನು ನೋಡುವ ಕಿಟಕಿ ಎಂದು ವಿಧಾನಸಭೆಯ ಅಧ್ಯಕ್ಷ ಯು.ಟಿ ಖಾದರ್ ಹೇಳಿದರು.

ನಗರದಲ್ಲಿ ಶುಕ್ರವಾರ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಪದಗ್ರಹಣ ಮತ್ತು 'ಪಿರ್ಸಪ್ವಾಡ್' ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಮಕ್ಕಳಲ್ಲಿ ಪೋಷಕರು ಸಾಹಿತ್ಯಾಭಿರುಚಿ ಬೆಳೆಸಬೇಕು. ಅವರನ್ನು ಸಾಹಿತ್ಯ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗಬೇಕು. ಆಗ ಸಾಹಿತ್ಯದ ಅಭಿರುಚಿ ಬೆಳೆಯುವುದರ ಜೊತೆಗೆ ವ್ಯಕ್ತಿತ್ವ ವಿಕಸನಗೊಳ್ಳಲು ಸಾಧ್ಯ' ಎಂದು ಸಲಹೆ ನೀಡಿದರು.

'ಬ್ಯಾರಿ ಸಾಂಸ್ಕೃತಿಕ ಸಂಘಗಳಲ್ಲಿ ನಾನು ಕೆಲಸ ಮಾಡಿದ್ದರಿಂದ ಇಂದು ವಿಧಾನಸಭೆ ಅಧ್ಯಕ್ಷನಾಗಿದ್ದೇನೆ. ಅಂದು ಸಿಕ್ಕಿದ್ದ ಧೈರ್ಯವೇ ಇಂದು ಸದನದಲ್ಲಿ ಅಧ್ಯಕ್ಷನಾಗಿ ಮಾತನಾಡಲು ಸಾಧ್ಯವಾಗಿದೆ' ಎಂದು ತಿಳಿಸಿದರು.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದ 'ಪಿರ್ಸಪ್ವಾಡ್' ಬ್ಯಾರಿ ಸಾಂಸ್ಕೃತಿಕ ಸಂಭ್ರಮ, ಅಧ್ಯಕ್ಷರು ಮತ್ತು ಸದಸ್ಯರ ಪದಗ್ರಹಣ ಕಾರ್ಯಕ್ರಮದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕರ್ನಾಟಕ ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್, ಬ್ಯಾರೀಸ್ ವೆಲ್ಫೇರ್ ಅಸೋಸಿಯೇಶನ್ ಪದಾಧಿಕಾರಿ ಟಿ.ಕೆ ಉಮರ್, ಬ್ಯಾರಿಸ್ ಸೆಂಟ್ರಲ್ ಕಮಿಟಿ ಅಧ್ಯಕ್ಷ ಶಬೀರ್ ಬ್ರಿಗೇಡ್, ಎಂಎಂವೈಸಿ ಅಧ್ಯಕ್ಷ ಅಬೂಬಕ್ಕರ್, ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಉಮರ್ ಯು.ಎಚ್. ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

'ಬ್ಯಾರಿಗಳು ಸ್ವಾಭಿಮಾನಿಗಳು, ಶ್ರಮಜೀವಿಗಳು. ಕಷ್ಟಪಟ್ಟು ದುಡಿದು ಕುಟುಂಬ ಸಲಹುವವರು. ಈಗ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಛಾಪು ಮೂಡಿಸುತ್ತಿರುವುದು ಸಮುದಾಯಕ್ಕೆ ಹೆಮ್ಮೆ ತರುವ ವಿಚಾರ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬ್ಯಾರಿ ಸಂಪ್ರದಾಯದ ದಫ್ ಬಾರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಅಕಾಡೆಮಿ ಸದಸ್ಯೆ ಸಾರಾ ಅಲಿ ಪರ್ಲಡ್ಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಪರಿಚಯ ಮಾಡಿಕೊಟ್ಟರು.

ಬಿಬಿಎಂಪಿ: ಮಳೆ ನೀರು ಸಂಗ್ರಹ ಕಡ್ಡಾಯ

ಬೆಂಗಳೂರು: ಬಿಬಿಎಂಪಿ ನಿರ್ಮಿಸಿರುವ ಹಾಗೂ ನಿರ್ಮಾಣ ಮಾಡಲಿರುವ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶ ಹೊರಡಿಸಿದ್ದಾರೆ.

ಬಿಬಿಎಂಪಿಯಿಂದ ಆಸ್ಪತ್ರೆ, ಶಾಲಾ ಕಟ್ಟಡಗಳು ಸೇರಿದಂತೆ ಹಲವಾರು ಹೊಸ ಕಟ್ಟಡಗಳ ನಿರ್ಮಾಣದ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಹೊಸ ಕಟ್ಟಡದ ಜೊತೆಗೆ ಹಾಲಿ ಕಟ್ಟಡಗಳ ನವೀಕರಣ ಹಾಗೂ ದುರಸ್ತಿ ಕಾಮಗಾರಿಗಳನ್ನು ಸಹ ನಿರ್ವಹಿಸಲಾಗುತ್ತಿದೆ. ಈ ಕಟ್ಟಡಗಳೂ ಸೇರಿದಂತೆ ಆಟದ ಮೈದಾನಗಳು/ಉದ್ಯಾನಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಾಗ ಮಳೆ ನೀರು ಸಂಗ್ರಹ ವ್ಯವಸ್ಥೆ ಕಲ್ಪಿಸಬೇಕು ಎಂದಿದ್ದಾರೆ.

ಕಟ್ಟಡಗಳ ಚಾವಣಿ ಸೇರಿದಂತೆ ಆವರಣಗಳಿಂದ ಮಳೆ ನೀರನ್ನು ಸಂಗ್ರಹಿಸಿ ಶೌಚಾಲಯ ಹಾಗೂ ಇತರೆ ಉದ್ದೇಶಗಳಿಗೆ ಮರು ಬಳಕೆ ಮಾಡಬೇಕು. ಮಳೆ ನೀರು ಸಂಗ್ರಹಣೆ ಸಾಧ್ಯವಿಲ್ಲದ ಸಂದರ್ಭದಲ್ಲಿ ಕಟ್ಟಡಗಳ ಆವರಣದಲ್ಲಿ ಮಳೆ ನೀರು ಇಂಗಿಸುವ ವ್ಯವಸ್ಥೆಯನ್ನು ಅಳವಡಿಸಿಕೊಂಡು ಮಳೆ ನೀರು ಪೋಲಾಗದಂತೆ ತಡೆಯಲು ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ಎಲ್ಲ ಅಧಿಕಾರಿಗಳಿಗೂ ಸೂಚಿಸಿದ್ದಾರೆ.

ಆರತಿ ಆಷಾಢ ಶುಕ್ರವಾರ ಪ್ರಯುಕ್ತ ಕನಕಪುರ ರಸ್ತೆಯಲ್ಲಿರುವ ಬನಶಂಕರಿ ದೇವಸ್ಥಾನಕ್ಕೆ ಭಾರಿ ಸಂಖ್ಯೆಯಲ್ಲಿ ಬಂದಿದ್ದ ಭಕ್ತರು ನಿಂಬೆಹಣ್ಣಿನ ದೀಪ, ಬೆಲ್ಲದ ಆರತಿ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು ರೇಸ್

ಸೂಪರ್‌ನ್ಯಾಚುರಲ್ ಗೆಲ್ಲುವ ನಿರೀಕ್ಷೆ

ಜಯಚಾಮರಾಜ ಒಡೆಯರ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೂಪರ್‌ನ್ಯಾಚುರಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕ್ಯಾಸ್ಟೀಲ್ 2, ದಿ ಲೀಡರ್ 7, ವಂಡರ್‌ಲ್ಯಾಂಡ್ 9
2ನೇ ರೇಸ್: ಬ್ರೇವ್ ಮೆಜೆಸ್ಟಿ 3, ಡಬಲ್ ಸ್ನ್ಯಾಚ್ 4, ಕೇಪ್ರಿಗರ್ಲ್ 5
3ನೇ ರೇಸ್: ಮಾಂಟೆರಿಯೊ 4, ಮ್ಯಾಂಡೊರಿನೊ 2, ವೆರಜಾನೊ 6
4ನೇ ರೇಸ್: ಎಲ್ಫಿನ್ ನೈಟ್ 5, ಟೆಪೊಲೊ 6, ಮ್ಯಾಗ್ನಸ್ 7
5ನೇ ರೇಸ್: ಸೂಪರ್‌ನ್ಯಾಚುರಲ್ 3, ಟಚ್ ಆಫ್ ಗ್ರೇ 1, ಶ್ಯಾಮ್‌ರಾಕ್ 4
6ನೇ ರೇಸ್: ರಿವರ್ ಆಫ್ ಗೋಲ್ಡ್ 1, ಸ್ಟಾರ್ ಕಾನ್ಸೆಪ್ಟ್ 4, ಸ್ಟಾರ್ ಕೊಮೆಟ್ 6
7ನೇ ರೇಸ್: ಸ್ಟ್ರಾವಿನ್‌ಸ್ಕಿ 2, ಜೂರಿ 8, ಸೆವೆನ್ತ್ ಸಮುರಾಯ್ 1

ಉತ್ತಮ ಬೆಟ್: ಸ್ಟ್ರಾವಿನ್‌ಸ್ಕಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಕಾರ್ಯಕ್ರಮದಲ್ಲಿ ಸುಚೇತ ಕೆ.ಎಸ್. (ಎಡದಿಂದ ಎರಡನೆಯವರು) ಅವರ 'ಕೇಳದ ಕಿವಿಗಳು ಹೇಳಿದ ಕತೆ' ಹಾಗೂ 'ಬರಿ ಕತೆಯಲ್ಲ–ಅಗ್ರಹಾರದ ಕಥನ' ಕೃತಿಯನ್ನು ನಿರಂಜನ್ ಭಟ್ಟ (ಬಲ ತುದಿ) ಬಿಡುಗಡೆ ಮಾಡಿದರು. ದೀಪಾ ಭಟ್ಟ, ಲೇಖಕಿ ಗೀತಾ ವಸಂತ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಉಪಸ್ಥಿತರಿದ್ದರು

ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ

'ಸಮಸ್ಯೆ ಮೀರಿ ಯಶಸ್ಸು ಸಾಧಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸಾರದಲ್ಲಿ ಗಂಭೀರ ಸಮಸ್ಯೆಗಳಿದ್ದರೂ ಅವುಗಳನ್ನು ದಾಟಿ ಯಶಸ್ಸು ಸಾಧಿಸುವ ಮೂಲಕ ಇತರರಿಗೆ ಮಾದರಿಯಾಗಬೇಕು' ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ತಿಳಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಹಯೋಗದಲ್ಲಿ ಅನ್ನಪೂರ್ಣ ಪಬ್ಲಿಕೇಷನ್ ಹೌಸ್ ಹಾಗೂ ಮೈಸೂರಿನ ಅಭಿರುಚಿ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸುಚೇತ ಕೆ.ಎಸ್. ಅವರ 'ಕೇಳದ ಕಿವಿಗಳು ಹೇಳಿದ ಕತೆ' ಹಾಗೂ 'ಬರಿ ಕತೆಯಲ್ಲ–ಅಗ್ರಹಾರದ ಕಥನ' ಕೃತಿ ಬಿಡುಗಡೆಯಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಶೋಕ ಹಾರನಹಳ್ಳಿ, 'ಕೆಲವರು ಸಂಸಾರದಲ್ಲಿನ ಸಣ್ಣಪುಟ್ಟ ಸಮಸ್ಯೆಗಳ ಬಗ್ಗೆಯೂ ಚಿಂತಿಸಿ, ಇನ್ನಷ್ಟು ತೊಂದರೆ ತಂದುಕೊಳ್ಳುತ್ತಾರೆ. ಕೆಲವರು ಖಿನ್ನತೆಗೆ ಒಳಗಾಗಿ ಸಂಕಷ್ಟಕ್ಕೆ ಸಿಲುಕುವುದನ್ನು ಕಾಣುತ್ತಿದ್ದೇವೆ. ತಂದೆ, ತಾಯಿ, ಪತಿ, ಪತ್ನಿ ಅಥವಾ ಮಕ್ಕಳಲ್ಲಿ ಅಂಗವೈಕಲ್ಯತೆಗಳಿದ್ದರೂ ಅಂತಹವುಗಳನ್ನು ಮೀರಿ ಬೆಳೆಯುವ ಉತ್ಸಾಹ ಇಂದು ಎಲ್ಲ ಸಂಸಾರಗಳಲ್ಲಿ ಬರಬೇಕು' ಎಂದರು.

ಕೃತಿಯ ಬಗ್ಗೆ ಮಾತನಾಡಿದ ಲೇಖಕಿ ಗೀತಾ ವಸಂತ, 'ಎಂತಹ ಸಂದಿಗ್ಧ ಸಂದರ್ಭದಲ್ಲೂ ತಂದೆ–ತಾಯಿ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ಕೊಡುವುದು ಬಹುಮುಖ್ಯ' ಎಂದು ತಿಳಿಸಿದರು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ವಿವಿಧ ವಿದ್ಯುತ್ ಸ್ಟೇಷನ್‌ಗಳಲ್ಲಿ ತುರ್ತು ನಿರ್ವಹಣಾ ಕೆಲಸ ಹಮ್ಮಿಕೊಂಡಿರುವುದರಿಂದ ಜುಲೈ 20ರ ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ಕೆಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ರೆಸಿಡೆನ್ಸಿರಸ್ತೆ, ಹುಂಡೈ ಆರ್‌ಎಂಯು, ಲ್ಯಾವೆಲ್ಲೆ ರಸ್ತೆ, ವಾಲ್ಟನ್ ರಸ್ತೆ, ವಿಠ್ಠಲ ಮಲ್ಯ ರಸ್ತೆ, ಚರ್ಚ್ ಸ್ಟ್ರೀಟ್, ಕಸ್ತೂರಬಾ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ಕ್ವೀನ್ಸ್ ವೃತ್ತ, ರೆಸಿಡೆನ್ಸಿ ರಸ್ತೆ ಕ್ರಾಸ್, ಐಟಿಸಿ ಹೋಟೆಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿ ಇರುವುದಿಲ್ಲ.

ಗೋಕುಲ ಎಂಯುಎಸ್‌ಎಸ್, ಡಿ.ಬಿ. ಸಂದ್ರ 4ನೇ ಬ್ಲಾಕ್, ಜೆ.ಬಿ. ಕಾವಲ್ ಅರಣ್ಯ, ಗಂಗಮ್ಮ ವೃತ್ತ, ಡಿ.ಬಿ.ಸಂದ್ರ 2ನೇ ಬ್ಲಾಕ್, ಕಮ್ಮಗೊಂಡನಹಳ್ಳಿ, ಬಿಇಎಲ್ ಉತ್ತರ ಕಾಲೊನಿ, ದಕ್ಷಿಣ ಕಾಲೊನಿ, ಬಾಹುಬಲಿ ನಗರ, ಪಟೇಲ್ ಪಿಳ್ಳೇಗೌಡ ಲೇಔಟ್, ಬ್ಲೂಮ್ ಫೀಲ್ಡ್ ಗಾರ್ಡನ್, ರಾಮಚಂದ್ರಾಪುರ, ಜಾಲಹಳ್ಳಿ ಗ್ರಾಮ, ಶಾರದಾಂಬನಗರ, ಬಾಹುಬಲಿನಗರ, ಎಚ್‌ಎಂಟಿ ಕೈಗಾರಿಕಾ ವಲಯ, ಪ್ರೆಸ್ಟೀಜ್ ವೆಲ್ಲಿಂಗ್ಟನ್ ಮತ್ತು ಪ್ರೆಸ್ಟೀಜ್ ಕೆನ್ಸಿಂಗ್ಟನ್ ಅಪಾರ್ಟ್‌ಮೆಂಟ್, ಮುತ್ಯಾಲನಗರ, ಚಾಮುಂಡೇಶ್ವರಿ ಲೇಔಟ್, ನಂಜಪ್ಪ ಲೇಔಟ್, ಸಿ.ರಾಮಯ್ಯ ಲೇಔಟ್, ಗೋಕುಲ ಎಕ್ಸ್‌ಟಿಎನ್, ಎಚ್‌ಎಂಆರ್ ಲೇಔಟ್, ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಟಿ.ಟಿ.ಕೆ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್, ಬೈರಸಂದ್ರ, ಗುಂಡಪ್ಪ ಲೇಔಟ್, ಓಂ ಶಕ್ತಿ ದೇವಸ್ಥಾನ, ಕಗ್ಗದಾಸಪುರ 1ನೇ ಅಡ್ಡ ರಸ್ತೆಯಿಂದ 19ನೇ ಅಡ್ಡರಸ್ತೆ, ಭುವನೇಶ್ವರಿ ನಗರ, ಶೋಭಾ ಸಿಟಿ, ಚೊಕ್ಕನಹಳ್ಳಿ, ಎಕ್ಸ್ ಸರ್ವಿಸ್‌ಮೆನ್ ಲೇಔಟ್, ಪೋಲೀಸ್ ಕ್ವಾಟ್ರರ್ಸ್, ಆರ್.ಕೆ ಹೆಗಡೆ ನಗರ, ಶಬರಿ ನಗರ, ಹೊಸ ಶಾಂತಿ ನಗರ, ಕೆಂಪೇಗೌಡ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆಯಾಗಲಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

ದೇವಿ ಮುತ್ತು ಮಾರಿಯಮ್ಮನವರ 43ನೇ ವರ್ಷದ ವಿಶೇಷ ಹೂವಿನ ಕರಗ ಮಹೋತ್ಸವ: ಮಹಾಭಿಷೇಕ, ಅಲಂಕಾರ, ಮುತ್ತಿನ ಪಲ್ಲಕಿ, ಆಯೋಜನೆ ಹಾಗೂ ಸ್ಥಳ: ದೇವಿ ಮುತ್ತು ಮಾರಿಯಮ್ಮ ದೇವಾಲಯ, ಕೃಷ್ಣಾನಂದನಗರ, ನಂದಿನಿ ಲೇಔಟ್, ಬೆಳಿಗ್ಗೆ 9

ಬಿ.ಎಸ್ಸಿ. ಆ್ಯನಿಮೇಷನ್ ವಿಭಾಗ ಉದ್ಘಾಟನೆ: ಮುಖ್ಯ ಅತಿಥಿ: ಮನೋಜ್ ಪರಮಹಂಸ, ಅಧ್ಯಕ್ಷತೆ: ಎಚ್. ಎನ್. ಸುಬ್ರಹ್ಮಣ್ಯ, ಆಯೋಜನೆ: ದಿ ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ಗಾಂಧಿ ನೆಹರೂ ರಂಗಮಂದಿರ, ನ್ಯಾಷನಲ್ ಕಾಲೇಜು ಆವರಣ, ಬಸವನಗುಡಿ, ಬೆಳಿಗ್ಗೆ 10

'2024ರ ಲೋಕಸಭೆ ಚುನಾವಣೆಯ ಜನಾದೇಶ–ಮುಂದಿನ ಹಾದಿ' ವಿಷಯದ ಬಗ್ಗೆ ವಿಚಾರಸಂಕಿರಣ: ಅಧ್ಯಕ್ಷತೆ: ನ್ಯಾ. ಎಚ್.ಎನ್. ನಾಗಮೋಹನದಾಸ್, ಮುಖ್ಯ ಭಾಷಣ: ಪ್ರಶಾಂತ್ ಭೂಷಣ್, ಭಾಷಣಕಾರರು: ಆಕಾರ್ ಪಟೇಲ್, ಮೊಹಮ್ಮದ್ ತಾಹಾ ಮತೀನ್, ತಾರಾ ರಾವ್, ಆಯೋಜನೆ: ಫೋರಂ ಫಾರ್ ಡೆಮಾಕ್ರಸಿ ಆ್ಯಂಡ್ ಕಮ್ಯುನಲ್ ಅಮಿಟಿ ಕರ್ನಾಟಕ ವಿಭಾಗ, ಸ್ಥಳ: ಬಿಐಎಫ್‌ಟಿ ಹಾಲ್, ದಾರುಸ್ಸಲಾಂ ಕಟ್ಟಡ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 10

ನ್ಯಾ.ಎಚ್.ಎನ್. ನಾಗಮೋಹನ ದಾಸ್

ಆನಂದ್ ಕುಮಾರ್ ಅವರ 'ಡಾ.ಮಲ್ಲಿಕಾರ್ಜುನ ಖರ್ಗೆ ದಿ ಗ್ರೇಟ್‌ನೆಸ್ ಆಫ್ ಇಂಡಿಯಾ' ಮತ್ತು 'ಡಾ. ಮಲ್ಲಿಕಾರ್ಜುನ ಖರ್ಗೆ ಭಾರತದ ಹೆಮ್ಮೆ' ಪುಸ್ತಕ ಬಿಡುಗಡೆ: ಜಿ. ಪರಮೇಶ್ವರ್, ಎಚ್.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಕಾರ್ಯಕ್ರಮ ಉದ್ಘಾಟನೆ: ಶಿವಾನಂದ ತಗಡೂರು, ಅಧ್ಯಕ್ಷತೆ: ಶ್ರೀಧರ್, ಮುಖ್ಯ ಅತಿಥಿಗಳು: ಎಚ್.ಎಂ. ರೇವಣ್ಣ, ರಾಧಾಕೃಷ್ಣ, ರೂಪಾ ಶಶಿಧರ್, ಆನಂದ್, ಆಯೋಜನೆ: ಡಾ.ಬಿ.ಆರ್. ಅಂಬೇಡ್ಕರ್ ಪ್ರಕಾಶನ, ಸ್ಥಳ: ಬೆಂಗಳೂರು ಪ್ರೆಸ್ ಕ್ಲಬ್, ಬೆಳಿಗ್ಗೆ 11

ಡಾ.ಹೊ. ಶ್ರೀನಿವಾಸಯ್ಯ ಜನ್ಮಶತಮಾನೋತ್ಸವ ಆಚರಣೆ: ಉದ್ಘಾಟನೆ: ಎಚ್.ಕೆ. ಪಾಟೀಲ, ಆಶಯ ನುಡಿ: ರಾಮಚಂದ್ರ ರಾಹಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಡಾ.ಹೊ.ಶ್ರೀ. ಸಂಸ್ಮರಣೆ: ಎಸ್. ಜಿ. ಸಿದ್ಧರಾಮಯ್ಯ, ಮುಖ್ಯ ಅತಿಥಿಗಳು: ಡಿ.ಆರ್. ಪಾಟೀಲ, ಪ್ರೇಮಾ ಸಿದ್ಧರಾಜು, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 11

ಡಿಎಸ್‌ಯು ರಾಷ್ಟ್ರೀಯ ವಿಚಾರಸಂಕಿರಣ: ಮುಖ್ಯ ಅತಿಥಿ: ಪೃಥ್ವಿರಾಜ್ ಆರ್., ಗೌರವ ಅತಿಥಿಗಳು: ಪುಟ್ಟಮಾದಪ್ಪ ಸಿ., ಪುಷ್ಪಾ ಸರ್ಕಾರ್, ಅಧ್ಯಕ್ಷತೆ: ಗಾಲಿಸ್ವಾಮಿ, ಆಯೋಜನೆ: ಸ್ಕೂಲ್ ಆಫ್ ಫಿಸಿಯೊಥೆರಪಿ, ದಯಾನಂದ ಸಾಗರ್ ವಿಶ್ವವಿದ್ಯಾಲಯ, ಸ್ಥಳ: ಸಿ.ಡಿ. ಸಾಗರ್ ಸಭಾಂಗಣ, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 11

ಗುರುಪೂರ್ಣಿಮೆ ಮತ್ತು ವಾಗ್ಗೇಯಕಾರ ದಿನಾಚರಣೆ ಸಂಗೀತೋತ್ಸವ: ಸಂಗೀತ ಕಾರ್ಯಕ್ರಮ: ವೇಣುಬ್ರಹ್ಮ, ಬಿ.ಕೆ. ಅನಂತರಾಮ್, ಜ್ಯೋತ್ಸ್ನಾ ಮಂಜುನಾಥ್, ಬಿ.ಆರ್. ಶ್ರೀನಿವಾಸ್, ಸಮರ್ಥ್, ಬಿ.ಜೆ. ಕೃಷ್ಣಕುಮಾರ್, ಸಚಿನ್ ಡಿ., ಚಿದಾನಂದ, ಆಯೋಜನೆ: ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್, ಸ್ಥಳ: ಭೂಮಿಕಾ ಎಂಇಡಬ್ಲ್ಯುಎಸ್ ಹಾಸ್ಟೆಲ್, ಮಲ್ಲೇಶ್ವರ, ಮಧ್ಯಾಹ್ನ 2

ಕಾವ್ಯ ಸಂಸ್ಕೃತಿ ಯಾನ ಆರಂಭ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಉಪಸ್ಥಿತಿ: ಧರಣಿದೇವಿ ಮಾಲಗತ್ತಿ, ಮೂಡ್ನಾಕೂಡು ಚಿನ್ನಸ್ವಾಮಿ, ಎಲ್.ಎನ್. ಮುಕುಂದರಾಜ್, ಆಯೋಜನೆ: ರಂಗಮಂಡಲ, ರಂಗವಾಹಿನಿ, ಸ್ಥಳ: ಪಡಸಾಲೆ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ.ರಸ್ತೆ, ಮಧ್ಯಾಹ್ನ 2

'ಗುರುಸ್ಮೃತಿ' ಸಂಗೀತ ಸಂಭ್ರಮ: 'ಸಂಗೀತ ವಿದ್ಯಾ ಸಾಗರ' ಆರ್.ಆರ್. ಕೇಶವಮೂರ್ತಿ ಸಂಗೀತ ಉತ್ಸವ, ಗಾಯನ: ಮಾಧುರಿ ಕೌಶಿಕ್, 'ಸಾಧನಾಚಾರ್ಯ' ಪ್ರಶಸ್ತಿ: ವಿ.ವಿ. ಸುಬ್ರಹ್ಮಣ್ಯಂ, ಗೌರವ ಅತಿಥಿಗಳು: ಸೌಮ್ಯಾ ರೆಡ್ಡಿ, ಜಿ. ಬಾಬು, ಶಾಮಸುಂದರ ಶರ್ಮ, ಆಯೋಜನೆ: ಸ್ವರ ಸೌರಭ, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 4

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ಅಲ್ಲಮಪ್ರಭು ಬೆಟ್ಟದೂರು, ಉಪಸ್ಥಿತಿ: ಧರಣಿದೇವಿ ಮಾಲಗತ್ತಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4



ಅಲ್ಲಮಪ್ರಭು ಬೆಟ್ಟದೂರು

41ನೇ ಅಂತರ ವಿಭಾಗ ನಾಟಕ ಸ್ಪರ್ಧೆ–2024 ಸಮಾರೋಪ ಹಾಗೂ ಬಹುಮಾನ ವಿತರಣಾ ಸಮಾರಂಭ: ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

ಇಂದಿರಾ ಮತ್ತು ನಾರಾಯಣದಾಸ್ ದತ್ತಿ ಸಂಗೀತ ಕಛೇರಿ: ಮಾನಸಾ ಶಾಸ್ತ್ರಿ, ರೂಪಕ್ ವೈದ್ಯ, ಸೂರ್ಯ ಉಪಾಧ್ಯಾಯ, ಅನಿರುದ್ಧ ಐತಾಳ್, ಎಸ್.ಆಕಾಶ್, ಸರ್ಫರಾಜ್ ಖಾನ್, ಹೇಮಂತ್ ಜೋಶಿ, ಆಯೋಜನೆ: ಎಂಇಎಸ್ ಕಲಾವೇದಿ, ಸಪ್ತಕ ಬೆಂಗಳೂರು, ಸ್ಥಳ: ನ್ಯೂ ಕಾನ್ಫರೆನ್ಸ್ ಹಾಲ್, ಎಂಇಎಸ್ ಕಾಲೇಜು, ಮಲ್ಲೇಶ್ವರ, ಸಂಜೆ 5.30

'ಏಕತ್ವಂ ಯುವ ಸಾಗರ' ಸಂಗೀತ ಕಾರ್ಯಕ್ರಮ: ರಾಗಸುಧಾ, ಅಮೋಘ್ ನಡದೂರ್, ಸುನಾಧ ಕೃಷ್ಣ, ಮುಖ್ಯ ಅತಿಥಿ: ಎಚ್.ಕೆ. ವೆಂಕಟರಾಮ್, ಆಯೋಜನೆ: ಏಕತ್ವಂ, ಸ್ಥಳ: ಸುಚಿತ್ರಾ ಸಿನಿಮಾ ಆ್ಯಂಡ್ ಕಲ್ಚರಲ್ ಫೌಂಡೇಶನ್, ಬನಶಂಕರಿ 3ನೇ ಹಂತ, ಸಂಜೆ 6

ರಾಮಕೃಷ್ಣ ಸಂಗೀತ ಸೌರಭ: ಹಿಂದೂಸ್ತಾನಿ–ಕರ್ನಾಟಕ ಕೊಳಲು ಜುಗಲ್‌ಬಂದಿ: ಅಮಿತ್ ನಾಡಿಗ, ಷಡ್ಜ ಗೋಡ್ಖಿಂಡಿ, ಮೃದಂಗ: ಅರ್ಜುನ್ ಕುಮಾರ್, ತಬಲಾ: ರೂಪಕ್ ಕಲ್ಲೂರ್ಕರ್, ಆಯೋಜನೆ ಹಾಗೂ ಸ್ಥಳ: ಸ್ವಾಮಿ ವಿವೇಕಾನಂದ ಸಭಾಂಗಣ, ರಾಮಕೃಷ್ಣ ಮಠ, ಸಂಜೆ 6

'ನಾಕೊಳ್ಳೇ ಮಾತು' ಸಂವಾದ: ಕರ್ಕಿ ಕೃಷ್ಣಮೂರ್ತಿ, ಕಾವ್ಯಾ ಕಡಮೆ, ವಸುಧೇಂದ್ರ, ಆಯೋಜನೆ ಹಾಗೂ ಸ್ಥಳ: ದಿ ಬುಕ್‌ವರ್ಮ್, ಬ್ರಿಗೇಡ್ ಗಾರ್ಡನ್ಸ್, ಚರ್ಚ್ ಸ್ಟ್ರೀಟ್, ಸಂಜೆ 6.30

ಸುಧಾ, ಮಯೂರ ಓದಿ

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರವರ ಕಚೇರಿ,
ನೀಸ&ಒಚ(ಪಶ್ಚಿಮ) ವಿಭಾಗ, ವಾಎನೀಸ ಆವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಟಿಎನ್–05/440/2024–25 ದಿನಾಂಕ: 19.07.2024

ಅಲ್ಪಾವಧಿ/ಪೂರ್ಣಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 5.30 ಗಂಟೆ ನಂತರ (ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಸಂಜೆ 4.30 ಗಂಟೆ ಒಳಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 4.30 ಗಂಟೆ ನಂತರ ಟೆಂಡರ್/ ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1.	Kw-1 & Kw-2	34 ಸಂಖ್ಯೆಗಳು	820.78	23.07.2024	08.08.2024	09.08.2024
2.	Service Tenders	17 ಸಂಖ್ಯೆಗಳು	467.82	23.07.2024	08.08.2024	09.08.2024
3.	Service Tender	01 ಸಂಖ್ಯೆ	35.01	19.07.2024	26.07.2024	29.07.2024

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ನೀಸ&ಒಚ (ಪಶ್ಚಿಮ) ವಿಭಾಗ,
ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/286/24-25

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗಾವಿ. ಫ್ಯಾಕ್ಸ್/ದೂರವಾಣಿ ಸಂಖ್ಯೆ: 0831–2470342, 2470257 ಇ–ಮೇಲ್: belagavibuda@gmail.com

No: BUDA/PWD/E-TENDER/2024-25/1041 Date: 18-07-2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳಲ್ಲಿನ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಅನ್ವಯ ಇ–ಪ್ರೊಕ್ಯೂರ್‌ಮೆಂಟ್–2 ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಆಸಕ್ತ ಮತ್ತು ಅರ್ಹ ಗುತ್ತಿಗೆದಾರರು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (ದೂರವಾಣಿ ಸಂಖ್ಯೆ: 0831–2470342) ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್: https://kppp.karnataka.gov.in ರಲ್ಲಿ ಪಡೆಯಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಇಂಡೆಂಟ್ ನಂ.	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ (ರೂ. ಗಳಲ್ಲಿ)	ಕಾಮಗಾರಿಯನ್ನು ನಿರ್ವಹಿಸುವ ಅವಧಿ
1	ಬೆಳಗಾವಿ ಉತ್ತರ ಮತಕ್ಷೇತ್ರದ ಅಮನ್ ನಗರದ ಕೊನೆಯ ಕ್ರಾಸ್‌ನಲ್ಲಿ 400 ಮೀಟರ್ ಪೇವರ್ ರಸ್ತೆ ನಿರ್ಮಾಣ ಮಾಡುವುದು.	INDENT 37	98.00	1,96,000/-	6 ತಿಂಗಳು
2	ಬೆಳಗಾವಿ ಉತ್ತರ ಮತಕ್ಷೇತ್ರದ ಅಮನ್ ನಗರದ ಕೆ.ಜಿ.ಎನ್ ಕಾಲನಿಯಲ್ಲಿ 200 ಮೀಟರ್ ಪೇವರ್ ರಸ್ತೆ ನಿರ್ಮಾಣ ಮಾಡುವುದು.	INDENT 38	32.50	65,000/-	6 ತಿಂಗಳು
3	ಬೆಳಗಾವಿ ಉತ್ತರ ಮತಕ್ಷೇತ್ರದ ಅಮನ್ ನಗರದ ಶ್ಯಾಮ್ಸ್ ಕಾಲನಿಯಲ್ಲಿ 400 ಮೀಟರ್ ಪೇವರ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಮಾಡುವುದು.	INDENT 39	97.00	1,94,000/-	6 ತಿಂಗಳು
4	ಬೆಳಗಾವಿ ಉತ್ತರ ಮತಕ್ಷೇತ್ರದ ಅಮನ್ ನಗರದ ನ್ಯೂ ಸ್ಟಾರ್ ಡೆವಲಪರ್ ಕಟ್ಟಡದಿಂದ ಇ–ಅಲಿ ಮಸೀದಿ ವರೆಗೆ 260 ಮೀಟರ್ ಚರಂಡಿ ನಿರ್ಮಾಣ ಮಾಡುವುದು.	INDENT 40	79.00	1,58,000/-	6 ತಿಂಗಳು

ಟೆಂಡರ್ ಫಾರ್ಮ ಬೆಲೆ ಇ–ಪ್ರೊಕ್ಯೂರ್‌ಮೆಂಟ್‌ದಲ್ಲಿದ್ದಂತೆ:
1) ಟೆಂಡರ್ ಕ್ವಾರಿಸ್ ಸಲ್ಲಿಸಲು ಕೊನೆಯ ದಿನಾಂಕ: 12–08–2024 ರಂದು ಸಾಯಂಕಾಲ 4.30 ಘಂಟೆಯವರೆಗೆ. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19–08–2024 ರಂದು ಸಾಯಂಕಾಲ 4.30 ಘಂಟೆಯವರೆಗೆ. 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 20–08–2024 ರಂದು ಸಾಯಂಕಾಲ 5.00 ಘಂಟೆಗೆ. 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಇ–ಪೋರ್ಟಲ್ ಮುಖಾಂತರ ಮಾಹಿತಿಯನ್ನು ಪಡೆಯಬಹುದು. 5) ಯಾವ ಕಾರಣವನ್ನು ಸಹ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. 6) ಟೆಂಡರ್ ಮೊತ್ತಕ್ಕೆ ಜಿ.ಎಸ್.ಟಿ. ಮೊತ್ತವನ್ನು ಒಳಗೊಂಡಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.
ವಾಸಾಸಂಇ/ಬೆಳಗಾವಿ/399/ಅಡ್ವಟೋರ್/2024–25
ಸಹಿ/– ಆಯುಕ್ತರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ,ವಿಜಯಪುರ

ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2024–25/1032 ದಿನಾಂಕ:18.07.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟಿ ಪದ್ಧತಿ)

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2023–24 ನೇ ಸಾಲಿನ 5054 ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಅನುದಾನ ಯೋಜನೆಯಡಿಯಲ್ಲಿ ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 1032 ದಿನಾಂಕ: 18.07.2024 ರಂತೆ ತಲಾ ರೂ. 80.00, 70.00, 100.00, 50.00, 100.00, 100.00, 100.00, 100.00, 100.00, 30.00, 60.00, 100.00, 100.00, 100.00, 100.00, 40.00, 20.00, 20.00, 60.00, 10.00 ಲಕ್ಷಗಳ ಒಟ್ಟು 20 ಕಾಮಗಾರಿಗಳನ್ನು ಇ–ಟೆಂಡರ್‌ನ್ನು ಆಹ್ವಾನಿಸಿದ್ದು, ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka. gov.in ನಲ್ಲಿ ಅಥವಾ ಕಚೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/114/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ (ಕಾರಾಗೃಹ ಮತ್ತು ಸುಧಾರಣಾ ಸೇವೆಗಳು)
ಅಧೀಕ್ಷಕರ ಕಾರ್ಯಾಲಯ ಜಿಲ್ಲಾ ಕಾರಾಗೃಹ–ಮಂಗಳೂರು–575003

Phone: 0824-2492303, E-mail: dpmng.prisons-kar@gov.in
ಸಂಖ್ಯೆ:ಜಿಕಾಮಂ:ಮರುದರಖಾಸ್ತು:01:2024–25 ದಿನಾಂಕ: 18.07.2024

ಮರು ದರಖಾಸ್ತಿನ ಸಂಕ್ಷಿಪ್ತ ಪ್ರಕಟಣೆ

2024–25 ನೇ ಸಾಲಿಗೆ ಮಂಗಳೂರು ಜಿಲ್ಲಾ ಕಾರಾಗೃಹ ಹಾಗೂ ವ್ಯಾಪ್ತಿಯಲ್ಲಿ ಬರುವ ಉಡುಪಿ ಜಿಲ್ಲಾ ಕಾರಾಗೃಹದ ಬಂದಿಗಳಿಗೆ ಅವಶ್ಯವಿರುವ ಲಾಟ್ ಸಂಖ್ಯೆ: 01 ರಿಂದ 05 ರಲ್ಲಿನ ಆಹಾರ ಧಾನ್ಯಗಳು/ಆಹಾರ ಪದಾರ್ಥಗಳು/ ಗಟ್ಟಿ ಮತ್ತು ಸೊಪ್ಪು ತರಕಾರಿ/ ಹಣ್ಣು/ಮೀನು ಮತ್ತು ಮೂಳೆ ರಹಿತ ಗಂಡು ಕುರಿ ಮಾಂಸ, ಕೋಳಿ ಮೊಟ್ಟೆ /ಇತರೆ ವಸ್ತುಗಳ ಖರೀದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರನ್ವಯ ಕೆಪಿಪಿ ಪೋರ್ಟಾಲ್ ಮೂಲಕ ಮರು ದರಖಾಸ್ತನ್ನು ದಿನಾಂಕ: 18.07.2024 ರಂದು ಪ್ರಕಟಣೆ ಮಾಡಲಾಗಿದೆ. ಲಾಟ್ ಸಂಖ್ಯೆ 01 ರಿಂದ 05 ರವರೆಗಿನ ಲಾಟ್‌ಗಳ ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ: 07.08.2024 ಸಾಯಂಕಾಲ 5.30 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ https://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸುವುದು ಅಥವಾ ದೂರವಾಣಿ ಸಂಖ್ಯೆ: 0824–2492303/ 9480806450 ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಅಧೀಕ್ಷಕರು, ಜಿಲ್ಲಾ ಕಾರಾಗೃಹ ಮಂಗಳೂರು
DIPR/MNG/KSMCA/271/24-25 dt. 19.04.2024

ಸರ್ ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆ

ಇಂದಿರಾನಗರ, ಬೆಂಗಳೂರು – 560 038.
ದೂರವಾಣಿ: 080–25281245, ಇ–ಮೇಲ್:ghibengaluru@gmail.com
ಸಂಖ್ಯೆ: SCVRGH/Diet/Tender/10/2024-25 ದಿನಾಂಕ: 19.07.2024

ಟೆಂಡರ್ ಅಧಿಸೂಚನೆ

ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು, ಇಲ್ಲಿಗೆ 2024–25ನೇ ಸಾಲಿಗೆ Diet ಸಾಮಗ್ರಿಗಳನ್ನು ಸರಬರಾಜು ಮಾಡಲು ಒಂದು ವರ್ಷದ ಅವಧಿಗೆ ಸೇವೆಯನ್ನು ಪಡೆಯಲು ಅರ್ಹ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮುಖಾಂತರ ಇ–ಟೆಂಡರನ್ನು ಆಹ್ವಾನಿಸಲಾಗಿದೆ.
1) ಟೆಂಡರ್ ಕುರಿತ ವಿಚಾರಣೆಗಾಗಿ ಕೊನೆಯ ದಿನಾಂಕ: 31.07.2024ರ ಬೆಳಿಗ್ಗೆ 11.30 ಗಂಟೆಯವರೆಗೆ. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 17.08.2024 ರ ಬೆಳಿಗ್ಗೆ 11.30 ಗಂಟೆಯವರೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19.08.2024 ರ ಬೆಳಿಗ್ಗೆ 11.00 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 21.08.2024 ರ ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ನಮೂನೆಗಳನ್ನು ಅಪ್‌ಲೋಡ್ ಮಾಡಲು ನಿಗದಿಪಡಿಸಿರುವ ಕೊನೆಯ ದಿನವು ಆಕಸ್ಮಿಕವಾಗಿ ಸರ್ಕಾರಿ ರಜಾದಿನವೆಂದು ಘೋಷಣೆಯಾದಲ್ಲಿ ಅದರ ಮುಂದಿನ ದಿನವನ್ನು ಕೊನೆಯ ದಿನಾಂಕವೆಂದು ಪರಿಗಣಿಸುವುದು. ಇದಕ್ಕೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಈ ಆಸ್ಪತ್ರೆಯ ಕಛೇರಿಯಲ್ಲಿ ಎಲ್ಲಾ ಕೆಲಸದ ದಿನಗಳಂದು ಸಂಪರ್ಕಿಸಬಹುದು.

ಸಹಿ/– ವೈದ್ಯಕೀಯ ಅಧೀಕ್ಷಕರು.
ವಾಸಾಸಂಇ/ವಾಪ್ರ/ಜಿಎ/987/2024–25

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ಸಂಖ್ಯೆ: ಕವಿನಿಆ/ಎಫ್–30/ಸಂಪುಟ–10/459 ದಿನಾಂಕ: 19–07–2024

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು ಕವಿನಿಆ (ಸಂಪನ್ಮೂಲ ಪರ್ಯಾಪ್ತತೆಗಾಗಿ ಚೌಕಟ್ಟು) ವಿನಿಯಮಗಳು, 2024 ಮೇಲಿನ ಸಾರ್ವಜನಿಕ ವಿಚಾರಣೆ ಬಗ್ಗೆ.
ವಿದ್ಯುಚ್ಛಕ್ತಿ ಕಾಯಿದೆ, 2003 (2003 ರ 36ನೇ ಕಾಯಿದೆ) ರ ಸೆಕ್ಷನ್ 181 ರ ಅಧಿಕಾರದಡಿಯಲ್ಲಿ ಹಾಗೂ ಈ ಕಾಯಿದೆಯ ಸೆಕ್ಷನ್ 61, 66 ಮತ್ತು 86 ರ ಆಶಯದಂತೆ ಮತ್ತು ಇದರ ಪರವಾಗಿರುವಂತಹ ಇತರೆ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕವಿನಿಆ) ವು, ಕರಡು ಕವಿನಿಆ (ಸಂಪನ್ಮೂಲ ಪರ್ಯಾಪ್ತತೆಗಾಗಿ ಚೌಕಟ್ಟು) ವಿನಿಯಮಗಳು, 2024 ನ್ನು ಅಧಿಸೂಚಿಸಿರುತ್ತದೆ.
ಮೇಲಿನ ಕರಡು ವಿನಿಯಮಗಳು ದಿನಾಂಕ: 14ನೇ ಮೇ 2024 ರಂದು ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ ಮತ್ತು ಈ ಕರಡು ವಿನಿಯಮಗಳು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ ತಾಣ: https://kerc.karnataka.gov.in ದಲ್ಲಿಯೂ ಲಭ್ಯವಿರುತ್ತದೆ.
ಆಯೋಗವು ಈ ವಿಷಯದ ಬಗ್ಗೆ, ಬುಧವಾರ, ದಿನಾಂಕ: 21ನೇ ಆಗಸ್ಟ್ 2024, ಮಧ್ಯಾಹ್ನ 2.00 ಗಂಟೆಗೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ, ಕೋರ್ಟ್ ಹಾಲ್, (ಒಂದನೇ ಮಹಡಿ), ನಂ. 16, ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052 ರಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ. ಆಸಕ್ತರು ಖುದ್ದು ಆಯೋಗದ ಮುಂದೆ ಹಾಜರಾಗಿ ವಿಷಯದ ಮೇಲಿನ ಟೀಕೆ–ಟಿಪ್ಪಣೆ / ಅಭಿಪ್ರಾಯ / ಸಲಹೆ / ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಸಲ್ಲಿಸಲು ಈ ಮೂಲಕ ಕೋರಲಾಗಿದೆ.

ಸಹಿ/– ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾಸಾಸಂಇ/ವಾ.ಪ್ರ/993/2024–25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂ. ಮುಇಂವಿ(ಟಿಮತ್ತುಪಿ)/ಅಇಂ(ವಿ)–1/ಕಾನಿಇಂ–ಟಿ3/ಸಕಾಇಂ–ಪಿ3/2024–25/2487–94 ದಿನಾಂಕ : 19.07.2024

ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಯ ಮೂಲಕ ಕೆಳಕಂಡ ಸರಕು ಗಳಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಮರು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆಗಳ ವಿವರ / ವಿವರಣೆ
ಕವಿಪ್ರನಿನಿ/2024–25/IND0088 (ಮರು ಟೆಂಡರ್).

ಕವಿಪ್ರನಿನಿ ತಾಂತ್ರಿಕ ನಿರ್ದಿಷ್ಟತೆಗೆ ಅನುಗುಣವಾಗಿ 02 ಸೆಟ್‌ಗಳ ವೆಹಿಕಲ್ ಮೌಂಟೆಡ್ ಭೂಗತ ಕೇಬಲ್ ದೋಷ ಪತ್ತೆಕಾರಕ ವ್ಯವಸ್ಥೆಯ ವಿನ್ಯಾಸ, ತಯಾರಿಕೆ, ಪರೀಕ್ಷೆ, ತಪಾಸಣೆ, ಸ್ಥಾಪನೆ, ಕಮಿಷನಿಂಗ್/ ಪ್ರದರ್ಶನ ಹಾಗೂ ಸರಬರಾಜು ಮಾಡಲು.
ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳ ಲಭ್ಯತೆ : ದಿನಾಂಕ : 23.07.2024 ರಂದು ಅಪರಾಹ್ನ 15:00 ಗಂಟೆಗೆ ಅಥವಾ ನಂತರ.
ಬಿಡ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : 22.08.2024 ರಂದು 15:00 ಗಂಟೆ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ "ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್)
ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು–560 009.

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್ ಶಿವಮೊಗ್ಗ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ

ನಂ.ಕಾಇಂ/ಪಂರಾಇಂ/ವಿಸಾ/ಸಾಗರ/ಸೊರಬ/KW-1&2/ಎಇ/ಜೆಇ/2024–25/473 ದಿನಾಂಕ:– 16.07.2024

ಟೆಂಡರ್ ಪ್ರಕಟಣೆ ("ಕೆ.ಪಿ.ಪಿ.ಪಿ" ಮೂಲಕ)

ಈ ವಿಭಾಗದಿಂದ 2023–24 ನೇ ಸಾಲಿನ 5054 ವಿಶೇಷ ಅನುದಾನ ಮತ್ತು 2022–23 ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಐಟಂ ವಾರು ದರಗಳನ್ನು ನಮೂದಿಸಲು ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್/ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ""ಕೆ.ಪಿ.ಪಿ.ಪಿ" ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ "ಕೆ.ಪಿ.ಪಿ.ಪಿ" ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Document for procurement of work K/W-1&2 ರ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಫಾರಂ ಫೀ & ಇ.ಎಂ.ಡಿ.ಯನ್ನು 'ಇ' ಪೇಮೆಂಟ್‌ನಲ್ಲಿ (Credit Card/Direct Debit/NEFT & OTC) ಚಲನ್ ಮೂಲಕ ಭರ್ತಿ ಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕಕ್ಕಿಂತ ಎರಡು ದಿನ ಮುಂಚಿತವಾಗಿ ಸಲ್ಲಿಸುವುದು.
1) ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ:16.07.2024 ರಿಂದ 02.08.2024 ರವರೆಗೆ 2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 02.08.2024 ಸಮಯ 17:00:00 3) ಬಿಡ್ ತೆರೆಯುವ ದಿನಾಂಕ: 03.08.2024 ಸಮಯ 17:01:00. ಕೆ.ಪಿ.ಪಿ.ಪಿ ವೆಬ್‌ಸೈಟ್ ಟೆಂಡರಿನ ವಿವರಗಳನ್ನು ಈ ಕಛೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಇವರ ಕಛೇರಿಯನ್ನು ಸಂಪರ್ಕಿಸುವುದು ಮತ್ತು ಕೆ.ಪಿ.ಪಿ.ಪಿ ವೆಬ್ ಸೈಟ್ (www.kppp.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08183–226064 ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ helpdesk ದೂರವಾಣಿ ಸಂಖ್ಯೆ: 080–25501216, 25501227 ಇವರನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಸಾಗರ,
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/97/07/24–25/288

ಕರ್ನಾಟಕ ಗೃಹ ಮಂಡಳಿ

Karnataka Housing Board – Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 03.08.2024 ಸಂಜೆ 4.00 ಗಂಟೆಗೆ

ಕ್ರಮ ಸಂ.	ಕಾಮಗಾರಿಯ ಹೆಸರು	Work Indent & IFT No.	ಟೆಂಡರಿಗಿಟ್ಟ ಮೊತ್ತ ರೂ. ಗಳಲ್ಲಿ
1	ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕಟ್ಟಡದ ಉನ್ನತೀಕರಣ ಕಾಮಗಾರಿ	Tender Reference Number: KHB/2024-25/BD/Work_Indent 254 & IFT No.27 & 24/2024-25 Date: 19.07.2024.	22,68,14,137/-

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರೆ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು, ದೂರವಾಣಿ: 080-22273511 / 080-22100077, Website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/991/ಆಕಾರ್/2024–25

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–1/ಇ–ಟೆಂಡರ್ ಪ್ರಕಟಣೆ/2024–25/704, ದಿನಾಂಕ: 15.07.2024

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1 & 4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2023–24 ನೇ ಸಾಲಿನ ಕೆಕೆಆರ್‌ಡಿಬಿ (ಯೋಜನೆ) ಅಡಿಯಲ್ಲಿ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ವರ್ಕ ಇಂಡೆಂಟ್ ಸಂಖ್ಯೆ: (1) 11254, (2) 11870, ಟೆಂಡರ್ ಆಹ್ವಾನಿಸಲಾಗಿದೆ. 2) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ರೂ.20.00 ಲಕ್ಷ ಹಾಗೂ ಗರಿಷ್ಠ ರೂ:123.13 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ. 5) ಪ್ರೀ–ಬಿಡ್ ಮೀಟಿಂಗ್ ದಿನಾಂಕ: 22.07.2024 (11.30 ರ ನಂತರ) ಕೆಡಬ್ಲ್ಯೂ–4 ಕಾಮಗಾರಿಗೆ ಮಾತ್ರ 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 24.07.2024 (17.30 ಗಂಟೆವರೆಗೆ) 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 26.07.2024 (16.00 ಗಂಟೆವರೆಗೆ) 8)ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್: 29.07.2024 (11.00 ಗಂಟೆ ನಂತರ) 9) ಆರ್ಥಿಕ ಬಿಡ್ ತೆರೆಯುವ ದಿನಾಂಕ 31.07.2024 (11.00 ಗಂಟೆ ನಂತರ) 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in
ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಯಾದಗಿರಿ
ವಾ.ಸಾ.ಸಂ.ಇ/ಯಾದಗಿರಿ/101/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

Phone: 0836-2215328 ದೂರವಾಣಿ: 0836-2215328
KARNATAKA UNIVERSITY, DHARWAD
ಶಿಷ್ಯವೇತನ ವಿಭಾಗ SCHOLARSHIP SECTION
Pavate Nagar, Dharwad-580 003 ಪಾವಟೆನಗರ ಧಾರವಾಡ–580 003
scholarship@kud.ac.in
Karnataka - India website: www.kud.ac.in fax: 91+0836-2446601
ಕರ್ನಾಟಕ – ಭಾರತ

No: KU/Sch/2024/ Date: 19-07-2024

ಪತ್ರಿಕಾ ಪ್ರಕಟಣೆ

ಕರ್ನಾಟಕ ವಿಶ್ವವಿದ್ಯಾಲಯದ 74 ನೇ ಘಟಿಕೋತ್ಸವ ಸಮಾರಂಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಸುವರ್ಣ ಪದಕಗಳನ್ನು ತಯಾರಿಸಲು ಅರ್ಹ ತಯಾರಕರಿಂದ ಇ–ಟೆಂಡರ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿದಾರರು ದಿನಾಂಕ:30/07/2024 ರಂದು ಸಾಯಂಕಾಲ 4.00 ಗಂಟೆ ಒಳಗಾಗಿ ತಮ್ಮ ಬಿಡ್ ಅನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಯನ್ನು www.eproc.karnataka.gov.in ನಿಂದ ಪಡೆಯಬಹುದು.

ಸಹಿ/– ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ)
ನಂ.ಎಚ್‌ಡಿಎಂಸಿ:100:01/OCMS/ದರಗಳು/2024–25 ದಿನಾಂಕ: 19/07/2024

ದರವಾರು ಆಹ್ವಾನ ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿಗೆ (ಎಸ್.ಟಿ.ಪಿ) Online Continous Effluent Monitoring System (OCEMS) ವ್ಯವಸ್ಥೆ ಮತ್ತು ಇತರೆ ಪೂರಕ ಉಪಕರಣಗಳನ್ನು ಅಳವಡಿಸಲು ಮಾರುಕಟ್ಟೆಯ ತುಲನಾತ್ಮಕ ದರಗಳನ್ನು ಇಚ್ಛೆಯುಳ್ಳ ಅಧಿಕೃತ ನೋಂದಾಯಿತ ತಯಾರಕರು ವ ಪೂರೈಕೆದಾರರು ತಮ್ಮ ದರಗಳನ್ನು ಸೀಲಬಂದ ಕೊಟೇಶನ್ ಮೂಲಕ ದಿನಾಂಕ:26/07/2024 ರ ಅಪರಾಹ್ನ 5.00 ಗಂಟೆಯ ಒಳಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಹು.ಧಾ.ಮ.ಪಾ ರವರ ಕಚೇರಿಗೆ ಖುದ್ದಾಗಿ ಅಥವಾ ಅಂಚೆ ಮುಖಾಂತರ ಅಥವಾ ಮಿಚಂಚೆ ವಿಳಾಸ (projecthdmc1@gmail.com) ಮೂಲಕ ಸಲ್ಲಿಸುವಂತೆ ಈ ಮೂಲಕ ಕೋರಿದೆ. ತಾಂತ್ರಿಕ ನಿರ್ದಿಷ್ಟತೆಗಳ ವಿವರಗಳಿಗಾಗಿ ಹು.ಧಾ.ಮ.ಪಾಲಿಕೆಯ ಅಂತರ್ಜಾಲ ವಿಳಾಸ http://www.hdmc.mrc.gov.in/en/tenders ದಲ್ಲಿ ದಿನಾಂಕ: 20/07/2024 ರಿಂದ ಪಡೆದುಕೊಳ್ಳಬಹುದಾಗಿದೆ. ದಿನಾಂಕ:29/07/2024 ರಂದು ಹಾಜರಿದ್ದವರ ಸಮ್ಮುಖದಲ್ಲಿ ಕೋಟೇಶನ್ ತೆರೆಯಲಾಗುವುದು. ಇಚ್ಛೆಯುಳ್ಳ ಅಧಿಕೃತ ನೋಂದಾಯಿತ ತಯಾರಕರು ವ ಪೂರೈಕೆದಾರರು ತಮ್ಮ ಮಾರುಕಟ್ಟೆ ದರಗಳೊಂದಿಗೆ ಸೂಚಿಸಬಹುದು. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಪಾಲಿಕೆ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ವಾ.ಸಾ.ಇ/ಧಾರವಾಡ/180/ದೇಶಪಾಂಡೆಪಬ್ಲಿಸಿಟಿ/2024–25
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ), ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ನಿರ್ದೇಶನಾಲಯ
ನಂ.16ಸಿ, ಮೌಲಾನಾ ಅಜಾದ್ ಭವನ, ಮಿಲ್ಲರ್ ಟ್ಯಾಂಕ್ ರಸ್ತೆ, ವಸಂತನಗರ, ಬೆಂಗಳೂರು–560052. ದೂರವಾಣಿ : 080–22535901/918/
ಸಹಾಯವಾಣಿ: 8277799990

ಪ್ರಕಟಣೆ

ಸಂಖ್ಯೆ: ಅಸಂನಿ/ಅ/ವಿನಿದಾಖಲಾತಿ/ಸಿಆರ್–43/2024–25 ದಿನಾಂಕ: 19.07.2024

2024–25ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಆಹ್ವಾನಿಸುವ ಕುರಿತು.

ಆನ್‌ಲೈನ್ ಅರ್ಜಿ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಅಲ್ಪಸಂಖ್ಯಾತರ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್ಖ್, ಬೌದ್ಧ ಮತ್ತು ಪಾರ್ಸಿ) ಹಾಗೂ ಇತರೆ ಸಮುದಾಯಗಳ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳು) ವಿದ್ಯಾರ್ಥಿಗಳಿಂದ 2024–25ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ:	ರೂ.2.50 ಲಕ್ಷಗಳು

- ವಿದ್ಯಾರ್ಥಿಗಳು https://shp.karnataka.gov.in ಅನ್ನು ಸಂಪರ್ಕಿಸಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು.

ಕೊನೆಯ ದಿನಾಂಕ

ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ	31.07.2024
ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಿಗೆ (ಪಿಯುಸಿ ಮತ್ತು ಪಿಯುಸಿ ಸಮಾನಾಂತರ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ)	05.08.2024

- ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆಗಳ ವಿವರಕ್ಕಾಗಿ Website: https://dom.karnataka.gov.in ಅನ್ನು ನೋಡಬಹುದು.
- ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ Email: directorgokdom@gmail.com ಮುಖಾಂತರ ಅಥವಾ ಇಲಾಖೆಯ Website: https://dom.karnataka.gov.in ಅನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾಪ್ರ/994/24–25

ಲಾಂಛನ ಬಿಡುಗಡೆ

ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಬಿಡುಗಡೆ ಮಾಡಿದರು. ಲಾಂಛನ ಸಿದ್ಧಪಡಿಸಿದ ಕಲಾವಿದ ಶಂಕರ್, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ವಿಧಾನ ಪರಿಷತ್ತಿನ ಸದಸ್ಯ ದಿನೇಶ್ ಗೂಳಿಗೌಡ, ಕಸಾಪ ಅಧ್ಯಕ್ಷ ಮಹೇಶ ಜೋಶಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಉಪಸ್ಥಿತರಿದ್ದರು

ಹಳಿ ಮೇಲೆ ಮದ್ಯ ಸೇವನೆ; ರೈಲು ಹರಿದು ಮೂವರ ಸಾವು

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಇಲ್ಲಿನ ಕನಕಗಿರಿ ರಸ್ತೆಯ ಓವರ್‌ಬ್ರಿಡ್ಜ್ ಸಮೀಪದ ರೈಲು ಹಳಿಯ ನಡುವೆ ಕುಳಿತು ಗುರುವಾರ ರಾತ್ರಿ ಮದ್ಯಪಾನ ಮಾಡುತ್ತಿದ್ದ ವೇಳೆ ರೈಲಿಗೆ ಸಿಲುಕಿ ಮೂವರು ಯುವಕರು ಮೃತಪಟ್ಟಿದ್ದಾರೆ.

ಸುನೀಲ್

ಮೌನೇಶ ಪತ್ತಾರ

ವೆಂಕಟ್ ಮಂಗಳೂರು

ಗಂಗಾವತಿಯ ಮೌನೇಶ ಪತ್ತಾರ (23), ಸುನೀಲ್ ತಿಮ್ಮಣ್ಣ (23) ಹಾಗೂ ವೆಂಕಟ್ ಮಂಗಳೂರು (20) ಮೃತರು. ಈ ರೈಲು ಹುಬ್ಬಳ್ಳಿಯಿಂದ ಗಂಗಾವತಿ, ಕಾರಟಗಿ ಮಾರ್ಗವಾಗಿ ಸಿಂಧನೂರಿಗೆ ತೆರಳುತ್ತಿತ್ತು.

'ಇವರು ಕುಳಿತಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ತಿರುವು ಇರುವುದರಿಂದ ರೈಲು ಬರುವುದು ಕುಳಿತವರಿಗೆ ಕಾಣಿಸಿಲ್ಲ. ಹತ್ತಿರ ಬಂದಾಗ ರೈಲು ನಿಲ್ಲಿಸಲು ಲೋಕೊಪೈಲಟ್‌ಗೆ ಸಾಧ್ಯವಾಗಿಲ್ಲ. ಹೀಗಾಗಿ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪ್ರಕರಣ ದಾಖಲಿಸಿಕೊಂಡಿರುವ ಗದಗ ರೈಲ್ವೆ ಠಾಣೆ ಪೊಲೀಸರು ತಿಳಿಸಿದ್ದಾರೆ.

ಅಂಗನವಾಡಿಗಳು ಇನ್ನು 'ಸರ್ಕಾರಿ ಮಾಂಟೆಸ್ಸರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿಗಳಲ್ಲಿಯೇ ಎಲ್‌ಕೆಜಿ/ಯುಕೆಜಿ ಶಿಕ್ಷಣ ನೀಡಲು ನಿರ್ಧರಿಸಿರುವ ಸರ್ಕಾರವು ಈ ಅಂಗನವಾಡಿಗಳಿಗೆ 'ಸರ್ಕಾರಿ ಮಾಂಟೆಸ್ಸರಿ' ಎಂದು ಹೊಸದಾಗಿ ನಾಮಕರಣ ಮಾಡಲಿದೆ. ಜುಲೈ 22ರಂದು ಮೊದಲ ಹಂತ ಆರಂಭಗೊಳ್ಳಲಿದೆ.

ಶಿಕ್ಷಣ ಇಲಾಖೆಯು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿಯೇ ಎಲ್‌ಕೆಜಿ, ಯುಕೆಜಿ ಶಿಕ್ಷಣವನ್ನು ತೆರೆಯಲು ನಿರ್ಧರಿಸಿತ್ತು. ಅದಕ್ಕೆ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ಶಾಲೆಗಳಲ್ಲಿಯೇ ಪೂರ್ವ ಪ್ರಾಥಮಿಕ ಕೇಂದ್ರಗಳನ್ನು ತೆರೆದರೆ ಅಂಗನವಾಡಿಗಳೇ ಇಲ್ಲವಾಗುತ್ತವೆ. ಅಂಗನವಾಡಿಗಳಲ್ಲಿಯೇ ಎಲ್‌ಕೆಜಿ, ಯುಕೆಜಿ ಶಿಕ್ಷಣ ಆರಂಭಿಸಿ ಎಂದು ಒತ್ತಾಯಿಸಿದ್ದವು.

ಸಂಘಟನೆಗಳ ಆಗ್ರಹಕ್ಕೆ ಸ್ಪಂದಿಸಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅಂಗನವಾಡಿಗಳಲ್ಲಿ ಎಲ್‌ಕೆಜಿ, ಯುಕೆಜಿ ತೆರೆಯಲು ಒಪ್ಪಿಗೆ ನೀಡಿದೆ.

ರಾಜ್ಯದಲ್ಲಿ 61,876 ಅಂಗನವಾಡಿಗಳಿವೆ. ಅದರಲ್ಲಿ ಉನ್ನತ ಶಿಕ್ಷಣ ಪಡೆದವರು 1,682 ಅಂಗನವಾಡಿಗಳಲ್ಲಿ ಕಾರ್ಯಕರ್ತೆಯರಿದ್ದಾರೆ. 6,363 ಅಂಗನವಾಡಿಗಳ ಕಾರ್ಯಕರ್ತೆಯರು ಪದವಿ ಶಿಕ್ಷಣ ಪಡೆದವರು. ಮೊದಲ ಹಂತದಲ್ಲಿ ಈ ಅಂಗನವಾಡಿಗಳಲ್ಲಿ ಎಲ್‌ಕೆಜಿ/ಯುಕೆಜಿ ಶಿಕ್ಷಣ ಆರಂಭಗೊಳ್ಳಲಿದೆ. ಬೆಂಗಳೂರಿನ 250 'ಸರ್ಕಾರಿ ಮಾಂಟೆಸ್ಸರಿ'ಗಳಿಗೆ ಜುಲೈ 22ರಂದು ಚಾಲನೆ ದೊರೆಯಲಿದೆ.

ಪಿಯುಸಿ ವಿದ್ಯಾರ್ಹತೆ ಹೊಂದಿರುವ 15,217 ಅಂಗನವಾಡಿ ಕಾರ್ಯಕರ್ತೆಯರಿದ್ದಾರೆ. ಅಲ್ಲಿ ಎರಡನೇ ಹಂತದಲ್ಲಿ 'ಸರ್ಕಾರಿ ಮಾಂಟೆಸ್ಸರಿ' ಆರಂಭಗೊಳ್ಳಲಿದೆ. 38,614 ಅಂಗನವಾಡಿಗಳಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಕಾರ್ಯಕರ್ತೆಯರಿದ್ದು, ಈ ಅಂಗನವಾಡಿಗಳು ಮೂರನೇ ಹಂತದಲ್ಲಿ 'ಸರ್ಕಾರಿ ಮಾಂಟೆಸ್ಸರಿ'ಗಳಾಗಲಿವೆ.

'ಅಂಗನವಾಡಿ ಎಂದರೆ ಜನರಿಗೆ ಪಾಲನೆ–ಪೋಷಣೆಯ ಕೇಂದ್ರ ಎಂದು ಮನಸ್ಸಲ್ಲಿ ಬರುವುದರಿಂದ 'ಸರ್ಕಾರಿ ಮಾಂಟೆಸ್ಸರಿ' ಹೆಸರು ಇಡಲಾಗಿದೆ. ಪ್ರತಿ 'ಸರ್ಕಾರಿ ಮಾಂಟೆಸ್ಸರಿ'ಗೆ ₹3.5 ಲಕ್ಷ ಅನುದಾನ ದೊರೆಯಲಿದ್ದು, ಕಾರ್ಯಕರ್ತೆಯರಿಗೆ ತರಬೇತಿ, ಮಕ್ಕಳಿಗೆ ಸಮವಸ್ತ್ರ, ಶೂ, ಬ್ಯಾಗ್‌ಗಳ ವಿತರಣೆಯಾಗಲಿದೆ. ನಮ್ಮ ಹೋರಾಟದ ಫಲ ಇದು' ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್.ವರಲಕ್ಷ್ಮೀ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ

ರಾಮನಗರ ಜಿಲ್ಲಾ ಪಂಚಾಯತ್, ಕಾರ್ಯಪಾಲಕ ಅಭಿಯಂತರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 11/369–378/2024–25 ದಿನಾಂಕ : 08–07–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾವಣೆ ಮಾಡಿಸಿಕೊಂಡಿರುವ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರ ಇಲ್ಲಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಹಾಗೂ ಸರ್ಕಾರಿ ನೊಂದಾಯಿತ ಕಂಪನಿಯವರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ : https://kppp.karnataka.gov.in ಮುಖಾಂತರ ಈ ಕಛೇರಿ ವ್ಯಾಪ್ತಿಯಲ್ಲಿ ರಾಮನಗರ ಜಿಲ್ಲೆಯ, ಕನಕಪುರ ಮತ್ತು ಹಾರೋಹಳ್ಳಿ ತಾಲ್ಲೂಕಿನಲ್ಲಿ ಲೆಕ್ಕ ಶೀರ್ಷಿಕೆ : ವಿವಿಧ ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕನಿಷ್ಠ ಅಂದಾಜು ಮೊತ್ತ ರೂ. 27.80 ಲಕ್ಷಗಳು, ಗರಿಷ್ಠ ಅಂದಾಜು ಮೊತ್ತ ರೂ. 100.00 ಲಕ್ಷಗಳು, ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : 25–07–2024 ರ ಸಂಜೆ 4.00 ಗಂಟೆಯವರೆಗೆ. ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 26–07–2024 ರ ಸಂಜೆ 4.30 ಗಂಟೆಯ ನಂತರ. (ಕೆ.ಡಬ್ಲ್ಯೂ–2, ಕೆ.ಡಬ್ಲ್ಯೂ–3), ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 29–07–2024 ರ ಸಂಜೆ 4.30 ಗಂಟೆಯ ನಂತರ. (ಕೆ.ಡಬ್ಲ್ಯೂ–3). ಇತರೆ ಮಾಹಿತಿಗಳನ್ನು ಈ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/173/ಮಣಿಪಾಲ್/2024–25

ಪೊಲೀಸ್ ಇಲಾಖೆ

ಡೈರೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಛೇರಿ, ಅಂತರಿಕ ಭದ್ರತಾ ವಿಭಾಗ, ನಂ.60, ರಿಚ್‌ಮಂಡ್ ರಸ್ತೆ, ಬೆಂಗಳೂರು–560025.
ಸಂ: 09/ಸಿಎಸ್‌ಪಿ/ಐಎಸ್‌ಡಿ/2023–24 ದಿನಾಂಕ: 19.07.2024

ಇ–ಟೆಂಡರ್ ನೋಟೀಸ್

ಕರಾವಳಿ ಕಾವಲು ಪೊಲೀಸ್ (ಸಿಎಸ್‌ಪಿ), ಉಡುಪಿ ಘಟಕದ 02 ಸಂಖ್ಯೆಯ 12 ಟನ್ ಇಂಟರ್‌ಸೆಪ್ಟರ್ ಬೋಟುಗಳಿಗೆ ಮಿಡ್‌ಲೈಫ್ ಅಪ್‌ಗ್ರೇಡೇಷನ್ ಸರ್ವೀಸ್ ಅನ್ನು ಕೆ.ಟಿ.ಪಿ.ಪಿ ಕಾಯಿದೆ ಪ್ರಕಾರ ಕರ್ನಾಟಕ ಸರ್ಕಾರದ https://kppp.karnataka.gov.in ಇ–ಟೆಂಡರ್ ಪ್ರಕ್ರಿಯೆ ಮೂಲಕ ನೀಡಲು ಅರ್ಜಿಯನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್‌ನ ಸಂಕ್ಷಿಪ್ತ ವಿವರ
1	KSP/ 2024-25/ SE0025	Providing Midlife Upgradation for 02 Nos. 12 TON Interceptor Boats of Coastal Security Police, Karnataka.

ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ: 03.08.2024 ಸಂಜೆ 17:00 ಗಂಟೆಯವರೆಗೆ.

ಸದರಿ ಸರ್ವೀಸ್ ಅನ್ನು ನೀಡಲು ಇಚ್ಛಿಸುವವರು ಇ–ಖರೀದಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಖರೀದಿ ಪ್ಲಾಟ್‌ಫಾರಂನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.
ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಸಹಾಯವಾಣಿ: +91–8046010000/+91–8068948777 ಗೆ ಸಂಪರ್ಕಿಸತಕ್ಕದ್ದು.

ಸಹಿ/– ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಅಂತರಿಕ ಭದ್ರತಾ ವಿಭಾಗ ರವರ ಪರವಾಗಿ
DIPR/CP/976/Maa/2024-25

ನನ್ನ ಹೆಸರಿಗೆ ಮಸಿ ಬಳಿಯುವುದೇ ಬಿಜೆಪಿ ಹುನ್ನಾರ: ಸಿದ್ದರಾಮಯ್ಯ ಆಕ್ರೋಶ

ಬಿಜೆಪಿ ಅವಧಿಯ ಎಲ್ಲ ಹಗರಣ ತನಿಖೆ: ಸಿಎಂ

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಹಗರಣದ ವಿಚಾರದಲ್ಲಿ ಬಿಜೆಪಿ ಹುನ್ನಾರ ನಡೆಸಿದೆ. ನನ್ನ ಹೆಸರಿಗೆ ಮಸಿ ಬಳಿಯುವುದೇ ಅವರ ಉದ್ದೇಶ. ಬಿಜೆಪಿ ಅವಧಿಯ ಎಲ್ಲ ಹಗರಣಗಳನ್ನು ತನಿಖೆಗೆ ಒಪ್ಪಿಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಕುರಿತು ವಿಪಕ್ಷಗಳ ಆರೋಪಕ್ಕೆ ಶುಕ್ರವಾರ ಸುದೀರ್ಘ ಉತ್ತರ ನೀಡಿದ ಅವರು, 'ನಮ್ಮ ಸರ್ಕಾರವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿರುದ್ಧದ ಸರ್ಕಾರ ಎಂದು ಬಿಂಬಿಸುವುದು ಬಿಜೆಪಿ ಉದ್ದೇಶ' ಎಂದು ಹರಿಹಾಯ್ದರು.

ಬಿಜೆಪಿ, ಆ ಪಕ್ಷದ ನಾಯಕತ್ವ ಸಂವಿಧಾನ ಜಾರಿಗೆ ಬಂದ ದಿನದಿಂದಲೂ ದಮನಿತ ಸಮುದಾಯಗಳ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿರುದ್ಧವಾಗಿದೆ. ಮಹಿಳೆಯರ ವಿರುದ್ಧವಾಗಿದೆ. ದಮನಿತರ ಪರವಾದ ನಿಲುವು, ಪ್ರತಿಯೊಂದು ಕಾಯ್ದೆ, ಯೋಜನೆಗಳನ್ನು ಜಾರಿಗೆ ತಂದಿದ್ದು ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಎಂದು ಬಲವಾಗಿ ಪ್ರತಿಪಾದಿಸಿದರು.

ಇದೇ ಬಿಜೆಪಿ ಆಡಳಿತದಲ್ಲಿದ್ದಾಗ ಯಾವ ಯಾವ ನಿಗಮಗಳಲ್ಲಿ ಏನೇನೆಲ್ಲ ನುಂಗಿದ್ದಾರೆ ಎಂಬ ಚರ್ಚೆಯೂ ನಡೆಯುತ್ತಿದೆ. ನುಂಗುವುದರಲ್ಲಿ ಜಾಣರಾಗಿರುವ ಬಿಜೆಪಿಯವರು ತಮ್ಮ ಅಜೆಂಡಾ ಸಾಧಿಸಿಕೊಳ್ಳಲು ಯಾವ ಸುಳ್ಳನ್ನು ಬೇಕಾದರೂ ಹೇಳಬಲ್ಲರು ಎಂಬುದು ಸಾಬೀತಾಗಿದೆ ಎಂದು ಕುಟುಕಿದರು.

ರಾಜ್ಯ ಸರ್ಕಾರವು ಸಿಬಿಐನವರು ಎಫ್‌ಐಆರ್ ದಾಖಲಿಸಿ ಮೇಲೆ ಎಸ್‌ಐಟಿ ರಚಿಸಿದೆ ಎಂದು ಬಿ.ವೈ. ವಿಜಯೇಂದ್ರ ಸುಳ್ಳು ಹೇಳಿದ್ದಾರೆ. ವಾಸ್ತವವಾಗಿ ಹೈಗ್ರೌಂಡ್ಸ್ ಪೊಲಿಸ್ ಠಾಣೆಯಲ್ಲಿ 28.05.24 ರಂದು ಕ್ರೈಮ್ ನಂ 118/2024 ರಂತೆ ಎಫ್‌ಐಆರ್ ದಾಖಲಾಗಿದೆ. ರಾಜ್ಯ ಸರ್ಕಾರ 31.05.24 ರಂದು ಆದೇಶ ಹೊರಡಿಸಿ ಎಸ್‌ಐಟಿ ರಚಿಸಿದೆ. ಸಿಬಿಐ 03.06.24 ರಂದು ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಸಿದ್ದರಾಮಯ್ಯ ವಿವರಿಸಿದರು.

ಜೂನ್ 3 ರಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಜನರಲ್ ಮ್ಯಾನೇಜರ್ ಗಿರೀಶ್ ಚಂದ್ರ ಅವರು ಎಂ.ಜಿ.ರಸ್ತೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ಮ್ಯಾನೇಜರ್ ಶುಚಿಸ್ಮಿತಾ ರಾವುಲ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೇ ತನಿಖೆ ನಡೆಸುವಂತೆ ಸಿಬಿಐಗೂ ಪತ್ರ ಬರೆದಿದ್ದಾರೆ. ಸಿಬಿಐಗೆ ಬರೆದಿರುವ ಪತ್ರದ ಮುಖ್ಯಾಂಶದ ಪ್ರಕಾರ, ಬ್ಯಾಂಕಿನವರೇ ಒಪ್ಪಿಕೊಂಡಿರುವಂತೆ ಬ್ಯಾಂಕಿನ ಸಿಬ್ಬಂದಿಯು ನೇರವಾಗಿ ಹಗರಣದಲ್ಲಿ ಶಾಮೀಲಾಗಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಮಹರ್ಷಿ ವಾಲ್ಮೀಕಿ ನಿಗಮದ ಪ್ರಧಾನ ವ್ಯವಸ್ಥಾಪಕ ಎ. ರಾಜಶೇಖರ ಅವರು ಮೇ 28ರಂದು ನಿಗಮದ ಹಣ ಖಾಲಿ ಆಗಿರುವುದರ ಕುರಿತು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಅಲ್ಲದೇ, ನಿಗಮದಲ್ಲಿ ನಡೆದ ಅವ್ಯವಹಾರ ಕುರಿತು ರಾಜಶೇಖರ ಅವರು ಯೂನಿಯನ್ ಬ್ಯಾಂಕಿನ ಎಂ.ಡಿ ಮತ್ತು ಸಿಇಓ ಎ.ಮಣಿಮೇಖಲೈ, ನಿತೇಶ್ ರಂಜನ್, ರಾಮಸುಬ್ರಮಣ್ಯಂ, ಸಂಜಯ್ ರುದ್ರ, ಪಂಕಜ್ ದ್ವಿವೇದಿ, ಸುಚಿಸ್ಮಿತಾ ರಾವುಲ್ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ ಎಂದರು.

ವಿಧಾನ ಸಭೆಯ ಕಲಾಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರೋಧ ಪಕ್ಷದ ಸದಸ್ಯರ ವಿರುದ್ಧ ಹರಿಹಾಯ್ದರು

'ಖದೀಮ ಮ್ಯಾನೇಜರ್‌ಗಳ ಮಟ್ಟ ಹಾಕದ ಮೋದಿ ಸರ್ಕಾರ'

ನರೇಂದ್ರ ಮೋದಿ ಸರ್ಕಾರ ಖದೀಮ ಬ್ಯಾಂಕ್ ಮ್ಯಾನೇಜರ್‌ಗಳನ್ನು ಮಟ್ಟ ಹಾಕಿದ್ದರೆ ಇಂದು ದೇಶದಲ್ಲಿ ಈ ರೀತಿಯ ಪ್ರಕರಣಗಳು ನಡೆಯುತ್ತಿದ್ದವೆ? ದೇಶದ ಎಷ್ಟೊಂದು ಬ್ಯಾಂಕ್‌ಗಳಲ್ಲಿ ಈ ರೀತಿಯ ಪ್ರಕರಣಗಳು ನಡೆದಿವೆ ಎಂಬ ಮಾಹಿತಿಯನ್ನು ಆರ್‌ಬಿಐ ಪ್ರಕಟಿಸಬೇಕು ಆಗ ಸತ್ಯಾಂಶ ಹೊರಬರುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು.

ನಮ್ಮ ಸರ್ಕಾರ ಪರಿಶಿಷ್ಟ ಜಾತಿ, ಪಂಗಡ, ದಮನಿತ ಸಮುದಾಯದವರಿಗೆ ಒದಗಿಸಿದ ಪ್ರತಿ ಪೈಸೆಯನ್ನೂ ಖರ್ಚು ಮಾಡುತ್ತೇವೆ ಮತ್ತು ಗುಣಾತ್ಮಕವಾಗಿ ವಿನಿಯೋಗಿಸುತ್ತೇವೆ ಹಾಗೂ ಈ ಪ್ರಕರಣದಲ್ಲಿ ಭಾಗಿಯಾಗಿರುವ ಕಳ್ಳರು ಯಾರೇ ಇದ್ದರೂ ಅವರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುತ್ತೇವೆ ಎಂದು ಅವರು ಎಚ್ಚರಿಸಿದರು.

ಅಕ್ರಮ ನಡೆದಿದೆ ಎಂದು ಗೊತ್ತಾದ ಕೂಡಲೇ ಎಫ್‌ಐಆರ್ ದಾಖಲಾಗಿದೆ. ಅಕ್ರಮದ ಕುರಿತು ತನಿಖೆ ನಡೆಸಲು ಸಮರ್ಥ ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ ಮೇ 31 ರಂದು ಎಸ್‌ಐಟಿ ರಚಿಸಿದ್ದೇವೆ. ಮೇಲಿನ ಎರಡೂ ಕ್ರಿಮಿನಲ್ ಕೇಸ್‌ಗಳನ್ನು ತನಿಖೆ ಮಾಡುವ ಉದ್ದೇಶದಿಂದಲೇ 4 ಜನ ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ. ಎಚ್.ಡಿ 64 ಸಿಐಡಿ 2024 ರ ಆದೇಶದಂತೆ ಈ ತಂಡ ರಚನೆ ಆಗಿದೆ ಎಂದು ಹೇಳಿದರು.

'ಪದ್ಮನಾಭ ಆರೋಪ ಮುಕ್ತಗೊಳಿಸಿದ್ದ ಬಿಜೆಪಿ ಸರ್ಕಾರ'

ವಾಲ್ಮೀಕಿ ನಿಗಮದ ಹಗರಣದ ಆರೋಪಿಯಾಗಿರುವ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭ 2017-18 ನೇ ಸಾಲಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರಾಗಿದ್ದಾಗ ₹4.96 ಕೋಟಿಗೂ ಹೆಚ್ಚು ಅವ್ಯವಹಾರ ನಡೆಸಿದ್ದ ಆರೋಪದ ಮೇಲೆ ಅಮಾನತ್ತುಗೊಂಡಿದ್ದ. ಅವರನ್ನು ಬಿಜೆಪಿ ಸರ್ಕಾರ ಆರೋಪ ಮುಕ್ತಗೊಳಿಸಿ ಆದೇಶಿಸಿತ್ತು. ಆ ಪ್ರಕರಣವನ್ನು ಸರಿಯಾಗಿ ನಿಭಾಯಿಸಿದ್ದರೆ ಆತ ಆರೋಪ ಮುಕ್ತನಾಗುತ್ತಿದ್ದನೆ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಸಂಖ್ಯಾತ ಹಗರಣಗಳು ನಡೆದಿವೆ. ಕೆಲವು ಮುಖ್ಯ ಹಗರಣಗಳ ಮಾಹಿತಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ತಿಂದವರು ತಿಂದುಕೊಂಡು ಹೋಗಲಿ ಬಿಡು ಎಂದು ಬಿಡುವುದಕ್ಕೆ ನಮ್ಮದು ಯಡಿಯೂರಪ್ಪನವರ ಸರ್ಕಾರ ಅಲ್ಲ, ಬೊಮ್ಮಾಯಿ ಸರ್ಕಾರವೂ ಅಲ್ಲ, ಮೋದಿ ಸರ್ಕಾರವೂ ಅಲ್ಲ. ಯಾರೇ ತಪ್ಪೆಸಗಿದ್ದರೂ ಅವರನ್ನು ಬಿಡುವ ಪ್ರಶ್ನೆಯೇ ಇಲ್ಲ ಎಂದು ಅವರು ಹೇಳಿದರು.

'ಇವರೇ ಕಾರಣಕರ್ತರು ಎಂದು ಹೇಳುವುದು ತಪ್ಪು'

'ತನಿಖೆಯ ಹಂತದಲ್ಲಿ ಯಾವುದೇ ವ್ಯಕ್ತಿಯ ಬಗ್ಗೆ ಸ್ಪಷ್ಟವಾಗಿ ಇವರೇ ಕಾರಣಕರ್ತರು ಎಂದು ಹೇಳುವುದು ತಪ್ಪಾಗುತ್ತದೆ ಮತ್ತು ತನಿಖಾ ಸಂಸ್ಥೆಯ ತನಿಖೆಯ ದಾರಿ ತಪ್ಪಿಸಿದಂತಾಗುತ್ತದೆ' ಎಂದು ಸಿದ್ದರಾಮಯ್ಯ ತಿಳಿಸಿದರು.

ತನಿಖೆ ಮುಗಿಯುವವರೆಗೂ ಕಾಯಬೇಕಾಗುತ್ತದೆ. ಆನಂತರ ತನಿಖೆಯ ಫಲಿತಾಂಶದ ಆಧಾರದ ಮೇಲೆ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಮತ್ತು ನಿಗಮಕ್ಕೆ ಹಣ ವಾಪಸ್ ಪಡೆಯುವ ಕೆಲಸ ಮಾಡಲಾಗುವುದು ಎಂದರು.

ರಾಜ್ಯ ಸರ್ಕಾರವು ವಾಲ್ಮೀಕಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ.ಪದ್ಮನಾಭ ಹಾಗೂ ಲೆಕ್ಕಾಧೀಕ್ಷಕ ಪರಶುರಾಮ್ ದುರ್ಗಣ್ಣನವರ್ ಅವರನ್ನು ಅಮಾನತ್ತು ಮಾಡಿದೆ. ಎಸ್‌ಐಟಿಯು ಅವರನ್ನು ಜೈಲಿಗಟ್ಟಿದೆ. ಇಲಾಖೆ ಸಚಿವರಾಗಿದ್ದ ನಾಗೇಂದ್ರ ಅವರು ರಾಜೀನಾಮೆ ನೀಡಿ ವಿಚಾರಣೆ ಎದುರಿಸುತ್ತಿದ್ದಾರೆ. ಅವರನ್ನು ಇ.ಡಿ ಬಂಧಿಸಿದೆ. ಅದೇ ರೀತಿ ಬ್ಯಾಂಕಿನ ಸಿಬ್ಬಂದಿಯನ್ನೂ ಎಸ್‌ಐಟಿಯವರೇ ಬಂಧಿಸಿ ಜೈಲಿಗೆ ಅಟ್ಟಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

Advertorial

ಬಿಜೆಪಿ ಅವಧಿಯಲ್ಲಿ ಹಗರಣಗಳ ಸರಮಾಲೆ: ಸಿದ್ದರಾಮಯ್ಯ



ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರ ನಡೆಸಿದ ಅವಧಿಯಲ್ಲಿ ಸಾವಿರಾರು ಕೋಟಿ ಮೊತ್ತದ ಹಗರಣಗಳ ಸರಮಾಲೆಯೇ ನಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮದ ಕುರಿತು ವಿಧಾನಸಭೆಯಲ್ಲಿ ವಿರೋಧ ಪಕ್ಷಗಳು ಮಾಡಿದ ಆರೋಪಗಳಿಗೆ ಸರ್ಕಾರದ ಪರವಾಗಿ ಶುಕ್ರವಾರ ಉತ್ತರ ನೀಡಿದ ಸಿದ್ದರಾಮಯ್ಯ ಅವರು, ಲಿಖಿತ ಭಾಷಣವನ್ನು ಓದಿದರು.

2008-2013 ಹಾಗೂ 2019-2023ರ ಅವಧಿಯ ಬಿಜೆಪಿ ಆಡಳಿತದ ಹಲವು ಹಗರಣಗಳು ಬಯಲಾಗುತ್ತಲೇ ಇವೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಸಾವಿರಾರು ಕೋಟಿ ಮೊತ್ತದ ಅಕ್ರಮವೇ ನಡೆದಿತ್ತು ಎಂದು ವಿವರ ನೀಡುವ ಮಾಹಿತಿಯನ್ನು ಪ್ರದರ್ಶಿಸಿದರು.

ಗುರು ರಾಘವೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಹಗರಣದಲ್ಲಿ ಬಡ ಜನರ ಸಾವಿರಾರು ಕೋಟಿ ಹಣವನ್ನು ದೋಚಿದವರನ್ನು ಇ.ಡಿ, ಐಟಿ ಹಾಗೂ ಸಿಬಿಐ ಬಂಧಿಸುವ ಕೆಲಸ ಮಾಡಿಲ್ಲ. ಜಯನಗರ, ಬಸವನಗುಡಿಯ ಬೀದಿ ಬದಿಯ ಕೆಲ ಕಳ್ಳರು ವಿಧಾನಸೌಧ, ಸಂಸತ್‌ಗೂ ಆಯ್ಕೆಯಾಗಿ ಹೋಗಿದ್ದಾರೆ ಎಂದೂ ಅವರು ಮಂಡನೆ ಮಾಡಿದ ದಾಖಲೆಯಲ್ಲಿ ವಿವರಿಸಿದರು.

ಆರ್.ಅಶೋಕ ಅವರು ಕಂದಾಯ ಸಚಿವರಾಗಿದ್ದಾಗ ಅವರ ಆಪ್ತ ಸಹಾಯಕರಾಗಿದ್ದ ಶೃಂಗೇರಿಯ ಸಬ್ ರಿಜಿಸ್ಟ್ರಾರ್ ಎಚ್.ಎಸ್. ಚಲುವರಾಜ್ ಲಂಚ ಕೇಳಿದ್ದ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದರು. ಅಶೋಕ್ ಮೇಲಿನ ಭೂ ಹಗರಣ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿದೆ. ಕೃಷಿ ಸಚಿವರಾಗಿದ್ದ ಬಿ.ಸಿ. ಪಾಟೀಲ್ ಕೃಷಿ ಇಲಾಖೆಯ ನೌಕರರೇ ಲಂಚ ಕೇಳುತ್ತಿದ್ದಾರೆ ಎಂದು ರಾಜ್ಯಪಾಲರಿಗೆ ಪತ್ರ ಬರೆದಿದ್ದರು ಎಂದೂ ಹೇಳಿದರು.

ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಬಿಜೆಪಿ ಅವಧಿಯಲ್ಲಿ ₹40 ಸಾವಿರ ಕೋಟಿಗೂ ಹೆಚ್ಚು ಹಗರಣ ನಡೆದಿದೆ ಎಂದು ಹೇಳಿಕೆ ನೀಡಿದ್ದರು. ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ₹2 ಸಾವಿರ ಕೋಟಿ ಹಗರಣ ನಡೆದಿದೆ ಎಂದು ಬಿಜೆಪಿಯ ಎಚ್. ವಿಶ್ವನಾಥ್, ಗೂಳಿಹಟ್ಟಿ ಶೇಖರ್ ಹೇಳಿದ್ದರು. ಗುತ್ತಿಗೆದಾರರ ಸಂಘ ಶೇ 40 ಕಮಿಷನ್ ವಿರುದ್ಧ ಪ್ರಧಾನಿ, ರಾಷ್ಟ್ರಪತಿಗೆ ಪತ್ರ ಬರೆದಿದ್ದರು. ಬೆಳಗಾವಿಯ ಗುತ್ತಿಗೆದಾರ ಸಂತೋಷ್ ಪಟೀಲ ಆತ್ಮಹತ್ಯೆ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ರಾಜೀನಾಮೆ ನೀಡಿದ್ದರು ಎಂದು ವಿವರಿಸಿದರು.

ಯಡಿಯೂರಪ್ಪ, ಅವರ ಪುತ್ರ ವಿಜಯೇಂದ್ರ ವಿರುದ್ಧ ಆದಾಯ ಮೀರಿ ನೂರಾರು ಕೋಟಿ ಆಸ್ತಿ ಗಳಿಕೆ ಪ್ರಕರಣ ದಾಖಲಾಗಿವೆ. ಯಡಿಯೂರಪ್ಪ ವಿರುದ್ಧ ಕೆ.ಎಸ್. ಈಶ್ವರಪ್ಪ ರಾಜ್ಯಪಾಲರಿಗೆ ದೂರು ನೀಡಿದ್ದರು. ಅಬಕಾರಿ ಹಗರಣದಲ್ಲಿ ಸಚಿವ ಎಚ್. ನಾಗೇಶ್ ಅವರನ್ನು ಬದಲಾಯಿಸಲಾಗಿತ್ತು ಎಂದರು.

ಬಿಜೆಪಿ ಅವಧಿಯ ಪ್ರಮುಖ ಹಗರಣಗಳ ವಿವರ

ಇಲಾಖೆ/ನಿಗಮ/ ಮಂಡಳಿ	ಹಗರಣ ನಡೆದ ಅವಧಿ	ಅಂದಿನ ಮುಖ್ಯಮಂತ್ರಿ	ಸಚಿವರು	ಮೊತ್ತ (₹ ಕೋಟಿಗಳಲ್ಲಿ)
ಎಪಿಎಂಸಿ	20-21	ಬಿ.ಎಸ್.ಯಡಿಯೂರಪ್ಪ	ಬಸವರಾಜ ಬೊಮ್ಮಾಯಿ	47.16
ಭೋವಿ ಅಭಿವೃದ್ಧಿ ನಿಗಮ	2021-22	ಬಸವರಾಜ ಬೊಮ್ಮಾಯಿ	ಕೋಟ ಶ್ರೀನಿವಾಸ ಪೂಜಾರಿ	87
ದೇವರಾಜ ಅರಸು ಟ್ರಕ್ ಟರ್ಮಿನಲ್	2022-23	ಬಸವರಾಜ ಬೊಮ್ಮಾಯಿ	ಶ್ರೀರಾಮುಲು	50
ಗಂಗಾ ಕಲ್ಯಾಣ ಯೋಜನೆ (ಅಂಬೇಡ್ಕರ್, ಬೋವಿ, ಆದಿಜಾಂಬವ)	2021-22	ಬಿ.ಎಸ್ ಯಡಿಯೂರಪ್ಪ	ಕೋಟ ಶ್ರೀನಿವಾಸ ಪೂಜಾರಿ	430
ಪ್ರವಾಸೋದ್ಯಮ ಇಲಾಖೆ	2021-22	ಬಸವರಾಜ ಬೊಮ್ಮಾಯಿ	ಸಿ.ಪಿ.ಯೋಗೇಶ್ವರ್	2.47
ಕಿಯೋನಿಕ್ಸ್	2019-23	ಯಡಿಯೂರಪ್ಪ/ ಬಸವರಾಜ ಬೊಮ್ಮಾಯಿ	ಸಿ.ಎನ್. ಅಶ್ವತ್ಥನಾರಾಯಣ	500
ಕೋವಿಡ್/ಶೇ 40ರಷ್ಟು ಕಮೀಷನ್	2019-23	ಯಡಿಯೂರಪ್ಪ/ ಬೊಮ್ಮಾಯಿ/	ಕೆ. ಸುಧಾಕರ್/ ಶ್ರೀರಾಮುಲು/ ಇತರೆ ಸಚಿವರು, ಅಧಿಕಾರಿಗಳು	42,000
ಪಿಎಸ್‌ಐ ಮತ್ತು ಇತರೆ ನೇಮಕಾತಿ	2019-203	ಯಡಿಯೂರಪ್ಪ/ ಬಸವರಾಜ ಬೊಮ್ಮಾಯಿ	ಬಸವರಾಜ ಬೊಮ್ಮಾಯಿ	100 ಕೋಟಿಗೂ ಹೆಚ್ಚು
ಪರಶುರಾಮ ಥೀಮ್ ಪಾರ್ಕ್	2019-23	ಬಸವರಾಜ ಬೊಮ್ಮಾಯಿ	ವಿ.ಸುನಿಲ್ ಕುಮಾರ್	11
ಬಿಟ್ ಕಾಯಿನ್	2019-203	ಯಡಿಯೂರಪ್ಪ/ ಬಸವರಾಜ ಬೊಮ್ಮಾಯಿ	ಬಸವರಾಜ ಬೊಮ್ಮಾಯಿ	ಸಾವಿರಾರು ಕೋಟಿ
ಅಬಕಾರಿ ಹಗರಣ	2019-21	ಯಡಿಯೂರಪ್ಪ	ಎಚ್.ನಾಗೇಶ್	ನೂರಾರು ಕೋಟಿ
ಕೆಕೆಆರ್‌ಡಿಬಿ	2019-23	ಯಡಿಯೂರಪ್ಪ/ ಬಸವರಾಜ ಬೊಮ್ಮಾಯಿ	ಇ. ಮುನಿರತ್ನ	200 ಕೋಟಿಗೂ ಹೆಚ್ಚು
ಕಂದಾಯ ಇಲಾಖೆ	2019-23	ಯಡಿಯೂರಪ್ಪ/ ಬಸವರಾಜ ಬೊಮ್ಮಾಯಿ	ಆರ್.ಅಶೋಕ	ಭೂ ಅಕ್ರಮ
ಕೃಷಿ ಇಲಾಖೆ	2021-23	ಬಸವರಾಜ ಬೊಮ್ಮಾಯಿ	ಬಿ.ಸಿ. ಪಾಟೀಲ	ಕೃಷಿ ಇಲಾಕೆಯ ನೌಕರರಿಂದಲೇ ಲಂಚ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	2019-21	ಯಡಿಯೂರಪ್ಪ	ಶಶಿಕಲಾ ಜೊಲ್ಲೆ	ಮೊಟ್ಟೆ ಹಗರಣ
ಕೆಐಎಡಿಬಿ	2008-13	ಯಡಿಯೂರಪ್ಪ/ ಸದಾನಂದ ಗೌಡ/ ಜಗದೀಶ ಶೆಟ್ಟರ್	ಕಟ್ಟಾ ಸುಬ್ರಮಣ್ಯ ನಾಯ್ಡು/ ಮುರುಗೇಶ ನಿರಾಣಿ	
ಗಣಿ, ಡಿನೋಟಿಫಿಕೇಷನ್	2008-13	ಯಡಿಯೂರಪ್ಪ/ ಸದಾನಂದ ಗೌಡ/ ಜಗದೀಶ ಶೆಟ್ಟರ್		ಸಾವಿರಾರು ಕೋಟಿ
ಗುರು ರಾಘವೇಂದ್ರ ಕೋ-ಅಪ್ ಬ್ಯಾಂಕ್		ಯಡಿಯೂರಪ್ಪ		ಸಾವಿರಾರು ಕೋಟಿ
ಐಟಿ ದಾಳಿ	2020	ಯಡಿಯೂರಪ್ಪ	ಆಪ್ತ ಉಮೇಶ್ ಮನೆಯಲ್ಲಿ ಸಿಕ್ಕ ಯಡಿಯೂರಪ್ಪ ಅವರ ಅಕ್ರಮ ಆಸ್ತಿ	750 ಕೋಟಿ

ವಾಲ್ಮೀಕಿ ನಿಗಮದ ಹಣ ದುರ್ಬಳಕೆ: ದಾಖಲೆ ತೋರಿಸಿದ ಸಿ.ಎಂ

'ಆರ್‌ಬಿಐಗೆ ಯೂನಿಯನ್ ಬ್ಯಾಂಕ್ ದೂರು'

ಬೆಂಗಳೂರು: 'ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಖಾತೆಯಿಂದ ಹಣ ಅಕ್ರಮವಾಗಿ ವರ್ಗಾವಣೆ ಆಗಿರುವಲ್ಲಿ ಯೂನಿಯನ್ ಬ್ಯಾಂಕ್‌ನ ಅಧಿಕಾರಿಗಳು ಕರ್ತವ್ಯಲೋಪ ಎಸಗಿದ್ದಾರೆ ಎಂದು ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕರೇ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಪತ್ರ ಬರೆದಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬ್ಯಾಂಕ್‌ನ ಇಬ್ಬರು ಅಧಿಕಾರಿಗಳ ವಿರುದ್ಧವೇ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕರು ದೂರು ನೀಡಿದ್ದಾರೆ. ಇಬ್ಬರು ಅಧಿಕಾರಿಗಳು ಹಲವು ಹಂತದಲ್ಲಿ ನಿರ್ಲಕ್ಷ್ಯ ತೋರಿದ್ದರಿಂದ ಮತ್ತು ಕರ್ತವ್ಯ ಲೋಪ ಮಾಡಿದ್ದರಿಂದ ₹89.63 ಕೋಟಿ ಅಕ್ರಮವಾಗಿ ವರ್ಗಾವಣೆಯಾಗಿದೆ ಎಂದು ದೂರಿನಲ್ಲಿ ವಿವರಿಸಲಾಗಿದೆ' ಎಂದರು.

ತನ್ನ ಇಬ್ಬರು ಅಧಿಕಾರಿಗಳ ವಿರುದ್ಧ ಯೂನಿಯನ್ ಬ್ಯಾಂಕ್, ಆರ್‌ಬಿಐಗೆ ನೀಡಲಾಗಿದೆ ಎನ್ನಲಾದ ವರದಿಯ ಅಂಶಗಳನ್ನು ಅವರು ಬಿಡುಗಡೆ ಮಾಡಿದರು. 'ಅಕ್ರಮದಲ್ಲಿ ಅವರ ಪಾತ್ರವೂ ಇದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಲು ತನಿಖೆ ನಡೆಸಬೇಕು ಎಂದು ಯೂನಿಯನ್ ಬ್ಯಾಂಕ್ ದೂರಿನಲ್ಲಿ ಕೋರಿದೆ' ಎಂದು ಅವರು ಹೇಳಿದರು.

'ಶಾಖಾ ಮುಖ್ಯಸ್ಥೆ ಶುಚಿಸ್ಮಿತಾ ರಾವುಲ್ ಕರ್ತವ್ಯಲೋಪ'

'ಯೂನಿಯನ್ ಬ್ಯಾಂಕ್‌ನ ಮಾನವ ಸಂಪನ್ಮೂಲ ವಿಭಾಗದ ಪ್ರಧಾನ ವ್ಯವಸ್ಥಾಪಕ ಗಿರೀಶ್ ಜೋಶಿ ಸಿಬಿಐ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ದೂರು ನೀಡಿದ್ದಾರೆ' ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಸಭೆಯಲ್ಲಿ ದೂರಿನ ವಿವರವನ್ನು ಓದಿದರು...

1. ಯೂನಿಯನ್ ಬ್ಯಾಂಕ್‌ನ ಎಂ.ಜಿ.ರಸ್ತೆ ಶಾಖೆಯ ಮುಖ್ಯಸ್ಥೆ ಶುಚಿಸ್ಮಿತಾ ರಾವುಲ್ ಅವರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಲೋಪ ಎಸಗಿದ್ದಾರೆ. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಖಾತೆಗೆ ಸಂಬಂಧಿಸಿದ ಇ-ಮೇಲ್ ಐಡಿ (mdkmvstdc@gmail.com) ಮತ್ತು ಮೊಬೈಲ್ ಸಂಖ್ಯೆ (9449552240) ಬದಲಾವಣೆಗೆ ಮನವಿ ಬಂದಾಗ ಅದರ ವಿಶ್ವಾಸಾರ್ಹತೆಯನ್ನು ಪರಿಶೀಲಿಸಿಕೊಂಡಿಲ್ಲ. ನಿಗಮದ ಜಾಲತಾಣದಲ್ಲೇ ಆ ವಿವರಗಳು ಲಭ್ಯವಿದ್ದರೂ ಅದನ್ನು ಪರಿಶೀಲಿಸಿಕೊಳ್ಳುವಲ್ಲಿ ಅವರು ವಿಫಲವಾಗಿದ್ದಾರೆ. ನಿಗಮದ ಇ-ಮೇಲ್ ವಿಳಾಸವನ್ನು mdkmvstdcl@gmail.comಗೆ ಮತ್ತು ಮೊಬೈಲ್ ಸಂಖ್ಯೆಯನ್ನು 6026137043ಗೆ ಬದಲಿಸಿದ್ದಾರೆ.
2. ಚೆಕ್ ಪುಸ್ತಕ ನೀಡುವಂತೆ ಮನವಿ ಬಂದಾಗಲೂ, ಮನವಿ ಪತ್ರದಲ್ಲಿ ಇದ್ದ ಮಾದರಿ ಸಹಿಗಳನ್ನು ಪರಿಶೀಲಿಸಿಕೊಳ್ಳುವಲ್ಲಿ ಅವರು ವಿಫಲವಾಗಿದ್ದಾರೆ. 2024ರ ಮಾರ್ಚ್ 4ರಂದು ಶಿವಕುಮಾರ್ ಎಂಬುವವರಿಗೆ ಚೆಕ್ ಪುಸ್ತಕ ನೀಡುವಾಗ, ಆ ವ್ಯಕ್ತಿಯ ಗುರುತನ್ನು ದೃಢಪಡಿಸಿಕೊಂಡಿಲ್ಲ. ಹೀಗೆ ನೀಡಲಾದ ಚೆಕ್‌ಗಳನ್ನೇ ಬಳಸಿಕೊಂಡು ನಿಗಮದ ಖಾತೆಯಿಂದ ದೊಡ್ಡ ಮೊತ್ತದ ಹಣವನ್ನು ವರ್ಗಾವಣೆ ಮಾಡಿಕೊಳ್ಳಲಾಗಿದೆ.
3. ಬ್ಯಾಂಕ್‌ನ ಶಾಖೆಯಲ್ಲಿ ನಿಗಮವು ಇರಿಸಿದ್ದ ನಿಶ್ಚಿತ ಠೇವಣಿಯ ಆಧಾರದಲ್ಲಿ ₹45 ಕೋಟಿಯಷ್ಟು ಓವರ್‌ಡ್ರಾಫ್ಟ್ ಸೌಲಭ್ಯವನ್ನು ಮಂಜೂರು ಮಾಡಲಾಗಿದೆ. ಹೀಗೆ ಮಂಜೂರು ಮಾಡುವಾಗ ನಿಗಮದಿಂದ 'ಆರ್ಟಿಕಲ್ ಆಫ್ ಅಸೋಸಿಯೇಷನ್ (ಎಒಎ)' ಮತ್ತು 'ಮೆಮರಂಡಮ್ ಆಫ್ ಅಸೋಸಿಯೇಷನ್ (ಎಂಒಎ)' ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಜತೆಗೆ ಓವರ್‌ಡ್ರಾಫ್ಟ್ ಸವಲತ್ತು ನೀಡಿ ಎಂದು ಮನವಿ ಸಲ್ಲಿಸಲು ನಿಗಮದ ಯಾವ ಅಧಿಕಾರಿಗೆ ಅಧಿಕಾರವಿದೆ ಎಂಬುದನ್ನು ಪರಿಶೀಲಿಸಿಕೊಂಡಿಲ್ಲ.
4. ಓವರ್‌ಡ್ರಾಫ್ಟ್ ಸೌಲಭ್ಯ ಮಂಜೂರು ಮಾಡುವಾಗ ನಿಗಮದ ಅಧಿಕಾರಿಗಳನ್ನು ಕರೆಸಿಕೊಂಡು ತಮ್ಮ ಸಮ್ಮುಖದಲ್ಲಿ ಸಹಿ ಪಡೆದುಕೊಳ್ಳುವ ಜವಾಬ್ದಾರಿ ಶುಚಿಸ್ಮಿತಾ ರಾವುಲ್ ಅವರದ್ದಾಗಿತ್ತು. ಆದರೆ ಅವರು ಆ ಕರ್ತವ್ಯ ನಿರ್ವಹಿಸಿಲ್ಲ. ನಿಗಮದ ಅಧಿಕಾರಿಗಳು ಬ್ಯಾಂಕ್‌ಗೆ ಮತ್ತು ಪೊಲೀಸರಿಗೆ ನೀಡಿರುವ ದೂರಿನಲ್ಲಿ, 'ನಾವು ಯಾವ ಪತ್ರಕ್ಕೂ ಸಹಿ ಮಾಡಿಲ್ಲ. ಓವರ್‌ಡ್ರಾಫ್ಟ್ ಪತ್ರಕ್ಕೆ, ಸಾಲಪತ್ರಗಳಿಗೆ ಸಹಿ ಹಾಕಿಲ್ಲ' ಎಂದೇ ಹೇಳಿದ್ದಾರೆ.
5. ಶುಚಿಸ್ಮಿತಾ ರಾವುಲ್ ಅವರ ನಿರ್ಲಕ್ಷ್ಯ ಮತ್ತು ಕರ್ತವ್ಯಲೋಪದ ಕಾರಣದಿಂದ ನಿಗಮದ ಖಾತೆಯಿಂದ ₹89.63 ಕೋಟಿಯಷ್ಟು ಮೊತ್ತವನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದೆ. ಹೀಗೆ ವರ್ಗಾವಣೆಯಾದ ಮೊತ್ತವು ಆರ್‌ಬಿಎಲ್ ಬ್ಯಾಂಕ್‌ನಲ್ಲಿನ ಒಂದೇ ಸರಣಿಯ ಹಲವು ಖಾತೆಗಳಿಗೆ ಜಮೆಯಾಗಿದೆ. ಆ ಎಲ್ಲಾ ಖಾತೆಗಳು ಮಾಹಿತಿ ತಂತ್ರಜ್ಞಾನ ಸೇವೆಗೆ ಸಂಬಂಧಿಸಿದ ಕಂಪನಿಗಳಿಗೆ ಹೆಸರಿನಲ್ಲಿ ಇದ್ದ ಖಾತೆಗಳಾಗಿವೆ. ನಿಗಮದ ಕಾರ್ಯಸ್ವರೂಪಕ್ಕೂ, ಮಾಹಿತಿ ತಂತ್ರಜ್ಞಾನ ಕಂಪನಿಗಳ ಕಾರ್ಯಸ್ವರೂಪಕ್ಕೂ ತಾಳೆಯಾಗುವುದಿಲ್ಲ ಎಂಬುದನ್ನು ಗುರುತಿಸುವಲ್ಲಿ ಅವರು ವಿಫಲರಾಗಿದ್ದಾರೆ.
6. ನಿಗಮದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡುವಲ್ಲಿ ಶುಚಿಸ್ಮಿತಾ ರಾವುಲ್ ಅವರ ಪಾತ್ರವಿದೆಯೇ ಎಂಬುದನ್ನು ತನಿಖೆ ಮೂಲಕ ಪತ್ತೆ ಮಾಡಬೇಕಿದೆ.



'ಉಪ ಮುಖ್ಯಸ್ಥೆ ದೀಪಾ ನೇರ ಹೊಣೆ'

'ಹಣ ಅಕ್ರಮವಾಗಿ ವರ್ಗಾವಣೆ ಆಗಿರುವ ಪ್ರಕರಣದಲ್ಲಿ ಯೂನಿಯನ್ ಬ್ಯಾಂಕ್‌ನ ಎಂ.ಜಿ.ರಸ್ತೆ ಶಾಖೆಯ ಉಪ ಮುಖ್ಯಸ್ಥೆ ದೀಪಾ ಡಿ. ಅವರ ಕರ್ತವ್ಯಲೋಪ ಇರುವುದು ಗೊತ್ತಾಗಿದೆ ಎಂದು ಯೂನಿಯನ್ ಬ್ಯಾಂಕ್‌ನ ಚೀಫ್ ಮ್ಯಾನೇಜರ್ (ಇಆರ್‌ಜಿ) ಅವರು ಆರ್‌ಬಿಐಗೆ ಪತ್ರ ಬರೆದಿದ್ದಾರೆ' ಎಂದು ಸಿದ್ದರಾಮಯ್ಯ ಹೇಳಿದರು.

ಈ ಸಂಬಂಧ ಅವರು ಬಿಡುಗಡೆ ಮಾಡಿದ ದಾಖಲೆಯ ವಿವರ ಇಂತಿದೆ.

1. ನಿಗಮದ ಖಾತೆಗೆ ಸಂಬಂಧಿಸಿದ ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಬದಲಿಸುವಂತೆ ಬಂದಿದ್ದ ಮನವಿಯನ್ನು ನಿರ್ವಹಿಸುವ ನೇರ ಹೊಣೆಗಾರಿಕೆ ದೀಪಾ ಡಿ. ಅವರದ್ದಾಗಿತ್ತು. ಮನವಿ ಪತ್ರದಲ್ಲಿ ಇದ್ದ ಸಹಿಗಳ ಮಾದರಿಗಳನ್ನು ದೃಢಪಡಿಸಿಕೊಳ್ಳದೇ ಅವರು ಲೋಪ ಎಸಗಿದ್ದಾರೆ.
2. ನಿಗಮದ ಖಾತೆಗಳಿಂದ ಆರ್‌ಬಿಎಲ್ ಬ್ಯಾಂಕ್‌ನಲ್ಲಿನ ಖಾತೆಗಳಿಗೆ ಆರ್‌ಟಿಜಿಎಸ್ ಮತ್ತು ನೆಫ್ಟ್ ಮೂಲಕ ಅಪಾರ ಪ್ರಮಾಣದ ಮೊತ್ತವನ್ನು ವರ್ಗಾವಣೆ ಮಾಡಲಾಗಿದೆ. ಅಂತಹ 12 ವರ್ಗಾವಣೆಗಳನ್ನು ದೀಪಾ ಅವರು ದೃಢೀಕರಿಸಿದ್ದಾರೆ. ಆದರೆ ದೊಡ್ಡ ಮೊತ್ತದ ವರ್ಗಾವಣೆಯಾಗಿದ್ದರೂ ಮತ್ತು ನಿಗಮವು ಈವರೆಗೆ ಆರ್ಥಿಕ ವ್ಯವಹಾರ ನಡೆಸದೇ ಇರುವ ಖಾತೆಗಳಿಗೆ ವರ್ಗಾವಣೆ ಆಗುತ್ತಿರುವುದನ್ನು ಗಮನಿಸದೇ ಲೋಪ ಎಸಗಿದ್ದಾರೆ. ಹೀಗೆ ಆರ್‌ಟಿಜಿಎಸ್ ಮತ್ತು ನೆಫ್ಟ್ ಮೂಲಕ ವರ್ಗಾವಣೆ ಆದ ಖಾತೆಗಳು ಒಂದೇ ಬ್ಯಾಂಕ್‌ನ, ಒಂದೇ ಶಾಖೆಯಲ್ಲಿವೆ ಎಂಬುದನ್ನು ಅವರು ಗಮನಿಸಬೇಕಿತ್ತು. ಆದರೆ ಅವರು ಇಲ್ಲಿ ನಿರ್ಲಕ್ಷ್ಯ ತೋರಿದ್ದಾರೆ.
3. ನಿಗಮದಿಂದ ಬಂದಿದೆ ಎನ್ನಲಾದ ಮನವಿ ಪತ್ರದಲ್ಲಿ ಶಿವಕುಮಾರ್ ಎಂಬುವವರಿಗೆ ಚೆಕ್‌ಪುಸ್ತಕ ನೀಡುವಂತೆ ಸೂಚಿಸಲಾಗಿದೆ. ಆದರೆ ಚೆಕ್ ಪುಸ್ತಕ ಪಡೆದುಕೊಳ್ಳಲು ಬಂದ ವ್ಯಕ್ತಿ ಶಿವಕುಮಾರ್ ಅವರೇ ಎಂಬುದನ್ನು ದೃಢಪಡಿಸಿಕೊಳ್ಳುವಲ್ಲಿ ದೀಪಾ ಅವರು ವಿಫಲರಾಗಿದ್ದಾರೆ. ತಲಾ ಐದು ಚೆಕ್‌ಗಳಿರುವ ಎರಡು ಚೆಕ್ ಪುಸ್ತಕಗಳನ್ನು ಸ್ವತಃ ದೀಪಾ ಅವರೇ ನೀಡಿದ್ದಾರೆ. ಇಲ್ಲಿ ಅವರಿಂದ ಕರ್ತವ್ಯಲೋಪವಾಗಿದೆ.
4. ನಿಗಮದ ಖಾತೆಯಿಂದ ₹89.63 ಕೋಟಿ ಅಕ್ರಮವಾಗಿ ವರ್ಗಾವಣೆ ಆಗುವಲ್ಲಿ ದೀಪಾ ಅವರಿಂದ ನಿರ್ಲಕ್ಷ್ಯ ಮತ್ತು ಕರ್ತವ್ಯಲೋಪ ಇರುವುದು ಗೊತ್ತಾಗಿದೆ. ಈ ಅಕ್ರಮದಲ್ಲಿ ಅವರ ಪಾತ್ರವೂ ಇದೆಯೇ ಎಂಬುದನ್ನು ತನಿಖೆ ಮೂಲಕ ಪರಿಶೀಲಿಸಬೇಕಿದೆ.

'ಬಿಜೆಪಿ ಹಗರಣ ಬಯಲಾಗುವ ಭಯಕ್ಕೆ ಗದ್ದಲ'

ಡಿ.ಕೆ. ಶಿವಕುಮಾರ್

ಬೆಂಗಳೂರು: 'ಸರ್ಕಾರದ ಮೇಲೆ ಆರೋಪ ಮಾಡಿದ ಬಿಜೆಪಿಯವರಿಗೆ ಉತ್ತರವನ್ನು ಕೇಳುವ ಸಹನೆ, ಸಂಯಮ ಇರಲಿಲ್ಲ. ಅವರ ಹಗರಣಗಳು ಬಯಲಿಗೆ ಬರುವ ಭಯದಿಂದ ಸದನದಲ್ಲಿ ಗಲಾಟೆ ಮಾಡಿ ಸ್ಪೀಕರ್ ಮುಂದೆ ಪ್ರತಿಭಟನೆಗೆ ಮುಂದಾದರು. ಮುಖ್ಯಮಂತ್ರಿ ಉತ್ತರಿಸುವಾಗ ತೊಂದರೆ ಮಾಡಿದರು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೆಲವು ಹಗರಣಗಳನ್ನು ಮುಚ್ಚಿಹಾಕಲಾಗಿದೆ. ಕೆಲವನ್ನು ಮುಚ್ಚಿಹಾಕಲು ಯತ್ನಿಸಲಾಗಿದೆ. ಬಿಜೆಪಿಯ ಬ್ರಹ್ಮಾಂಡ ಭ್ರಷ್ಟಾಚಾರವನ್ನು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಯಲಿಗೆ ಎಳೆದಿದ್ದಾರೆ. ಪರಶುರಾಮ ಥೀಮ್ ಪಾರ್ಕ್ ಹಗರಣ, ಗಂಗಾಕಲ್ಯಾಣ ಅಕ್ರಮ, ಬಿಟ್ ಕಾಯಿನ್ ಹಗರಣ, ಪಿಎಸ್‌ಐ ಹಗರಣ ಸೇರಿ ಅನೇಕ ಹಗರಣಗಳು ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿವೆ' ಎಂದರು.

'ಯಡಿಯೂರಪ್ಪ ಅವರ ಆಪ್ತ ಉಮೇಶ್ ಮನೆಯಲ್ಲಿ ₹750 ಕೋಟಿಗೂ ಹೆಚ್ಚು ಮೊತ್ತದ ಹಣ ಅಕ್ರಮ ವರ್ಗಾವಣೆ ಸೇರಿ ಅನೇಕ ಅಕ್ರಮಗಳ ದಾಖಲೆಗಳು ದೊರೆತಿವೆ. ಯಡಿಯೂರಪ್ಪ ವಿರುದ್ಧ ಕೆ.ಎಸ್. ಈಶ್ವರಪ್ಪ ಅವರು ರಾಜ್ಯಪಾಲರಿಗೆ ದೂರು ನೀಡಿದ್ದರು. ಅದು ಸಹ ತನಿಖೆಯಲ್ಲಿದೆ. ಗುರು ರಾಘವೇಂದ್ರ ಬ್ಯಾಂಕ್‌ನಲ್ಲಿ ಸಾವಿರಾರು ಕೋಟಿಯ ಹಗರಣವಾಗಿದ್ದರೂ ಸಿಬಿಐಗೆ ನೀಡಲಿಲ್ಲ. ಅದನ್ನು ಸಹ ತನಿಖೆಗೆ ನೀಡಲು ಚರ್ಚಿಸಲಾಗುವುದು' ಎಂದರು.

'ಮುಖ್ಯಮಂತ್ರಿ ಹುದ್ದೆಗೆ ₹2500 ಕೋಟಿ, ಮಂತ್ರಿ ಸ್ಥಾನಕ್ಕೆ ₹100 ಕೋಟಿ ನೀಡಬೇಕು ಎನ್ನುವ ಬಸನಗೌಡ ಪಾಟೀಲ ಯತ್ನಾಳ ಅವರ ಆರೋಪ ಹಾಗೂ ಭೋವಿ ನಿಗಮದ ಅಕ್ರಮದ ಬಗ್ಗೆ ಗೂಳಿಹಟ್ಟಿ ಶೇಖರ್ ಮಾಡಿದ ಆರೋಪಗಳ ಮೇಲೆ ಏಕೆ ಬಿಜೆಪಿ ತನಿಖೆ ನಡೆಸಲಿಲ್ಲ' ಎಂದು ಪ್ರಶ್ನಿಸಿದರು.

ಬಿಜೆಪಿಯ ಆರೋಪದ ನಂತರ ನೀವು ತನಿಖೆ ಮಾಡಲು ಮುಂದಾಗಿದ್ದೀರಿ ಎಂದ ಸುದ್ದಿಗಾರರ ಪ್ರಶ್ನೆಗೆ, 'ಈ ರೀತಿ ಏನೂ ಇಲ್ಲ. ಯಾರನ್ನೂ ರಕ್ಷಿಸುವ ಉದ್ದೇಶ ನಮಗಿಲ್ಲ. ಎಲ್ಲವನ್ನೂ ಬಯಲಿಗೆ ಎಳೆದು ಸಾರ್ವಜನಿಕರ ಗಮನಕ್ಕೆ ತರುವ ಉದ್ದೇಶ ನಮ್ಮದು' ಎಂದರು.

ವಿರೋಧಪಕ್ಷ ಬಿಜೆಪಿ ಟೀಕೆಗೆ ವಿಧಾನಸಭೆಯಲ್ಲಿ ತಿರುಗೇಟು ಕೊಟ್ಟ ಸಚಿವ ಪ್ರಿಯಾಂಕ್ ಖರ್ಗೆ, ಕೃಷ್ಣ ಬೈರೇಗೌಡ ಹಾಗೂ ದಿನೇಶ ಗುಂಡುರಾವ್

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ವಾಪಸ್ ಬಂದಿದೆ: ಸಿಎಂ

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಕ್ರಮ ನಡೆದಿರುವುದು ಹೌದು. ಆದರೆ, ಸರ್ಕಾರ ಈ ಪ್ರಕರಣದ ತನಿಖೆಗೆ ರಚಿಸಿರುವ ಎಸ್‌ಐಟಿಯು ಹಣದ ಮೂಲ ಪತ್ತೆ ಹಚ್ಚಿದೆ. ಹಣವನ್ನು ವಾಪಸ್ ತರಲಾಗಿದ್ದು, ಕೆಲವು ಮೊತ್ತವನ್ನು ತರಲು ಎಸ್‌ಐಟಿಯು ಕಾನೂನಾತ್ಮಕ ಕ್ರಮ ಕೈಗೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

₹13.72 ಕೋಟಿ ವಹಿವಾಟು ಸ್ಥಗಿತ

ಈ ಪ್ರಕರಣದಲ್ಲಿ ಭಾಗಿಯಾಗಿರುವ ಸತ್ಯನಾರಾಯಣ ವರ್ಮಾ ಮತ್ತು ಇತರೆ ಆರೋಪಿಗಳು ಅಕ್ರಮವಾಗಿ ಬೇರೆ ವ್ಯಕ್ತಿಗಳ ಖಾತೆಗಳಿಗೆ ವರ್ಗಾಯಿಸಿದ್ದ ₹1.50 ಕೋಟಿ ಹಣವನ್ನು ಜನರೇ ವಾಪಸ್ ಕಟ್ಟಿದ್ದಾರೆ. ಆ ಹಣ ಸಹ ಸರ್ಕಾರದಲ್ಲಿದೆ.

ಎಸ್‌ಐಟಿಯು ಸತ್ಯನಾರಾಯಣ ವರ್ಮಾ ಅವರು ಬಿಗ್‌ಬಾಯ್ಸ್ ಟಾಯ್ಸ್ ಲಿ. ಕಂಪನಿ ಮೂಲಕ ಖರೀದಿ ಮಾಡಿದ್ದ ಲ್ಯಾಂಬೋರ್ಗಿನಿ ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಈ ಕಂಪನಿಯು ಕಾರನ್ನು ವಾಪಸ್ ಪಡೆದು ₹3,31,19,166 ಹಣವನ್ನು ಸರ್ಕಾರಕ್ಕೆ ಮರಳಿಸುವುದಾಗಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಈ ಕುರಿತು ಪಿಎಫ್ ಖಾತೆ ಹಾಗೂ ಮೊತ್ತದ ವಿವರಗಳನ್ನೂ ಅವರು ಮಾಧ್ಯಮಗಳಿಗೆ ಬಿಡುಗಡೆ ಮಾಡಿದರು.

ವಾಪಸ್ ಪಡೆದ ಮೊತ್ತ ಯಾರಬಳಿ ಎಷ್ಟು?

ಪಿಎಫ್ ಸಂಖ್ಯೆ	ವಶಪಡಿಸಿಕೊಂಡ ಮೊತ್ತ	ವಶಪಡಿಸಿಕೊಂಡ ವಿವರ
14/2024	8,21,62,600	ಸತ್ಯನಾರಾಯಣ ವರ್ಮಾ
16/2024	3,62,47,200	ಜೆ.ಜಿ.ಪದ್ಮನಾಭ
17/2024	30,00,000	ಜೆ.ಜಿ.ಪದ್ಮಾನಾಭ
18/2024	1,49,65,200	ನಾಗೇಶ್ವರ ರಾವ್
20/2024	30,00,000	ಚಂದ್ರಮೋಹನ್
26/2024	12,50,000	ಜಿ.ಕೆ.ಜಗದೀಶ್
27/2024	3,10,000	ಸತ್ಯನಾರಾಯಣ ವರ್ಮಾ
28/2024	24,00,000	ಸತ್ಯನಾರಾಯಣ ವರ್ಮಾ
ಒಟ್ಟು ನಗದು	14,33,35,000	
207 ಗ್ರಾಂ ಚಿನ್ನ	13,50,000	ಚಂದ್ರಮೋಹನ್
47.6 ಗ್ರಾಂ ಚಿನ್ನ	3,09,400	ಜಿ.ಕೆ.ಜಗದೀಶ್
ಒಟ್ಟು	14,49,94,400	

ವಶಕ್ಕೆ ಪಡೆದ ಒಟ್ಟು ಮೊತ್ತ: 85,25,07,698

ಸತ್ಯನಾರಾಯಣ ವರ್ಮಾ ₹ 1.21 ಕೋಟಿಗೂ ಹೆಚ್ಚು ಬೆಲೆಬಾಳುವ ಬೆಂಜ್ ಕಾರು ಖರೀದಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಈ ಕಾರನ್ನು ಎಸ್‌ಐಟಿ ತನ್ನ ವಶಕ್ಕೆ ಪಡೆದಿದೆ. ಈ ಕಾರನ್ನೂ ಮರಳಿ ಕಂಪನಿಗಗೆ ನೀಡಿ ಅವರ ಮೌಲ್ಯವನ್ನು ವಾಪಸ್ ಪಡೆಯುವ ಪ್ರಕ್ರಿಯೆ ಚಾಲನೆಯಲ್ಲಿದೆ.

ಮೇ 15ರ 2024 ರಂದು ಅಕ್ರಮವಾಗಿ ವರ್ಗಾವಣೆಯಾಗಿದ್ದ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯಿಂದ (ರತ್ನಾಕರ್ ಬ್ಯಾಂಕ್) ಎಸ್.ಟಿ. ನಿಗಮದ ಖಾತೆಗೆ ₹ 5 ಕೋಟಿ ಮರಳಿಸಿದ್ದಾರೆ.

ಯೂನಿಯನ್ ಬ್ಯಾಂಕ್‌ನಿಂದ ಅಕ್ರಮವಾಗಿ ಹಣ ವರ್ಗಾವಣೆಯಾಗಿದ್ದ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ₹ 46 ಕೋಟಿಗೂ ಹೆಚ್ಚು ಹಣ ರತ್ನಾಕರ್ ಬ್ಯಾಂಕ್ ಲಿಮಿಟೆಡ್‌ನಲ್ಲಿದೆ. ಈ ಹಣವನ್ನು ಎಸ್‌ಐಟಿ ತಂಡ ಸ್ಥಗಿತ ಮಾಡಿದೆ. ಅದನ್ನು ಹಿಂಪಡೆಯುವವ ಪ್ರಕ್ರಿಯೆ ಪ್ರಾರಂಭಿಸಲಾಗುತ್ತಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಉತ್ತಮವಾದುದು ಶ್ರಮವಿಲ್ಲದೇ ಲಭಿಸದು. ಇಚ್ಛೆ ಇಲ್ಲದಿದ್ದರಂತೂ ಅದು ಸಾಧ್ಯವೇ ಇಲ್ಲ.

-ಕುವೆಂಪು

ಲೆಫ್ಟಿನೆಂಟ್ ಗವರ್ನರ್‌ಗೆ ಹೆಚ್ಚು ಅಧಿಕಾರ ಚುನಾಯಿತ ಸರ್ಕಾರದ ಮಹತ್ವಕ್ಕೆ ಕುತ್ತು

ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್‌ಗೆ ಹೆಚ್ಚಿನ ಅಧಿಕಾರವನ್ನು ನೀಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕವೇ ಜನರನ್ನು ಸಶಕ್ತಗೊಳಿಸಬೇಕು ಎಂಬ ತತ್ವಕ್ಕೆ ಈ ನಿರ್ಧಾರವು ವಿರುದ್ಧವಾಗಿದೆ. ಜೊತೆಗೆ, ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ನೀಡಲಾಗುವುದು ಎಂಬ ಭರವಸೆಯನ್ನು ನಿಷ್ಕ್ರಿಯಗೊಳಿಸುವಂತಿದೆ. ಜಮ್ಮು ಮತ್ತು ಕಾಶ್ಮೀರ ಪುನರ್‌ಸಂಘಟನೆ ಕಾಯ್ದೆ– 2019ರ ನಿಯಮಗಳಿಗೆ ಕೇಂದ್ರವು ತಿದ್ದುಪಡಿ ತಂದಿದೆ. ಗೃಹ ಇಲಾಖೆಗೆ ಸಂಬಂಧಿಸಿದ ನಿರ್ಧಾರಗಳನ್ನು ಕೈಗೊಳ್ಳುವ ಮತ್ತು ತನಿಖೆಗೆ ಅನುಮತಿ ನೀಡುವ ಅಧಿಕಾರವನ್ನು ಲೆಫ್ಟಿನೆಂಟ್ ಗವರ್ನರ್‌ಗೆ ನೀಡಲಾಗಿದೆ. ಇದರಿಂದಾಗಿ, ಬೇರೆ ರಾಜ್ಯಗಳಲ್ಲಿ ಇರುವ ರೀತಿಯ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ ಜಮ್ಮು–ಕಾಶ್ಮೀರದಲ್ಲಿ ಇರುವುದಿಲ್ಲ. ಸಾಮಾನ್ಯವಾಗಿ ಸಚಿವಾಲಯಗಳು ನಿರ್ಧಾರಗಳನ್ನು ಕೈಗೊಳ್ಳುತ್ತವೆ. ಆದರೆ, ಜಮ್ಮು–ಕಾಶ್ಮೀರದಲ್ಲಿ ಪೊಲೀಸ್ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ನಿರ್ಧಾರಗಳನ್ನು ಲೆಫ್ಟಿನೆಂಟ್ ಗವರ್ನರ್ ಅವರೇ ತೆಗೆದುಕೊಳ್ಳಬಹುದು. ಮುಖ್ಯ ಕಾರ್ಯದರ್ಶಿಯು ಇಂತಹ ನಿರ್ಧಾರಗಳಿಗೆ ಲೆಫ್ಟಿನೆಂಟ್ ಗವರ್ನರ್ ಅವರಿಂದ ನೇರವಾಗಿ ಅನುಮತಿ ಪಡೆದುಕೊಳ್ಳಬಹುದು.

ಈ ಬದಲಾವಣೆಯು ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ–ರಾಜ್ಯಗಳ ಸಂಬಂಧದ ಕುರಿತು ಕೆಟ್ಟ ಮತ್ತು ವಿಕೃತ ಮಾದರಿಯೊಂದನ್ನು ರೂಪಿಸಿದೆ

ಕೇಂದ್ರ ಸರ್ಕಾರವು ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ನಿಯಮಗಳಿಗೆ ಎರಡನೆಯ ಬಾರಿ ಅಧಿಸೂಚನೆಯ ಮೂಲಕ ತಿದ್ದುಪಡಿ ಮಾಡಿದೆ. ಇಲ್ಲಿ ವಿಧಾನಸಭೆ ಚುನಾವಣೆ ನಡೆಸಿ ಜನಾದೇಶ ಪಡೆದ ಸರ್ಕಾರವನ್ನು ಸ್ಥಾಪಿಸುವ ಯೋಚನೆ ಇದೆ ಎಂಬುದರ ಹಿನ್ನೆಲೆಯಲ್ಲಿ ಕೇಂದ್ರದ ನಿರ್ಧಾರವನ್ನು ನೋಡಬೇಕಿದೆ. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಸೆಪ್ಟೆಂಬರ್ 30ರೊಳಗೆ ಚುನಾವಣೆ ನಡೆಸಬೇಕಿದೆ. ಸಾಮಾನ್ಯವಾಗಿ, ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರಗಳನ್ನು ಲೆಫ್ಟಿನೆಂಟ್ ಗವರ್ನರ್‌ಗೆ ನೀಡುವ ಮೂಲಕ ಚುನಾಯಿತ ಸರ್ಕಾರದ ಮಹತ್ವವನ್ನು ಕೇಂದ್ರವು ಕುಂದಿಸಿದೆ. ಮಹತ್ವದ ವಿಚಾರಗಳ ಕುರಿತಂತೆ ಲೆಫ್ಟಿನೆಂಟ್ ಗವರ್ನರ್ ಅವರು ನಿರ್ಧಾರ ಕೈಗೊಳ್ಳುವ ವ್ಯವಸ್ಥೆಯು ಚುನಾಯಿತ ಸರ್ಕಾರ ಸ್ಥಾಪನೆಯಾದ ಮೇಲೆಯೂ ಮುಂದುವರಿಯಲಿದೆ. ಲೆಫ್ಟಿನೆಂಟ್ ಗವರ್ನರ್ ಅವರು ಕೇಂದ್ರದಿಂದ ನೇಮಕವಾಗಿರುವ, ಕೇಂದ್ರ ಸರ್ಕಾರ ಹೇಳಿದ್ದನ್ನು ಪಾಲಿಸುವವರಾಗಿಯೇ ಇರುತ್ತಾರೆ. ಪ್ರಜಾಸತ್ತಾತ್ಮಕ ಪ್ರಕ್ರಿಯೆ ಮರುಸ್ಥಾಪನೆ ಆಗಬೇಕು ಎಂಬ ಕುರಿತು ಅಲ್ಲಿನ ಜನರು ಕಾತರರಾಗಿದ್ದಾರೆ. ಲೋಕಸಭಾ ಚುನಾವಣೆಯಲ್ಲಿನ ಮತದಾನದ ಪ್ರಮಾಣವೇ ಅದಕ್ಕೆ ಪುರಾವೆಯಾಗಿದೆ. ಹತ್ತು ವರ್ಷಗಳ ಬಳಿಕ ನಡೆಯಲಿರುವುದರಿಂದ ವಿಧಾನಸಭೆ ಚುನಾವಣೆಗೆ ಹೆಚ್ಚಿನ ಮಹತ್ವ ಇದೆ.

ಆಡಳಿತವು ಸುಲಲಿತವಾಗಿ ನಡೆಯುವುದಕ್ಕಾಗಿ ನಿಯಮಗಳನ್ನು ಬದಲಾಯಿಸಲಾಗಿದೆ; ಚುನಾಯಿತ ಸರ್ಕಾರ ಮತ್ತು ಲೆಫ್ಟಿನೆಂಟ್ ಗವರ್ನರ್ ಅವರ ಅಧಿಕಾರಗಳೇನು ಎಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಆದರೆ, ಸರ್ಕಾರ ಹೇಳಿದ್ದಕ್ಕೆ ಇದು ಸೀಮಿತವಾಗಿಲ್ಲ. ಈ ತಿದ್ದುಪಡಿಗಳು ಸರ್ಕಾರವನ್ನು ದುರ್ಬಲಗೊಳಿಸಿ, ಲೆಫ್ಟಿನೆಂಟ್ ಗವರ್ನರ್ ಅವರ ಅಧಿಕಾರವನ್ನು ಹೆಚ್ಚಿಸುತ್ತವೆ. ದೆಹಲಿ ಸರ್ಕಾರ ಮತ್ತು ಲೆಫ್ಟಿನೆಂಟ್ ಗವರ್ನರ್ ನಡುವೆ ನಿರಂತರವಾಗಿ ನಡೆದ ಜಟಾಪಟಿಯನ್ನು ನಾವು ನೋಡಿದ್ದೇವೆ. ಕಾಶ್ಮೀರದಲ್ಲಿ ಕೂಡ ಇಂತಹ ಸನ್ನಿವೇಶಕ್ಕೆ ಕಾರಣವಾಗುವ ಸಂಭವವಿದೆ. ಪ್ರಜಾಸತ್ತಾತ್ಮಕ ವ್ಯವಸ್ಥೆ ಇಲ್ಲದಿರುವುದು ಮತ್ತು ಕೇಂದ್ರ ಸರ್ಕಾರದ ಮೇಲಿನ ವಿಶ್ವಾಸದ ಕೊರತೆಯು ಕಾಶ್ಮೀರದ ಜನರಲ್ಲಿ ಇರುವ ಅಸಮಾಧಾನಕ್ಕೆ ಕಾರಣ. ಪ್ರಜಾಸತ್ತಾತ್ಮಕ ಪ್ರಕ್ರಿಯೆ ಮತ್ತು ಚುನಾವಣೆ ಎಂಬುದು ಪ್ರಹಸನ ಎಂಬ ಭಾವನೆ ಜನರಲ್ಲಿ ಮೂಡುವಂತೆ ಮಾಡಬಾರದು. ಸರ್ಕಾರದ ಈಗಿನ ನಿರ್ಧಾರದಿಂದಾಗಿ ರಾಜ್ಯದ ಸ್ಥಾನ ಮರುಸ್ಥಾಪನೆಯ ಭರವಸೆ ಬಗ್ಗೆಯೂ ಅನುಮಾನ ಮೂಡುವಂತಾಗಿದೆ. ಏಕೆಂದರೆ, ರಾಜ್ಯ ಸ್ಥಾನ ಮರುಸ್ಥಾಪನೆಗೆ ಸರ್ಕಾರವು ಯಾವುದೇ ಕಾಲಮಿತಿಯನ್ನು ಹಾಕಿಕೊಂಡಿಲ್ಲ. ಈಗಿನ ಬದಲಾವಣೆಯು ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ–ರಾಜ್ಯಗಳ ಸಂಬಂಧದ ಕುರಿತು ಕೆಟ್ಟ ಮತ್ತು ವಿಕೃತ ಮಾದರಿಯೊಂದನ್ನು ರೂಪಿಸಿದೆ.

ದಿನದ ಟ್ವೀಟ್

ಆಡಳಿತ ಮಂಡಳಿಯನ್ನು ಹೊಣೆಯಾಗಿಸಿ

ಭದ್ರತೆಗೆ ನಿಯೋಜನೆಗೊಂಡಿದ್ದ ವ್ಯಕ್ತಿ ಸೂಚನೆಗಳನ್ನು ಪಾಲಿಸುತ್ತಿದ್ದನಷ್ಟೆ. ಮಾಲ್‌ನ ಆಡಳಿತ ಕೊಳೆತು ನಾರುತ್ತಿದೆ. ಈ ಬಡ ವ್ಯಕ್ತಿಯ ಬದಲಿಗೆ ಮಾಲ್‌ನ ವ್ಯವಸ್ಥಾಪಕ ನಿರ್ದೇಶಕರನ್ನು ವಜಾ ಮಾಡುವಂತಾಗಲಿ.

(ಬೆಂಗಳೂರಿನ ಜಿ.ಟಿ. ವರ್ಲ್ಡ್ ಮಾಲ್‌ನಲ್ಲಿ ಪಂಚೆ ಧರಿಸಿ ಬಂದಿದ್ದ ವ್ಯಕ್ತಿಯೊಬ್ಬರಿಗೆ, ಭದ್ರತೆಗೆ ನಿಯೋಜನೆಗೊಂಡಿದ್ದ ವ್ಯಕ್ತಿಯು ಪ್ರವೇಶ ನಿರಾಕರಿಸಿದ ಪ್ರಕರಣಕ್ಕೆ ಪ್ರತಿಕ್ರಿಯೆ)

ವೆಂಕಟರಮಣ ಸಿದ್ಧೇಶ್ವರ್, ಎಂಜಿನಿಯರ್

ಕಿಡಿನುಡಿ

ಕರ್ನಾಟಕದಲ್ಲಿನ ಉದ್ಯೋಗಗಳು ಕನ್ನಡಿಗರಿಗೇ ಎಂಬುದನ್ನು ನಾನು ಒಪ್ಪುವುದಿಲ್ಲ. ವೃತ್ತಿಸ್ಥಳದಲ್ಲಿ ವೈವಿಧ್ಯ ಇರಬೇಕು. ಎಲ್ಲೆಡೆಯೂ ಇನ್ನೂ ಹೆಚ್ಚಿಗೆ ಕನ್ನಡದ ಮಂದಿಗೆ ಉದ್ಯೋಗ ಸಿಗಬೇಕೆಂದು ನಾವು ಬಯಸುವುದಾದರೆ, ಅದಕ್ಕೆ ತಕ್ಕಂತೆ ಅವರಿಗೆ ಶಿಕ್ಷಣ ನೀಡಬೇಕು ಮತ್ತು ಅವರ ಕೌಶಲ ಅಭಿವೃದ್ಧಿಯತ್ತ ಗಮನಹರಿಸಬೇಕು. ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಆತಂಕಕ್ಕೆ ಸಂಬಂಧಿಸಿ ಹೇಳುವುದಾದರೆ, ನಾವು ಮತ್ತು ನಮ್ಮ ಮಕ್ಕಳು ಹೆಮ್ಮೆಯಿಂದ ಅವನ್ನು ಅನುಸರಿಸಬೇಕು, ಆಗ ಇತರರೂ ಈ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾರೆ ಮತ್ತು ಪ್ರಚುರಪಡಿಸುತ್ತಾರೆ. ನಮ್ಮ ಸಂಸ್ಕೃತಿಯನ್ನು ನಾವು ಕಳೆದುಕೊಳ್ಳುತ್ತಿರುವುದು ಇತರರಿಂದಲ್ಲ, ನಮ್ಮಲ್ಲಿರುವ ಅಭಿಮಾನದ ಕೊರತೆಯಿಂದ.

ವಿನಯ್ ಕುಮಾರ್ ಜಿ.ಬಿ., ಸಂಸ್ಥಾಪಕ. ಇನ್‌ಸೈಟ್ಸ್‌ಐಎಎಸ್

25 ವರ್ಷಗಳ ಹಿಂದೆ

ಮಂಗಳವಾರ, 20-7-1999

- **ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ನೂಕುನುಗ್ಗಲು**

ಬೀದರ್, ಜುಲೈ 19– ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಎಐಸಿಸಿ ವೀಕ್ಷಕರಿಗೆ ಅರ್ಜಿ ಸಲ್ಲಿಸುವುದಕ್ಕೆ ಇಂದು ಇಲ್ಲಿ ಕೆಲ ಕಾಲ ನೂಕುನುಗ್ಗಲು ಉಂಟಾಯಿತು.

- **ಮಲ್ಲೇಶ್ವರ: ಸಿಬಿಐ ಅಧಿಕಾರಿಗಳ ಸೋಗಿನಲ್ಲಿ ವಜ್ರ, ಚಿನ್ನ ಡಕಾಯಿತಿ**

ಬೆಂಗಳೂರು, ಜುಲೈ 19– ಸಿಬಿಐ ಅಧಿಕಾರಿಗಳ ಸೋಗು ಹಾಕಿಕೊಂಡು ಆಭರಣ ಅಂಗಡಿಗೆ ನುಗ್ಗಿದ ಡಕಾಯಿತರ ತಂಡವೊಂದು ಅಂಗಡಿಯಲ್ಲಿದ್ದವರ ಮೇಲೆ ಹಲ್ಲೆ ಮಾಡಿ, ಕಟ್ಟಿ ಹಾಕಿ, 30–40 ಲಕ್ಷ ರೂಪಾಯಿ ಮೌಲ್ಯದ ವಜ್ರ ಹಾಗೂ ಚಿನ್ನದ ಆಭರಣ ದೋಚಿಕೊಂಡು ಹೋಗಿರುವ ಘಟನೆ ಹಾಡಹಗಲೇ ನಗರದಲ್ಲಿ ನಡೆದಿದೆ.

ಮಲ್ಲೇಶ್ವರ ಬಡಾವಣೆಯಲ್ಲಿನ ಮಾರ್ಗೋಸಾ ರಸ್ತೆಯ ಗುರುನಾಥ ಆ್ಯಂಡ್ ಸನ್ಸ್ ಜ್ಯುವೆಲರಿ ಹಾಗೂ ವಜ್ರದ ಆಭರಣ ಅಂಗಡಿಯಲ್ಲಿ ಈ ಡಕಾಯಿತಿ ಇಂದು ಸಂಜೆ ನಡೆದಿದೆ.

- **ಪರಿಹಾರ ಕಾಣದ ದಳ ಬಿಕ್ಕಟ್ಟು: ಉಭಯ ಬಣಗಳ ಪ್ರತ್ಯೇಕ ಸಭೆ**

ನವದೆಹಲಿ, ಜುಲೈ 19– ಜನತಾದಳವು ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ ಜತೆ ಸೇರಬೇಕೆನ್ನುವ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ನೇತೃತ್ವದ ಗುಂಪಿನ ನಿಲುವು ಬಹುತೇಕವಾಗಿ ದಳದ ವಿಭಜನೆಗೆ ಎಡೆ ಮಾಡಿಕೊಟ್ಟಿದ್ದು, ಈಗ ಉದ್ಭವಿಸಿರುವ ಬಿಕ್ಕಟ್ಟು, ಯಾವುದೇ ಪರಿಹಾರ ಕಾಣದೆ ಮತ್ತಷ್ಟು ಕಗ್ಗಂಟಾಗಿದೆ.

ಜನತಾದಳ ರಾಷ್ಟ್ರೀಯ ಅಧ್ಯಕ್ಷ ಶರದ್ ಯಾದವ್ ಅವರು, ಈ ವಿವಾದದ ಬಗೆಗೆ ವಿವಿಧ ಪಕ್ಷಗಳ ನಾಯಕರ ಜತೆ ನಡೆಸಿದ ಮಾತುಕತೆ ಅಪೂರ್ಣಗೊಂಡಿರುವುದರಿಂದ, ಇಂದು ನಡೆಯಬೇಕಾಗಿದ್ದ ದಳದ ರಾಜಕೀಯ ವ್ಯವಹಾರಗಳ ಸಮಿತಿ ಸಭೆ ಮುಂದಕ್ಕೆ ಹೋಯಿತು.

50 ವರ್ಷಗಳ ಹಿಂದೆ

ಶನಿವಾರ, 20-7-1974

- **ಸಂಸ್ಥೆ ಅಧಿಕಾರಗಳಲ್ಲಿ ಸಚಿವರ ಸಿಂಹಪಾಲು: ಎ.ಐ.ಸಿ.ಸಿ.ಯಲ್ಲಿ ಟೀಕೆ**

ನವದೆಹಲಿ, ಜುಲೈ 19– ಪಕ್ಷದ ಉನ್ನತ ವೇದಿಕೆಗಳಾದ ಕಾರ್ಯಕಾರಿ ಸಮಿತಿ ಹಾಗೂ ಸಂಸದೀಯ ಮಂಡಲಿಗಳಲ್ಲಿ ಸಚಿವರುಗಳೇ ಪೂರ್ಣ ಮೇಲುಗೈ ಹೊಂದಿರುವುದನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧಿವೇಶನದಲ್ಲಿ ಇಂದು ಕಟುವಾಗಿ ಟೀಕಿಸಲಾಯಿತು.

ಪಕ್ಷದ ವೇದಿಕೆಗಳನ್ನು ಸರ್ಕಾರದ ಉಪಸಮಿತಿಗಳ ಮಟ್ಟಕ್ಕೆ ಅದುಮಲಾಗಿದೆ ಎಂದು ಪಕ್ಷದ ಅಂಗರಚನೆಯ ತಿದ್ದುಪಡಿ ಕುರಿತ ಚರ್ಚೆಯಲ್ಲಿ ಭಾಗವಹಿಸಿದ ಹಿರಿಯ ಸದಸ್ಯರು ನೊಂದು ನುಡಿದರು.

- **ಬಿಟ್ಟಿ ಊಟ, ವಸತಿ ವ್ಯವಸ್ಥೆ ಇಲ್ಲ**

ನವದೆಹಲಿ, ಜುಲೈ 19– ಉಚಿತ ಭೋಜನ ಅಥವಾ ಪ್ರಯಾಣ ವ್ಯವಸ್ಥೆಗಳನ್ನು ನಿರೀಕ್ಷಿಸಬೇಡಿ ಎಂದು ಅಧಿವೇಶನದಲ್ಲಿ ಭಾಗವಹಿಸುವ ಸದಸ್ಯರಿಗೆ ತಿಳಿಸಲಾಗಿದೆ.

ಟೀ, ಕಾಫಿ ಬಿಟ್ಟರೆ ಬೇರಾವ ತಿಂಡಿ ತೀರ್ಥಗಳೂ ಇಲ್ಲ. ವಸತಿ ವ್ಯವಸ್ಥೆಯನ್ನೂ ಸದಸ್ಯರೇ ನೋಡಿಕೊಳ್ಳಬೇಕೆಂದು ತಿಳಿಸಲಾಗಿದೆ.

ಈ ಅಧಿವೇಶನದ್ದು ಅತಿ ಸರಳ ಹಾಗೂ ಮಿತವ್ಯಯದ ವ್ಯವಸ್ಥೆ. ಪ್ಲೇಟ್ ಊಟದ ಬೆಲೆ ಎರಡು ರೂ. ಮಿತವ್ಯಯ ದರ್ಜೆಯ ಒಂದು ರೂ. ಊಟವೂ ಇದೆ.

ಮಗಳ ಮದುವೆ: ಹೆತ್ತವರ ಉಮೇದಿನಲ್ಲಿ ‘ಅವಳ’ ಕನಸು ಗೌಣವಾಗದಿರಲಿ

ಕನಸಿನ ವಿವಾಹ ಮತ್ತು ಬೃಹತ್ ಉದ್ಯಮ

ವಿಶ್ಲೇಷಣೆ

ಜ್ಯೋತಿ

ಭಾರತದಲ್ಲಿ ಹೆಣ್ಣುಮಗು ಹುಟ್ಟಿದ ದಿನದಿಂದ ಅವಳ ಮದುವೆ ತಯಾರಿ ಆರಂಭವಾಗುತ್ತದೆ. ವರದಕ್ಷಿಣೆ, ಆಭರಣ, ಹೆಚ್ಚುವರಿ ಬಳುವಳಿಗಳು ಮತ್ತು ಅದ್ದೂರಿ ಮದುವೆ ಖರ್ಚುವೆಚ್ಚವನ್ನು ಲೋಕದ ರೂಢಿ ಮತ್ತು ನಿರೀಕ್ಷೆಯಂತೆ ಅವಳ ಅಪ್ಪನೇ ನಿರ್ವಹಿಸಬೇಕಾದ್ದರಿಂದ, ಸಹಜವಾಗಿ ಅದರ ಲೆಕ್ಕಾಚಾರ ಹಾಗೂ ಗಳಿಕೆಯ ಮಾರ್ಗಗಳನ್ನು ಅವನು ಕಂಡುಕೊಳ್ಳಬೇಕಾಗುತ್ತದೆ. ಹೆಣ್ಣು ಒಂದು ಆರ್ಥಿಕ ಭಾರವೆನ್ನುವ ಪರಿಕಲ್ಪನೆಯಿಂದಾಗಿಯೇ ಹೆಣ್ಣುಮಗುವಿನ ಭ್ರೂಣಹತ್ಯೆಯನ್ನು ಇಂದಿಗೂ ಸಂಪೂರ್ಣವಾಗಿ ಕೊನೆಗಾಣಿಸಲು ಸಾಧ್ಯವಾಗಿಲ್ಲ.

ಇದರ ಜೊತೆಗೆ, ನಮ್ಮ ಸಮಾಜದ ‘ಉಳ್ಳವರು’ ತಮ್ಮ ಮಕ್ಕಳ ವಿವಾಹವನ್ನು ಬಹಳ ಅದ್ದೂರಿಯಿಂದ ಮಾಡಿ ಅದನ್ನು ಮಾಧ್ಯಮಗಳಲ್ಲಿ ವಿಜೃಂಭಿಸುವಂತೆ ಮಾಡುವುದರಿಂದ, ಹೆಣ್ಣು ಹೆತ್ತವರು ಸ್ಪರ್ಧೆಗೆ ಬಿದ್ದವರಂತೆ, ಸಾಲ ಮಾಡಿಯಾದರೂ ಮದುವೆಯೆನ್ನುವ ಕೆಲವು ಸ್ಮರಣೀಯ ಕ್ಷಣಗಳನ್ನು ಅವಿಸ್ಮರಣೀಯ ಆಗಿಸಲು ಹರಸಾಹಸ ಮಾಡುವುದನ್ನು ನಾವು ನೋಡುತ್ತೇವೆ.

ಕಾಲ ಬದಲಾಗುತ್ತಿದೆ ಎಂದು ನಾವೆಷ್ಟೇ ಹೇಳಿಕೊಂಡರೂ ಇಂದಿಗೂ ಹೆಣ್ಣುಮಕ್ಕಳ ಶಿಕ್ಷಣಕ್ಕಿಂತ ಗಂಡುಮಕ್ಕಳ ವಿದ್ಯಾರ್ಜನೆಗೆ ಯಥೇಚ್ಛ ಹಣ ಖರ್ಚು ಮಾಡುತ್ತೇವೆ. ಯಾಕೆಂದರೆ, ಹೆಣ್ಣಿನ ಮದುವೆ ಖರ್ಚು ಎನ್ನುವ ಒಂದು ದೊಡ್ಡ ಮಟ್ಟದ ನಿರೀಕ್ಷಿತ ಖರ್ಚಿನ ಅಂದಾಜು ಮನಸ್ಸಿನ ಮೂಲೆಯಲ್ಲಿ ಸದಾ ಎಚ್ಚರವಾಗಿ ಕಾಡುತ್ತಿರುವುದರಿಂದ, ಅವಳಿಗೆ ಮಾಡುವ ಉಳಿದೆಲ್ಲಾ ಖರ್ಚಿನಲ್ಲಿ ಒಂದು ಮಿತಿಯನ್ನು ಹಾಕಿಕೊಳ್ಳುತ್ತೇವೆ.

ಇದಕ್ಕೆ ಅನುಗುಣವಾಗಿ ನಮ್ಮ ಸಮಾಜದಲ್ಲಿ ನಡೆಯುತ್ತಿರುವ ಒಂದು ವಿದ್ಯಮಾನವನ್ನು ಉದಾಹರಿಸುವುದಾದರೆ, ನಮ್ಮ ಹೆಣ್ಣುಮಕ್ಕಳು, ಗಂಡುಮಕ್ಕಳಿಗೆ ಹೋಲಿಸಿದರೆ ತಮ್ಮ ವಿದ್ಯಾಭ್ಯಾಸವನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ಮನೆಕೆಲಸದಲ್ಲಿಯೂ ಹೆತ್ತವರಿಗೆ ನೆರವಾಗುತ್ತಾರೆ. ಇದಕ್ಕೆ ತದ್ವಿರುದ್ಧವಾಗಿ, ಗಂಡುಮಕ್ಕಳು ಆಟ ಆಡಿಕೊಂಡು ಅಥವಾ ಸ್ನೇಹಿತರೊಂದಿಗೆ ಸುತ್ತಾಡಿಕೊಂಡು ಕಾಲಹರಣ ಮಾಡುವುದು ಸಾಮಾನ್ಯ ದೃಶ್ಯ. ಹೆಚ್ಚು ಸ್ವಾತಂತ್ರ್ಯ ಮತ್ತು ಸೌಲಭ್ಯಗಳನ್ನು ಹೊಂದಿರುವ ಗಂಡಿಗಿಂತ, ಕಟ್ಟುಪಾಡುಗಳನ್ನು ಎದುರಿಸುವ ಮತ್ತು ಮನೆಯ ಕೆಲಸಕ್ಕೂ ಕೈಜೋಡಿಸುವ ಹೆಣ್ಣುಮಕ್ಕಳು ಚೆನ್ನಾಗಿ ಅಂಕ ಗಳಿಸುವುದರ ಹಿಂದಿನ ಮರ್ಮವೇನು? ಶಿಕ್ಷಣದಲ್ಲಿ ಹಿಂದೆ ಉಳಿಯುವ ಗಂಡು ಮತ್ತು ಹೆಣ್ಣುಗಳನ್ನು, ಹೆತ್ತವರು ಮತ್ತು ಸಮಾಜ ನಿಭಾಯಿಸುವ ರೀತಿಯಲ್ಲಿ ಅಜಗಜಾಂತರವನ್ನು ಕಾಣುತ್ತೇವೆ. ಗಂಡು ಎಷ್ಟೇ ಬಾರಿ ಫೇಲ್ ಆದರೂ ಪಾಸಾಗಿ ಶಿಕ್ಷಣ ಮುಂದುವರಿಸಬೇಕೆಂದು ಹೆತ್ತವರು ಒತ್ತಾಯಿಸುತ್ತಾರೆ, ಪ್ರೋತ್ಸಾಹಿಸುತ್ತಾರೆ ಮತ್ತು ಇನ್ನಷ್ಟು ಖರ್ಚು ಮಾಡಿ ಅವಕಾಶಗಳನ್ನು ನೀಡುತ್ತಾರೆ. ಇದಕ್ಕೆ ತದ್ವಿರುದ್ಧವಾಗಿ, ಹೆಣ್ಣುಮಕ್ಕಳು ವಿದ್ಯಾಭ್ಯಾಸದಲ್ಲಿ ಹಿಂದುಳಿದರೆ ಅಲ್ಲಿಗೆ ಅವರ ಶಿಕ್ಷಣ ಮೊಟಕುಗೊಳಿಸಲಾಗುತ್ತದೆ ಮತ್ತು ಅವರ ವಿವಾಹದ ಕುರಿತಂತೆ ಮನೆಯಲ್ಲಿ ಚಿಂತನ-ಮಂಥನ ಪ್ರಾರಂಭವಾಗುತ್ತದೆ. ಇದರಿಂದ ಮುಕ್ತಿ ಸಿಗಲೆಂದೇ ನಮ್ಮ ಹೆಣ್ಣುಮಕ್ಕಳು ಗಂಡಿಗಿಂತ ಹೆಚ್ಚು ಶ್ರಮ ವಹಿಸುತ್ತಾರೆ. ಅವರ ಶಿಕ್ಷಣದ ಮುಂದುವರಿಕೆಗಾಗಿ ಉತ್ತಮ ಫಲಿತಾಂಶ ಮತ್ತು ಸಾಧನೆಯನ್ನು ನಿರಂತರವಾಗಿ ದಾಖಲಿಸುವುದು ಅವರಿಗೆ ಅನಿವಾರ್ಯ.

ಈ ಕಾರಣದಿಂದ, ಮದುವೆಯ ಸಂದರ್ಭವನ್ನು ವೈಭವೀಕರಿಸುವುದು, ಅದಕ್ಕೆ ತಗಲುವ ವೆಚ್ಚವನ್ನು ಸ್ಪರ್ಧಾತ್ಮಕ ಪ್ರತಿಷ್ಠೆಯಾಗಿ ಪ್ರದರ್ಶಿಸುವುದು, ಅವಳ ವಿದ್ಯಾಭ್ಯಾಸಕ್ಕೆ ಖರ್ಚು ಮಾಡದ ಹಣವನ್ನು ಮದುವೆಗಾಗಿ ಪೋಲು ಮಾಡುವುದು, ಹೆಣ್ಣುಮಕ್ಕಳು ಅರಿವಿನ ಪ್ರಪಂಚಕ್ಕೆ ತೆರೆದುಕೊಂಡು ತಮ್ಮ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನಗಳಿಗೆ ಮಾಡುವ ದೊಡ್ಡ ಅವಮಾನವೇ ಸರಿ.

ನಮ್ಮ ಹೆಣ್ಣುಮಕ್ಕಳಿಗೆ ಅಗತ್ಯವಾಗಿರುವುದು ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣ. ಅದೊಂದೇ ಅವರಿಗೆ ಆತ್ಮವಿಶ್ವಾಸದಿಂದ ಸ್ವಾವಲಂಬಿಯಾಗಿ ಬದುಕುವಂತೆ ಪ್ರೇರೇಪಿಸುವ ದಾರಿದೀಪವಾಗಬಲ್ಲದು. ಮದುವೆ ವೈಭೋಗವನ್ನು ಪ್ರದರ್ಶಿಸುವಂತೆ, ಮಹಿಳಾ ಸೆಲೆಬ್ರಿಟಿಗಳು ತಮ್ಮ ಬಸಿರು, ಬಾಣಂತನದ ಫೋಟೊಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವುದು ಕೂಡ ಹೆಚ್ಚಾಗುತ್ತಿದೆ. ಈ ವಿದ್ಯಮಾನವನ್ನು ಉತ್ತಮ ಬೆಳವಣಿಗೆ, ಇದು ಹೆಣ್ಣಿನ ದೈಹಿಕ ಬದಲಾವಣೆಗಳು ಮತ್ತು ಹಂತಗಳನ್ನು ಸಹಜವೆಂದು ಕಾಣಿಸುವ ಪ್ರಕ್ರಿಯೆ ಎಂದು ಹೇಳಿಕೊಂಡರೂ ಹೆಣ್ಣಿನ ಜೀವನದ ಅನಿವಾರ್ಯ ಮತ್ತು ಸಂಭ್ರಮಿಸಲೇಬೇಕಾದ ಗಳಿಗೆ ಎನ್ನುವ ಸಂದೇಶವೂ ರವಾನೆಯಾಗುತ್ತಿದೆ ಎನ್ನುವುದು ಗಮನಾರ್ಹ. ಹೆಣ್ಣಿನ ಜೀವನವು ಅದ್ದೂರಿ ಮದುವೆ ಮತ್ತು ತಾಯ್ತನದ ಸಂಭ್ರಮಾಚರಣೆ ಎನ್ನುವ ಸೀಮಿತ ಚೌಕಟ್ಟಿನಿಂದ ಹೊರಗೆ ಕೂಡ ತನ್ನತನ ಕಾಣುವ ಹೆಣ್ಣುಮಕ್ಕಳ ಯಶೋಗಾಥೆಗಳು ಹೆಚ್ಚೆಚ್ಚು ಸಾರ್ವಜನಿಕವಾಗಬೇಕಾದುದು ಹಿತ.

ವೈಭವದ ವಿವಾಹಗಳು ವಾಣಿಜ್ಯೀಕರಣಕ್ಕೆ ಒಳಗಾಗಿವೆ. ಅದಕ್ಕಾಗಿ ಉದ್ಯಮಗಳಿವೆ. ಇವು, ಈ ವೈಭವೀಕರಣವು ಹೀಗೆಯೇ ಮುಂದುವರಿಯಬೇಕೆಂದು ಆಶಿಸುತ್ತವೆ ಮತ್ತು ಗ್ರಾಹಕರ ಮೇಲೆ ಪರೋಕ್ಷವಾಗಿ ಪ್ರಭಾವ ಬೀರುತ್ತವೆ, ಕೆಲವೊಮ್ಮೆ ಒತ್ತಡವನ್ನೂ ಹೇರುತ್ತವೆ. ಉದಾಹರಣೆಗೆ, ಇತ್ತೀಚಿನ ದಿನಗಳಲ್ಲಿ ಟ್ರೆಂಡ್ ಆಗಿರುವ ವಿವಾಹಪೂರ್ವ ಹೊರಾಂಗಣ ಚಿತ್ರೀಕರಣ. ಇದು, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬೇಕೆನ್ನುವ ಅತಿರೇಕದ ಹುಚ್ಚು ಬಿಟ್ಟರೆ, ಬಹುತೇಕ ಅನಗತ್ಯ. ಆದರೂ ಮುಂದಿನ ದಿನಗಳಲ್ಲಿ ಇದು ವಿವಾಹದ ಕಡ್ಡಾಯ ಸಾಂಸ್ಕೃತಿಕ ಭಾಗವಾಗುವ ಎಲ್ಲ ಲಕ್ಷಣಗಳನ್ನೂ ಪ್ರಕಟಿಸುತ್ತಿದೆ. ಹಾಗೆಯೇ, ನಿಶ್ಚಿತಾರ್ಥ, ಮೆಹಂದಿ, ಅರಿಸಿನಶಾಸ್ತ್ರ, ರಿಸೆಪ್ಷನ್‌ನಂತಹ ಎಲ್ಲವೂ ವಿಸ್ತರಿಸಿಕೊಳ್ಳುತ್ತಾ ವಿವಾಹದ ಖರ್ಚುಗಳನ್ನು ಇನ್ನಷ್ಟು ಹೆಚ್ಚಾಗಿಸುತ್ತಿವೆ.

ಆತಂಕಕಾರಿ ಬೆಳವಣಿಗೆಯೆಂದರೆ, ಆರ್ಥಿಕವಾಗಿ ಹಿಂದುಳಿದವರು ಕೂಡ ವಿಪರೀತ ಸಾಲ ಮಾಡಿಯಾದರೂ ಶ್ರೀಮಂತವಾಗಿ ವಿವಾಹ ನೆರವೇರಿಸುವ ಹುಚ್ಚಿಗೆ ಬೀಳಲು ಮುಂದಾಗುತ್ತಿರುವುದು. ಅದ್ದೂರಿ ಮದುವೆಯಾದ ಹೆಣ್ಣು ಗಂಡನ ಮನೆಯಲ್ಲಿ ಬದುಕಲಾರದೆ ವಾಪಸ್ ಬರಬೇಕೆಂದರೂ ಅವಳಿಗೆ ಅಗತ್ಯವಾದ ಆರ್ಥಿಕ ನೆರವಿನ ಬೆಂಬಲ ನೀಡಲಾರದಷ್ಟು ದುಃಸ್ಥಿತಿಯಲ್ಲಿರುವ ಅಸಹಾಯಕ ಹೆತ್ತವರೂ ಇದ್ದಾರೆ. ಜೊತೆಗೆ, ಆಡಂಬರದಿಂದ ವಿವಾಹ ನೆರವೇರಿಸಿದ ಹೆತ್ತವರು, ವಿವಾಹ ವಿಫಲವಾದಾಗ ಸಾರ್ವಜನಿಕವಾಗಿ ಹೇಳಿಕೊಳ್ಳಲಾಗದೆ ಅದನ್ನೊಂದು ಅವಮಾನವೆಂದು ಪರಿಗಣಿಸುವುದನ್ನು ಮತ್ತು ಸಹಿಸಿಕೊಳ್ಳುವಂತೆ ಹೆಣ್ಣುಮಕ್ಕಳ ಮೇಲೆ ಒತ್ತಡ ಹೇರುವುದನ್ನು ನೋಡುತ್ತೇವೆ.

ಇಂತಹ ದುಃಸ್ಥಿತಿ ಕುರಿತಂತೆ ಸಾರ್ವಜನಿಕ ಹಿತಾಸಕ್ತಿಯ ವರದಿಗಳು ಏನು ಹೇಳುತ್ತಿವೆ? ಒಂದು ಅಂತರರಾಷ್ಟ್ರೀಯ ವರದಿಯ ಪ್ರಕಾರ, ಭಾರತೀಯರು ಮಕ್ಕಳ ವಿದ್ಯಾಭ್ಯಾಸಕ್ಕಿಂತ ವಿವಾಹಕ್ಕೆ ಎರಡು ಪಟ್ಟು ಹೆಚ್ಚು ಖರ್ಚು ಮಾಡುತ್ತಾರೆ. ವಿವಾಹ ಉದ್ಯಮವು ಭಾರತದಲ್ಲಿ ಬೃಹತ್ ಸ್ವರೂಪ ಪಡೆದಿದೆ ಮತ್ತು ವೇಗವಾಗಿ ಬೆಳೆಯುತ್ತಿದೆ. ಹಾಗೆಯೇ, ಜಗತ್ತಿನಲ್ಲಿ ನಡೆಯುವ ಲಿಂಗ ಆಧಾರಿತ ಭ್ರೂಣಹತ್ಯೆಯ ಶೇ 40ರಷ್ಟು ಪ್ರಕರಣಗಳು ಭಾರತದಲ್ಲಿ ಸಂಭವಿಸುತ್ತಿವೆ. ಈ ರೀತಿ, ವಿವಾಹವನ್ನು ಜೀವನದ ಅತಿ ಮುಖ್ಯ ಘಟನೆಯನ್ನಾಗಿಸುವುದು ಜೀವನದ ಉಳಿದೆಲ್ಲಾ ಉನ್ನತ ಉದ್ದೇಶಗಳನ್ನು ಗೌಣವಾಗಿಸುತ್ತದೆ. ಹೆಣ್ಣಿಗಾಗಿ ನಾವು ರೂಪಿಸುವ ‘ಕನಸಿನ ವಿವಾಹದ ಬೃಹತ್ ಕಾರ್ಯಯೋಜನೆ’ಯಲ್ಲಿ ಅವಳ ಕನಸಿನ ಜೀವನ ಕಮರಿ ಹೋಗಬಾರದು, ಅಲ್ಲವೇ?

ಹಾಗಾಗಿ, ವಿವಾಹವನ್ನು ವೈಭೋಗವಾಗಿಸುವುದರ ಬದಲು ಹೆಣ್ಣಿನ ಸ್ವಪರಿಶ್ರಮದ ಸಾಧನೆಗಳನ್ನು ಹೆಮ್ಮೆಯಿಂದ ಸಾರ್ವಜನಿಕಗೊಳಿಸುವುದನ್ನು ಹೆತ್ತವರು ಮಾಡಬೇಕಾಗಿದೆ. ವಿವಾಹಗಳನ್ನು ಸರಳಗೊಳಿಸಿ, ಅದರ ಬದಲಾಗಿ ಹೆಣ್ಣುಮಕ್ಕಳ ಸಾಧನೆಗಳನ್ನು ಬೃಹತ್ ಮಟ್ಟದಲ್ಲಿ ಪ್ರಚುರಗೊಳಿಸಿದರೆ ಅದು ಅವರಲ್ಲಿ ಆತ್ಮವಿಶ್ವಾಸ ಮೂಡಿಸುತ್ತದೆ. ಹೀಗಾದಲ್ಲಿ, ನಮ್ಮ ಹೆಣ್ಣುಮಕ್ಕಳು ದೇಹವನ್ನು ಸುಂದರವಾಗಿ ಕಾಣಿಸುವ ದೀರ್ಘ ಕಾಲಹರಣದ ಪ್ರಾಜೆಕ್ಟ್ ಮತ್ತು ರೀಲ್ಸ್ ಪ್ರಪಂಚದಿಂದ ಹೊರಬಂದು ಏನಾದರೂ ಉನ್ನತವಾದದ್ದನ್ನು ಸಾಧಿಸುವ ಕಾಯಕದಲ್ಲಿ ತೊಡಗಿಕೊಂಡಾರು.

ವೈಭವದ ವಿವಾಹವನ್ನು ಈಗ ಸಂಸ್ಕೃತಿಯ ಭಾಗ ಎಂಬಂತೆ ಬಿಂಬಿಸಲಾಗುತ್ತಿದೆ. ಆದರೆ, ಸಂಸ್ಕೃತಿಯನ್ನು ಆಕರ್ಷಣೀಯ ಪ್ಯಾಕೇಜ್ ಮಾಡಿ ಅದನ್ನು ಗ್ರಾಹಕರಿಗೆ ಉಣಬಡಿಸಿ ಲಾಭ ಮಾಡಿಕೊಳ್ಳುವುದೇ ಒಂದು ಬೃಹತ್ ಉದ್ಯಮವಾಗಿದೆ. ಇದು, ಹೆತ್ತವರನ್ನು ಬಡವಾಗಿಸಿ, ವಿವಾಹಕ್ಕೆ ಸಂಬಂಧಿಸಿದ ಉದ್ಯಮಗಳನ್ನು ಶ್ರೀಮಂತವಾಗಿಸುವ ಪ್ರಾಜೆಕ್ಟ್ ಅಷ್ಟೇ. ಈ ಜಾಲದಿಂದ ಬಿಡಿಸಿಕೊಳ್ಳುವುದು, ಸಾಮಾಜಿಕ ಪ್ರತಿಷ್ಠೆಯು ಸ್ಪರ್ಧಾತ್ಮಕವಾಗಿರುವ ಈ ಕಾಲದಲ್ಲಿ ಒಂದು ದೊಡ್ಡ ಸವಾಲೇ ಸರಿ. ಈ ಮಾಯೆಯಿಂದ ತಪ್ಪಿಸಿಕೊಳ್ಳುವುದು ಎಚ್ಚೆತ್ತ, ಪ್ರಜ್ಞಾವಂತ, ನಿರ್ಲಿಪ್ತ ಮತ್ತು ಉನ್ನತ ಸಾಧನೆಗಳಲ್ಲಿ ತನ್ನತನ ಹುಡುಕುವ ಮನಸ್ಸುಗಳಿಗಷ್ಟೇ ಸಾಧ್ಯ.

ಚುರುಮುರಿ

ಎಕ್ಸ್ ವೈ ಝಡ್!

• ಚಂದ್ರಕಾಂತ ವಡ್ಡು

‘ವಾಟ್ಸ್‌ಆ್ಯಪ್‌ನಲ್ಲಿ ನೀನು ಕಳಿಸಿದ್ದ ಕಿರಾಣಿ ಸಾಮಾನು ಪಟ್ಟಿ ಕಾಣಿಸ್ತಿಲ್ಲ…’ ಅಂಗಡಿ ಮುಂದೆ ನಿಂತಿದ್ದ ತಿಂಗಳೇಶ ಮಡದಿಗೆ ಕರೆ ಮಾಡಿದ.

‘ತಲೆ ಕೆಡಿಸಿಕೊಳ್ಳಬೇಡಿ, ಅತ್ತೆ ಆ ಪಟ್ಟಿ ಸರಿಯಿಲ್ಲ ಅಂತಾರೆ. ಅದಕ್ಕೆ ನಾನೇ ಅಳಿಸಿದೆ. ಮನೆಯಲ್ಲಿ ಎಲ್ಲರ ಜೊತೆ ಚರ್ಚೆ ಮಾಡಿ ಬೇರೆ ಪಟ್ಟಿ ಕಳಿಸ್ತೀನಿ. ಅಲ್ಲೇ ಕಾಯ್ತಿರಿ’.

‘ನಿನ್ನ ತವರುಮನೆ ಮೈಸೂರು ಆಗಿರಬೌದು. ಹಾಗಂತ ಸಿದ್ದರಾಮಯ್ಯ ಅವರನ್ನೇ ಅನುಕರಿಸಬೇಕಿಲ್ಲ’.

‘ಅದೇನ್ರೀ… ನಾನೇನು ‘ಮುಡಾ’ದಿಂದ ಸೈಟು ಪಡೆದಿದ್ದೇನೆ ಅನ್ನೋಹಾಗೆ ಮಾತಾಡ್ತೀರಿ’.

‘ಮೈಸೂರಿನವರಿಗೆ ಸದಾ ಸೈಟುಗಳದೇ ಧ್ಯಾನ! ನಾನು ಹೇಳಿದ್ದು ಸಿದ್ದರಾಮಯ್ಯನವರು ಎಕ್ಸ್ ಕನ್ನಡಿಯಲ್ಲಿ ಕನ್ನಡಿಗರಿಗೆ ಉದ್ಯೋಗ ತೋರಿಸಿ ಕ್ಷಣಾರ್ಧದಲ್ಲಿ ಮಾಯ ಮಾಡಿದ್ದು’.

‘ಹೌದುರೀ… ಎಕ್ಸ್‌ನಲ್ಲಿ ಪ್ರತ್ಯಕ್ಷ ಕಂಡರೂ ‘ವೈ?’ ಅಂತ ಪ್ರಶ್ನೆ ಹಾಕಿ ಪ್ರಮಾಣಿಸಿ ನೋಡೋ ಕಾಲವಿದು. ಮುಖ್ಯಮಂತ್ರಿಗಳು ಸಚಿವ ಸಂಪುಟದ ನಿರ್ಧಾರವನ್ನು ಎಕ್ಸ್‌ನಲ್ಲಿ ಹಂಚಿಕೊಂಡಿದ್ದೇ ತಡ, ಶಾ, ಮಿಶ್ರಾ, ಪೈಗಳು ‘ವೈ?’ ‘ವೈ?’ ‘ವೈ?’ ಎಂದು ಮುಗಿಬಿದ್ದರು ನೋಡಿ. ಎಲ್ಲರ ಕರ್ನಾಟಕ ಎಂದು ಹೊರಟ ಸಿದ್ರಾಮಣ್ಣ ಕೆಲವರ ಕರ್ನಾಟಕದ ಮಾತು ಕೇಳುವಂತಾಯಿತು. ಕೊನೆಗೆ ಎಕ್ಸ್‌ನಲ್ಲಿ ಏನೇನೋ ಮಿಕ್ಸ್ ಮಾಡಿಟ್ಟರು’.

‘ಕನ್ನಡಿಗರಿಗೆ ಮೀಸಲಾತಿ ನೀಡೋದನ್ನ ಉದ್ಯಮಿಗಳು ವಿರೋಧಿಸುವುದಿಲ್ಲ. ಆದರೆ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರತಿಭಾವಂತರ ಅಗತ್ಯ ಇದೆಯಂತೆ. ಹಾಗಾಗಿ ಕನ್ನಡಿಗರ ಮೀಸಲಾತಿ ಪ್ರಮಾಣವನ್ನು ಶೇ 25ಕ್ಕೆ ಇಳಿಸಬೇಕು ಎಂಬುದು ಅವರ ವಾದ’.

‘ಅಂದ್ರೆ ಅವರ ಉದ್ಯಮಗಳಲ್ಲಿ ಕಾಲುಭಾಗ ಪ್ರತಿಭಾಹೀನರಿಗೆ ಅವಕಾಶ ಕಲ್ಪಿಸುವ ಉದಾರ ಮನೋಭಾವ ತೋರಿಸಿದ್ದಾರೆ ಅನ್ನಿ’ ಅಮ್ಮನ ವ್ಯಂಗ್ಯ ತುಂಡರಿಸಿದ ಮಗ, ಇ.ಡಿ. ಶೈಲಿಯಲ್ಲಿ ಎಂಟ್ರಿ ಕೊಟ್ಟು, ‘ಇನ್ನು ಮೇಲೆ ಸಚಿವ ಸಂಪುಟದ ಸಭೆಗೆ ಉದ್ಯಮಿ ಪ್ರತಿನಿಧಿ ಕರೆಯುವುದೇ ವಾಸಿ’ ಎಂದು ಎಕ್ಸ್ ವೈಗೆ ಝಡ್ ಸೇರಿಸಿದ!

ಸಂಗತ

ಕದನ ಕಲಾಪದಲ್ಲಿ ‘ನೀನಾ- ನಾನಾ?’

ಪಾರದರ್ಶಕತೆ ಇಲ್ಲದ ಆಳ್ವಿಕೆಯಲ್ಲಿ ಮೊದಲು ಬಲಿಯಾಗುವುದು ಆಡಳಿತದ ದಕ್ಷತೆ

• ನಾ.ದಿವಾಕರ

ನಮ್ಮ ಅಧಿಕಾರ ರಾಜಕಾರಣ ಮತ್ತು ಆಡಳಿತ ಕೇಂದ್ರಗಳಲ್ಲಿ ಉತ್ತರದಾಯಿತ್ವ ಬಹುಮಟ್ಟಿಗೆ ಮರೆಯಾಗಿದೆ. ಪ್ರಧಾನಿಯಿಂದ ಹಿಡಿದು ಪಂಚಾಯಿತಿ ಅಧ್ಯಕ್ಷರವರೆಗೆ ಚುನಾಯಿತ ಪ್ರತಿನಿಧಿಗಳು ಯಾವುದೇ ರೀತಿಯ ನೈತಿಕ ಜವಾಬ್ದಾರಿಯನ್ನು ಒಪ್ಪಿಕೊಳ್ಳುವ ಒಂದು ಉದಾತ್ತ ಸಂಸ್ಕೃತಿಯಿಂದ ವಿಮುಖರಾಗಿರುವುದು ಅಧಿಕಾರ ರಾಜಕಾರಣದ ಬಹುದೊಡ್ಡ ಕೊರತೆಯಾಗಿ ಪರಿಣಮಿಸಿದೆ.

ದೇಶದ ಸಮಸ್ತ ಜನಕೋಟಿಯನ್ನು ಪ್ರಭಾವಿಸುವಂತಹ ಮಸೂದೆಗಳನ್ನು ಸದನದಲ್ಲಿ ಚರ್ಚೆಗೆ ಒಳಪಡಿಸದೆಯೇ ಅವುಗಳಿಗೆ ಅನುಮೋದನೆ ಪಡೆಯುವ ಹೊಸ ಪರಂಪರೆಯು ಕೇಂದ್ರದಲ್ಲಿ ಶುರುವಾಗಿದೆ. ಮತ್ತೊಂದೆಡೆ, ದೇಶದಲ್ಲಿ ಸಂಭವಿಸುತ್ತಿರುವ ಸಾವು– ನೋವು, ಅಪಘಾತ, ಅವಘಡ, ಮಾನವನಿರ್ಮಿತ ದುರಂತಗಳು, ಕಳಪೆ ಕಾಮಗಾರಿಗಳು, ಬ್ರಹ್ಮಾಂಡ ಭ್ರಷ್ಟಾಚಾರಗಳಿಗೆ ಆಡಳಿತಾತ್ಮಕವಾಗಿ ಯಾರೂ ನೈತಿಕವಾಗಿ ಜವಾಬ್ದಾರರಲ್ಲ ಎಂಬ ಸಂದೇಶವು ದೇಶದಾದ್ಯಂತ ರವಾನೆಯಾಗತೊಡಗಿದೆ. ಇದಕ್ಕೆ ಬಲಿಯಾಗಿರುವುದು ‘ಸದನ’ ಎಂಬ ಮಹತ್ವದ ವೇದಿಕೆ ಮತ್ತು ‘ಕಲಾಪ’ ಎಂಬ ಮೌಲ್ಯಯುತ ಮಾತು ಹಾಗೂ ನಡವಳಿಕೆ.

ತಮ್ಮ ಖಾತೆಗೆ ಸಂಬಂಧಿಸಿದ ಪ್ರಶ್ನೆಗಳು, ಗೊತ್ತುವಳಿಗಳು ಏನಾದರೂ ಇದ್ದರೆ ಸಂಬಂಧಪಟ್ಟ ಸಚಿವರು, ಮುಖ್ಯಮಂತ್ರಿ, ಪ್ರಧಾನಮಂತ್ರಿಯೂ ಸೇರಿದಂತೆ ನಿರ್ಣಾಯಕ ಸ್ಥಾನದಲ್ಲಿ ಇರುವವರು ಸದನದ ಕಲಾಪದಲ್ಲಿ ಕಡ್ಡಾಯವಾಗಿ ಹಾಜರಿರುತ್ತಿದ್ದ ಕಾಲವೂ ಒಂದಿತ್ತು. ಬಹುಶಃ ಈಗಿನ ಸಮಾಜಕ್ಕೆ ಇದು ಕಾಗಕ್ಕ ಗೂಬಕ್ಕನ ಕತೆಯ ಹಾಗೆ ಕಾಣಬಹುದು. ಏಕೆಂದರೆ ಶಾಸನಸಭೆಗಳಲ್ಲಿ ಪ್ರಶ್ನಿಸಲು ಇರುವ ಅವಕಾಶವೇ ಮೊಟಕುಗೊಂಡಿದೆ. ಅರ್ಥಪೂರ್ಣ ಚರ್ಚೆಗಳಿಗೆ ತಾವಿಲ್ಲದಂತಾಗಿದೆ. ವಿರೋಧ ಪಕ್ಷಗಳ ಸದಸ್ಯರನ್ನು ಹೊರಹಾಕುವ ಪರಿಪಾಟವು ದಿನೇ ದಿನೇ ಹೆಚ್ಚು ಬಲ ಪಡೆಯತೊಡಗಿದೆ. ಈ ಮಾತು ವಿಧಾನಸಭೆಗಳಿಗೂ ಅನ್ವಯಿಸುತ್ತದೆ, ಸಂಸತ್ತಿಗೂ ಅನ್ವಯಿಸುತ್ತದೆ.

ಆಡಳಿತ ಪಕ್ಷವಾಗಲೀ ವಿರೋಧ ಪಕ್ಷಗಳಾಗಲೀ ಮೂಲತಃ ಪ್ರತಿನಿಧಿಸುವುದು ಜನರನ್ನು. ಹಾಗಾಗಿ, ಸದನದಲ್ಲಿ ಕೇಳಿಬರುವ ಪ್ರಶ್ನೆಗಳು, ಆರೋಪಗಳು ಏನೇ ಇದ್ದರೂ ಅವನ್ನು ಜನಸಾಮಾನ್ಯರ ಪ್ರಶ್ನೆಗಳು ಎಂದೇ ಪರಿಗಣಿಸಬೇಕಲ್ಲವೇ? ಈ ಜವಾಬ್ದಾರಿಯುತ ಕರ್ತವ್ಯವನ್ನು ನಮ್ಮ ರಾಜಕಾರಣಿಗಳು ಸಂಪೂರ್ಣವಾಗಿ ಮರೆತಂತೆ ತೋರುತ್ತಿದೆ. ಇದೀಗ ನಡೆಯುತ್ತಿರುವ ರಾಜ್ಯ ವಿಧಾನಸಭೆಯ ಅಧಿವೇಶನದಲ್ಲಿ ಸಚಿವರ ಗೈರುಹಾಜರಿಯ ಬಗ್ಗೆ ಸ್ಪೀಕರ್ ಅವರೇ ಬೇಸರ ವ್ಯಕ್ತಪಡಿಸಿದ್ದಾರೆ. ಇದು ಅವರ ಪ್ರಜಾಸತ್ತಾತ್ಮಕ ಕಾಳಜಿಯನ್ನು ತೋರುತ್ತದೆ.

ಸದನಕ್ಕೆ ಹಾಜರಾಗದ ಜನಪ್ರತಿನಿಧಿಗಳು ಏನೇ ಕಾರಣ ನೀಡಿದರೂ ಅದು ಒಪ್ಪುವಂಥದ್ದಲ್ಲ. ಯಾವುದೇ ಹಗರಣದಲ್ಲಿ ಸಂಬಂಧಿಸಿದ ಸಚಿವರು ನೇರವಾಗಿ ಭಾಗಿಯಾಗದಿದ್ದರೂ ನೈತಿಕ ಹೊಣೆಗಾರಿಕೆಯಿಂದ ಅವರು ನುಣುಚಿಕೊಳ್ಳಲು ಆಗುವುದಿಲ್ಲ. ಜನರಲ್ಲಿ ಮೂಡಿರಬಹುದಾದ ಪ್ರಶ್ನೆ, ಶಂಕೆ ನಿವಾರಿಸಬೇಕಾದುದು ಅವರ ಕರ್ತವ್ಯ. ಇದಕ್ಕೆ ಬಹುಮುಖ್ಯವಾಗಿ ಇರಬೇಕಾದದ್ದು ಉತ್ತರದಾಯಿತ್ವದ ಪ್ರಜ್ಞೆ. ಭಾರತದ ಪ್ರಜಾತಂತ್ರ ಕಳೆದುಕೊಂಡಿರುವುದು ಈ ಅಮೂಲ್ಯವಾದ ಗುಣವನ್ನು.

ಯಾವುದಾದರೂ ಜನೋಪಯೋಗಿ ಕೆಲಸ ಮಾಡಿದರೆ ಅದರ ಶ್ರೇಯ ಮುಡಿಗೇರಿಸಿಕೊಳ್ಳುವುದು ತಪ್ಪಲ್ಲ. ಆ ಬಗ್ಗೆ ಮಾಧ್ಯಮಗಳಲ್ಲಿ ಜಾಹೀರಾತುಗಳನ್ನು ನೀಡುವ ಚುನಾಯಿತ ಜನಪ್ರತಿನಿಧಿಗಳಿಗೆ, ತಮ್ಮ ವೈಫಲ್ಯಗಳನ್ನೂ ಒಪ್ಪಿಕೊಳ್ಳುವ ಮತ್ತು ಸರಿಪಡಿಸಿಕೊಳ್ಳುವ ನೈತಿಕತೆ ಇರಬೇಕಲ್ಲವೇ? ಅದು ಯಾವ ಹಂತದಲ್ಲೂ ಈಗ ಕಾಣಸಿಗುತ್ತಿಲ್ಲ.

ಕರ್ನಾಟಕದ ಪ್ರಸಕ್ತ ಅಧಿವೇಶನವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸ್ಪಷ್ಟವಾಗುವ ಒಂದು ಅಂಶ ಎಂದರೆ, ಆಡಳಿತ ವ್ಯವಸ್ಥೆಯ ಉದ್ದಗಲಕ್ಕೂ ಹರಡಿ, ಮೇಲಿನಿಂದ ಕೆಳಗಿನವರೆಗೆ ವ್ಯಾಪಿಸಿರುವ ಭ್ರಷ್ಟಾಚಾರದ ಸತ್ಯಾಸತ್ಯತೆಯನ್ನು ತಿಳಿಯಲು ಜನರಿಗೆ ಯಾವುದೇ ತನಿಖೆ, ವಿಚಾರಣೆಯೂ ಅಗತ್ಯ ಎನಿಸುವುದಿಲ್ಲ. ಏಕೆಂದರೆ ‘ನೀನಾ- ನಾನಾ’ ಎಂಬ ಪ್ರಮೇಯವನ್ನು ಬಳಸುತ್ತಾ, ‘ನಾನು ನಿನಗಿಂತಲೂ ಮೇಲು’ ಎಂಬ ಆತ್ಮರತಿಯಲ್ಲಿ ತೇಲುತ್ತಾ, ‘ನಾವು ನಿಮ್ಮಷ್ಟು ಭ್ರಷ್ಟರಲ್ಲ’ ಎಂದು ತಮ್ಮನ್ನು ತಾವೇ ಪ್ರಮಾಣೀಕರಿಸಿಕೊಳ್ಳುವ ಮೂಲಕ, ಪರಿಮಾಣಾತ್ಮಕವಾಗಿ ಆಡಳಿತ ಭ್ರಷ್ಟಾಚಾರದ ಒಳಹೊರಗುಗಳನ್ನು ಜನಪ್ರತಿನಿಧಿಗಳೇ ಹೊರಹಾಕುತ್ತಿದ್ದಾರೆ.

ಎಲ್ಲರೂ ಭ್ರಷ್ಟರೇ, ಪ್ರಮಾಣ ಮತ್ತು ಹರವಿನಲ್ಲಿ ಮಾತ್ರವೇ ವ್ಯತ್ಯಾಸವಿರುತ್ತದೆ ಎಂಬ ಸರಳ ಸತ್ಯವನ್ನು ಕಲಾಪದ ವಾದ- ಪ್ರತಿವಾದಗಳು ಸ್ಪಷ್ಟವಾಗಿ ನಿರೂಪಿಸುತ್ತಿವೆ. ಜನರ ಪಾಲಿಗೆ ಎಲ್ಲರೂ ಭ್ರಷ್ಟರೆ ಎಂಬ ವಾಸ್ತವವನ್ನೂ ತಿಳಿಸಿಕೊಡುತ್ತಿವೆ. ಇದಕ್ಕಾಗಿ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಅಭಿನಂದನಾರ್ಹರು.

ಇಲ್ಲಿ ಪ್ರಜಾಪ್ರಭುತ್ವ ಕಳೆದುಕೊಳ್ಳುತ್ತಿರುವುದು ಏನನ್ನು? ಉತ್ತಮ ಜನಪರ ಆಳ್ವಿಕೆಗೆ ಅತ್ಯವಶ್ಯವಾದ ಸಾಂವಿಧಾನಿಕ ನೈತಿಕತೆ ಮತ್ತು ಆಡಳಿತಾತ್ಮಕ ಉತ್ತರದಾಯಿತ್ವವನ್ನು ಅಲ್ಲವೇ? ಚುನಾಯಿತ ಪ್ರತಿನಿಧಿಗಳು ಯಾರಿಗೆ ಉತ್ತರದಾಯಿಗಳಾಗಿ ಇರಬೇಕು? ಸಂವಿಧಾನಕ್ಕೋ ಅಥವಾ ಮತದಾರರಿಗೋ ಅಥವಾ ಸಮಸ್ತ ಜನರಿಗೋ? ಈ ಪ್ರಶ್ನೆಗಳಿಗೆ ಎಲ್ಲ ರಾಜಕಾರಣಿಗಳೂ ಉತ್ತರ ನೀಡಬೇಕಿದೆ.

ರಾಜ್ಯದ ಜನರಿಗೆ ಬೇಕಿರುವುದು ಯಾರು ಹೆಚ್ಚು ಭ್ರಷ್ಟರು ಅಥವಾ ಯಾರು ಕಡಿಮೆ ಭ್ರಷ್ಟರು ಎನ್ನುವ ಬಗೆಗಿನ ನಿಷ್ಕರ್ಷೆಯಲ್ಲ. ಶ್ರೀಸಾಮಾನ್ಯನಿಗೆ ಬೇಕಿರುವುದು ಪ್ರಾಮಾಣಿಕ, ಪಾರದರ್ಶಕ, ಸಂವಿಧಾನಬದ್ಧ ಹಾಗೂ ಉತ್ತರದಾಯಿತ್ವವುಳ್ಳ ಆಡಳಿತ ಮಾತ್ರ. ಕಲಾಪದಲ್ಲಿ ತಾವಾಡುವ ಪ್ರತಿ ಮಾತೂ ಸದನದ ಗೌರವವನ್ನು ಉಳಿಸುವಂತೆ ಇರಬೇಕು ಎಂಬ ಕನಿಷ್ಠ ವಿವೇಕ, ವಿವೇಚನೆ ನಮ್ಮ ಜನಪ್ರತಿನಿಧಿಗಳಲ್ಲಿ ಇರಬೇಕಲ್ಲವೇ? ಇವು ಜನಸಾಮಾನ್ಯರನ್ನು ಕಾಡುತ್ತಿರುವ ಪ್ರಶ್ನೆಗಳು.

ವಾಚಕರ ವಾಣಿ

ಉದ್ಯೋಗ ಮೀಸಲು: ಉತ್ತಮ ಪ್ರಯತ್ನ

ಖಾಸಗಿ ಉದ್ದಿಮೆಗಳ ‘ಸಿ’ ಮತ್ತು ‘ಡಿ’ ದರ್ಜೆ ಹುದ್ದೆಗಳಲ್ಲಿ ಕನ್ನಡಿಗರಿಗೆ ಶೇಕಡ 100ರಷ್ಟು ಮೀಸಲಾತಿ ನೀಡುವ ಉದ್ದೇಶದ ಕರಡು ಮಸೂದೆಯ ವಿವರಗಳು ಬಹಿರಂಗವಾಗುತ್ತಲೇ ಉದ್ಯಮ ವಲಯದಿಂದ ತೀವ್ರ ಆಕ್ಷೇಪ ವ್ಯಕ್ತವಾಗಿ ಮಸೂದೆಯನ್ನು ತಡೆಹಿಡಿದಿರುವ ಸುದ್ದಿ ವರದಿಯಾಗಿದೆ (ಪ್ರ.ವಾ., ಜುಲೈ 18). ಸ್ವಾಗತಿಸಬಹುದಾದ ಈ ಉತ್ತಮ ಪ್ರಯತ್ನದಿಂದ ಸರ್ಕಾರ ಯಾವ ಕಾರಣಕ್ಕೂ ಹಿಂದೆ ಸರಿಯಬಾರದು.

ಈ ಹುದ್ದೆಗಳಿಗೆ ನೇಮಕಾತಿ ನಡೆಸುವ ಮೊದಲು, ವಿದ್ಯಾರ್ಹತೆ ಇರುವವರಿಗೆ ಸರ್ಕಾರವೇ ತರಬೇತಿ ಕೇಂದ್ರ ತೆರೆಯಬೇಕು. ಅಲ್ಲಿ ಖಾಸಗಿ ಉದ್ದಿಮೆದಾರರಿಂದಲೇ ಅಭ್ಯರ್ಥಿಗಳಿಗೆ ತರಬೇತಿ ಕೊಡಿಸಬೇಕು. ಆನಂತರ ಅರ್ಹರನ್ನು ಆಯ್ಕೆ ಮಾಡಿಕೊಳ್ಳಲು ಖಾಸಗಿಯವರಿಗೇ ಅವಕಾಶ ಸಿಗುವಂತೆ ವ್ಯವಸ್ಥೆಯನ್ನು ರೂಪಿಸಬೇಕು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ನೆನೆಯಲೇಬೇಕಿದೆ ತುರ್ತುಪರಿಸ್ಥಿತಿ

1975ರಲ್ಲಿ ದೇಶದ ಮೇಲೆ ತುರ್ತುಪರಿಸ್ಥಿತಿಯನ್ನು ಹೇರಲಾದ ‘ಜೂನ್ 25’ರ ದಿನವನ್ನು ‘ಸಂವಿಧಾನ ಹತ್ಯಾ ದಿವಸ’ ಎಂದು ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದು ಅತಿರೇಕದ ನಡೆ ಎಂದಿದ್ದಾರೆ ಎಚ್.ಆನಂದರಾಮ ಶಾಸ್ತ್ರೀ (ವಾ.ವಾ., ಜುಲೈ 17). ತುರ್ತುಪರಿಸ್ಥಿತಿಯನ್ನು ನೆನೆಯಲೇಬೇಕಾಗಿದೆ. ಕಾಂಗ್ರೆಸ್‌ನ ಸಂವಿಧಾನ ಉಳಿಸಿ ತಂತ್ರಕ್ಕೆ ಇದು ಬಿಜೆಪಿಯ ಪ್ರತಿತಂತ್ರ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಇಲ್ಲಿ ಸಂವಿಧಾನ ಹತ್ಯಾ ದಿವಸ ಎಂಬ ಪದಗಳ ಬಳಕೆಯ ಬದಲಿಗೆ ಸೌಮ್ಯವಾದ ಪದಗಳನ್ನು ಬಳಸಬಹುದಿತ್ತು ಅನಿಸುತ್ತದೆ.

ಗುರು ಜಗಳೂರು, ಹರಿಹರ

ಗ್ರ...ಹಣ!

ಹಣ ಹಣವೆಂದು
ಗರವಿಡಿದಂತೆ
ಬೆಂಬತ್ತಿದವರಿಗೆ
ಹಿಡಿದ ಗ್ರಹಣವೇ
ಹಗರಣ!

ಮ.ಗು.ಬಸವಣ್ಣ
ಮೈಸೂರು

ಮಾನವೀಯ ಮೌಲ್ಯ: ಮಹತ್ವ ಅರಿಯಿರಿ

ನೈತಿಕತೆ ಎಂಬುದು ಬೋಧನೆಗಷ್ಟೇ ಅಲ್ಲ, ಅದನ್ನು ಅನುಷ್ಠಾನಕ್ಕೆ ತರಬೇಕಾದ ಅವಶ್ಯಕತೆ ಇದೆ ಎಂಬುದನ್ನು ತಮ್ಮ ವೃತ್ತಿಜೀವನದ ಅನುಭವಗಳ ಮೂಲಕ ರೇವಣ್ಣ ಎಂ.ಜಿ. ವಿವರಿಸಿರುವುದು (ವಾ.ವಾ., ಜುಲೈ 18) ಬಹಳ ಮಹತ್ವದ್ದಾಗಿದೆ. ‘ಜ್ಞಾನವೆಂಬ ದೀಪದ ಕೆಳಗಿನ ಕತ್ತಲೆ’ ಎಂಬ ಗೀತಾ ವಸಂತ ಅವರ ಲೇಖನವನ್ನು (ಪ್ರ.ವಾ., ಜುಲೈ 15) ಉಲ್ಲೇಖಿಸಿರುವ ಅವರು, ಪೋಷಕರು ಮತ್ತು ಶಿಕ್ಷಕರು ತಾವು ಉರಿಯದೆ ಸಮಾಜದಲ್ಲಿ ಹಣತೆಯನ್ನು ಹಚ್ಚಲು ಸಾಧ್ಯವಿಲ್ಲ ಎಂದಿದ್ದಾರೆ. ಚಿಂತಕ ಜಿಡ್ಡು ಕೃಷ್ಣಮೂರ್ತಿಯವರು ಹೇಳುವಂತೆ, ಈ ಎಲ್ಲವನ್ನೂ ‘ಸಮಗ್ರ ದೃಷ್ಟಿ’ಯಿಂದ ನೋಡಿದರೆ, ‘ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳು’ ಎಂಬ ಪಠ್ಯ ವಿಷಯವನ್ನು ಗಣಿತ, ಜೀವಶಾಸ್ತ್ರದಂತಹ ವಿಷಯಗಳಂತೆ ಒಂದು ಸ್ವತಂತ್ರ ವಿಷಯವನ್ನಾಗಿ ನಿಗದಿಪಡಿಸಬೇಕು ಎನಿಸುತ್ತದೆ. ಅದರಲ್ಲಿ ಕಥೆಗಳು, ಮಹಾತ್ಮರ ಜೀವನದ ವಿಶೇಷ ಘಟನೆಗಳು, ಅನುಭವಿಗಳ ಸುಭಾಷಿತಗಳು, ಜೀವನಮೌಲ್ಯಗಳನ್ನು ಒಳಗೊಂಡ ಹಾಡು-ಹಸೆ, ಕಾವ್ಯ ಹಾಗೂ ವಚನಗಳ ಉಲ್ಲೇಖ, ಇತಿಹಾಸದ ಮಹತ್ವದ ಘಟನೆಗಳ ಮೂಲಕ ಸಂವಾದಿಸುತ್ತಾ, ಚರ್ಚಿಸುತ್ತಾ ಮಕ್ಕಳನ್ನು ಚಿಂತನೆಗೆ ಹಚ್ಚಬಹುದು.

ಆಗ ಮೌಲ್ಯಗಳ ಬಿತ್ತನೆಯ ಪ್ರಯತ್ನವು ಕಿರುನಾಟಕ, ನಾಟಕ, ನೀತಿ ಶಿಬಿರ, ಕಾರ್ಯಯೋಜನೆಯಂತಹ ಚಟುವಟಿಕೆಗಳ ಮೂಲಕ ನಿರಂತರವಾಗಿ ನಡೆಯುತ್ತದೆ. ಇದರಿಂದ, ಅಂಕ ಗಳಿಕೆಯೇ ಶಿಕ್ಷಣ ಎಂಬ ಪ್ರಸಕ್ತ ತಪ್ಪುಗ್ರಹಿಕೆಯನ್ನು ಕೊಂಚಮಟ್ಟಿಗಾದರೂ ಹೋಗಲಾಡಿಸಿ, ಒಳ್ಳೆಯ ಸಮಾಜ ನಿರ್ಮಾಣವೇ ಶಿಕ್ಷಣದ ಮೂಲ ಉದ್ದೇಶ ಎಂಬುದನ್ನು ಸಾಕ್ಷಾತ್ಕಾರಗೊಳಿಸಲು ಸಾಧ್ಯವಾಗಬಹುದು.

ಸಿದ್ಧರಾಮಪ್ಪ ದಿನ್ನಿ, ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ವಿದ್ಯಾವಂತರೋ ಸಂಕುಚಿತರೋ?

‘ನಾಗರಿಕರು ದ್ವೀಪಗಳಂತೆ ಆಗುತ್ತಿದ್ದಾರೆ’ ಎಂಬ ರಾಜಕುಮಾರ ಕುಲಕರ್ಣಿ ಅವರ ಅಭಿಪ್ರಾಯ (ಸಂಗತ, ಜುಲೈ 18) ಅಕ್ಷರಶಃ ಸತ್ಯ. ಇಂದು ಜನರು ಎಷ್ಟರಮಟ್ಟಿಗೆ ಸುಶಿಕ್ಷಿತರು, ವಿದ್ಯಾವಂತರು ಆಗುತ್ತಿದ್ದಾರೆಯೋ ಅಷ್ಟೇ ಪ್ರಮಾಣದಲ್ಲಿ ಸಂಕುಚಿತ ಮನೋಭಾವವನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಕುವೆಂಪು ಅವರ ವಿಶ್ವಮಾನವ ತತ್ವವನ್ನು ಜನ ಮರೆತಂತೆ ಕಾಣುತ್ತದೆ. ಪ್ರಸ್ತುತ ಸಮಾಜದಲ್ಲಿ ಸಮುದಾಯಗಳ ಹೆಸರಿನಲ್ಲಿ ವಸತಿನಿಲಯಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಅಂದರೆ ವಿದ್ಯಾರ್ಥಿಗಳು ಓದುವ ಹಂತದಲ್ಲಿಯೇ ತಮ್ಮ ಸಮುದಾಯದ ಬಗ್ಗೆ ಜಾಗೃತರಾಗುವಂತೆ ಈ ವ್ಯವಸ್ಥೆ ಅವರನ್ನು ತಯಾರು ಮಾಡುತ್ತಿರುವಂತೆ ತೋರುತ್ತದೆ. ಮಹನೀಯರನ್ನು ಒಂದು ನಿರ್ದಿಷ್ಟ ಸಮುದಾಯಕ್ಕೆ ಸೀಮಿತಗೊಳಿಸುವ ಕೆಲಸಗಳು ಎಗ್ಗಿಲ್ಲದೆ ನಡೆಯುತ್ತಿವೆ. ಇದರಿಂದ, ಈ ಮಹನೀಯರು ಜಗತ್ತಿಗೆ ಸಾರಿದ ಸಂದೇಶಗಳು ಮರೆಗೆ ಸರಿಯುವ ಸಾಧ್ಯತೆ ಇದೆ. ಇಂತಹ ಸಂಕುಚಿತ ಮನೋಭಾವಕ್ಕೆ ಇನ್ನಾದರೂ ತಡೆಬೀಳಬೇಕು.

ತೇಜಸ್ವಿನಿ ಕೆ. ಶಿವರಾಜ್, ರಾಯಚೂರು

ಸ್ಕೈಡೆಕ್: ಅನವಶ್ಯಕ ನಿರ್ಮಾಣ

ಬೆಂಗಳೂರಿನ ಹೆಮ್ಮಿಗೆಪುರದಲ್ಲಿ ನಗರದ ಅತಿದೊಡ್ಡ ಟವರ್ ‘ಸ್ಕೈಡೆಕ್’ ನಿರ್ಮಿಸಲು ಮುಖ್ಯಮಂತ್ರಿ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ (ಪ್ರ.ವಾ., ಜುಲೈ 19). ಪ್ರಸ್ತುತ ಬೆಂಗಳೂರು ನಗರವು ಬಹಳಷ್ಟು ಮೂಲಸೌಕರ್ಯಗಳ ಸಮಸ್ಯೆಯಿಂದ ಬಳಲುತ್ತಿದೆ ಮತ್ತು ಈಗಾಗಲೇ ಇರುವ ಕೆಲವು ಮೂಲಸೌಕರ್ಯಗಳ ಸ್ಥಿತಿ ದಯನೀಯವಾಗಿದೆ. ಮುಖ್ಯವಾಗಿ ರಸ್ತೆಗಳು, ಒಳಚರಂಡಿ ಮತ್ತು ಸಂಚಾರ ಸಂಪರ್ಕದ ಅವ್ಯವಸ್ಥೆಯಿಂದಾಗಿ ಕೆಲವು ಸಾರ್ವಜನಿಕರು ಪ್ರಾಣವನ್ನೂ ಕಳೆದುಕೊಂಡಿದ್ದಾರೆ. ಸ್ಕೈಡೆಕ್ ನಿರ್ಮಾಣದ ಬದಲು ಇಂತಹ ಸಮಸ್ಯೆಗಳನ್ನು ಸರಿಪಡಿಸಲು ಸರ್ಕಾರ ತಕ್ಷಣವೇ ಗಮನಹರಿಸಿ ಅದಕ್ಕಾಗಿ ಹಣವನ್ನು ಖರ್ಚು ಮಾಡುವುದು ಒಳ್ಳೆಯದು. ಈ ಸ್ಕೈಡೆಕ್ ಬೆಂಗಳೂರಿನ ಬ್ರ್ಯಾಂಡ್ ಇಮೇಜ್ ಅನ್ನು ಹೆಚ್ಚಿಸುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ಈ ಯೋಜನೆ ಬಹಳಷ್ಟು ಮರಗಳಿಗೆ ಕುತ್ತು ತರುತ್ತದೆ ಮತ್ತು ನಮ್ಮ ಪರಿಸರ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಈ ಸಮಯದಲ್ಲಿ ಅದರ ಅವಶ್ಯಕತೆಯ ಬಗ್ಗೆ ನಾವು ಗಂಭೀರವಾಗಿ ಯೋಚಿಸಬೇಕಿದೆ.

ಕಡೂರು ಫಣಿಶಂಕರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವೈದ್ಯಕೀಯ ಸೀಟು ಹಂಚಿಕೆಗೆ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ ಇರಬೇಕೇ ಬೇಡವೇ?

2 ಹಂತದ ಪರೀಕ್ಷಾ ವ್ಯವಸ್ಥೆ ಸೂಕ್ತ

• ಡಾ.ಶ್ರೀನಿವಾಸ ಕಕ್ಕಿಲ್ಲಾಯ

ಐವತ್ತರ ದಶಕದ ಮೊದಲಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳು ಆರಂಭಗೊಂಡು, ಹಣಕ್ಕೆ ಸೀಟು ಕೊಡುವ ವ್ಯವಸ್ಥೆ ಬಂದಲ್ಲಿಂದ ತೊಡಗಿ ಇಂದಿನವರೆಗೂ ವೈದ್ಯಕೀಯ ಶಿಕ್ಷಣದ ಪ್ರವೇಶಾತಿಯು ಮೋಸ ಹಾಗೂ ಭ್ರಷ್ಟಾಚಾರಗಳ ಕೂಪವಾಗಿಯೇ ಇದೆ. ಈ ವರ್ಷ 'ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ'ಯ (ನೀಟ್) ಪಾವಿತ್ರ್ಯ ನಷ್ಟವಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿರುವುದು ಈ ಮೋಸದ ಕೂಪವು ಇನ್ನಷ್ಟು ಆಳ-ಅಗಲವಾಗುತ್ತಿರುವುದನ್ನು ತೋರಿಸುತ್ತದೆ. ನೀಟ್ ಬೇಕೇ ಬೇಡವೇ ಎಂಬುದೊಂದರಲ್ಲೇ ಈ ಮಹಾಕೂಪವನ್ನು ಮುಚ್ಚಲಾಗದು.

> ಈಗ ಪ್ರವೇಶ ಪರೀಕ್ಷೆಯನ್ನು ರದ್ದು ಪಡಿಸಿ ಕೇವಲ ಪಿಯುಸಿ ಅಂಕಗಳ ಆಧಾರದಲ್ಲಿ ಸೀಟು ಕೊಡಹೊರಟರೆ ಮತ್ತೆ 80 ದಶಕದ ಮೋಸಗಳತ್ತ ಹೋದಂತಾಗುತ್ತದೆ. ನಮಗೆ ಒಳ್ಳೆಯ ವೈದ್ಯರು ಬೇಕು ಎಂದಾದರೆ ವೈದ್ಯಕೀಯ ಶಿಕ್ಷಣವು ಪ್ರತಿಭಾವಂತರಿಗಷ್ಟೇ ದಕ್ಕಬೇಕು, ಅದಕ್ಕೆ ಅತ್ಯಂತ ಕಠಿಣವಾದ, ಪಾರದರ್ಶಕವಾದ ಪರೀಕ್ಷೆಗಳ ವ್ಯವಸ್ಥೆಯಿರಬೇಕು, ಖಾಸಗಿ ಸಂಸ್ಥೆಗಳು ಮತ್ತು ಹಣದ ಪಾರಮ್ಯ ಕೊನೆಯಾಗಬೇಕು...

ಸ್ವಾತಂತ್ರ್ಯ ನಂತರದ 77 ವರ್ಷಗಳಲ್ಲಿ ವೈದ್ಯಕೀಯ ಶಿಕ್ಷಣದಲ್ಲಿ ದುಡ್ಡಿನಾಟಕ್ಕೆ 70 ವರ್ಷಗಳಾಗಿವೆ. ವೈದ್ಯಕೀಯ ಶಿಕ್ಷಣವು ಪ್ರತಿಭಾವಂತರಿಗಷ್ಟೇ ದಕ್ಕಬೇಕು ಎಂದು ಹೋರಾಟಗಳನ್ನು ನಡೆಸುತ್ತಿರುವುದಕ್ಕೆ 40 ವರ್ಷಗಳಾಗಿವೆ. ಎಂಬತ್ತನೇ ದಶಕದವರೆಗೆ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಪದವಿಪೂರ್ವ ಪರೀಕ್ಷೆಗಳ ಅಂಕಗಳ ಆಧಾರದಲ್ಲೇ ಪ್ರವೇಶ ನೀಡಲಾಗುತ್ತಿತ್ತು. ಬರುಬರುತ್ತಾ ಈ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಪಡೆಯಲು ನಕಲು, ಮೌಲ್ಯಮಾಪನದಲ್ಲಿ ವಶೀಲಿ, ಅಂಕಪಟ್ಟಿಯಲ್ಲಿ ತಿದ್ದುಪಡಿ ಎಲ್ಲವೂ ನಡೆಯತೊಡಗಿ, ಕೊನೆಗೆ ಸೀಟು ಪಡೆಯಲು ವೈದ್ಯಕೀಯ ಶಿಕ್ಷಣ ಇಲಾಖೆಯೊಳಗೂ ಪಿತೂರಿಗಳು ನಡೆಯತೊಡಗಿದ್ದವು. ಇದರೆದುರು ವಿದ್ಯಾರ್ಥಿಗಳು ರಾಜ್ಯದಾದ್ಯಂತ ಬೀದಿಗಿಳಿದು ಹೋರಾಡಿದ ಫಲವಾಗಿ 1984ರಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಆರಂಭವಾಯಿತು. ಒಂದೆರಡು ವರ್ಷಗಳಲ್ಲೇ ಅದರಲ್ಲೂ ಮೋಸವಾಗಲು ಆರಂಭಗೊಂಡಾಗ ವಿದ್ಯಾರ್ಥಿಗಳು ಮತ್ತೆ ಬೀದಿಗಿಳಿದು ಒಎಂಆರ್ ಉತ್ತರ ಪತ್ರಿಕೆಗಳು, ಸರಿ ಉತ್ತರಗಳ ಪ್ರಕಟಣೆ, ಶ್ರೇಣಿವಾರು ಅಂಕಗಳ ಪ್ರಕಟಣೆ ಜಾರಿಗೆ ಬರುವಂತಾಯಿತು.

ಖಾಸಗಿ ಕಾಲೇಜುಗಳಲ್ಲಿ ದುಡ್ಡಿನ ಸೀಟುಗಳನ್ನಷ್ಟೇ ನೆಚ್ಚಿಕೊಂಡಿದ್ದವರಿಗೆ ಇಂಥ ಸಾಮಾನ್ಯ ಪ್ರವೇಶ ಪರೀಕ್ಷೆಗಳಲ್ಲಿ ಕನಿಷ್ಠ ಅರ್ಹತೆಯನ್ನು ಪಡೆಯುವುದು ಕೂಡ ಕಷ್ಟವಾದಾಗ ಖಾಸಗಿ ಕಾಲೇಜುಗಳವರು ಪದೇ ಪದೇ ನ್ಯಾಯಾಲಯದ ಮೊರೆ ಹೋಗಿ ತಮ್ಮದೇ ಪ್ರವೇಶ ಪರೀಕ್ಷೆಗಳನ್ನು ಆರಂಭಿಸಿದರು. ಒಂದು ರಾಜ್ಯದ ಎಲ್ಲ ವಿದ್ಯಾರ್ಥಿಗಳಿಗೆ ಒಂದೇ ಸಾಮಾನ್ಯ ಪರೀಕ್ಷೆ ಇದ್ದುದು ಒಂದೊಂದು ಕಾಲೇಜಿಗೆ ಒಂದೊಂದು ಪ್ರವೇಶ ಪರೀಕ್ಷೆ ಎಂಬಂತಾಯಿತು.

ಇದು ವಿಪರೀತವಾದಾಗ ಭಾರತೀಯ ವೈದ್ಯಕೀಯ ಪರಿಷತ್ತು (ಎಂಸಿಐ) ಇಡೀ ದೇಶಕ್ಕೆ ಒಂದೇ ನೀಟ್ ಪ್ರವೇಶ ಪರೀಕ್ಷೆಯಿರಬೇಕು, ಅರ್ಹತೆಗಾಗಿ ಶೇ 50 ಅಂಕಗಳನ್ನು ಪಡೆಯಬೇಕು ಎಂಬ ನಿಯಮವನ್ನು ಮಾಡಿತು. ಒಂದೇ ವರ್ಷದಲ್ಲಿ, 2013ರ ಜುಲೈನಲ್ಲಿ ಖಾಸಗಿ ಕಾಲೇಜುಗಳ ಅರ್ಜಿಯ ಮೇಲೆ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠವು ಈ ನೀಟ್ ಅನ್ನು ರದ್ದುಗೊಳಿಸಿತು. ಈ ಆದೇಶದ ಬಗ್ಗೆ ತಕರಾರುಗಳೆದ್ದವು; ಅದೇ ಪೀಠದಲ್ಲಿದ್ದ ನ್ಯಾಯಮೂರ್ತಿ ಎ.ಆರ್.ದವೆಯವರ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠವು 2016ರ ಎಪ್ರಿಲ್‌ನಲ್ಲಿ 'ನೀಟ್' ಅನ್ನು ಮತ್ತೆ ಊರ್ಜಿತಗೊಳಿಸಿತು.

ನೀಟ್ ತಡೆಯಲಾಗದ ಖಾಸಗಿ ಕಾಲೇಜುಗಳು ಶುಲ್ಕವನ್ನು 6ರಿಂದ 20 ಪಟ್ಟು ಹೆಚ್ಚಿಸಿಬಿಟ್ಟವು. ಅದರೊಂದಿಗೆ ನೀಟ್ ಅಂಕಗಳಷ್ಟೇ ಅರ್ಹತೆ ಎಂಬ ಆಶಯವೂ ಮಣ್ಣುಪಾಲಾಯಿತು. ಮರು ವರ್ಷವೇ 2017ರಲ್ಲಿ, ಅಷ್ಟೊಂದು ಹಣಕ್ಕೆ ವಿದ್ಯಾರ್ಥಿಗಳು ದೊರೆಯದಾಗ ಶುಲ್ಕವನ್ನು ಇಳಿಸುವ ಬದಲು ಅರ್ಹತಾ ಮಾನದಂಡವನ್ನೇ ಇಳಿಸಲಾಯಿತು. 50 ಪರ್ಸೆಂಟ್ ಅಂಕದ ಬದಲಿಗೆ 50ನೇ ಪರ್ಸೆಂಟೈಲ್ ಎಂದು ಬದಲಿಸಲಾಯಿತು, ಬಳಿಕ 45ಕ್ಕೂ ಇಳಿಸಲಾಯಿತು; ಮೂರರಲ್ಲಿ ಎರಡು ವಿಷಯಗಳಲ್ಲಿ ಸೊನ್ನೆ ಪಡೆದವರಿಗೂ ಸೀಟು ಸಿಕ್ಕಿತು (ಕಳೆದ ವರ್ಷ ಸ್ನಾತಕೋತ್ತರ ಪ್ರವೇಶಕ್ಕೆ ಅರ್ಹತೆಯನ್ನು ಸೊನ್ನೆಗೆ ಇಳಿಸಲಾಯಿತು).

ಇವೆಲ್ಲವನ್ನೂ ಸುಲಭಗೊಳಿಸಲು ಸ್ವಾಯತ್ತ ಎಂಸಿಐಯನ್ನೇ ಬರ್ಖಾಸ್ತು ಮಾಡಿ, ಕೇಂದ್ರ ಸರ್ಕಾರದ ಅಧೀನದಲ್ಲೇ ಇರುವ ಎನ್‌ಎಂಸಿಯನ್ನು (ರಾಷ್ಟ್ರೀಯ ವೈದ್ಯಕೀಯ ಆಯೋಗ) 2019ರಲ್ಲಿ ತರಲಾಯಿತು. 80ರ ದಶಕದಿಂದ ವೈದ್ಯಕೀಯ ಪ್ರವೇಶ ಪರೀಕ್ಷೆ ನಡೆಸುತ್ತಿದ್ದ ಸಿಬಿಎಸ್‌ಇ ಬದಲಿಗೆ ನೀಟ್ ಅನ್ನು 2019ರಲ್ಲಿ ಕೇಂದ್ರ ಸರ್ಕಾರ ರಚಿಸಿದ ಹೊಸ ಎನ್‌ಟಿಎ (ರಾಷ್ಟ್ರೀಯ ಪರೀಕ್ಷಾ ಸಂಸ್ಥೆ) ಕೈಗೆ ಕೊಡಲಾಯಿತು (ಇವೆಲ್ಲವೂ ಕೇಂದ್ರ ಸರ್ಕಾರದ ಮುಷ್ಟಿಯಲ್ಲಿರುವುದರಿಂದ ಅಪಾಯದ ಬಗ್ಗೆ ನಾವು ಕೆಲವರು 2016-17ರಲ್ಲೇ ಎಚ್ಚರಿಸಿದ್ದೆವು).

ಈ ವರ್ಷ ನೀಟ್ ಪ್ರಶ್ನೆಪತ್ರಿಕೆಗಳ ಸೋರಿಕೆಯಾಗಿ ₹20 ಲಕ್ಷ–₹30 ಲಕ್ಷ ಕೊಟ್ಟು 720ಕ್ಕೆ 720 ಅಂಕ ಅಥವಾ ಅತ್ಯುತ್ತಮ ಅಂಕಗಳನ್ನು ಸಾವಿರಾರು ಅಭ್ಯರ್ಥಿಗಳು ಪಡೆದಿರುವ ಹಗರಣವು ಈಗ ಸುಪ್ರೀಂ ಕೋರ್ಟ್‌ನ ಮುಂದಿದೆ. ನೀಟ್ ಪಾವಿತ್ರ್ಯಕ್ಕೆ ಧಕ್ಕೆಯಾಗಿದೆ ಎಂದು ನ್ಯಾಯಾಲಯವೇ ಹೇಳಿದರೆ, ಅಂಥದ್ದೇನೂ ಆಗಿಲ್ಲ ಎಂದು ಕೇಂದ್ರ ಸರ್ಕಾರ, ಎನ್‌ಎಂಸಿ ಹಾಗೂ ಎನ್‌ಟಿಎ ಹೇಳಿವೆ.

ಹೀಗೆ ವೈದ್ಯಕೀಯ ಪ್ರವೇಶಾತಿಗೆ ಪಾರದರ್ಶಕ ಪರೀಕ್ಷೆಗಳಿರಬೇಕೆಂದು ಎಂಬತ್ತರ ದಶಕದಿಂದ ನಡೆಸಿದ್ದ ಹೋರಾಟಗಳ ಆಶಯಗಳೆಲ್ಲವೂ ವ್ಯವಸ್ಥಿತವಾಗಿ ಮಣ್ಣುಪಾಲಾಗಿ ವೈದ್ಯಕೀಯ ಶಿಕ್ಷಣವೂ, ಪ್ರವೇಶ ಪರೀಕ್ಷೆಗಳೂ ವರ್ಷದಿಂದ ವರ್ಷಕ್ಕೆ ದುಡ್ಡಿನ ದಂಧೆಯಾಗಿ ಕೆಡುತ್ತಲೇ ಸಾಗಿವೆ. ವೈದ್ಯಕೀಯ ಶಿಕ್ಷಣ ಹಾಗೂ ವೃತ್ತಿಗಳು ಕೇಂದ್ರ ಸರ್ಕಾರದ ಮುಷ್ಟಿಯೊಳಗೆ ಇರುವುದು ಮತ್ತು ವೈದ್ಯಕೀಯ ಸಂಘಟನೆಗಳು ಅದಕ್ಕೆ ಚಪ್ಪಾಳೆ ತಟ್ಟುತ್ತಿರುವುದು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿವೆ.

ಈಗ ಪ್ರವೇಶ ಪರೀಕ್ಷೆಯನ್ನು ರದ್ದು ಪಡಿಸಿ ಕೇವಲ ಪಿಯುಸಿ ಅಂಕಗಳ ಆಧಾರದಲ್ಲಿ ಸೀಟು ಕೊಡಲು ಹೊರಟರೆ ಮತ್ತೆ ಎಂಬತ್ತರ ದಶಕದ ಮೋಸಗಳತ್ತ ಹೋದಂತಾಗುತ್ತದೆ. ನಮಗೆ ಒಳ್ಳೆಯ ವೈದ್ಯರು ಬೇಕು ಎಂದಾದರೆ ವೈದ್ಯಕೀಯ ಶಿಕ್ಷಣವು ಪ್ರತಿಭಾವಂತರಿಗಷ್ಟೇ ದಕ್ಕಬೇಕು, ಅದಕ್ಕೆ ಅತ್ಯಂತ ಕಠಿಣವಾದ, ಪಾರದರ್ಶಕವಾದ ಪರೀಕ್ಷೆಗಳ ವ್ಯವಸ್ಥೆಯಿರಬೇಕು, ಖಾಸಗಿ ಸಂಸ್ಥೆಗಳು ಮತ್ತು ಹಣದ ಪಾರಮ್ಯ ಕೊನೆಯಾಗಬೇಕು.

ಮೊತ್ತ ಮೊದಲಾಗಿ, 2019ರಿಂದೀಚೆಗೆ ವೈದ್ಯಕೀಯ ಶಿಕ್ಷಣದ ಎಲ್ಲ ಸ್ತರಗಳ ಪ್ರವೇಶ ಪರೀಕ್ಷೆಗಳ ಮೇಲೆ ಕೇಂದ್ರ ಸರ್ಕಾರ ಸ್ಥಾಪಿಸಿರುವ ಏಕಾಧಿಪತ್ಯವನ್ನು ಕೂಡಲೇ ಕೊನೆಗೊಳಿಸಲೇಬೇಕು. ವೈದ್ಯಕೀಯ ಸೀಟುಗಳ ರಾಜ್ಯ ಹಾಗೂ ಕೇಂದ್ರಗಳ ಹಂಚಿಕೆಯ ಅನುಪಾತವೂ ಬದಲಾಗಬೇಕು, ಸ್ನಾತಕೋತ್ತರ ಹಾಗೂ ಸೂಪರ್ ಸ್ಪೆಷಾಲಿಟಿ ಸೀಟುಗಳಲ್ಲಿ ರಾಜ್ಯದ ಪ್ರಮಾಣವು ಈಗಿನ ಶೇ 50 ಹಾಗೂ ಸೊನ್ನೆಯ ಬದಲಿಗೆ ಕ್ರಮವಾಗಿ ಶೇ 70 ಹಾಗೂ ಕನಿಷ್ಠ ಶೇ 30ಕ್ಕೆ ಏರಬೇಕು. ಈ ಎಲ್ಲ ಸ್ತರಗಳಲ್ಲೂ ರಾಜ್ಯದ ಪಾಲಿನ ಸೀಟುಗಳಿಗೆ 2012ರ ಮೊದಲಿದ್ದಂತೆ ಆಯಾ ರಾಜ್ಯಗಳ ಮಟ್ಟದಲ್ಲಿ, ರಾಜ್ಯ ಸರ್ಕಾರದ ಸಂಸ್ಥೆಗಳ ಮೂಲಕವೇ ಪ್ರವೇಶ ಪರೀಕ್ಷೆಗಳು ಹಾಗೂ ಸೀಟು ಹಂಚಿಕೆಯಾಗಬೇಕು. ಕೇಂದ್ರದ ಪಾಲಿನ ಸೀಟುಗಳಿಗಷ್ಟೇ ಕೇಂದ್ರೀಯ ಪರೀಕ್ಷೆಗಳು ಇರಬೇಕು. ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳೆಲ್ಲಕ್ಕೂ ಈ ಪರೀಕ್ಷೆಗಳಷ್ಟೇ ಇರಬೇಕು, ಸರ್ಕಾರಿ ಪ್ರಾಧಿಕಾರಗಳ ಮೂಲಕವೇ ಎಲ್ಲ ಸೀಟುಗಳೂ ಹಂಚಿಕೆಯಾಗಬೇಕು.

ಈಗ ಐಐಟಿಗಳಲ್ಲಿ ಎಂಜಿನಿಯರಿಂಗ್ ಸೀಟುಗಳಿಗೆ ಎರಡು ಹಂತಗಳ ಪರೀಕ್ಷೆಯಿದ್ದು, ಮೊದಲ ಹಂತದಲ್ಲಿ ಉತ್ತಮ ಅಂಕ ಗಳಿಸಿದವರಷ್ಟೇ ಅಂತಿಮ ಪ್ರವೇಶಕ್ಕೆ ಅರ್ಹತೆಯನ್ನು ಪಡೆಯುತ್ತಾರೆ. ಕೇಂದ್ರ ಮಟ್ಟದ ವೈದ್ಯಕೀಯ ಸೀಟುಗಳ ಪರೀಕ್ಷೆಗೂ ಇದೇ ಮಾದರಿಯನ್ನು ಬಳಸಿಕೊಳ್ಳಬಹುದು, ರಾಜ್ಯ ಮಟ್ಟದಲ್ಲಿ ಆಯಾ ವರ್ಗಗಳಲ್ಲಿ ಉತ್ತಮ ಅಂಕಗಳನ್ನು ಪಡೆದವರಷ್ಟೇ ಕೇಂದ್ರ ಮಟ್ಟದ ಪರೀಕ್ಷೆಗಳಿಗೆ ಅರ್ಹರಾಗುವಂತೆ ಮಾಡಬಹುದು. ಆಗ ಒಂದು ಲಕ್ಷದಷ್ಟಿರುವ ಎಂಬಿಬಿಎಸ್ ಸೀಟುಗಳಿಗೆ 24 ಲಕ್ಷ ವಿದ್ಯಾರ್ಥಿಗಳು ಒಂದೇ ಒಂದು ಪರೀಕ್ಷೆ ಬರೆಯುವ ಅಗತ್ಯವುಂಟಾಗದು.

ಈ ಪರೀಕ್ಷೆಗಳಲ್ಲಿ ಈ ಮೊದಲು ಇದ್ದಂತಹ ಕನಿಷ್ಠ ಶೇ 50 ಅಂಕಗಳ ಮಾನದಂಡವನ್ನೇ ಬಳಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಇದನ್ನು ಕೆಳಗಿಳಿಸಿ ಕೇವಲ ಹಣಕ್ಕಾಗಿ ಸೊನ್ನೆಗೂ ತಂದಿಡುವುದಕ್ಕೆ ಅವಕಾಶವೇ ಇರಕೂಡದು. ಖಾಸಗಿ ಕಾಲೇಜುಗಳಲ್ಲಿ ಈ ಮಾನದಂಡಗಳನ್ನು ಗೆಲ್ಲಬಲ್ಲ ವಿದ್ಯಾರ್ಥಿಗಳು ದೊರೆಯದಿದ್ದಲ್ಲಿ ಬಾಕಿ ಉಳಿಯುವ ಎಲ್ಲ ಸೀಟುಗಳನ್ನು ಸರ್ಕಾರಿ ಕೋಟಾಕ್ಕೆ ಮರಳಿಸಿ, ಎಲ್ಲ ಸಾಂವಿಧಾನಿಕ ಮೀಸಲಾತಿಗೆ ಅನುಸಾರ ಆ ಸೀಟುಗಳನ್ನು ಹಂಚಿಕೆ ಮಾಡುವಂತಾಗಬೇಕು.

ಲೇಖಕ: ವೈದ್ಯ ❖

ಪ್ರಜಾವಾಣಿ ಚರ್ಚೆ

ಪರೀಕ್ಷೆ ರದ್ದತಿ ಪರಿಹಾರವಲ್ಲ

• ಗುರುರಾಜ್ ಎಸ್.ವಿ.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗಾಗಿ ಮೇ 5ರಂದು ನಡೆದ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್) ನಡೆದಿರುವ ಹಗರಣವು, ನೀಟ್ ಬೇಕೇ ಬೇಡವೇ ಎಂಬ ಚರ್ಚೆ ಹುಟ್ಟುಹಾಕಿದೆ. ತಮಿಳುನಾಡು ಸೇರಿದಂತೆ ಕೆಲವು ರಾಜ್ಯಗಳು ಈ ಪರೀಕ್ಷೆಯನ್ನು ರದ್ದು ಪಡಿಸಬೇಕು ಎಂದು ಆಗ್ರಹಿಸುತ್ತಿವೆ. ಸುಪ್ರೀಂ ಕೋರ್ಟ್‌ನಲ್ಲಿ ಈ ಬಗ್ಗೆ ವಿಚಾರಣೆ ನಡೆಯುತ್ತಿದೆ. ನ್ಯಾಯಾಲಯದ ತೀರ್ಮಾನಕ್ಕಾಗಿ ಕಾಯೋಣ. ಆದರೆ, ನಡೆದಿರುವ ಅಕ್ರಮವನ್ನು ಮುಂದಿಟ್ಟುಕೊಂಡು, ವೈದ್ಯಕೀಯ ಕೋರ್ಸ್ ಸೇರಲು ಬಯಸುವವರ ಹಿತದೃಷ್ಟಿಯಿಂದ ರಾಷ್ಟ್ರೀಯ ಮಟ್ಟದಲ್ಲಿ ಒಂದೇ ಪರೀಕ್ಷೆ ನಡೆಯಬೇಕು ಎಂಬ ಸದುದ್ದೇಶದಿಂದ ಜಾರಿಗೆ ಬಂದಿರುವ ಪರೀಕ್ಷಾ ವ್ಯವಸ್ಥೆಯನ್ನು ರದ್ದು ಪಡಿಸಬೇಕು ಎನ್ನುವ ವಾದ ಸಮರ್ಥನೀಯವಲ್ಲ.

ನೀಟ್ ವಿರುದ್ಧ ಕೇಳಿ ಬರುತ್ತಿರುವ ಧ್ವನಿಗಳ ಹಿಂದೆ ಖಾಸಗಿ ವೈದ್ಯಕೀಯ ಕಾಲೇಜುಗಳು, ಅದರ ಮಾಲೀಕರಾಗಿರುವ ರಾಜಕಾರಣಿಗಳ ಲಾಬಿ ಇರುವುದು ಗುಟ್ಟಾಗಿ ಉಳಿದಿಲ್ಲ. ನೀಟ್‌ನಲ್ಲಿ ನಡೆದಿರುವ ಅಕ್ರಮವನ್ನು ಒಪ್ಪಲು ಸಾಧ್ಯವಿಲ್ಲ. ಪರೀಕ್ಷೆ ಅತ್ಯಂತ ವ್ಯವಸ್ಥಿತವಾಗಿ ಮತ್ತು ಪಾರದರ್ಶಕವಾಗಿ ನಡೆಯಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ನೀಟ್ ರದ್ದು ಮಾಡಿದರೆ ಬಾಣಲೆಯಿಂದ ಬೆಂಕಿಗೆ ಬಿದ್ದಂತೆ ಆಗುತ್ತದೆ. ಶೀತ–ನೆಗಡಿಯಾದರೆ ಅದಕ್ಕೆ ಔಷಧಿ ಸೇವಿಸಬೇಕೇ ವಿನಾ, ಮೂಗನ್ನೇ ಕತ್ತರಿಸಿದರೆ ಆಗುತ್ತದೆಯೇ?

ಈ ಬಗ್ಗೆ ಚರ್ಚೆ ಮಾಡುವುದಕ್ಕೂ ಮುನ್ನ, ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ದೇಶದಲ್ಲಿ ಒಂದೇ ಪ್ರವೇಶ ಪರೀಕ್ಷೆ ವ್ಯವಸ್ಥೆ ಯಾಕೆ ಬಂತು ಎಂಬುದನ್ನು ಎಲ್ಲರೂ ಅರಿಯಬೇಕು.

ಎಂಜಿನಿಯರಿಂಗ್, ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಪ್ರತ್ಯೇಕ ಪರೀಕ್ಷೆ ನಡೆಸುವ ಪರಿಕಲ್ಪನೆ ಆರಂಭವಾಗಿದ್ದು 1980ರ ದಶಕದಲ್ಲಿ. ಅದುವರೆಗೂ ದ್ವಿತೀಯ ಪಿಯುಸಿ ಅಥವಾ 12ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ಆಧಾರದಲ್ಲಿ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗುತ್ತಿತ್ತು. 1984ರಲ್ಲಿ ದೇಶದಲ್ಲಿಯೇ ಮೊದಲ ಬಾರಿಗೆ ಸಿಇಟಿ ನಡೆಸಿದ್ದು ಕರ್ನಾಟಕ.

ಕರ್ನಾಟಕದ ಮಾದರಿಯಲ್ಲಿ ಇತರ ರಾಜ್ಯಗಳು ತಮ್ಮದೇ ಪ್ರವೇಶ ಪರೀಕ್ಷೆ ನಡೆಸಲು ಆರಂಭಿಸಿದವು. ಖಾಸಗಿ ಕಾಲೇಜುಗಳು, ಡೀಮ್ಡ್ ವಿವಿಗಳು ಕೂಡ ಪ್ರತ್ಯೇಕ ಪ್ರವೇಶ ಪರೀಕ್ಷೆ ರೂಪಿಸಿದವು. ವೈದ್ಯಕೀಯ ಸೀಟು ಪಡೆಯಲು ಅಭ್ಯರ್ಥಿಗಳು ಒಂದೆರಡು ಪರೀಕ್ಷೆ ಬರೆದರೆ ಸಾಲದು ಎಂಬಂಥ ಪರಿಸ್ಥಿತಿ ನಿರ್ಮಾಣವಾಯಿತು. ಪ್ರವೇಶ ಪರೀಕ್ಷೆಗಳನ್ನು ಬರೆಯುವುದೇ ಅವರಿಗೆ ಸವಾಲಾಯಿತು. ವಾಮ ಮಾರ್ಗದಲ್ಲಿ ಹಣ ಸಂಪಾದಿಸಲು ವೈದ್ಯಕೀಯ ಕಾಲೇಜುಗಳು ಪ್ರವೇಶ ಪರೀಕ್ಷೆಯನ್ನು ದಾರಿ ಮಾಡಿಕೊಂಡವು.

ರಾಷ್ಟ್ರೀಯ ಮಟ್ಟದಲ್ಲಿ ಒಂದೇ ಪ್ರವೇಶ ಪರೀಕ್ಷೆ ನಡೆಸಬೇಕು ಎಂಬ ಕೂಗು 2009ರಲ್ಲಿ ಕೇಳಿ ಬಂತು. ಇದಕ್ಕೆ ಖಾಸಗಿ ಕಾಲೇಜುಗಳ ಸಹಮತ ಇರಲಿಲ್ಲ. ದೇಶದಾದ್ಯಂತ ಒಂದೇ ಪ್ರವೇಶ ಪರೀಕ್ಷೆ (ನೀಟ್) ನಡೆಸಲೇಬೇಕು ಎಂಬ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಿತು. ಹೆಚ್ಚು ಖಾಸಗಿ ಕಾಲೇಜುಗಳನ್ನು ಹೊಂದಿರುವ ಆಂಧ್ರಪ್ರದೇಶ, ಕರ್ನಾಟಕ, ಗುಜರಾತ್, ತಮಿಳುನಾಡು, ಪಶ್ಚಿಮ ಬಂಗಾಳ ರಾಜ್ಯಗಳು ಈ ತೀರ್ಪನ್ನು ತೀವ್ರವಾಗಿ ವಿರೋಧಿಸಿದವು. 2013ರ ಮೇ 5ರಂದು ಸಿಬಿಎಸ್‌ಇ ಮೊದಲ ಬಾರಿಗೆ 'ನೀಟ್' ನಡೆಸಿತು. 6,58,040 ಅಭ್ಯರ್ಥಿಗಳು ಪರೀಕ್ಷೆ ಬರೆದರು. ಪರೀಕ್ಷೆ ನಂತರ ಮತ್ತೆ ಗೊಂದಲ ಉಂಟಾದ್ದರಿಂದ ರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ಸೀಟುಗಳ ಹಂಚಿಕೆಯಾಗಲಿಲ್ಲ. ಈ ಪರೀಕ್ಷೆ ಆಧಾರದಲ್ಲಿ ಅಖಿಲ ಭಾರತ ಕೋಟಾದ ಸೀಟುಗಳನ್ನು ಮಾತ್ರ ಭರ್ತಿ ಮಾಡಲಾಯಿತು. 2014–15ನೇ ಸಾಲಿನಲ್ಲಿ 'ನೀಟ್' ನಡೆಯಲಿಲ್ಲ. 2016ರ ಹೊತ್ತಿಗೆ ನೀಟ್ ನಡೆಸಲೇ ಬೇಕು ಎಂಬ ದೃಢ ನಿರ್ಧಾರ ತಳೆದ ಕೇಂದ್ರ ಸರ್ಕಾರ, ಮೇ ಮತ್ತು ಜುಲೈನಲ್ಲಿ ಎರಡು ಹಂತಗಳಲ್ಲಿ ಪರೀಕ್ಷೆ ನಡೆಸಿತು. 7,31,233 ಅಭ್ಯರ್ಥಿಗಳು ಹಾಜರಾದರು.

ಪ್ರವೇಶ ಪರೀಕ್ಷೆಯನ್ನು ಇನ್ನಷ್ಟು ವ್ಯವಸ್ಥಿತವಾಗಿ ನಡೆಸಬೇಕು ಎಂಬುದು ಕೇಂದ್ರದ ನಿಲುವಾಗಿತ್ತು. ಇದೇ ವೇಳೆ, ಭ್ರಷ್ಟಾಚಾರ, ಹಗರಣಗಳ ಕೂಪವಾಗಿದ್ದ ಭಾರತೀಯ ವೈದ್ಯಕೀಯ ಮಂಡಳಿಯನ್ನು (ಎಂಸಿಐ) ರದ್ದು ಪಡಿಸಿ ಸ್ವಾಯತ್ತವಾದ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಸ್ಥಾಪಿಸಿತು. ಇದಕ್ಕೆ ಪೂರಕವಾಗಿ 2019ರಲ್ಲಿ ಕಾಯ್ದೆಯನ್ನೂ ರೂಪಿಸಿತು. ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯನ್ನು (ಎನ್‌ಟಿಎ) ಸ್ಥಾಪಿಸಿ ನೀಟ್ ನಡೆಸುವ ಹೊಣೆ ಒಪ್ಪಿಸಿತು.

'ಎಲ್ಲ ರಾಜ್ಯಗಳಲ್ಲಿ ಬೇರೆ ಬೇರೆ ಪಠ್ಯಕ್ರಮ (ಪಿಯು ಶಿಕ್ಷಣದಲ್ಲಿ) ಇದೆ. ಹೀಗಿರುವಾದ ರಾಷ್ಟ್ರೀಯ ಮಟ್ಟದಲ್ಲಿ ಒಂದೇ ಪರೀಕ್ಷೆ ನಡೆಸಲು ಹೇಗೆ ಸಾಧ್ಯ' ಎಂಬುದು ಹಲವು ರಾಜ್ಯಗಳು 'ನೀಟ್' ಬಗ್ಗೆ ವ್ಯಕ್ತಪಡಿಸಿದ್ದ ಪ್ರಮುಖ ಆಕ್ಷೇಪವಾಗಿತ್ತು. ಈಗ ಈ ಸಮಸ್ಯೆ ಇಲ್ಲ. ಎಲ್ಲ ರಾಜ್ಯಗಳಲ್ಲಿ ಒಂದೇ ಪಠ್ಯಕ್ರಮ ಇದ್ದು, ಎನ್‌ಸಿಇಆರ್‌ಟಿ ರೂಪಿಸಿರುವ ಪಠ್ಯಕ್ರಮವನ್ನೇ ಪಾಲಿಸಲಾಗುತ್ತಿದೆ.

'ನೀಟ್' ನಡೆಸುವ ಕೇಂದ್ರ ಸರ್ಕಾರದ ಉದ್ದೇಶ ಸರಿಯಾಗಿದ್ದರೂ, ಪರೀಕ್ಷಾ ಪ್ರಕ್ರಿಯೆಯ ನಿರ್ವಹಣೆ ವ್ಯವಸ್ಥಿತವಾಗಿಲ್ಲ. ಪ್ರತಿ ವರ್ಷ ಅದು ಒಂದಿಲ್ಲೊಂದು ಸಮಸ್ಯೆಗಳನ್ನು ಎದುರಿಸುತ್ತಿದೆ. ನೀಟ್ ಬರೆಯುತ್ತಿರುವ ಅಭ್ಯರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಈ ವರ್ಷ 1,09,065 ಎಂಬಿಬಿಎಸ್, 28,088 ದಂತ ವೈದ್ಯಕೀಯ (ಬಿಡಿಎಸ್), 50,720 ಆಯುಷ್ ಸೀಟುಗಳು ಸೇರಿದಂತೆ ದೇಶದಲ್ಲಿ 1.75 ಲಕ್ಷದಷ್ಟು ವೈದ್ಯಕಿಯ ಸೀಟುಗಳು ಲಭ್ಯವಿವೆ. ಮೇ 5ರಂದು ನಡೆದಿದ್ದ ಪರೀಕ್ಷೆಗೆ 23,33,297 ಮಂದಿ ಹಾಜರಾಗಿದ್ದರು.

ಹೆಚ್ಚು ವ್ಯವಸ್ಥಿತವಾಗಿ ಪರೀಕ್ಷೆ ನಡೆಸಲು ಎನ್‌ಟಿಎ ಗಮನ ಹರಿಸಬೇಕು. ಆದರೆ, ಇದರಲ್ಲಿ ಅದು ಎಡವುತ್ತಿದೆ. 'ನೀಟ್' ಆರಂಭವಾದಾಗಿನಿಂದಲೂ ಒಂದಲ್ಲ ಒಂದು ತಪ್ಪು ನಡೆಯುತ್ತಲೇ ಇದೆ. ಇದುವರೆಗೂ ಅದು ಸಣ್ಣಪುಟ್ಟದ್ದಾಗಿತ್ತು, ಈ ಬಾರಿಯ ಅಕ್ರಮ ದೊಡ್ಡ ಮಟ್ಟದ್ದು, ಶಿಕ್ಷಣ ವಲಯದಲ್ಲಿ ಕೋಲಾಹಲವನ್ನೇ ಎಬ್ಬಿಸಿದೆ. ಇದೇ ಸಂದರ್ಭವನ್ನು ಬಳಸಿಕೊಂಡು ಕೆಲವು ರಾಜ್ಯಗಳು ನೀಟ್ ರದ್ದತಿ ಬಗ್ಗೆ ಮಾತನಾಡುತ್ತಿವೆ. ಮತ್ತೆ ಹಲವು ಪ್ರವೇಶ ಪರೀಕ್ಷೆಗಳು ನಡೆಯುವ ವ್ಯವಸ್ಥೆ ಈಗಿನ ಬಿಕ್ಕಟ್ಟಿಗೆ ಖಂಡಿತವಾಗಿಯೂ ಪರಿಹಾರವಾಗದು. ಹೆಚ್ಚು ಪರೀಕ್ಷೆಗಳು ನಡೆದಷ್ಟೂ ಅಕ್ರಮಗಳು ಜಾಸ್ತಿಯಾಗುವುದಕ್ಕೆ ಅವಕಾಶ ಸಿಕ್ಕಂತಾಗುತ್ತದೆ.

> ನೀಟ್‌ನಿಂದಾಗಿ ವೈದ್ಯಕೀಯ ಶಿಕ್ಷಣ ಪಡೆಯಲು ಬಯಸುವ ಬಡ, ಕೆಳ ಮಧ್ಯಮ ವರ್ಗ, ಮಧ್ಯಮ ವರ್ಗಗಳ ಸಾವಿರಾರು ಪ್ರತಿಭಾವಂತ ಅಭ್ಯರ್ಥಿಗಳಿಗೆ ಅನುಕೂಲವಾಗಿದೆ. ಹಲವು ಪ್ರವೇಶ ಪರೀಕ್ಷೆಗಳಿಗೆ ಶುಲ್ಕ ಪಾವತಿಸುವ ಹೊರೆ ಇಲ್ಲದಂತೆ ಆಗಿರುವುದು ಒಂದೆಡೆಯಾದರೆ, ಅಧ್ಯಯನ ಹಾಗೂ ಸೀಟು ಹಂಚಿಕೆಯ ದೃಷ್ಟಿಯಿಂದಲೂ ಸಾಕಷ್ಟು ಪ್ರಯೋಜನವಾಗಿದೆ...

'ನೀಟ್ ರದ್ದು ಮಾಡಬೇಕು, ರಾಜ್ಯಕ್ಕೆ ವಿನಾಯಿತಿ ನೀಡಬೇಕು' ಎಂದು ಕೆಲವು ರಾಜ್ಯಗಳು ವಿಧಾನಸಭೆಗಳಲ್ಲಿ ನಿರ್ಣಯ ಅಂಗೀಕಾರ ಮಾಡುತ್ತಿವೆ. ಇದರಿಂದ ಪ್ರಯೋಜನವಾಗದು. ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಸೂದೆ ಮಂಡಿಸಿ, ಚರ್ಚೆ ನಡೆಸಿ ಅಂಗೀಕರಿಸಿದ ನಂತರ ರೂಪುಗೊಂಡಿರುವ ವ್ಯವಸ್ಥೆ ಇದು. ಸಂಸತ್ತಿನ ನಿರ್ಧಾರಗಳನ್ನು ವಿಧಾನಸಭೆಗಳಲ್ಲಿ ನಿರ್ಣಯಗಳನ್ನು ಅಂಗೀಕರಿಸಿ ಅಥವಾ ಕಾನೂನು ರೂಪಿಸಿ ರದ್ದು ಪಡಿಸಲು ಸಾಧ್ಯವಿಲ್ಲ.

ನೀಟ್‌ನಿಂದಾಗಿ ರಾಜ್ಯದ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತದೆ ಎಂದು ತಮಿಳುನಾಡು ಹೇಳುತ್ತಿದೆ. ಇದು ಬಾಲಿಶ ವಾದ. ಎಲ್ಲ ರಾಜ್ಯಗಳಿಗೂ ರಾಜ್ಯ ಕೋಟಾ ಸೀಟುಗಳಿರುತ್ತವೆ. ಅವುಗಳನ್ನು ಆಯಾ ರಾಜ್ಯದ ಅಭ್ಯರ್ಥಿಗಳಿಗೇ ನೀಡಬೇಕು. ಹಾಗಿರುವಾಗ ಅನ್ಯಾಯದ ಪ್ರಶ್ನೆ ಎಲ್ಲಿ ಬಂತು?

ನೀಟ್‌ನಿಂದಾಗಿ ಬಡ, ಕೆಳ ಮಧ್ಯಮ ವರ್ಗ, ಮಧ್ಯಮ ವರ್ಗಗಳ ಅಭ್ಯರ್ಥಿಗಳಿಗೆ ಅನುಕೂಲವಾಗಿದೆ. ಹಲವು ಪ್ರವೇಶ ಪರೀಕ್ಷೆಗಳಿಗೆ ಶುಲ್ಕ ಪಾವತಿಸುವ ಹೊರೆ ಇಲ್ಲದಂತೆ ಆಗಿರುವುದು ಒಂದೆಡೆಯಾದರೆ, ಅಧ್ಯಯನ ಹಾಗೂ ಸೀಟು ಹಂಚಿಕೆಯ ದೃಷ್ಟಿಯಿಂದಲೂ ಪ್ರಯೋಜನವಾಗಿದೆ. ಅಭ್ಯರ್ಥಿಗಳು ಒಂದು ಪರೀಕ್ಷೆಗೆ ಓದಿದರೆ ಸಾಕು. ಒಂದೇ ಪರೀಕ್ಷೆಯ ಆಧಾರದಲ್ಲಿ ಅಖಿಲ ಭಾರತ ಕೋಟಾ, ರಾಜ್ಯದ ಕೋಟಾ, ಮ್ಯಾನೇಜ್‌ಮೆಂಟ್ ಕೋಟಾ ಸೇರಿದಂತೆ ಎಲ್ಲ ಕೋಟಾಗಳ ಅಡಿಯಲ್ಲೂ ಸೀಟು ಹಂಚಿಕೆಯಾಗುತ್ತದೆ.

ಈಗಿನ ವ್ಯವಸ್ಥೆಯಲ್ಲಿ ಇರುವ ದೋಷಗಳನ್ನು ಸರಿಪಡಿಸಿ, ನೀಟ್ ಸುಧಾರಣೆಗೆ ಕ್ರಮಕೈಗೊಳ್ಳಬೇಕೇ ವಿನಾ ಪರೀಕ್ಷೆಯನ್ನೇ ರದ್ದುಪಡಿಸುವುದು ಸೂಕ್ತ ನಿರ್ಧಾರವಾಗದು. ಆಧುನಿಕ ತಂತ್ರಜ್ಞಾನಗಳು ಅಕ್ರಮಗಳಿಗೆ ಹಲವು ಮಾರ್ಗಗಳನ್ನು ತೋರಿಸಿವೆ. ಇದಕ್ಕೆ ಕಡಿವಾಣ ಹಾಕುವಂತಹ ಸುಧಾರಿತ ವ್ಯವಸ್ಥೆಯೊಂದರ ಅಗತ್ಯವಿದೆ. ಎನ್‌ಟಿಎಗೆ ಪರೀಕ್ಷೆ ನಡೆಸುವ ಜವಾಬ್ದಾರಿ ಮಾತ್ರ ಬಿಟ್ಟು, ಅಕ್ರಮ ನಡೆಯದ ರೀತಿಯಲ್ಲಿ ನಿಗಾ ಇಡಲು ಪ್ರತ್ಯೇಕ ವ್ಯವಸ್ಥೆ ರೂಪಿಸುವುದು ಸಮಸ್ಯೆಗೆ ಪರಿಹಾರವಾಗಬಲ್ಲುದು.

ಲೇಖಕ: ಶಿವಮೊಗ್ಗದ ಶ್ರೀ ಆದಿಚುಂಚನಗಿರಿ ಸ್ವತಂತ್ರ ಪಿಯು ಕಾಲೇಜು ಪ್ರಾಂಶುಪಾಲ

ನಿರೂಪಣೆ: ಸೂರ್ಯನಾರಾಯಣ ವಿ. ❖

ಚಿತ್ರಕಥೆಯಲ್ಲಿ ಎಡವಿದ ಭಿನ್ನ ಕಥೆ

ನಾವು ನೋಡಿದ ಸಿನಿಮಾ

ಸಿನಿಮಾ: ಹೆಜ್ಜಾರು (ಕನ್ನಡ)

- **ನಿರ್ಮಾಣ:** ವಿಮಲ ಎನ್., ಕೆ.ಎಸ್.ರಾಮ್‌ಜಿ
- **ನಿರ್ದೇಶನ:** ಹರ್ಷ ಪ್ರಿಯ
- **ತಾರಾಗಣ:** ಭಗತ್ ಆಳ್ವ, ಗೋಪಾಲಕೃಷ್ಣ ದೇಶಪಾಂಡೆ, ಲಿಯೋನಿಲ್ಲಾ ಶ್ವೇತಾ ಡಿಸೋಜ, ನವೀನ್ ಕೃಷ್ಣ, ಅರುಣಾ ಬಾಲರಾಜ್ ಮತ್ತಿತರರು

ಭಿನ್ನವಾದ ವಿಷಯಗಳನ್ನು ಇಟ್ಟುಕೊಂಡು ಹೊಸ ನಿರ್ದೇಶಕರು ಕಥೆ ಹೆಣೆಯುತ್ತಿದ್ದಾರೆ ಎನ್ನುವುದಕ್ಕೆ ಸಾಕ್ಷ್ಯದಂತಿದೆ 'ಹೆಜ್ಜಾರು'. ಆದರೆ ಭಿನ್ನ ಕಥೆ ಎಂಬ ಅಂಶವಷ್ಟೇ ಸಿನಿಮಾವನ್ನು ದಡ ಮುಟ್ಟಿಸಲಾರದು. ಗಟ್ಟಿಯಾದ ಕಥೆ ಇಟ್ಟುಕೊಂಡು ಚಿತ್ರಕಥೆಯ ಬಿಗಿಹಿಡಿತವನ್ನು ಸಡಿಲಿಸಿದರೆ, ಸಿನಿಮಾವನ್ನು ನಿರೀಕ್ಷಿಸಿದ ಮಟ್ಟಕ್ಕೆ ತಲುಪಿಸುವುದು ಕಷ್ಟ. 'ಹೆಜ್ಜಾರು' ಇಲ್ಲೇ ಕೊಂಚ ಎಡವಿದೆ. ದ್ವಿತೀಯಾರ್ಧದ ಆರಂಭದಲ್ಲೇ ಚಿತ್ರಕಥೆಯ ಸೂತ್ರವನ್ನು ಸಡಿಲಬಿಟ್ಟ ನಿರ್ದೇಶಕರು ಕ್ಲೈಮ್ಯಾಕ್ಸ್‌ನಲ್ಲಿ ಅದನ್ನು ಮತ್ತೆ ಹಿಡಿತಕ್ಕೆ ತೆಗೆದುಕೊಂಡು ಸಿನಿಮಾವನ್ನು ದಡ ಮುಟ್ಟಿಸಿದ್ದಾರೆ.

ಸಿನಿಮಾದ ಕಥೆ ಮೂರು ಕಾಲಘಟ್ಟದಲ್ಲಿ ನಡೆಯುತ್ತದೆ. ಇಸವಿ 1965. ಹೆಜ್ಜಾರು ಪೊಲೀಸ್ ಠಾಣೆಯಲ್ಲಿ ಸತ್ಯಮೂರ್ತಿ ಎಂಬಾತ ಕಾನ್‌ಸ್ಟೆಬಲ್ ಆಗಿ ಕಾರ್ಯನಿರ್ವಹಿಸುತ್ತಿರುತ್ತಾನೆ. ಕಳ್ಳನೊಬ್ಬನನ್ನು ಹಿಡಿಯಲು ಓಡುತ್ತಿರುವಾಗ ಸತ್ಯಮೂರ್ತಿ, ಅದೇ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಹಾಗೂ ಕಳ್ಳ ಊರಿನ ಆಲದಮರದ ಕೆಳಗೆ ಲಾರಿ ಅಪಘಾತವಾಗಿ ಸಾಯುತ್ತಾರೆ. ಸತ್ಯಮೂರ್ತಿಯ ಪತ್ನಿ, ಮಗ ಅನಾಥರಾಗುತ್ತಾರೆ. 1995ರಲ್ಲಿ ಇದೇ ರೀತಿಯ ಮತ್ತೊಂದು ಘಟನೆ ಅದೇ ಆಲದಮರದ ಕೆಳಗೆ ನಡೆಯುತ್ತದೆ. ಆ ಅಪಘಾತದಲ್ಲಿ ಕಾನ್‌ಸ್ಟೆಬಲ್ ಆಗಿದ್ದ ಕೃಷ್ಣಮೂರ್ತಿ ಸಾಯುತ್ತಾನೆ. ಕೃಷ್ಣಮೂರ್ತಿಯ ಪತ್ನಿ, ಮಗ ಅನಾಥರಾಗುತ್ತಾರೆ. ಒಂದೇ ರೀತಿಯಲ್ಲಿ ನಡೆದ ಈ ಎರಡೂ ಘಟನೆಗಳು ಸತ್ಯಮೂರ್ತಿಯ ಮಗ ರಾಜಾರಾಮನ(ಗೋಪಾಲಕೃಷ್ಣ ದೇಶಪಾಂಡೆ) ಗಮನಕ್ಕೆ ಬರುತ್ತದೆ. ಆ ವೇಳೆಗಾಗಲೇ ರಾಜಾರಾಮನ ಪ್ರೇಯಸಿಯ ಕೊಲೆಯಾಗಿರುತ್ತದೆ. ಕೊಲೆಗಾರನ ಹುಡುಕಾಟದಲ್ಲಿ ಆತನಿರುತ್ತಾನೆ. 2020ರ ವೇಳೆಗೆ ಕೃಷ್ಣಮೂರ್ತಿಯ ಮಗ ಭಗತ್(ಭಗತ್ ಆಳ್ವ) ಯುವಕನಾಗಿದ್ದಾನೆ. ಆತ ಜಾನಕಿ(ಶ್ವೇತಾ ಡಿಸೋಜ) ಎಂಬಾಕೆಯನ್ನು ಪ್ರೀತಿಸುತ್ತಿದ್ದಾನೆ. ಹೀಗಿರುವಾಗ ಒಂದು ದಿನ ರಾಜಾರಾಮ ತನ್ನನ್ನೇ ಹಿಂಬಾಲಿಸುತ್ತಿರುವ ವಿಷಯ ಭಗತ್‌ಗೆ ತಿಳಿಯುತ್ತದೆ. ಇಲ್ಲಿಂದ ಕಥೆ ತಿರುವು ಪಡೆಯುತ್ತಾ ಮುಂದಡಿ ಇಡುತ್ತದೆ.

ಪ್ಯಾರಲಲ್ ಲೈಫ್ ಹಾಗೂ ಡಿಐಡಿ (ಡಿಸೋಸಿಯೇಟಿವ್ ಐಡೆಂಟಿಟಿ ಡಿಸೋರ್ಡರ್) ಎಂಬ ಭಿನ್ನವಾದ ಎಳೆಯನ್ನು ಇಟ್ಟುಕೊಂಡು ನಿರ್ದೇಶಕರು ಇಲ್ಲಿ ಕಥೆ ಹೆಣೆದಿದ್ದಾರೆ. ಕಥೆಯ ಮೊದಲಾರ್ಧ ಕುತೂಹಲಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ ಅವರ ನಟನೆ ಗಮನ ಸೆಳೆಯುತ್ತದೆ. ಪ್ರೇಕ್ಷಕರೂ ದ್ವಿತೀಯಾರ್ಧಕ್ಕೆ ಉತ್ಸುಕರಾಗುತ್ತಾರೆ. ಆದರೆ ಸಿನಿಮಾ ದ್ವಿತೀಯಾರ್ಧಕ್ಕೆ ಹೆಜ್ಜೆ ಇಡುತ್ತಿದ್ದಂತೇ ಚಿತ್ರಕಥೆ ಸಡಿಲವಾಗುತ್ತದೆ. ಹಲವು ಪ್ರಶ್ನೆಗಳು ಹುಟ್ಟಿಕೊಳ್ಳುವಂತಹ, ತರ್ಕಕ್ಕೆ ಸಿಗದ ದೃಶ್ಯಗಳು ಕೆಲವೆಡೆ ಇವೆ. ಗಟ್ಟಿಯಾದ ಚಿತ್ರಕಥೆಯ ಕೊರತೆಯೇ ಇದಕ್ಕೆ ಕಾರಣ. ಎಲ್ಲಿಯ ಆಸ್ಪತ್ರೆ, ಎಲ್ಲಿಯ ಕಾರಿಂಜ ಬೆಟ್ಟ! ಕಥೆಗೆ ಕಮರ್ಷಿಯಲ್ ಸಿನಿಮಾ ಸ್ಪರ್ಶ ನೀಡಲೇಬೇಕು ಎಂಬ ಹಟಕ್ಕೆ ಬಿದ್ದಂತೆ ಕೆಲ ದೃಶ್ಯಗಳು, ಎರಡು ಹಾಡುಗಳಿವೆ. ಆ್ಯಕ್ಷನ್ ದೃಶ್ಯಗಳೂ ಕೃತಕವಾಗಿವೆ. ಗೋಪಾಲಕೃಷ್ಣ ದೇಶಪಾಂಡೆ ಎಂಬ ಶಕ್ತಿಯನ್ನು ಪೂರ್ಣವಾಗಿ ಬಳಸಿಕೊಳ್ಳುವಲ್ಲಿ ಚಿತ್ರಕಥೆ ಸೋತಿದೆ.

ನಟನೆಯಲ್ಲಿ ಗೋಪಾಲಕೃಷ್ಣ ದೇಶಪಾಂಡೆ, ಭಗತ್ ಆಳ್ವ, ಲಿಯೋನಿಲ್ಲಾ ಶ್ವೇತಾ ಡಿಸೋಜ, ಅರುಣಾ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಕೆಲವು ಪಾತ್ರಗಳಿಗೆ ಸ್ಪಷ್ಟ ರೂಪ ನೀಡುವಲ್ಲಿ ನಿರ್ದೇಶಕರು ಸೋತಿದ್ದಾರೆ. ಅನಂತದ(ಇನ್ಫಿನಿಟಿ) ಸಂಕೇತವನ್ನು ಶೀರ್ಷಿಕೆಯಲ್ಲೇ ಹೊತ್ತ ಈ ಸಿನಿಮಾ ಆಲದಮರದ ಕೆಳಗಡೆ ಒಂದೇ ರೀತಿಯ ಅಪಘಾತ ಏಕೆ ನಡೆಯುತ್ತಿದೆ ಎನ್ನುವುದನ್ನು ನಿಗೂಢವಾಗಿಯೇ ಇರಿಸಿದೆ.

ಅಭಿಲಾಷ್ ಪಿ.ಎಸ್. ❖

ಪದಬಂಧ 5747

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ನಿಧಾನವಾದ ನಡಿಗೆಯನ್ನು ಹೀಗೂ ಹೇಳುವರು (5)
5.ಅಜವನ್ನು ಹಿಡಿದಿರುವ ಅಣ್ಣ (3)
6.ಕನ್ನಹಾಕಿ ಕದ್ದೊಯ್ದ ಚಿನ್ನ (3)
8.ಲಲಿತೆ ಬೆಳಸಿರುವ ಬಳ್ಳಿ (2)
11.ಗಡಿಯಲ್ಲಿರುವ ವ್ಯಾಯಾಮ ಶಾಲೆ (3)
12. ತಿರುಗಿದಾಗ ಕಾಣಿಸಿದ ಶತೃತ್ವ (2)
14.ಸೊಟದಿಂದ ಪ್ರಾರಂಭವಾದ ಕಂಪನ (3)
16.ಸಂಪ್ರದಾಯ ಅಥವಾ ಪದ್ಧತಿ (3)
17.ಗುಣವನ್ನು ಹೊಗಳುವುದು ಉಲ್ಟಾ ಆಗಿದೆ (5)

ಮೇಲಿಂದ ಕೆಳಕ್ಕೆ

1.ಮರೀಚಿಕೆ ಇಲ್ಲಿ ಕಾಣುತ್ತಿದೆ (4)
2.ಜಗಲಿಯಲ್ಲೇ ಪ್ರಪಂಚವನ್ನು ಹುಡುಕಿ! (2)
3.ಪಾಕದ ನಂತರ ಕುಡಿದಿರುವ ಶರಬತ್ತು (3)
5.ಅಶನಕ್ಕಾಗಿ ಸಭೆ ಸೇರುವುದು (5)
7.ಕಿವಿಯಿಂದ ಕಿವಿಗೆ ಹರಡುವ ಮಾತು (5)
9.ಹೊಗಳು ಪದದ ವಿರುದ್ಧ ಪದ (3)
10.ಮಂಡಿ ಹತ್ತಿರ ಮಾರುತ್ತಿರುವ ಸಿಹಿಭಕ್ಷ್ಯ (3)
13.ಗಾಳಿಯ ಸ್ಥಿತಿಗತಿ (4)
15.ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
18.ಗೋಡೆಯಲ್ಲಿ ಕೊರೆಯುವ ಕಂಡಿ (2)



5746ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಗುಂಗು 3.ಕರ್ನಾಟಕ
5.ರಿಕಾಪು 7.ರುಗ್ಣಾಲಯ
9.ಅರಣ್ಯ 10.ಬಹಳ
11.ಯಮದೂತ 13.ಕಪಟಿ
15.ಅರಸಿಕ 16.ಉಬ್ಬ

ಮೇಲಿಂದ ಕೆಳಕ್ಕೆ:

2.ಗುಜರಿ 3.ಕದಪು
4.ಟಗರು 6.ಕಾರುಣ್ಯ
8.ಯಮಳ 9.ಅಳಿಯ
10.ಬಳಪ 12.ತಸ್ಕರ
13.ಕಣಕ 14.ಟಿಸಿಲು

ಸುಡೊಕು 6132

6		4	9		7	3		8
	1			4				
	7	8	2			4		6
7					8		6	
	8		4			7	3	
		5		7				
4	9		3	8		6		1
	6						8	
8		7			4	2		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6131 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಜುಲೈ 20, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಚತುರ್ದಶಿ ಗಂ. 18-00 **ನಕ್ಷತ್ರ:** ಪೂರ್ವಾಷಾಢ ಗಂ. 25-49 **ಯೋಗ:** ವೈಧೃತಿ ಗಂ. 24-08 **ಕರಣ:** ಗರ ಗಂ. 06-55, ಕರ್ಕಾಟಕ ಮಾಸದ 04 ನೇ ದಿನ, ಮಳೆನಕ್ಷತ್ರ: ಪುಷ್ಯ 1.
ರಾಹುಕಾಲ: ಬೆಳಿಗ್ಗೆ 09-00 – 10-30
ಸೂರ್ಯೋದಯ: 06-17 **ಸೂರ್ಯಾಸ್ತ :** 06-57
ಮುಸ್ಲಿಂ ದಿನಾಂಕ: 13 ಮೊಹರಮ್
ಅದೃಷ್ಟ ಸಂಖ್ಯೆ: 8, 6

ಮೇಷ: ನಿಮ್ಮ ನಿಸ್ವಾರ್ಥ ಪ್ರಯತ್ನಗಳು ಯಶಸ್ಸಿನ ಹಾದಿಯಲ್ಲಿವೆ. ಶ್ರೇಯಸ್ಸು ನಿಮ್ಮನ್ನು ಹುಡುಕಿಕೊಂಡು ಬರುವುದರಿಂದ ಹೆಚ್ಚಿನ ಸಂತಸ ಸಿಗುವುದು. ನೂತನ ವಾಹನ ಖರೀದಿಸಬಹುದು.

ವೃಷಭ: ದೂರದ ಸಂಬಂಧಿಕರೊಬ್ಬರ ಆಗಮನವು ಮನೆಯಲ್ಲಿ ಸಡಗರ ಸೃಷ್ಟಿಸಲಿದೆ. ಮೇಧಾವಿಗಳೊಂದಿಗಿನ ಸಂಪರ್ಕದಿಂದಾಗಿ ಅರಿವು ಹೆಚ್ಚಲಿದೆ. ಕಾರ್ಯಕ್ಷೇತ್ರದಲ್ಲಿ ಒಳ್ಳೆಯ ಅವಕಾಶಗಳು ದೊರೆಯುತ್ತವೆ.

ಮಿಥುನ: ಒಳ್ಳೆಯ ನಿರ್ಧಾರಗಳಿಗೆ ಕೆಲವು ಪ್ರಭಾವಿಗಳ ಹಸ್ತಕ್ಷೇಪ ಇರಬಹುದು. ನಿಮ್ಮ ಬುದ್ಧಿಯನ್ನು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳುವುದರಿಂದ ಅಭಿವೃದ್ಧಿಗೆ ಅನುಕೂಲ ಆಗುತ್ತದೆ. ಮಾವು ವ್ಯಾಪಾರಿಗಳಿಗೆ ಲಾಭವಾಗಲಿದೆ.

ಕರ್ಕಾಟಕ: ಅನುಭವದ ಕೊರತೆ ನಿಮ್ಮ ವೈಫಲ್ಯಕ್ಕೆ ಪ್ರಧಾನ ಕಾರಣವಾಗಲಿದೆ. ಉನ್ನತ ವ್ಯಾಸಂಗದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಆಸಕ್ತಿ ಬರುವುದು. ಅನಿವಾರ್ಯವಾಗಿ ದೂರದ ಊರಿಗೆ ಪ್ರಯಾಣಿಸಬೇಕಾಗುವುದು.

ಸಿಂಹ: ಆಲಸ್ಯತನದಿಂದ ಕೆಲಸ ಕಾರ್ಯಗಳನ್ನು ಮುಂದೂಡುವ ವಿಚಾರ ಸರಿಯಲ್ಲ. ಕೊಡು– ಕೊಳ್ಳುವ ವಿಚಾರದಲ್ಲಿ ಜಾಗರೂಕರಾಗಿರುವುದು ಉತ್ತಮ. ಸಂಪಾದನೆ ಕಡಿಮೆಯಿದ್ದರೂ ಆರ್ಥಿಕ ಚಿಂತೆ ಇರದು.

ಕನ್ಯಾ: ಉದ್ಯೋಗಾವಕಾಶದ ದೃಷ್ಟಿಯಿಂದ ಈ ದಿನ ಬಹಳ ಮಹತ್ವಪೂರ್ಣವಾದುದು. ದುಃಖಗಳನ್ನೆಲ್ಲವನ್ನೂ ಮೀರಿ ಮುಖದಲ್ಲಿ ಮಂದಹಾಸ ಇಟ್ಟುಕೊಳ್ಳಿ. ಜವಾಬ್ದಾರಿ ಎಲ್ಲದಕ್ಕಿಂತಲೂ ಮುಖ್ಯವಾದುದು.

ತುಲಾ: ಜಮೀನು ಖರೀದಿಸುವ ಯೋಚನೆಗಳು ಬರುವವು ಹಾಗು ಅವು ಯೋಚನೆಯಾಗಿಯೇ ಉಳಿಯುವುವು. ನ್ಯಾಯಾಲಯದ ವ್ಯವಹಾರಗಳಲ್ಲಿ ಜಯ ಕಾಣುವಿರಿ. ನಿಮ್ಮ ಹಳೆಯ ಕಾಲೇಜಿಗೆ ಮರು ಭೇಟಿ ನೀಡುವಿರಿ.

ವೃಶ್ಚಿಕ: ಮನೆಯ ಆಸ್ತಿಯ ವಿಷಯದಲ್ಲಿ ಅನುಭವಸ್ಥ ಆಪ್ತರಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ. ಜಗನ್ಮಾತೆಯ ಆರಾಧನೆಯಿಂದ ಶುಭವಾಗಲಿದೆ. ಬಂಗಾರ ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಯಲಿವೆ.

ಧನು: ಕೆಲಸಗಾರರಲ್ಲಿ ಒಮ್ಮತ ಮೂಡಿಸಲು ನೀವು ಅನುಸರಿಸಿದ ಮಾರ್ಗವನ್ನು ಮೇಲಧಿಕಾರಿಗಳು ಮೆಚ್ಚುವರು. ಸಮಾಜದಲ್ಲಿ ಅಸಭ್ಯವಾಗಿ ವರ್ತಿಸದೇ, ಗೌರವಾನ್ವಿತವಾಗಿ ಬದುಕುವುದನ್ನು ರೂಢಿಸಿಕೊಳ್ಳಿರಿ.

ಮಕರ: ಹರಿತವಾದ ವಸ್ತುಗಳ, ಯಂತ್ರಗಳ ಜೊತೆ ಕೆಲಸ ಮಾಡುವವರು ಈ ದಿನ ಜಾಗ್ರತೆಯಿಂದಿರಿ. ಸಹೋದರರ ಸ್ವತ್ತು ವಿಚಾರವಾಗಿ ಬಂಧುಗಳು ನೆರವಿಗೆ ಬರಲಿದ್ದು, ತಂದೆಯವರ ಮಾತಿನಂತೆಯೇ ನಡೆಯಲು ಒಪ್ಪುವಿರಿ.

ಕುಂಭ: ಶತ್ರುಗಳು ವಂಚನೆ ಮಾಡುವ ಸಲುವಾಗಿ ಮಿತ್ರರಾಗುವಂತೆ ನಟಿಸಿದರೂ, ಸ್ವಪ್ನದಲ್ಲಿ ಕೂಡಾ ಅಂತವರ ಬಗ್ಗೆ ಜಾಗ್ರತೆ ಅಗತ್ಯ. ಸಂದರ್ಶನಕ್ಕೆ ಹಾಜರಾಗುವವರು ಕಷ್ಟಪಡಬೇಕಾಗಬಹುದು.

ಮೀನ: ಪೋಷಕರ ವೈದ್ಯಕೀಯ ಖರ್ಚಿನಿಂದಾಗಿ ಆರ್ಥಿಕ ಸ್ಥಿತಿ ಏರುಪೇರಾಗಲಿದೆ. ಮಹತ್ವಾಕಾಂಕ್ಷೆ ಈಡೇರಿಸಿಕೊಳ್ಳುವಾಗ ಸಕಾರಾತ್ಮಕ ದೃಷ್ಟಿಕೋನವಿರಲಿ. ಭಾವನಾತ್ಮಕ ಸಂಬಂಧ ಬೆಳೆಸಲು ಇದು ಸೂಕ್ತ ಕಾಲ.

ಲೋಕಾಯುಕ್ತ ಪೊಲೀಸರ ದಾಳಿ

ಕೋಟಿ ಮೌಲ್ಯದ ಚಿನ್ನಾಭರಣ, ಆಸ್ತಿ ಪತ್ತೆ

ಆನಂದ್ ಸಿ.ಎಲ್. (ಹಿರಿಯ ಶ್ರೇಣಿ), ಮಂಗಳೂರು ಮಹಾನಗರ ಪಾಲಿಕೆ ಆಯುಕ್ತ
ಆಸ್ತಿ ವಿವರ: ₹2.12 ಕೋಟಿ ಮೌಲ್ಯದ 3 ಮನೆ, 4 ಎಕರೆ 27 ಗುಂಟೆ ಕೃಷಿ ಜಮೀನು. ₹19.40 ಲಕ್ಷದ ಚಿನ್ನಾಭರಣ, ₹20.50 ಲಕ್ಷದ ವಾಹನಗಳು, ₹16 ಲಕ್ಷ ಠೇವಣಿ, ₹10 ಲಕ್ಷ ಜಮೀನು ಖರೀದಿ ಮುಂಗಡ ಪತ್ರ
₹2.77 ಕೋಟಿ ಅಕ್ರಮ ಆಸ್ತಿ ಮೌಲ್ಯ



ರಮೇಶ್ ಕುಮಾರ್, ಜಂಟಿ ಆಯುಕ್ತ, ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು
ಆಸ್ತಿ ವಿವರ: ₹2.30 ಕೋಟಿ ಮೌಲ್ಯದ 2 ಮನೆ. ₹1.32 ಕೋಟಿ ಮೌಲ್ಯದ ಗೃಹೋಪಯೋಗಿ ಮತ್ತು ಇತರ ವಸ್ತುಗಳು, ₹15 ಲಕ್ಷದ ವಾಹನಗಳು, ₹31.50 ಲಕ್ಷ ಚಿನ್ನಾಭರಣ
₹4.08 ಕೋಟಿ ಅಕ್ರಮ ಆಸ್ತಿ ಮೌಲ್ಯ

ಸಿ.ಟಿ.ಮುದ್ದುಕುಮಾರ್, ಹೆಚ್ಚುವರಿ ನಿರ್ದೇಶಕ, ಇನ್‌ವೆಸ್ಟ್ ಕರ್ನಾಟಕ ಫೋರಂ ಸಿಇಒ
ಆಸ್ತಿ ವಿವರ: ₹2.47 ಕೋಟಿ ಮೌಲ್ಯದ 3 ಮನೆ, 1 ಕಟ್ಟಡ ಮನೆ, 6 ಎಕರೆ 20 ಗುಂಟೆ ಕೃಷಿ ಜಮೀನು. ₹1.13 ಲಕ್ಷ ನಗದು, ₹88.75 ಲಕ್ಷದ ಚಿನ್ನಾಭರಣ, ₹35.40 ಲಕ್ಷದ ವಾಹನ, ₹3 ಕೋಟಿಯ ಕೈಗಾರಿಕಾ ಶೆಡ್, ₹68.86 ಲಕ್ಷದ ಉಳಿತಾಯ, ಠೇವಣಿ ರಸೀದಿ
₹7.41 ಕೋಟಿ ಅಕ್ರಮ ಆಸ್ತಿ ಮೌಲ್ಯ

ಪ್ರಕಾಶ್ ಜಿ.ಎನ್., ಉಪ ನಿರ್ದೇಶಕ, ತೋಟಗಾರಿಕಾ ಇಲಾಖೆ, ಶಿವಮೊಗ್ಗ
ಆಸ್ತಿ ವಿವರ: ₹1.40 ಕೋಟಿ ಮೌಲ್ಯದ 2 ಮನೆ, 2 ಎಕರೆ 8 ಗುಂಟೆ ಕೃಷಿ ಜಮೀನು. ₹12.86 ಲಕ್ಷ ನಗದು, ₹38.32 ಲಕ್ಷದ ಚಿನ್ನಾಭರಣ, ₹5.20 ಲಕ್ಷದ ವಾಹನ, ₹11.30 ಲಕ್ಷದ ಇತರೆ ವಸ್ತುಗಳು
₹2.07 ಕೋಟಿ ಅಕ್ರಮ ಆಸ್ತಿ ಮೌಲ್ಯ

ಕೆ.ನರಸಿಂಹಮೂರ್ತಿ, ಆಯುಕ್ತ, ಹೆಬ್ಬಗೋಡಿ ನಗರಸಭೆ, ಆನೇಕಲ್, ಬೆಂಗಳೂರು
ಆಸ್ತಿ ವಿವರ: ₹3.90 ಕೋಟಿ ಮೌಲ್ಯದ 2 ಮನೆ, 2 ನಿವೇಶನ. ₹6 ಲಕ್ಷ ನಗದು, ₹22.58 ಲಕ್ಷದ ಚಿನ್ನಾಭರಣ, ₹16 ಲಕ್ಷದ ವಾಹನಗಳು, ₹11.23 ಲಕ್ಷದ ಗೃಹೋಪಯೋಗಿ ವಸ್ತುಗಳು
₹4.45 ಕೋಟಿ ಅಕ್ರಮ ಆಸ್ತಿ ಮೌಲ್ಯ



ಅತ್ತರ್ ಅಲಿ, ಉಪ ನಿಯಂತ್ರಕ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಬೆಂಗಳೂರು
ಆಸ್ತಿ ವಿವರ: ₹5.82 ಕೋಟಿ ಮೌಲ್ಯದ 4 ನಿವೇಶನ, 3 ಮನೆ. ₹25.18 ಲಕ್ಷ ನಗದು, ₹2.08 ಕೋಟಿಯ ಚಿನ್ನಾಭರಣ, ₹11 ಲಕ್ಷದ ವಾಹನ, ₹37.45 ಲಕ್ಷದ ಗೃಹೋಪಯೋಗಿ ವಸ್ತುಗಳು
₹8.63 ಕೋಟಿ ಅಕ್ರಮ ಆಸ್ತಿ ಮೌಲ್ಯ

ಬಲವಂತ ರಾಥೋಡ್, ಯೋಜನಾ ನಿರ್ದೇಶಕ, ಜಿಲ್ಲಾ ಪಂಚಾಯಿತಿ, ಯಾದಗಿರಿ
ಆಸ್ತಿ ವಿವರ: ₹1.17 ಕೋಟಿ ಮೌಲ್ಯದ 1 ಮನೆ, 5 ನಿವೇಶನಗಳು. ₹3.68 ಲಕ್ಷ ನಗದು, ₹17.59 ಲಕ್ಷದ ಚಿನ್ನಾಭರಣ, ₹18.64 ಲಕ್ಷದ ವಾಹನಗಳು, ₹12 ಲಕ್ಷದ ಇತರೆ ವಸ್ತುಗಳು
₹1.69 ಕೋಟಿ ಅಕ್ರಮ ಆಸ್ತಿ ಮೌಲ್ಯ

ಚೇತನ್ ಕುಮಾರ್, ಜಿಲ್ಲಾ ಕಾರ್ಮಿಕ ಅಧಿಕಾರಿ, ಮೈಸೂರು ವಿಭಾಗ
ಆಸ್ತಿ ವಿವರ: ₹4.36 ಕೋಟಿ ಮೌಲ್ಯದ 1 ಮನೆ, 1 ವಾಣಿಜ್ಯ ಸಂಕೀರ್ಣ, 2 ನಿವೇಶನ, 7 ಎಕರೆ ಕೃಷಿ ಭೂಮಿ. ₹58 ಲಕ್ಷ ನಗದು, ₹14.71 ಲಕ್ಷದ ಚಿನ್ನಾಭರಣ, ₹30 ಲಕ್ಷದ ವಾಹನಗಳು
₹5.38 ಕೋಟಿ ಅಕ್ರಮ ಆಸ್ತಿ ಮೌಲ್ಯ

ಆರ್.ಸಿದ್ದಪ್ಪ, ನಿರೀಕ್ಷಕ, ಪಶುಸಂಗೋಪನಾ ಇಲಾಖೆ, ರಾಮೇಶ್ವರ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ
ಆಸ್ತಿ ವಿವರ: ₹2.65 ಕೋಟಿ ಮೌಲ್ಯದ 3 ಮನೆ, 9 ನಿವೇಶನ, 5 ಎಕರೆ ಕೃಷಿ ಜಮೀನು. ₹3.65 ಲಕ್ಷ ನಗದು, ₹11.68 ಲಕ್ಷದ ಚಿನ್ನಾಭರಣ, ₹12.35 ಲಕ್ಷದ ವಾಹನಗಳು, ₹4.50 ಲಕ್ಷದ ಗೃಹೋಪಯೋಗಿ ವಸ್ತುಗಳು
₹2.93 ಕೋಟಿ ಅಕ್ರಮ ಆಸ್ತಿ ಮೌಲ್ಯ

ನಾಗೇಶ್, ಅಧ್ಯಕ್ಷ, ಅಂತರಗಂಗೆ ಗ್ರಾಮ ಪಂಚಾಯಿತಿ, ಭದ್ರಾವತಿ, ಶಿವಮೊಗ್ಗ
ಆಸ್ತಿ ವಿವರ: ₹1.92 ಕೋಟಿ ಮೌಲ್ಯದ 2 ಮನೆ, 5 ಎಕರೆ 14 ಗುಂಟೆ ಕೃಷಿ ಜಮೀನು. ₹5.71 ಲಕ್ಷ ನಗದು, ₹12.80 ಲಕ್ಷದ ಚಿನ್ನಾಭರಣ, ₹1.76 ಲಕ್ಷದ ವಾಹನ, ₹7 ಲಕ್ಷದ ಇತರೆ ವಸ್ತುಗಳು
₹2.19 ಕೋಟಿ ಅಕ್ರಮ ಆಸ್ತಿ ಮೌಲ್ಯ

ಬಿ.ವಿ.ರಾಜ
ಪ್ರಥಮ ದರ್ಜೆ ಸಹಾಯಕ, ಕೆಐಎಡಿಬಿ, ಬೆಂಗಳೂರು
ಆಸ್ತಿ ವಿವರ: ₹4.04 ಕೋಟಿ ಮೌಲ್ಯದ 6 ಮನೆಗಳು, 1 ನಿವೇಶನ. ₹7,000 ನಗದು, ₹40 ಲಕ್ಷದ ಚಿನ್ನಾಭರಣ, ₹32 ಲಕ್ಷದ ವಾಹನಗಳು, ₹75 ಲಕ್ಷದ ಗೃಹೋಪಯೋಗಿ ಮತ್ತು ಇತರೆ ವಸ್ತುಗಳು
₹5.51 ಕೋಟಿ ಅಕ್ರಮ ಆಸ್ತಿ ಮೌಲ್ಯ

ಮಂಜುನಾಥ್ ಟಿ.ಆರ್.
ಪ್ರಥಮ ದರ್ಜೆ ಸಹಾಯಕ, ಕಂದಾಯ ಸಹಾಯಕ ಆಯುಕ್ತರ ಕಚೇರಿ, ಬೆಂಗಳೂರು ಉತ್ತರ
ಆಸ್ತಿ ವಿವರ: ₹1.69 ಕೋಟಿ ಮೌಲ್ಯದ 1 ಮನೆ, 1 ನಿವೇಶನ ಮತ್ತು 3 ಎಕರೆ 16 ಗುಂಟೆ ಕೃಷಿ ಜಮೀನು. ₹4 ಲಕ್ಷ ನಗದು, ₹67.63 ಲಕ್ಷದ ಚಿನ್ನಾಭರಣ, ₹8 ಲಕ್ಷದ ವಾಹನ, ₹20.12 ಲಕ್ಷದ ಗೃಹೋಪಯೋಗಿ ವಸ್ತುಗಳು
₹2.68 ಕೋಟಿ ಅಕ್ರಮ ಆಸ್ತಿ ಮೌಲ್ಯ

‘ಲೋಕಾ’ ಕೋಟಿ ಬೇಟೆ

ಒಂದನೇ ಪುಟದಿಂದ...

ಮಂಗಳೂರು ಮಹಾನಗರ ಪಾಲಿಕೆ ಆಯುಕ್ತರಾಗಿರುವ ಕೆಎಎಸ್ ಅಧಿಕಾರಿ ಸಿ.ಎಲ್. ಆನಂದ್, ಇನ್‌ವೆಸ್ಟ್ ಕರ್ನಾಟಕ ಫೋರಂನ ಮುಖ್ಯ ಕಾರ್ಯಾಚರಣೆ ಅಧಿಕಾರಿ ಸಿ.ಟಿ. ಮುದ್ದುಕುಮಾರ್, ಕಾನೂನು ಮಾಪನಶಾಸ್ತ್ರ ಇಲಾಖೆಯ ಬೆಂಗಳೂರು ನಗರದ ಉಪ ನಿಯಂತ್ರಕ ಮೀರ್ ಅತ್ಥರ್ ಅಲಿ, ಮೈಸೂರು ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್, ಹೆಬ್ಬಗೋಡಿ ನಗರಸಭೆ ಆಯುಕ್ತ ಕೆ. ನರಸಿಂಹಮೂರ್ತಿ, ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತ ರಮೇಶ್ ಕುಮಾರ್, ತೋಟಗಾರಿಕೆ ಇಲಾಖೆಯ ಶಿವಮೊಗ್ಗ ಜಿಲ್ಲಾ ಉಪ ನಿರ್ದೇಶಕ ಪ್ರಕಾಶ್ ಜಿ.ಎನ್., ಯಾದಗಿರಿ ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಬಲವಂತ ರಾಥೋಡ್, ದೊಡ್ಡಬಳ್ಳಾಪುರ ತಾಲ್ಲೂಕಿನ ರಾಮೇಶ್ವರದ ಪಶುಸಂಗೋಪನಾ ನಿರೀಕ್ಷಕ ಆರ್. ಸಿದ್ದಪ್ಪ, ಕೆಐಎಡಿಬಿ ಭೂಸ್ವಾಧೀನಾಧಿಕಾರಿ ಕಚೇರಿಯ ಪ್ರಥಮ ದರ್ಜೆ ಸಹಾಯಕ ಬಿ.ವಿ. ರಾಜ, ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿ ಕಚೇರಿಯ ಪ್ರಥಮ ದರ್ಜೆ ಸಹಾಯಕ ಮಂಜುನಾಥ್ ಟಿ.ಆರ್. ಮತ್ತು ಭದ್ರಾವತಿ ತಾಲ್ಲೂಕಿನ ಅಂತರಗಂಗೆ ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗೇಶ್ ಮೇಲೆ ದಾಳಿ ನಡೆದಿದೆ.

ಚೇತನ್ ಕುಮಾರ್ ಮನೆಯಲ್ಲಿ ಅತ್ಯಧಿಕ ₹58 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ಅತ್ಥರ್ ಅಲಿ ಮನೆಯಲ್ಲಿ ₹28.15 ಲಕ್ಷ ನಗದು ಪತ್ತೆಯಾಗಿದ್ದರೆ, ಪ್ರಕಾಶ್ ಜಿ.ಎನ್. ಮನೆಯಲ್ಲಿ ₹12.86 ಲಕ್ಷ ನಗದು ಪತ್ತೆಯಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಲೋಕಾಯುಕ್ತದ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಂಸ್ಥೆಯ ಪೊಲೀಸ್ ವಿಭಾಗದ 85 ಅಧಿಕಾರಿಗಳು, ಸಿಬ್ಬಂದಿ ಪಾಲ್ಗೊಂಡಿದ್ದರು.

ಶಾಸಕರ ಆಪ್ತನ ಮೇಲೆ ದಾಳಿ

ಶಿವಮೊಗ್ಗ: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿರುವ ಭದ್ರಾವತಿ ತಾಲ್ಲೂಕಿನ ಅಂತರಗಂಗೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ನಾಗೇಶ್ ಕಾಂಗ್ರೆಸ್ ಪಕ್ಷದಲ್ಲಿ, ಶಾಸಕ ಬಿ.ಕೆ.ಸಂಗಮೇಶ್ವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ನಾಗೇಶ್ ಭದ್ರಾವತಿ ತಾಲ್ಲೂಕಿನ ಬಗರ್‌ಹುಕುಂ ಸಮಿತಿ ಅಧ್ಯಕ್ಷರೂ ಹೌದು. ಅಧಿಕಾರ ದುರುಪಯೋಗಪಡಿಸಿಕೊಂಡು ಸಂಬಂಧಿಕರ ಹೆಸರಲ್ಲಿ ಅಕ್ರಮವಾಗಿ ಬಗರ್‌ಹುಕುಂ ಅಡಿ ಭೂಮಿ ಮಂಜೂರು ಮಾಡಿಕೊಟ್ಟಿದ್ದಾರೆ ಎಂಬ ದೂರು ಕೂಡ ಲೋಕಾಯುಕ್ತಕ್ಕೆ ಸಲ್ಲಿಕೆಯಾಗಿತ್ತು ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ.

ಆರ್‌ಟಿಐ ಕಾರ್ಯಕರ್ತರಿಗೆ ಕಾಂಗ್ರೆಸ್ ಕಿರುಕುಳ: ಕುಮಾರಸ್ವಾಮಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬ ಮೈಸೂರಿನ ‘ಮುಡಾ’ದಲ್ಲಿ ಪಡೆದ ಬದಲಿ ನಿವೇಶನಗಳ ಹಗರಣವನ್ನು ಬಯಲಿಗೆಳೆದ ಆರ್‌ಟಿಐ ಕಾರ್ಯಕರ್ತರಿಗೆ ರಾಜ್ಯ ಸರ್ಕಾರ ಕಿರುಕುಳ ನೀಡುತ್ತಿದೆ ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್‌.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, ಹಗರಣ ಪ್ರಶ್ನಿಸಿದ ವಿರೋಧ ಪಕ್ಷಗಳನ್ನು ವಿಧಾನಮಂಡಲದಲ್ಲಿ ಹತ್ತಿಕ್ಕಲಾಯಿತು. ಸತ್ಯಶೋಧನೆಯಲ್ಲಿ ನಿರತರಾದ ಆರ್‌ಟಿಐ ಕಾರ್ಯಕರ್ತರನ್ನು ಅಧಿಕಾರ ದುರ್ಬಳಕೆ ಮಾಡಿಕೊಂಡು ದಮನ ಮಾಡಲಾಗುತ್ತಿದೆ. ಆರೋಪಿ ಸ್ಥಾನದಲ್ಲಿರುವ ಮುಖ್ಯಮಂತ್ರಿ ಪರಿವಾರವನ್ನು ರಕ್ಷಿಸಲು ಕಾಂಗ್ರೆಸ್ ಮುಖಂಡರು ಆರ್‌ಟಿಐ ಕಾರ್ಯಕರ್ತರ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಾರೆ ಎಂದು ಟೀಕಿಸಿದ್ದಾರೆ.

ಪೊಲೀಸ್ ಬಲ ಬಳಸಿಕೊಂಡು ಸತ್ಯದ ಕತ್ತು ಹಿಚುಕಲು ಸಾಧ್ಯವಿಲ್ಲ. ಕಾಂಗ್ರೆಸ್ ಮುಖಂಡರು ಪೊಲೀಸರಿಗೆ ನೀಡಿದ ದೂರಿನಲ್ಲೇ ಹಗರಣ ಒಪ್ಪಿಕೊಂಡಂತೆ ಭಾಸವಾಗುತ್ತಿದೆ. ಇಂತಹ ವ್ಯರ್ಥ ಕೆಲಸವನ್ನು ಬಿಟ್ಟು ಸತ್ಯ ಹೇಳಿದರೆ ಮುಖ್ಯಮಂತ್ರಿಯಾದವರಿಗೆ ಶೋಭೆ ತರುತ್ತದೆ ಎಂದಿದ್ದಾರೆ.

ಅತಿವೃಷ್ಟಿ: ಪರಿಹಾರ ಕಾರ್ಯಕ್ಕೆ ₹775 ಕೋಟಿ–ಕೃಷ್ಣಬೈರೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಅತಿವೃಷ್ಟಿಯಿಂದಾದ ಪರಿಹಾರ ಕಾರ್ಯಕ್ಕೆ ₹775 ಕೋಟಿ ಒದಗಿಸಿದ್ದು, ಇನ್ನೂ ಹೆಚ್ಚುವರಿಯಾಗಿ ₹200 ಕೋಟಿ ನೀಡಲು ಸಿದ್ಧರಿದ್ದೇವೆ’ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ವಿಧಾನಸಭೆಯಲ್ಲಿ ಮಳೆ ಮತ್ತು ಪ್ರವಾಹದ ಬಗ್ಗೆ ನಿಯಮ 69 ರಡಿ ಚರ್ಚೆಗೆ ಉತ್ತರ ನೀಡಿದ ಅವರು, ಪರಿಹಾರ ಕಾರ್ಯಕ್ಕೆ ಹಣದ ಕೊರತೆ ಇಲ್ಲ. ಅತಿವೃಷ್ಟಿಯಿಂದ ಬಾಧಿತವಾಗುವ 1,247 ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ತಲಾ ಒಂದು ಕಾರ್ಯಪಡೆ ರಚಿಸಲಾಗಿದೆ ಎಂದು ತಿಳಿಸಿದರು.

ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಮಳೆ ಪ್ರವಾಹದಿಂದ ಸುಮಾರು 2.30 ಲಕ್ಷ ಮಂದಿ ಬಾಧಿತರಾಗುವ ಸಾಧ್ಯತೆ ಇದ್ದು, ಅಂತಹವನ್ನು ಗುರುತಿಸಲಾಗಿದೆ. ಇವರನ್ನು ಎಂತಹದ್ದೇ ಸಂದರ್ಭದಲ್ಲಾದರೂ ರಕ್ಷಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಎನ್‌ಡಿಆರ್‌ಎಫ್‌ನ ಆರು ಜಿಲ್ಲೆಗಳಲ್ಲಿ 5 ತುಕಡಿಗಳನ್ನು ಸಜ್ಜುಗಿರಿಸಲಾಗಿದೆ. ಸಂತ್ರಸ್ತರಿಗೆ ರಕ್ಷಣೆ ಒದಗಿಸಲು 29 ಆರೈಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈವರೆಗೆ 332 ಮಂದಿ ಸಂತ್ರಸ್ತರಿಗೆ ವಾಸ್ತವ್ಯದ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

‘ಈ ವರ್ಷ ವಾಡಿಕೆಗಿಂತಲೂ ಅಧಿಕ ಮಳೆಯಾಗಿದೆ. ಜೂನ್‌ನಲ್ಲಿ 365 ಮಿ.ಮೀ ವಾಡಿಕೆ ಮಳೆ ಬದಲಿಗೆ 447 ಮಿ.ಮೀ ಮಳೆಯಾಗಿದೆ. ಅಂದರೆ ಶೇ 27 ರಷ್ಟು ಅಧಿಕ ಮಳೆಯಾಗಿದೆ. ರಾಜ್ಯದ ಬಹುತೇಕ ಎಲ್ಲ ಜಲಾಶಯಗಳು ತುಂಬಿವೆ. ಕಳೆದ ವರ್ಷ ಇದೇ ವೇಳೆಯಲ್ಲಿ ರಾಜ್ಯ ಜಲಾಶಯಗಳಲ್ಲಿ 243 ಟಿಎಂಸಿ ಅಡಿ ನೀರು ಇತ್ತು. ಈ ವರ್ಷ ಈಗ 536 ಟಿಎಂಸಿ ಅಡಿ ನೀರು ಇದೆ. ಪ್ರವಾಹದ ಮಟ್ಟವನ್ನು ಮ್ಯಾಪಿಂಗ್ ಮಾಡಲಾಗುತ್ತಿದೆ. ನದಿಯ ನೀರಿನ ಮಟ್ಟದ ಮೇಲೂ ನಿರಂತರ ಗಮನವಿಟ್ಟಿದ್ದೇವೆ’ ಎಂದು ಹೇಳಿದರು.

ಕೆಆರ್‌ಎಸ್‌ನಲ್ಲಿ 14,167 ಕ್ಯುಸೆಕ್ ನೀರು ಹರಿದು ಬರುತ್ತಿದೆ. ಕೃಷ್ಣಾ ನದಿಯಲ್ಲಿ 2 ಲಕ್ಷ ಕ್ಯುಸೆಕ್, ಆಲಮಟ್ಟಿ ಅಣೆಕಟ್ಟೆಗೆ 43,478 ಕ್ಯುಸೆಕ್, ತುಂಗಭದ್ರಾ ಅಣೆಕಟ್ಟೆಗೆ 1.67 ಲಕ್ಷ ಕ್ಯುಸೆಕ್ ನೀರು ಹರಿದು ಬರುತ್ತಿದೆ. ಅತಿವೃಷ್ಟಿಯಿಂದ ಕೆಲವರಿಗೆ ತೊಂದರೆ ಆಗಿದೆ. ಇದರಿಂದ ಅಣೆಕಟ್ಟೆನಲ್ಲಿ ಭಾರೀ ಪ್ರಮಾಣದಲ್ಲಿ ನೀರು ತುಂಬುತ್ತಿದೆ. ಆದರೆ, ದೊಡ್ಡ ಪ್ರಮಾಣದಲ್ಲಿ ರೈತರಿಗೆ ಅನುಕೂಲವಾಗುತ್ತದೆ ಎಂದರು.

ಕೇರಳದ ವಯನಾಡಿನಲ್ಲಿ ಯಲ್ಲೊ ಅಲರ್ಟ್ ಇದ್ದು, ಅಧಿಕ ಮಳೆಯಾಗುತ್ತಿದೆ. ಇದರಿಂದ ಕಬಿನಿಗೆ ಒಳ ಹರಿವು ಹೆಚ್ಚಾಗುತ್ತಿದೆ. ನಾಳೆ ಸಂಜೆ ವೇಳೆಗೆ ಕೆಆರ್‌ಎಸ್ ತುಂಬಲಿದೆ. 1 ಲಕ್ಷ ಕ್ಯುಸೆಕ್ ನೀರನ್ನು ಹೊರ ಬಿಡುವ ಸಾಧ್ಯತೆ ಇದೆ. ಸಂಗಮ ಮತ್ತು ಶ್ರೀರಂಗಪಟ್ಟಣದ ಬಳಿ ಪ್ರವಾಹ ಉಂಟಾಗುವ ಸಾಧ್ಯತೆ ಇದೆ. ನದಿ ಪಾತ್ರದ ಗ್ರಾಮಗಳ ಜನರನ್ನು ಆರೈಕೆ ಕೇಂದ್ರಗಳಿಗೆ ಸ್ಥಳಾಂತರಿಸುವ ಕೆಲಸ ಆರಂಭಿಸಲಾಗಿದೆ ಎಂದರು.

ಧರಣಿ ಮಧ್ಯೆ ಚರ್ಚೆಗೆ ಅವಕಾಶ: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಗರಣದ ವಿಚಾರವಾಗಿ ಬಿಜೆಪಿ ಸದಸ್ಯರು ಧರಣಿ ನಡೆಸುತ್ತಿರುವ ಸಂದರ್ಭದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಅತಿವೃಷ್ಟಿ ವಿಷಯದ ಕುರಿತು ಚರ್ಚೆಗೆ ಅವಕಾಶ ನೀಡಿದರು. ಚರ್ಚೆಯಲ್ಲಿ ಕಾಂಗ್ರೆಸ್‌ನ ಎ.ಎಸ್. ಪೊನ್ನಣ್ಣ, ನಯನಾ ಮೋಟಮ್ಮ, ಎಚ್‌.ಡಿ. ತಮ್ಮಯ್ಯ, ಕೆ.ಎಂ.ಶಿವಲಿಂಗೇಗೌಡ, ಪ್ರದೀಪ್ ಈಶ್ವರ್, ಬಸವರಾಜ್ ಶಿವಗಂಗಾ, ಎಸ್‌.ಎನ್‌.ನಾರಾಯಣಸ್ವಾಮಿ, ಅನಿಲ್ ಚಿಕ್ಕಮಾದು, ಆರ್‌.ವಿ.ದೇಶಪಾಂಡೆ ಅವರು ಮಾತನಾಡಿದರು.

ಕಿವಿಗೆ ಹೂವು ಸಿಕ್ಕಿಸಿಕೊಂಡು ಪ್ರತಿಭಟನೆ

‘ಕಾಂಗ್ರೆಸ್ ಸರ್ಕಾರ ಜನರ ಕಿವಿಗೆ ಹೂವು ಇಟ್ಟಿದೆ’ ಎಂದು ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಆಸನದ ಬಳಿ ಅಲಂಕಾರಕ್ಕಾಗಿ ಇಟ್ಟಿದ್ದ ಗುಲಾಬಿ ಹೂವಿನ ಕುಂಡದಿಂದ ಹೂವುಗಳನ್ನೇ ಕಿತ್ತುಕೊಂಡು ತಮ್ಮ ಕಿವಿಗೆ ಇಟ್ಟುಕೊಂಡು ಪ್ರತಿಭಟನೆ ನಡೆಸಿದರು. ಬಳಕ ಹೂವಿನ ಕುಂಡಗಳನ್ನು ಅಲ್ಲಿಂದ ತೆರವುಗೊಳಿಸಲಾಯಿತು.

ಚರ್ಚೆ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರು ಮಳೆ ಮತ್ತು ಪ್ರವಾಹದ ಬದಲಾಗಿ ಪ್ರತಿಭಟನೆ ನಡೆಸುತ್ತಿದ್ದ ಬಿಜೆಪಿ ವಿರುದ್ಧ ಟೀಕೆಗೆ ತಮ್ಮ ಬಹುತೇಕ ಸಮಯ ಮೀಸಲಿರಿಸಿದರು. ಇದರಿಂದಾಗಿ ಪ್ರದೀಪ್ ಈಶ್ವರ್, ಕೆ.ಎಂ. ಶಿವಲಿಂಗೇಗೌಡ ಅವರು ಬಿಜೆಪಿ ಸದಸ್ಯರ ವ್ಯಂಗ್ಯ ಭರಿತ ಘೋಷಣೆಗಳಿಗೆ ಆಹಾರವಾದರು.

ಸಂಸದ ಯದುವೀರ ಒಡೆಯರ್ ಆಯ್ಕೆ ಪ್ರಶ್ನಿಸಿ ಅರ್ಜಿ

ಪ್ರಜಾವಾಣಿ ವಾರ್ತೆ

ಒಡೆಯರ್

ಬೆಂಗಳೂರು: ‘ಮೈಸೂರು-ಕೊಡಗು ಸಂಸದ ಯದುವೀರ ಒಡೆಯರ್ ಅವರ ಆಯ್ಕೆಯನ್ನು ಅಸಿಂಧು ಎಂದು ಘೋಷಿಸಿ, ಈ ಕ್ಷೇತ್ರಕ್ಕೆ ಹೊಸದಾಗಿ ಚುನಾವಣೆ ನಡೆಸಬೇಕು’ ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

‘ಚುನಾವಣಾಧಿಕಾರಿ ನನ್ನ ನಾಮಪತ್ರವನ್ನು ಸೂಕ್ತ ಕಾರಣವಿಲ್ಲದೆ ತಿರಸ್ಕರಿಸಿದ್ದಾರೆ’ ಎಂದು ಆಕ್ಷೇಪಿಸಿ ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಅಭ್ಯರ್ಥಿ ಆಕಾಂಕ್ಷಿಯಾಗಿದ್ದ ರೇವತಿ ರಾಜ್ ಅಲಿಯಾಸ್ ಭೀಮಪುತ್ರಿ ರೇವತಿ ರಾಜ್ ಈ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದಾರೆ.

ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

ಅರ್ಜಿಯಲ್ಲಿ ಚುನಾವಣಾ ಆಯೋಗ, ಸಂಸದ ಯದುವೀರ ಒಡೆಯರ್ ಹಾಗೂ ಈ ಕ್ಷೇತ್ರದ ಪರಾಜಿತ ಅಭ್ಯರ್ಥಿಗಳನ್ನು ಈ ಅರ್ಜಿಯಲ್ಲಿ ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಸುದ್ದಿ 2 ನಿಮಿಷ

ಕಿರುನಿದ್ರೆಗಾಗಿ ಶಾಸಕರಿಗೆ ವಿಶೇಷ ಆಸನ !

ಬೆಂಗಳೂರು: ಮಧ್ಯಾಹ್ನ ಊಟದ ಬಳಿಕ ಶಾಸಕರಿಗೆ ನಿದ್ದೆ ಬಂದರೆ ಮೊಗಸಾಲೆಗೆ ಬಂದು ಕಿರು ನಿದ್ರೆ ಮಾಡಲು ವಿಶೇಷ ಆಸನಗಳನ್ನು ವ್ಯವಸ್ಥೆ ಮಾಡಲಾಗಿದೆ.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ವಿಧಾನಸಭೆಯಲ್ಲಿ ಶುಕ್ರವಾರ ಈ ವಿಷಯ ತಿಳಿಸಿದರು.

‘ಶಾಸಕರು ಕಲಾಪಕ್ಕೆ ಬೇಗ ಬರಲಿ ಎಂದು ಬೆಳಿಗ್ಗಿನ ಉಪಹಾರ, ಮಧ್ಯಾಹ್ನ ಊಟಕ್ಕೆ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ ನಿದ್ರೆ ಬರುತ್ತದೆ ಎಂದು ಕೆಲವರು ಶಾಸಕರ ಭವನಕ್ಕೆ ಹೋಗುತ್ತಾರೆ. ಮತ್ತೆ ಕಲಾಪಕ್ಕೆ ಬರುವುದೇ ಇಲ್ಲ. ಅದನ್ನು ತಪ್ಪಿಸಲು, ಮೊಗಸಾಲೆಯಲ್ಲೇ ಕಿರುನಿದ್ರೆ ಮಾಡಲು ವಿಶೇಷ ಆಸನ ವ್ಯವಸ್ಥೆ ಮಾಡಿದ್ದೇನೆ. ಅಲ್ಲಿ ಕೂತು ನಿದ್ರೆ ಮಾಡಬಹುದು’ ಎಂದು ಖಾದರ್ ತಿಳಿಸಿದರು.

ಸಚಿವರು ಮತ್ತು ಶಾಸಕರ ಆಪ್ತ ಸಹಾಯಕರು ಮೊಗಸಾಲೆಗೆ ಬರುವಂತಿಲ್ಲ. ಇದರಿಂದ ಅನಗತ್ಯ ಸಂದಣಿ ತಪ್ಪುತ್ತದೆ. ಯಾವುದೇ ಶಾಸಕರು ತಮ್ಮ ಆಪ್ತ ಸಿಬ್ಬಂದಿಯನ್ನು ಒಳಗೆ ಕರೆದುಕೊಂಡು ಬರಲು ಮಾರ್ಷಲ್‌ಗಳ ಮೇಲೆ ಒತ್ತಡ ಹೇರುವುದು ಮತ್ತು ದಬಾಯಿಸುವುದನ್ನು ಮಾಡಬಾರದು. ಘನತೆಯನ್ನು ಕಾಪಾಡಿಕೊಳ್ಳಬೇಕು ಎಂದರು.

ಸದನದ ಒಳಗೆ ಘೋಷಣಾ ಫಲಕಗಳನ್ನು ಪ್ರದರ್ಶಿಸುವಂತಿಲ್ಲ. ಆಡಳಿತ ಮತ್ತು ವಿರೋಧ ಪಕ್ಷಗಳು ಅಂತ್ಯ ಹಾಡಬೇಕು ಎಂದು ಖಾದರ್ ಹೇಳಿದರು.

‘ಕೇವಲ ಶಾಸಕರಿಗಾಗಿ’ ಎಂದು ಚೀಟಿ ಅಂಟಿಸಿದ್ದ ಈ ವಿಶೇಷ ಆಸನದ ಮೇಲೆ ಕೂತು ನಿದ್ರೆ ಹೋಗುವ ಸಾಹಸವನ್ನು ಮೊದಲ ದಿನ ಯಾರೂ ಮಾಡಲಿಲ್ಲ.

ಸದಸ್ಯತ್ವ ಅನರ್ಹತೆಯಿಂದ ವಿನಾಯ್ತಿಗೆ ಮಸೂದೆ

ಬೆಂಗಳೂರು: ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ, ಆರ್ಥಿಕ ಸಲಹೆಗಾರರು, ನೀತಿ ಆಯೋಗ ಮತ್ತು ಯೋಜನಾ ಉಪಾಧ್ಯಕ್ಷರ ಹುದ್ದೆಗಳಿಗೆ ನೇಮಕಗೊಳ್ಳಲು ಸದಸ್ಯತ್ವದಿಂದ ಅನರ್ಹರಾಗುವುದರಿಂದ ವಿನಾಯಿತಿ ನೀಡಲು ವಿಧಾನಸಭೆಯಲ್ಲಿ ಶುಕ್ರವಾರ ‘ಕರ್ನಾಟಕ ವಿಧಾನಮಂಡಲ ತಿದ್ದುಪಡಿ ಮಸೂದೆ’ ಮಂಡಿಸಲಾಯಿತು.

ರಾಜ್ಯದಲ್ಲಿನ ಸಿನಿಮಾ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿಗಾಗಿ ಮಂಡಳಿ ರಚಿಸಲು ಮತ್ತು ಹಣಕಾಸು ಯೋಜನೆಗಳಿಗಾಗಿ ನಿಧಿ ಸ್ಥಾಪಿಸುವ ಉದ್ದೇಶದಿಂದ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ ಮಸೂದೆ) ಮಸೂದೆಯನ್ನು ಕಾನೂನು ಸಚಿವ ಎಚ್‌.ಕೆ.ಪಾಟೀಲ ಮಂಡಿಸಿದರು.

ತಂಬಾಕು ಉತ್ಪನ್ನಗಳು ಮತ್ತು ಪಾನ್ ಮಸಾಲಾ ಉತ್ಪಾದನೆಯಲ್ಲಿ ಬಳಸುವ ಯಂತ್ರಗಳ ನೋಂದಣಿಯನ್ನು ಮಾಡದಿರುವುದಕ್ಕಾಗಿ ದಂಡ ವಿಧಿಸುವುದಕ್ಕಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಮಸೂದೆಯನ್ನೂ ಮಂಡಿಸಿದರು.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ: ಐದು ತಾಸು ಚಿತ್ರಹಿಂಸೆ

ಪೊಲೀಸರ ಕೈಸೇರಿದ ಮರಣೋತ್ತರ ಪರೀಕ್ಷಾ ವರದಿ

ಪ್ರಜಾವಾಣಿ ವಾರ್ತೆ

ದರ್ಶನ್

ಪವಿತ್ರಾಗೌಡ

ರೇಣುಕಾಸ್ವಾಮಿ

ಬೆಂಗಳೂರು: ಚಿತ್ರದುರ್ಗ ರೇಣುಕಸ್ವಾಮಿ ಕೊಲೆ ಪ್ರಕರಣದ ಮರಣೋತ್ತರ ಪರೀಕ್ಷೆಯ ಅಂತಿಮ ವರದಿ ತನಿಖಾಧಿಕಾರಿಗಳ ಕೈಸೇರಿದ್ದು ಕೊಲೆ ಹೇಗೆ ನಡೆದಿದೆ ಎಂಬ ವಿವರವನ್ನು ವೈದ್ಯಾಧಿಕಾರಿಗಳು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯಾಧಿಕಾರಿಗಳಿಂದ ಪೊಲೀಸರು, ಅಂತಿಮ ವರದಿ ಸಂಗ್ರಹಿಸಿದ್ದಾರೆ ಎಂದು ಗೊತ್ತಾಗಿದೆ.

‘ನಾಲ್ಕರಿಂದ ಐದು ತಾಸು ಚಿತ್ರಹಿಂಸೆ ನೀಡಿ, ತೀವ್ರವಾಗಿ ಹಲ್ಲೆ ನಡೆಸಲಾಗಿದೆ. ಮಾರಕವಾಗಿ ಹೊಡೆದಿದ್ದರಿಂದಾಗಿ ನೋವು ತಡೆಯಲಾರದೇ ಹಂತ ಹಂತವಾಗಿ ಕೊನೆಯುಸಿರು ಎಳೆದಿದ್ದಾರೆ. ದೇಹದ ಹಲವು ಭಾಗಕ್ಕೆ ಗಂಭೀರ ಸ್ವರೂಪದ ಗಾಯಗಳು ಆಗಿವೆಯೆಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಬಲವಾಗಿ ಹೊಡೆದಿದ್ದರಿಂದಾಗಿ ಹಲವು ಮೂಳೆಗಳು ಮುರಿದಿವೆ. ಜತೆಗೆ, ರಕ್ತಸ್ರಾವ ಆಗಿದೆ. ಕೃತ್ಯ ನಡೆದ ದಿನದಂದು ಸಂಜೆ 6.30ಯಿಂದ 7 ಗಂಟೆ ನಡುವೆ ಅವರು ಮೃತಪಟ್ಟಿದ್ದಾರೆ’ ಎಂದು ವೈದ್ಯಾಧಿಕಾರಿಗಳು ವರದಿ ನೀಡಿದ್ದಾರೆ.

‘ಸ್ನೇಹಿತೆಯ ಪತಿ ಅಲ್ಲ’: ‘ಪವಿತ್ರಾ ಗೆಳತಿಯ ಪತಿಯೊಬ್ಬರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದಾರೆ. ಅವರು ಮರಣೋತ್ತರ ಪರೀಕ್ಷೆ ನಡೆಸಿಲ್ಲ. ಅಂದು ಅವರು ರಜೆಯಲ್ಲಿದ್ದರು. ಬದಲಿಗೆ ಮತ್ತೊಬ್ಬ ವೈದ್ಯಾಧಿಕಾರಿ ಈ ಪರೀಕ್ಷೆ ನಡೆಸಿದ್ದಾರೆ’ ಎಂದು ತನಿಖಾಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಸಾಕ್ಷಿದಾರರ ಮೊಬೈಲ್ ಸಹ ರವಾನೆ: ಆರೋಪಿಗಳ ಜತೆಗೆ ಸಾಕ್ಷಿದಾರರಿಂದಲೂ ಮೊಬೈಲ್ ಜಪ್ತಿ ಮಾಡಲಾಗಿದ್ದು ಎಲ್ಲ ಮೊಬೈಲ್‌ಗಳನ್ನೂ ಹೈದರಾಬಾದ್‌ನ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ. ಕೊಲೆಯಾದ ವ್ಯಕ್ತಿ ಬಳಸುತ್ತಿದ್ದ ಇನ್‌ಸ್ಟಾಗ್ರಾಮ್ ಖಾತೆ ಹಾಗೂ ವಾಟ್ಸ್‌ಆ್ಯಪ್‌ನಲ್ಲಿದ್ದ ದತ್ತಾಂಶವನ್ನು ಸೆನ್ ಪೊಲೀಸ್ ಠಾಣೆ ತಜ್ಞರ ನೆರವಿನಿಂದ ಮರು ಪಡೆಯುವ ಕೆಲಸ ಪ್ರಗತಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

ಆರೋಪಿ, ನಟ ದರ್ಶನ್ ಮನೆಯಿಂದ ಜಪ್ತಿ ಮಾಡಿಕೊಂಡ ಸಿಸಿ ಟಿ.ವಿ ಕ್ಯಾಮೆರಾದ ಡಿವಿಆರ್ ಅನ್ನು ಸೈಬರ್ ತಜ್ಞರು ಪರಿಶೀಲಿಸಿ ದತ್ತಾಂಶ ಸಂಗ್ರಹಿಸಿಕೊಟ್ಟಿದ್ದಾರೆ. ದತ್ತಾಂಶದಲ್ಲಿ ತನಿಖೆಗೆ ಪೂರಕವಾದ ಅಂಶಗಳು ಲಭಿಸಿವೆ. ಅದರ ಅಸಲಿತನದ ಪರೀಕ್ಷೆಗೆ ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಕೆಲವು ವಾಹನಗಳು ಬೇರೆಯವರ ಹೆಸರಿನಲ್ಲಿದ್ದವು. ಆ ವಾಹನಗಳ ಮಾಲೀಕರನ್ನೂ ಕರೆಸಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ದರ್ಶನ್ ಭೇಟಿ ಮಾಡಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ದರ್ಶನ್ ಅವರನ್ನು ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಹಾಗೂ ನಿರ್ದೇಶಕ ತರುಣ್ ಸುಧೀರ್ ಶುಕ್ರವಾರ ಭೇಟಿ ಮಾಡಿ, ಚರ್ಚಿಸಿದರು.

‘ದರ್ಶನ್ ನೋಡಲು ಅನುಮತಿ ಕೋರಿ ಮನವಿ ಸಲ್ಲಿಸಿದ್ದೆ. ಜೈಲಾಧಿಕಾರಿಗಳು ನೀಡಿದ ಅನುಮತಿ ಮೇರೆಗೆ ಭೇಟಿ ಮಾಡಿದ್ದೇನೆ. ವಿಧಾನಸಭೆ ಅಧಿವೇಶನ ನಡೆಯುತ್ತಿರುವ ಬಗ್ಗೆ ದರ್ಶನ್ ಕೇಳಿದರು.

ನಾನೂ ಸಹ ಅವರ ಊಟ, ಆರೋಗ್ಯ ಮತ್ತು ದಿನಚರಿಯ ಬಗ್ಗೆ ಕೇಳಿದೆ. ಕಾರಾಗೃಹದಲ್ಲಿ ಪುಸ್ತಕಗಳನ್ನು ಓದುತ್ತಿದ್ದಾರೆ. ನಾನೂ ಕೆಲವು ಪುಸ್ತಗಳನ್ನು ನೀಡಿದ್ದೇನೆ’ ಎಂದು ದರ್ಶನ್ ಪುಟ್ಟಣ್ಣಯ್ಯ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಕೃತ್ಯಕ್ಕೆ ಒಳಸಂಚು: ತನಿಖೆಯಿಂದ ದೃಢ

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್, ಪವಿತ್ರಾಗೌಡ ಸೇರಿದಂತೆ 17 ಆರೋಪಿಗಳೂ ಸಮಾನ ಉದ್ದೇಶದಿಂದ ಕೃತ್ಯ ಎಸಗಲು ಒಳಸಂಚು ರೂಪಿಸಿರುವುದು ತನಿಖೆಯಲ್ಲಿ ದೃಢಪಟ್ಟಿದೆ ಎಂದು 24ನೇ ಎಸಿಎಂಎಂ ನ್ಯಾಯಾಲಯಕ್ಕೆ ಪೊಲೀಸರು ಸಲ್ಲಿಸಿರುವ ರಿಮಾಂಡ್ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಕೃತ್ಯ ನಡೆದ ನಂತರ ಆರೋಪಿಗಳು ಭೌತಿಕ, ತಾಂತ್ರಿಕ ಹಾಗೂ ವೈಜ್ಞಾನಿಕ ಸಾಕ್ಷ್ಯಗಳನ್ನು ನಾಶಪಡಿಸಿದ್ದಾರೆ. ಇನ್ನೂ ಕೆಲವು ಸಾಕ್ಷ್ಯಗಳನ್ನು ನಾಶಪಡಿಸಲು ಪ್ರಯತ್ನಿಸಿದ್ದಾರೆ ಎಂದೂ ಅರ್ಜಿ ವಿವರಿಸಿದೆ.

‘ಕೈದಿಗಳೆಲ್ಲಾ ಮನೆ ಊಟಾನೇ ಬೇಕು ಎಂದರೆ ಹೇಗೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನೆ ಊಟ ಪಡೆಯಲು ಅನುಮತಿಸುವಂತೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧೀಕ್ಷಕರಿಗೆ ನಿರ್ದೇಶಿಸಬೇಕು ಎಂದು ಕೋರಿರುವ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಯಾದ ನಟ ದರ್ಶನ್ ತೂಗುದೀಪ ಶ್ರೀನಿವಾಸ್ ತಮ್ಮ ಅರ್ಜಿಯನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಸಲ್ಲಿಸಲಿ’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಜೈಲಿನಲ್ಲಿರುವ ನಟ ದರ್ಶನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್‌.ಆರ್‌. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ದರ್ಶನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಕೆ.ಎನ್‌.ಫಣೀಂದ್ರ ಅವರು, ‘ಕರ್ನಾಟಕ ಬಂದಿಖಾನೆ ಕಾಯ್ದೆ–1963ರ ಕಲಂ 30ರ ಅಡಿ ವಿಚಾರಣಾಧೀನ ಕೈದಿ ಮನೆ ಊಟ, ಹಾಸಿಗೆ ಇತ್ಯಾದಿ ಪಡೆಯಲು ಅರ್ಹರಾಗಿರುತ್ತಾರೆ. ದರ್ಶನ್ ಅವರಿಗೆ ಸದ್ಯ ಜೈಲಿನ ಊಟದಿಂದ ಆರೋಗ್ಯದಲ್ಲಿ ವ್ಯತ್ಯಯವುಂಟಾಗಿದೆ. ಹಾಗಾಗಿ, ಅವರಿಗೆ ಮನೆ ಊಟ ಪಡೆಯಲು ನಿರ್ದೇಶಿಸಬೇಕು. ಕೈದಿಯು ತನಗೆ ಬೇಕಾದ ಊಟ ಪಡೆಯುವುದು ಆತನ ಮೂಲಭೂತ ಹಕ್ಕು’ ಎಂದು ಪ್ರತಿಪಾದಿಸಿದರು.

ಇದಕ್ಕೆ ಆಕ್ಷೇಪಿಸಿದ ಪ್ರಾಸಿಕ್ಯೂಷನ್ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿ.ಜಿ.ಭಾನುಪ್ರಕಾಶ್ ಹಾಗೂ ಮತ್ತೊಬ್ಬ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್, ‘ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ 5 ಸಾವಿರ ಕೈದಿಗಳಿದ್ದಾರೆ. ಅವರೆಲ್ಲರೂ ಇದೇ ರೀತಿ ಕೇಳುತ್ತಾ ಹೋದರೆ ಏನು ಮಾಡುವುದು. ಅಷ್ಟಕ್ಕೂ ಕೈದಿಗಳಿಗೆ ಸರ್ಕಾರ ಉತ್ತಮವಾದ ಪೌಷ್ಟಿಕ ಆಹಾರವನ್ನೇ ನೀಡುತ್ತಿದೆ’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, ‘ಅರ್ಜಿದಾರರು ಮೊದಲಿಗೆ ಈ ಮನವಿಯನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಸಲ್ಲಿಸಲಿ. ತುರ್ತಿದ್ದರೆ ನಾಳೆಯೇ ಅರ್ಜಿ ಸಲ್ಲಿಸಬಹುದು. ಇದಕ್ಕೆ ಪ್ರಾಸಿಕ್ಯೂಷನ್ ಇದೇ 22ರಂದು ಆಕ್ಷೇಪಣೆ ಸಲ್ಲಿಸುವಂತೆ ಆದೇಶಿಸಲಾಗುವುದು’ ಎಂದರು. ಅಂತೆಯೇ, ‘ಈ ಅರ್ಜಿಯನ್ನು ಮ್ಯಾಜಿಸ್ಟ್ರೇಟ್ ಇದೇ 27ರ ಒಳಗೆ ಪರಿಶೀಲಿಸಬೇಕು’ ಎಂದು ನಿರ್ದೇಶಿಸಿ, ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿದರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಕೃಭಾಜನಿನಿ, ಅಣೆಕಟ್ಟು ವಿಭಾಗ, ನಾರಾಯಣಪೂರ, ತಾ : ಹುಣಸಗಿ ಜಿಲ್ಲೆ : ಯಾದಗಿರಿ, ರಾಜ್ಯ : ಕರ್ನಾಟಕ

Office of the EXECUTIVE ENGINEER, KBJNL, Dam Division., Narayanpur-585219 Email : kbjnl_eedam@yahoo.in

KBJNL/DDN/PB/Closure & Special/2024-25/ 363 Date:19.07.2024

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ನಾರಾಯಣಪೂರ ಇವರು ಸದರಿ ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ನಾರಾಯಣಪೂರ ಕಛೇರಿ ಅಡಿ ಅನುಮೋದನೆಗೊಂಡಿರುವ ಕಾಮಗಾರಿ ಇಂಡೆಂಟ್ ಸಂ. 976 ಕಾಮಗಾರಿಗೆ ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ 358 ದಿನಾಂಕ 18–07–2024 ರನ್ವಯ ಶೇಕಡಾವಾರು ಟೆಂಡರಗಾಗಿ ಇ–ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, Qualification criteria ನಲ್ಲಿ ನಮೂದಿಸಿರುವಂತೆ ಎಲ್ಲಾ ದಾಖಲೆಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಅರ್ಹ ದರ್ಜೆ ಗುತ್ತಿಗೆದಾರರು ಭಾಗವಹಿಸತಕ್ಕದ್ದು. ಟೆಂಡರ್ ಪ್ರಕ್ರಿಯೆಯು ಈ ಕೆಳಗಿನಂತೆ ಇರುತ್ತದೆ.

ಕ್ರ. ಸಂ.	ವಿವರ	ಟೆಂಡರ್ ಪ್ರಕ್ರಿಯೆಯ ದಿನಾಂಕ
1.	ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿ: 19.07.2024 ರಿಂದ ದಿ:26.07.2024 ಸಂಜೆ 5.00 ಗಂಟೆಯವರೆಗೆ
2.	ಗುತ್ತಿಗೆದಾರರು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	ದಿ: 26.07.2024 ಸಂಜೆ 5.00 ಗಂಟೆಯವರೆಗೆ
3.	ಟೆಂಡರ್ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜನೀಯರರು, ಕೃಭಾಜನಿನಿ, ಅಣೆಕಟ್ಟು ವಿಭಾಗ ನಾರಾಯಣಪೂರ ಇವರ ಕಚೇರಿಯಲ್ಲಿ)	ದಿ:29.07.2024 ಸಂಜೆ 05.15 ಗಂಟೆಗೆ

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಗುತ್ತಿಗೆದಾರರು ಇ–ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್ ಸಲ್ಲಿಸಬಹುದು ಹಾಗೂ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜನೀಯರರು, ಕೃಭಾಜನಿನಿ, ಅಣೆಕಟ್ಟು ವಿಭಾಗ ನಾರಾಯಣಪೂರ ಇವರಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
(ಶ್ರೀ ಅಶೋಕರೆಡ್ಡಿ ಪಾಟೀಲ್)
ಕಾರ್ಯನಿರ್ವಾಹಕ ಇಂಜನೀಯರರು
ಕೃಭಾಜನಿನಿ, ಅಣೆಕಟ್ಟು ವಿಭಾಗ, ನಾರಾಯಣಪೂರ.

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು, ಮೈಸೂರು ಜಿಲ್ಲೆ
Telephone Nos : E.O. Office : 08221-226245, 226275, Email ID : sstnanjangud@gmail.com

ಸಂಖ್ಯೆ: No: SST/E-Tender/gutthige/1/2024-25 ದಿನಾಂಕ : 12–07–2024

ಟೆಂಡರ್ ಪ್ರಕಟಣೆ
ಇ–ಟೆಂಡರ್ – ಪ್ರಕಟಣೆ :
(ದ್ವಿ – ಲಕೋಟೆ ಪದ್ಧತಿ ಪ್ರಕಾರ)

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಒಳಾಂಗಣ, ಹೊರಾಂಗಣ, ಪಾರ್ಕಿಂಗ್ ಸ್ಥಳ ಹಾಗೂ ಕಪಿಲಾನದಿ ಸ್ನಾನ ಘಟ್ಟ ಇತ್ಯಾದಿ ಸ್ಥಳಗಳಲ್ಲಿ ಅಕುಶಲ ಕಾರ್ಮಿಕರು (ಕಾಮಾಟಿ), ಸ್ವಚ್ಛತಾ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದು ಕೆಲಸ ನಿರ್ವಹಿಸಿಕೊಳ್ಳುವ ಬಗ್ಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999, ನಿಯಮಾವಳಿಗಳು 3000ರ ಪ್ರಕಾರ ಅರ್ಹ ನೊಂದಾಯಿತ ಏಜೆನ್ಸಿಗಳಿಂದ ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಅವಧಿಯು ಕೆಲಸದ ಆದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯಾಗಿದ್ದು, ಆಪೇಕ್ಷಿಸುವ ಅರ್ಹ ಏಜೆನ್ಸಿಯವರು ಷರತ್ತು ಮತ್ತು ನಿಬಂಧನೆಗಳನ್ನು ಗಮನಿಸಿ, ಅಕುಶಲ ಕಾರ್ಮಿಕರು (ಕಾಮಾಟಿ), ಸ್ವಚ್ಛತಾ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗೆ ಮಾಸಿಕ ಸೇವಾ ಶುಲ್ಕ ದರವನ್ನು ಸೂಚಿಸಿ ದ್ವಿ–ಲಕೋಟೆ ಪದ್ಧತಿಯ ಪ್ರಕಾರ ಟೆಂಡರುಗಳನ್ನು Website :https://kppp.karnataka.gov.in ಮೂಲಕ ಸಲ್ಲಿಸುವುದು.

ಕ್ರ.ಸಂ.	ಟೆಂಡರ್ ನ ವಿವರ	ಇ.ಎಂ.ಡಿ. ಮೊತ್ತ
1	ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಒಳಾಂಗಣ, ಹೊರಾಂಗಣ, ಪಾರ್ಕಿಂಗ್ ಸ್ಥಳ ಹಾಗೂ ಕಪಿಲಾನದಿ ಸ್ನಾನ ಘಟ್ಟ ಇತ್ಯಾದಿ ದೇವಾಲಯಕ್ಕೆ ಬಾದ್ಯಪಟ್ಟ ಸ್ಥಳಗಳಲ್ಲಿ ಅಕುಶಲ ಕಾರ್ಮಿಕರು (ಕಾಮಾಟಿ), ಸ್ವಚ್ಛತಾ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದು ಕೆಲಸ ನಿರ್ವಹಿಸಿಕೊಳ್ಳುವ ಗುತ್ತಿಗೆ ಹಕ್ಕನ್ನು ಪಡೆದುಕೊಳ್ಳಲು ಗುತ್ತಿಗೆ ಹಕ್ಕಿನ ಬಗ್ಗೆ.	1,50,000.00

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಇ–ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

1	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	19–07–2024 ರ ನಂತರ	
2	ಇ–ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ವೇಳೆ	12–08–2024	ಸಂಜೆ 5.00 ಗಂಟೆಯವರೆಗೆ
3	ಇ–ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ	14–08–2024	11.00 AM ನಂತರ

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

‘ನೀಟ್–ಯುಜಿ’ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ; ಸಿಬಿಐ ತನಿಖೆ ಚುರುಕು

ಎಂಬಿಬಿಎಸ್ ವಿದ್ಯಾರ್ಥಿನಿ ಬಂಧನ

ನವದೆಹಲಿ (ಪಿಟಿಐ): ‘ನೀಟ್-ಯುಜಿ’ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ, ರಾಂಚಿಯ ರಾಜೇಂದ್ರ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ (ಆರ್‌ಐಎಂಎಸ್) ಪ್ರಥಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿನಿಯನ್ನು ಶುಕ್ರವಾರ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎರಡು ದಿನಗಳ ಸುದೀರ್ಘ ವಿಚಾರಣೆ ಬಳಿಕ ಸುರಭಿ ಕುಮಾರಿ ಎಂಬವರನ್ನು ಬಂಧಿಸಲಾಗಿದೆ. ಸೋರಿಕೆಯಾದ ಪ್ರಶ್ನೆಪತ್ರಿಕೆಗಳಿಗೆ ಉತ್ತರ ಸಿದ್ಧಪಡಿಸಿಕೊಟ್ಟಿರುವ ಆರೋಪ ಸುರಭಿ ಅವರ ಮೇಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪಂಕಜ್ ಕುಮಾರ್ ಸಿಂಗ್ ಅವರು ಕದ್ದಿದ್ದ ಪ್ರಶ್ನೆಪತ್ರಿಕೆಗಳಿಗೆ ಉತ್ತರಗಳನ್ನು ಸಿದ್ಧಪಡಿಸಲು ಸುರಭಿ ಅವರು ನೀಟ್–ಯುಜಿ ಪರೀಕ್ಷೆ ನಡೆದ ದಿನವಾದ ಮೇ 5ರಂದು ಬೆಳಿಗ್ಗೆ ಹಜಾರಿಬಾಗ್‌ನಲ್ಲಿ ಇದ್ದರು ಎಂದು ಆರೋಪಿಸಲಾಗಿದೆ. ಉತ್ತರಗಳನ್ನು ಸಿದ್ಧಪಡಿಸಿಕೊಟ್ಟ ಐವರು ಸದಸ್ಯರ ತಂಡದಲ್ಲಿ ಅವರೂ ಇದ್ದರು ಎನ್ನಲಾಗಿದೆ.

ಮುಖ್ಯಾಂಶಗಳು
- ರಾಂಚಿಯ ಆರ್‌ಐಎಂಎಸ್ ಸಂಸ್ಥೆಯ ಪ್ರಥಮ ವರ್ಷದ ವಿದ್ಯಾರ್ಥಿನಿ
- ಪ್ರಶ್ನೆಗಳಿಗೆ ಉತ್ತರ ಸಿದ್ಧಪಡಿಸಿ ಕೊಟ್ಟ ಆರೋಪ
- ಬಂಧಿತರ ಒಟ್ಟು ಸಂಖ್ಯೆ 16ಕ್ಕೆ ಏರಿಕೆ

ಜೆಮ್‌ಶೆಡ್‌ಪುರದ ಎನ್‌ಐಟಿಯಲ್ಲಿ 2017ರಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಪಂಕಜ್ ಕುಮಾರ್ ಅವರು ಜಾರ್ಖಂಡ್‌ನ ಹಜಾರಿಬಾಗ್‌ನಲ್ಲಿರುವ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಕಚೇರಿಯಲ್ಲಿನ ಪೆಟ್ಟಿಗೆಯಿಂದ ಪ್ರಶ್ನೆಪತ್ರಿಕೆ ಕಳವು ಮಾಡಿದ ಆರೋಪವನ್ನು ಎದುರಿಸುತ್ತಿದ್ದಾರೆ. ‘ನೀಟ್–ಯುಜಿ’ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಇದುವರೆಗೆ 16 ಜನರನ್ನು ಬಂಧಿಸಿದೆ.

‘ನೀಟ್ ಪತ್ರಿಕೆ ಸೋರಿಕೆಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯನ್ನು ವಿಚಾರಣೆಗೆ ಒಳಪಡಿಸುವ ಕುರಿತು ಸಿಬಿಐ ತಂಡವು ಬುಧವಾರ ಆರ್‌ಐಎಂಎಸ್ ಸಂಸ್ಥೆಗೆ ಮಾಹಿತಿ ನೀಡಿತ್ತು. ಸಂಸ್ಥೆಯ ಆಡಳಿತ ಮಂಡಳಿಯು ಸಿಬಿಐ ತಂಡಕ್ಕೆ ಸಂಪೂರ್ಣ ಸಹಕಾರ ನೀಡಿದೆ. ತನಿಖಾ ತಂಡವು ಗುರುವಾರವೂ ಅವರನ್ನು ವಿಚಾರಣೆಗೆ ಒಳಪಡಿಸಿತ್ತು. ಸಂಸ್ಥೆಯ ಆಡಳಿತ ಮಂಡಳಿಯು ವಿದ್ಯಾರ್ಥಿನಿಯ ಪೋಷಕರಿಗೂ ಈ ಬಗ್ಗೆ ಮಾಹಿತಿ ನೀಡಿದೆ’ ಎಂದು ಆರ್‌ಐಎಂಎಸ್‌ನ ಸಾರ್ವಜನಿಕ ಸಂಪರ್ಕಾಧಿಕಾರಿ ರಾಜೀವ್ ರಂಜನ್ ಅವರು ತಿಳಿಸಿದ್ದಾರೆ.

ಪ್ರಶ್ನೆಗಳಿಗೆ ಉತ್ತರ ಸಿದ್ಧಪಡಿಸಿದ ಆರೋಪದಲ್ಲಿ ಸಿಬಿಐ, ಪಟ್ನಾದ ಏಮ್ಸ್‌ನ ನಾಲ್ವರು ವಿದ್ಯಾರ್ಥಿಗಳನ್ನು ಗುರುವಾರ ಬಂಧಿಸಿತ್ತು. ಅವರನ್ನು ನಾಲ್ಕು ದಿನ ಸಿಬಿಐ ಕಸ್ಟಡಿಗೆ ನೀಡಲಾಗಿದೆ. ಪ್ರಶ್ನೆಗಳಿಗೆ ಉತ್ತರ ಸಿದ್ಧಪಡಿಸಿ ಕೊಡುವ ಜವಾಬ್ದಾರಿಯನ್ನು ಐವರು ಸದಸ್ಯರ ಈ ತಂಡಕ್ಕೆ ನೀಡಲಾಗಿತ್ತು ಎಂದು ಮೂಲಗಳು ಹೇಳಿವೆ.

ಕೇಂದ್ರದ ಪ್ರತಿಕ್ರಿಯೆ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ: ನೀಟ್ –ಸೂಪರ್ ಸ್ಪೆಷಾಲಿಟಿ ಪರೀಕ್ಷೆಯನ್ನು (ನೀಟ್-ಎಸ್‌ಎಸ್) ಈ ವರ್ಷ ನಡೆಸದಿರುವ ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಶುಕ್ರವಾರ, ಕೇಂದ್ರ ಸರ್ಕಾರ ಮತ್ತು ಇತರರ ಪ್ರತಿಕ್ರಿಯೆ ಕೇಳಿದೆ.

ಎಂಡಿ, ಎಂಎಸ್, ಡಿಎನ್‌ಬಿಯಂತಹ ಸ್ನಾತಕೋತ್ತರ ಪದವಿ ಅಥವಾ ಅದಕ್ಕೆ ಸಮನಾದ ಪದವಿಗಳನ್ನು ಹೊಂದಿರುವ ವೈದ್ಯರು ಸೂಪರ್–ಸ್ಪೆಶಾಲಿಟಿ ಕೋರ್ಸ್‌ಗಳಿಗೆ ಅರ್ಹತೆ ಪಡೆಯಲು ನೀಟ್–ಎಸ್‌ಎಸ್ ಪರೀಕ್ಷೆಗೆ ಹಾಜರಾಗುವರು.

ಎನ್‌ಎಂಸಿಯು ಪರೀಕ್ಷೆಯನ್ನು ಈ ವರ್ಷ ನಡೆಸದಿರಲು ನಿರ್ಧರಿಸಿದೆ ಎಂದು 13 ಆಕಾಂಕ್ಷಿಗಳ ಪರ ಹಾಜರಿದ್ದ ವಕೀಲರು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠಕ್ಕೆ ತಿಳಿಸಿದರು.

ಮಾಧ್ಯಮಗಳಲ್ಲಿ ಬಂದ ವರದಿಯ ಪ್ರಕಾರ, ನೀಟ್–ಎಸ್‌ಎಸ್ ಪರೀಕ್ಷೆಯು 2025ರ ಜನವರಿಯಲ್ಲಿ ನಡೆಯುವ ಸಾಧ್ಯತೆಯಿದೆ.

ಭಯೋತ್ಪಾದನೆ ನಿಗ್ರಹಕ್ಕೆ ವಿಶೇಷ ತಂಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಮಗ್ರ ಅಂಕಿ ಅಂಶವನ್ನು ಆಧರಿಸಿ ಕೃತಕ ಬುದ್ಧಿಮತ್ತೆ ಹಾಗೂ ಯಂತ್ರಾಧಾರಿತ ವಿಶ್ಲೇಷಣೆಗಳ ನೆರವಿನಲ್ಲಿ ಭಯೋತ್ಪಾದನೆ ಜಾಲದ ನಿರ್ಮೂಲನೆಗೆ ವಿಶೇಷ ತಂಡವನ್ನು ರಚಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಒಲವು ತೋರಿದ್ದಾರೆ.

‘ರಾಷ್ಟ್ರೀಯ ಭದ್ರತೆ ಹೊಣೆಗಾರಿಕೆಯಲ್ಲಿ ನಿಯೋಜಿತವಾಗಿರುವ ವಿವಿಧ ಸಂಸ್ಥೆಗಳಿಂದ ಆಯ್ಕೆ ಮಾಡಿಕೊಳ್ಳಲಾದ ಯುವ, ತಾಂತ್ರಿಕವಾಗಿ ಪರಿಣತರಾಗಿರುವ ಮತ್ತು ವೃತ್ತಿ ಒಲವುಳ್ಳ’ ಅಧಿಕಾರಿಗಳ ತಂಡವನ್ನು ರಚಿಸುವುದು ನನ್ನ ಉದ್ದೇಶವಾಗಿದೆ’ ಎಂದು ಹೇಳಿದ್ದಾರೆ.

ಭದ್ರತೆಗೆ ಸಂಬಂಧಿಸಿದ ಹೊಸ ಮತ್ತು ವಿಭಿನ್ನ ಸವಾಲುಗಳ ಹಿನ್ನೆಲೆಯಲ್ಲಿ ನಮ್ಮ ಹೊಣೆಗಾರಿಕೆಯನ್ನು ಕುರಿತು ಮುಂದಾಗಿ ಯೋಚಿಸುವುದು ಅಗತ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಭದ್ರತೆ ಮತ್ತು ಕಾನೂನು ಜಾರಿಗೆ ಸಂಬಂಧಿತ ವಿವಿಧ ಸಂಸ್ಥೆಗಳ ಮುಖ್ಯಸ್ಥರಿದ್ದ ಗುಪ್ತದಳದ ಬಹು ಏಜೆನ್ಸಿ ಕೇಂದ್ರದ (ಎಂಎಸಿ) ಕಾರ್ಯ ಪರಿಶೀಲನೆಯ ಉನ್ನತ ಮಟ್ಟದ ಸಭೆಯಲ್ಲಿ ಅವರು ಮಾತನಾಡಿದರು.

ನವದೆಹಲಿಯಲ್ಲಿ ಶುಕ್ರವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗುಪ್ತಚರ ಸೇರಿದಂತೆ ಭದ್ರತೆ ಮತ್ತು ಕಾನೂನು ಜಾರಿ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿದರು —ಪಿಟಿಐ ಚಿತ್ರ

ಜಮ್ಮು ಮತ್ತು ಕಾಶ್ಮೀರ ಹಾಗೂ ಮಣಿಪುರದಲ್ಲಿ ಇತ್ತೀಚೆಗೆ ಭಯೋತ್ಪಾದನಾ ದಾಳಿ ಕೃತ್ಯಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿಯೇ ಈ ಮಹತ್ವದ ಸಭೆಯು ನಡೆದಿದೆ.

ರಾಷ್ಟ್ರೀಯ ಭದ್ರತೆ ವಿಷಯದಲ್ಲಿ ಒಟ್ಟು ಸರ್ಕಾರವಾಗಿ ತೀರ್ಮಾನವನ್ನು ತೆಗೆದುಕೊಳ್ಳುವ ಪರಿಪಾಠವನ್ನು ಬೆಳೆಸಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸಲಹೆ ನೀಡಿದ ಅವರು, ಭಯೋತ್ಪಾದನೆ ಜಾಲವನ್ನು ಹತ್ತಿಕ್ಕಲು ಎಲ್ಲ ಸಂಸ್ಥೆಗಳ ನಡುವೆ ದೊಡ್ಡ ಮಟ್ಟದಲ್ಲಿ ಹೊಂದಾಣಿಕೆಯು ಅಗತ್ಯವಾಗಿದೆ ಎಂದರು.

ಬಹು ಏಜೆನ್ಸಿ ಕೇಂದ್ರದ (ಎಂಎಸಿ) ಜೊತೆಗೆ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಈ ಮೂಲಕ ಎಲ್ಲ ಕಾನೂನು ಜಾರಿ ಸಂಸ್ಥೆಗಳು ಸೇರುವ ವೇದಿಕೆಯಾಗಿ ಇದನ್ನು ರೂಪಿಸಬೇಕು ಎಂದು ಕಿವಿಮಾತು ಹೇಳಿದರು.

ಎಂಎಸಿ ಕೂಡಾ ದಿನದ 24 ಗಂಟೆ ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ತಕ್ಷಣದ ಕ್ರಮ ಅಗತ್ಯವಿರುವ ಗುಪ್ತದಳ ಮಾಹಿತಿಯನ್ನು ಸಂಬಂಧಿತ ಭಾಗಿದಾರರ ಜೊತೆ ಹಂಚಿಕೊಳ್ಳಬೇಕು ಎಂದು ಸಲಹೆ ಮಾಡಿದರು.

‘ಕಾಂವಡ್ ಯಾತ್ರೆ’ ಆದೇಶ ವಿಸ್ತರಣೆ

ಲಖನೌ(ಪಿಟಿಐ): ‘ಕಾಂವಡ್ ಯಾತ್ರೆ ಮಾರ್ಗದಲ್ಲಿನ’ ತಿಂಡಿ–ತಿನಿಸುಗಳ ಮಳಿಗೆಗಳ ಮಾಲೀಕರು ತಮ್ಮ ಹೆಸರನ್ನು ಮಳಿಗೆಗಳ ಮುಂದೆ ಉಲ್ಲೇಖಿಸಬೇಕು ಎಂಬ ಆದೇಶವನ್ನು ಉತ್ತರ ಪ್ರದೇಶ ಸರ್ಕಾರ ರಾಜ್ಯದಾದ್ಯಂತ ಶುಕ್ರವಾರ ವಿಸ್ತರಿಸಿದೆ.

‘ಇದಕ್ಕೆ ಸಂಬಂಧಿಸಿದಂತೆ ಆದೇಶವನ್ನು ಸರ್ಕಾರ ಶೀಘ್ರವೇ ಹೊರಡಿಸುವ ಸಾಧ್ಯತೆ ಇದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಕೋಮು ಸೂಕ್ಷ್ಮಪ್ರದೇಶ ಎಂದೇ ಗುರುತಿಸಲಾಗುವ ಮುಜಫ್ಫರ್‌ನಗರಜಿಲ್ಲೆಗೆ ಅನ್ವಯವಾಗುವಂತೆ, ರಾಜ್ಯ ಸರ್ಕಾರ ಸೋಮವಾರ ಈ ವಿವಾದಾತ್ಮಕ ಆದೇಶವನ್ನು ಹೊರಡಿಸಿತ್ತು. ಇದಕ್ಕೆ ವಿಪಕ್ಷಗಳ ಹಾಗೂ ಆಡಳಿತಾರೂಢ ಮೈತ್ರಿಕೂಟದ ಅಂಗಪಕ್ಷಗಳ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು.

ಈ ಆದೇಶ ಮುಸ್ಲಿಂ ವ್ಯಾಪಾರಿಗಳನ್ನು ಗುರಿಯಾಗಿಸಿ ಹೊರಡಿಸಲಾಗಿದೆ ಎಂದು ಹೇಳಿದ್ದರು.

ಸಮರ್ಥನೆ: ರಾಜ್ಯ ಸರ್ಕಾರದ ಈ ನಡೆಯನ್ನು ತೂಕ ಮತ್ತು ಅಳತೆ ಇಲಾಖೆಯ ಪ್ರಭಾರ ಮುಖ್ಯಸ್ಥ ವಿ.ಕೆ. ಮಿಶ್ರಾ ಅವರು ಸಮರ್ಥಿಸಿಕೊಂಡಿದ್ದಾರೆ.

> **ಜಾತಿ ಮತ್ತು ಧರ್ಮದ ಆಧಾರದಲ್ಲಿ ಜನರನ್ನು ವಿಭಜಿಸುವ ಯಾವುದೇ ನಡೆಯನ್ನು ನಾನು ಬೆಂಬಲಿಸುವುದಿಲ್ಲ**
> **ಚಿರಾಗ್ ಪಾಸ್ವಾನ್,** ಎಲ್‌ಜೆಪಿ ನಾಯಕ ಹಾಗೂ ಕೇಂದ್ರ ಸಚಿವ

‘ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ–2006ರ ಪ್ರಕಾರ, ಪ್ರತಿಯೊಂದು ರೆಸ್ಟೊರೆಂಟ್ ಮತ್ತು ಧಾಬಾ ‘ಸಂಚಾಲಕ’ (ಈ ತಿಂಡಿ–ತಿನಿಸುಗಳ ಮಳಿಗೆಯ ಉಸ್ತುವಾರಿ) ತನ್ನ ಮಳಿಗೆ ಹೆಸರು, ಮಾಲೀಕರ ಹೆಸರು ಹಾಗೂ ಪರವಾನಗಿ ಸಂಖ್ಯೆಯನ್ನು ಪ್ರದರ್ಶಿಸಬೇಕು’ ಎಂದು ಹೇಳಿದ್ದಾರೆ.

ಸರ್ಕಾರದ ಈ ನಡೆಯನ್ನು ವಿರೋಧ ಪಕ್ಷಗಳು ಟೀಕಿಸಿವೆ. ಆದರೆ, ಬಿಜೆಪಿ ಈ ಆದೇಶವನ್ನು ಸಮರ್ಥಿಸಿಕೊಂಡಿದೆ.

ಆದರೆ, ಬಿಜೆಪಿಯ ಹಿರಿಯ ನಾಯಕ ಹಾಗೂ ಕೇಂದ್ರದ ಮಾಜಿ ಸಚಿವ ಮುಖ್ತಾರ್ ಅಬ್ಬಾಸ್ ನಖ್ವಿ, ‘ಈ ಆದೇಶವು ಅಸ್ಪೃಶ್ಯತೆಯನ್ನು ಉತ್ತೇಜಿಸುವ ಸಾಧ್ಯತೆ ಇದೆ’ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಸಂವಿಧಾನದ ವಿಧಿ 361 (2)ರ ಸಿಂಧುತ್ವ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅರ್ಜಿ ವಿಚಾರಣೆ

‘ತನಿಖೆಯಿಂದ ರಾಜ್ಯಪಾಲರಿಗೆ ವಿನಾಯಿತಿ: ಆಕ್ಷೇಪ’

ಪ್ರಜಾವಾಣಿ ವಾರ್ತೆ

ನವದೆಹಲಿ: ಲೈಂಗಿಕ ದೌರ್ಜನ್ಯ ಆರೋಪದ ಪ್ರಕರಣದಲ್ಲಿ ತನಿಖೆಯಿಂದ ರಾಜ್ಯಪಾಲರಿಗೆ ಸಾರಾಸಗಟಾಗಿ ವಿನಾಯಿತಿ ನೀಡುವ ಸಂವಿಧಾನ ವಿಧಿ 361 (2)ರ ಸಿಂಧುತ್ವ ಪ್ರಶ್ನಿಸಿದ್ದ ಅರ್ಜಿ ಕುರಿತು ಸುಪ್ರೀಂ ಕೋರ್ಟ್ ಶುಕ್ರವಾರ, ಅಟಾರ್ನಿ ಜನರಲ್ ಅವರ ನೆರವು ಕೋರಿತು.

ಕೋಲ್ಕತ್ತದ ರಾಜಭವನದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಹಿಳೆಯೊಬ್ಬರು, ತನಿಖೆಯಿಂದ ರಾಜ್ಯಪಾಲರಿಗೆ ವಿನಾಯಿತಿ ನೀಡುವ ಸಂವಿಧಾನದ ವಿಧಿಯ ಸಿಂಧುತ್ವವನ್ನು ಪ್ರಶ್ನಿಸಿ ಅರ್ಜಿಯನ್ನು ಸಲ್ಲಿಸಿದ್ದರು.

ಇದಕ್ಕೆ ಸಂಬಂಧಿಸಿದಂತೆ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಅವರಿದ್ದ ಪೀಠವು ಪಶ್ಚಿಮ ಬಂಗಾಳ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತು. ಅಲ್ಲದೆ, ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರವನ್ನೂ ಪ್ರತಿವಾದಿಯಾಗಿ ಉಲ್ಲೇಖಿಸಲು ಅರ್ಜಿದಾರರಿಗೆ ಅವಕಾಶ ನೀಡಿತು.

ಅರ್ಜಿದಾರ ಮಹಿಳೆಯನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಶ್ಯಾಮ್ ದಿವಾನ್, ‘ಈ ಪ್ರಕರಣದ ತನಿಖೆಗೆ ಸಂವಿಧಾನದ 361ನೇ ವಿಧಿ ಅಡ್ಡಿ ಆಗಬಾರದು’ ಎಂದು ಪ್ರತಿಪಾದಿಸಿದರು. ಸಾಕ್ಷ್ಯಗಳನ್ನು ಈಗಲೇ ಸಂಗ್ರಹಿಸಬೇಕಿದೆ. ಈ ಕೆಲಸವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗದು’ ಎಂದು ಹೇಳಿದರು.

ಮುಖ್ಯಾಂಶಗಳು
- ಪಶ್ಚಿಮ ಬಂಗಾಳ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ
- ಕೇಂದ್ರ ಸರ್ಕಾರವನ್ನು ಪ್ರತಿವಾದಿ ಮಾಡಲು ಅನುಮತಿ
- ವಿಚಾರಣೆಗೆ ಅಟಾರ್ನಿ ಜನರಲ್ ಸಹಕಾರ ಕೋರಿದ ಪೀಠ

ಅರ್ಜಿದಾರ ಮಹಿಳೆಯು, ‘ತಾನು ರಾಜ್ಯಪಾಲ ಸಿ.ವಿ.ಆನಂದ ಬೋಸ್ ವಿರುದ್ಧ ಮಾಡಿರುವ ಲೈಂಗಿಕ ದೌರ್ಜನ್ಯ ಆರೋಪದ ತನಿಖೆ ನಡೆಸುವಂತೆ ಬಂಗಾಳದ ಪೊಲೀಸರಿಗೆ ನಿರ್ದೇಶನ ನೀಡಬೇಕು’ ಎಂದು ಮನವಿ ಮಾಡಿದ್ದರು. ರಾಜ್ಯಪಾಲರಿಗಿರುವ ವಿನಾಯಿತಿಯ ಕಾರಣದಿಂದ ತನಗೆ ‘ಪರಿಹಾರ’

ಸಿಗುತ್ತಿಲ್ಲ ಎಂದೂ ಪ್ರತಿಪಾದಿಸಿದರು.

ಸಂವಿಧಾನದ ವಿಧಿ 361 (2) ಪ್ರಕಾರ ರಾಷ್ಟ್ರಪತಿ ಅಥವಾ ರಾಜ್ಯಪಾಲರ ವಿರುದ್ಧ ಅವರು ಹುದ್ದೆಯಲ್ಲಿ ಇರುವ ಅವಧಿಯಲ್ಲಿ ಯಾವುದೇ ಕೋರ್ಟ್‌ನಲ್ಲಿ ಕ್ರಿಮಿನಲ್ ವಿಚಾರಣೆ ನಡೆಸುವಂತಿಲ್ಲ.

ಈ ಅಂಶವನ್ನೇ ಉಲ್ಲೇಖಿಸಿರುವ ಅರ್ಜಿದಾರರು, ಕಾನೂನುಬಾಹಿರ ಕೆಲಸಗಳನ್ನು ಮಾಡಲು ಈ ವಿನಾಯಿತಿಯು ತಮಗಿರುವ ಅವಕಾಶ ಎಂದು ರಾಜ್ಯಪಾಲರು ಅರ್ಥಮಾಡಿಕೊಳ್ಳಬಾರದು ಎಂದು ಹೇಳಿದ್ದಾರೆ.

‘ಪೊಲೀಸರು ತನಿಖೆ ಮಾಡಲು ಅಥವಾ ಎಫ್‌ಐಆರ್‌ನಲ್ಲಿ ಹೆಸರು ಸೇರಿಸಲು ಈ ವಿನಾಯಿತಿಯು ಅಡ್ಡಿ ಆಗಬಾರದು ಎಂದು ಅರ್ಜಿಲ್ಲಿ ಹೇಳಲಾಗಿದೆ.

‘ಕಾನೂನಿಗಿಂತ ಯಾರೂ ದೊಡ್ಡವರಲ್ಲ. ತನಿಖೆಯಿಂದ ಇರುವ ವಿನಾಯಿತಿಯ ಅರ್ಥ, ರಾಜ್ಯಪಾಲರು ಅಸಮರ್ಪಕವಾಗಿ ನಡೆದುಕೊಳ್ಳಬಹುದು ಮತ್ತು ಲೈಂಗಿಕ ದೌರ್ಜನ್ಯ ನಡೆಸಬಹುದು ಎಂದಲ್ಲ ಎಂದು ವಾದಿಸಲಾಗಿದೆ.

ಅರ್ಜಿದಾರ ಮಹಿಳೆಯು ಇದೇ ವರ್ಷದ ಮೇ 2ರಂದು ಕೋಲ್ಕತ್ತದಲ್ಲಿರುವ ರಾಜಭವನದ ಅಧಿಕಾರಿಗೆ ದೂರು ನೀಡಿದ್ದರು. ರಾಜ್ಯಪಾಲರ ವಿರುದ್ಧ, ‘ಉತ್ತಮ ಕೆಲಸ ಒದಗಿಸುವ ಆಮಿಷವೊಡ್ಡಿ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ’ ಆರೋಪ ಮಾಡಿದ್ದರು.

ತಮ್ಮ ಮೇಲೆ ನವದೆಹಲಿಯಲ್ಲಿ ರಾಜ್ಯಪಾಲರು 2023ರ ಜನವರಿಯಲ್ಲಿ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಒಡಿಸ್ಸಿ ನೃತ್ಯಪಟುವೊಬ್ಬರು, 2023ರ ಅಕ್ಟೋಬರ್‌ನಲ್ಲಿ ಪೊಲೀಸರಿಗೆ ದೂರು ನೀಡಿದ್ದರು ಎಂಬುದನ್ನು ಮಹಿಳೆಯ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಬಿಲ್ಕಿಸ್ ಪ್ರಕರಣ: ಕ್ಷಮಾದಾನ ರದ್ದತಿ ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ(ಪಿಟಿಐ): ಬಿಲ್ಕಿಸ್ ಬಾನು ಪ್ರಕರಣದಲ್ಲಿ ತಮಗೆ ಕ್ಷಮಾದಾನ ನೀಡಿದ್ದನ್ನು ರದ್ದುಗೊಳಿಸಿ ಜನವರಿ 8ರಂದು ತಾನು ನೀಡಿದ್ದ ಆದೇಶ ಪ್ರಶ್ನಿಸಿ ಇಬ್ಬರು ಅಪರಾಧಿಗಳು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಈ ಪ್ರಕರಣದ 11 ಅಪರಾಧಿಗಳ ಪೈಕಿ ರಾಧೇಶ್ಯಾಮ್ ಭಗವಾನ್‌ದಾಸ್ ಶಾ ಮತ್ತು ರಾಜುಭಾಯ್ ಬಾಬುಲಾಲ್ ಸೋನಿ, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಸಂಜಯ್ ಕುಮಾರ್ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿ, ‘ಈ ಅರ್ಜಿ ತಪ್ಪು ಗ್ರಹಿಕೆಯಿಂದ ಕೂಡಿದೆ. ಸುಪ್ರೀಂ ಕೋರ್ಟ್‌ನ ಮತ್ತೊಂದು ಪೀಠವು ನೀಡಿರುವ ಆದೇಶದ ವಿರುದ್ಧ ಇಲ್ಲಿ ಮೇಲ್ಮನವಿ ಸಲ್ಲಿಸಲು ಹೇಗೆ ಸಾಧ್ಯ’ ಎಂದು ಹೇಳಿ, ಅರ್ಜಿಯನ್ನು ವಜಾಗೊಳಿಸಿತು.

‘ಇದೆಂಥ ಅರ್ಜಿ? ಈ ಅರ್ಜಿ ಸಮರ್ಥನೀಯವೇ? ಸಂವಿಧಾನದ 32ನೇ ವಿಧಿಯಡಿ ಅರ್ಜಿ ಸಲ್ಲಿಸಲು ಸಾಧ್ಯವೇ’ ಎಂದೂ ಪೀಠ ಅರ್ಜಿದಾರರ ಪರ ಹಾಜರಿದ್ದ ವಕೀಲರನ್ನು ಪ್ರಶ್ನಿಸಿತು.

ಆಗ, ಈ ಇಬ್ಬರು ಅಪರಾಧಿಗಳ ಪರ ಹಾಜರಿದ್ದ ವಕೀಲ ರಿಷಿ ಮಲ್ಹೋತ್ರ ಅವರು, ಅರ್ಜಿಯನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡುವಂತೆ ಕೋರಿದರು. ಪೀಠ ಇದಕ್ಕೆ ಸಮ್ಮತಿಸಿತು. ಮಧ್ಯಂತರ ಜಾಮೀನು ಕೋರಿ ರಾಧೇಶ್ಯಾಮ್ ಶಾ ಅರ್ಜಿ ಸಲ್ಲಿಸಿದ್ದಾನೆ.

ಪ್ರಕರಣದ ಎಲ್ಲ 11 ಜನ ಅಪರಾಧಿಗಳಿಗೆ ಗುಜರಾತ್ ಸರ್ಕಾರ ಕ್ಷಮಾದಾನ ನೀಡಿತ್ತು. ಈ ಕಾರಣಕ್ಕೆ, ಶಿಕ್ಷೆಯ ಅವಧಿ ಪೂರ್ಣಗೊಳ್ಳುವ ಮುನ್ನವೇ ಅವರನ್ನು ಬಿಡುಗಡೆ ಮಾಡಲಾಗಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಗುಜರಾತ್ ಸರ್ಕಾರದ ಕ್ರಮವನ್ನು ರದ್ದುಪಡಿಸಿ ಜನವರಿ 8ರಂದು ಆದೇಶಿಸಿತ್ತು.

ಘಟಿಕೋತ್ಸವ: ಪ್ಯಾಲೆಸ್ಟೀನ್ ವಿಷಯ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ಚೆನ್ನೈ: ಮದ್ರಾಸ್ ಐಐಟಿ ಘಟಿಕೋತ್ಸವದಲ್ಲಿ ವಿದ್ಯಾರ್ಥಿಯೊಬ್ಬ ಪ್ಯಾಲೆಸ್ಟೀನ್–ಇಸ್ರೇಲ್ ಯುದ್ಧದ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

‘ಎಂಜಿನಿಯರುಗಳು ತಾವು ಕೆಲಸ ಮಾಡುವ ಕಂಪನಿಗಳ ಬಗ್ಗೆ ಜಾಗೃತರಾಗಿರಬೇಕು. ಕೆಲ ಕಂಪನಿಗಳು ಇಸ್ರೇಲ್‌ನಂತಹ ಸಾಮ್ರಾಜ್ಯಶಾಹಿ ಆಡಳಿತಗಳಿಗೆ ನೆರವು ನೀಡುತ್ತವೆ’ ಎಂದು ಹೇಳಿದ್ದಾರೆ.

ರಾಜ್ಯಪಾಲರ ಪ್ರಶಸ್ತಿ ಪುರಸ್ಕೃತ, ಮೆಕಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ ಧನಂಜಯ್ ಬಾಲಕೃಷ್ಣನ್, ಹೀಗೆ ಯುದ್ಧದ ವಿಷಯ ಪ್ರಸ್ತಾಪಿಸಿ ಸಭಿಕರ ಗಮನಸೆಳೆದರು.

ಪ್ಯಾಲೆಸ್ಟೀನ್‌ನಲ್ಲಿ ಸದ್ಯ ಸಾಮೂಹಿಕ ನರಮೇಧ ನಡೆದಿದೆ. ಜನರು ದೊಡ್ಡ ಸಂಖ್ಯೆಯಲ್ಲಿ ಸಾಯುತ್ತಿದ್ದಾರೆ. ಇದಕ್ಕೆ ಕೊನೆಯೇ ಇಲ್ಲವಾಗಿದೆ ಎಂದರು.

‘ಈ ಬಗ್ಗೆ ನಾವೇಕೆ ಯೋಚಿಸಬೇಕು ಎಂದು ನೀವು ಪ್ರಶ್ನಿಸಬಹುದು. ಎಂಜಿನಿಯರಿಂಗ್ ವಿದ್ಯಾರ್ಥಿಗಳು ಪ್ರಮುಖ ಕಂಪನಿಗಳಲ್ಲಿ ಕೆಲಸ ಮಾಡಲು ಕಠಿಣ ಶ್ರಮ ಪಡುತ್ತಾರೆ. ಈ ಸಂಸ್ಥೆಗಳು ದೊಡ್ಡ ಅನುಕೂಲಗಳನ್ನು ಕಲ್ಪಿಸುತ್ತೇವೆ. ಆದರೆ, ಇದೇ ಸಂಸ್ಥೆಗಳು ನಮ್ಮ ಜೀವನದ ಬಹುತೇಕ ಅಂಶಗಳನ್ನು ನಿಯಂತ್ರಿಸುತ್ತಿವೆ. ಬಹುತೇಕ ಪ್ರತಿಷ್ಠಿತ ಕಂಪನಿಗಳು ಪ್ರತ್ಯಕ್ಷ, ಪರೋಕ್ಷವಾಗಿ ನಾಗರಿಕರನ್ನು ಕೊಲ್ಲಲು ಪ್ಯಾಲೆಸ್ಟೀನ್ ವಿರುದ್ಧದ ಯುದ್ಧದಲ್ಲಿ ಆಧುನಿಕ ತಂತ್ರಜ್ಞಾನ ಒದಗಿಸುತ್ತಿವೆ’ ಎಂದು ಹೇಳಿದರು.

ಪರಿಹಾರವು ಇದೆ. ನನ್ನಲ್ಲಿ ಎಲ್ಲ ಪ್ರಶ್ನೆಗಳಿಗೆ ಉತ್ತರವಿಲ್ಲ. ಇಷ್ಟು ಗೊತ್ತಿದೆ. ಎಂಜಿನಿಯರಿಂಗ್ ಪದವೀಧರನಾಗಿ ವಾಸ್ತವ ಜಗತ್ತಿಗೆ ಪದಾರ್ಪಣೆ ಮಾಡುವಾಗ ನಾವು ಮಾಡುವ ಕೆಲಸ ಏನು ಪರಿಣಾಮ ಬೀರಬಹುದು ಎಂಬ ಅರಿವಿರಬೇಕು. ಇಂತಹ ಸಂಕೀರ್ಣ ವ್ಯವಸ್ಥೆಯಲ್ಲಿ ನಮ್ಮ ಸ್ಥಾನವನ್ನು ಗುರುತಿಸಿಕೊಳ್ಳಬೇಕು ಎಂದು ಸಲಹೆ ಮಾಡಿದರು.

60ರ ಹರೆಯದಲ್ಲಿ ಪಿಎಚ್.ಡಿ ಪದವಿ

ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಅವರು ಐಐಟಿ–ಎಂನಿಂದ ಪಿಎಚ್.ಡಿ ಪದವಿ ಪಡೆದಿದ್ದು, 60ನೇ ವಯಸ್ಸಿನಲ್ಲಿ ಈ ಪದವಿಗೆ ಪಾತ್ರರಾಗಿದ್ದಾರೆ.

ಭಾರತೀಯ ವಿಜ್ಞಾನ ಮುಖ್ಯವಾಗಿ, ಭಾರತದ ಚಂದ್ರಯಾನ ಯೋಜನೆಯ ಯಶಸ್ಸಿಗೆ ಅವರು ನೀಡಿದ ಕೊಡುಗೆಗಾಗಿ ಮೆಕಾನಿಕಲ್ ಎಂಜಿನಿಯರಿಂಗ್ ವಿಭಾಗದಿಂದ ಅವರು ಈ ಗೌರವಕ್ಕೆ ಪಾತ್ರರಾದರು.

ಸೋಮನಾಥ್ ಅವರಿಗೆ ಪಿಎಚ್.ಡಿ. ಪದವಿ ನೀಡಲು ಐಐಟಿ–ಎಂ ಈ ಕುರಿತು ಇದ್ದ ನಿಯಮವನ್ನು ಸರಳೀಕರಣಗೊಳಿಸಿತು. ಶುಕ್ರವಾರ ಸಂಸ್ಥೆಯ 61ನೇ ಘಟಿಕೋತ್ಸವದಲ್ಲಿ ಅವರು ಪದವಿ ಸ್ವೀಕರಿಸಿದರು.

‘ ಬಾಹ್ಯಾಕಾಶ ವ್ಯವಸ್ಥೆಯಲ್ಲಿ ಅನ್ವಯಿಸುವ ನವೀಕೃತ ಹೈಪರ್ ಎಲಾಸ್ಟಿಕ್ ಪರಿಕರ ಮಾದರಿಗಳಲ್ಲಿ ಕಂಪನ ಪ್ರತಿಕ್ರಿಯೆಯ ಅಧ್ಯಯನ’ ವಿಷಯ ಕುರಿತ ಪ್ರೌಢಪ್ರಬಂಧವನ್ನು ಸಂಸ್ಥೆಯು ಪದವಿಗೆ ಪರಿಗಣಿಸಿದೆ.

ಗೊಂಡಾ ರೈಲು ದುರಂತ ಸಾವಿನ ಸಂಖ್ಯೆ ನಾಲ್ಕಕ್ಕೆ ಏರಿಕೆ

ಗೊಂಡಾ (ಉತ್ತರಪ್ರದೇಶ) (ಪಿಟಿಐ): ‘ಗೊಂಡಾ ಜಿಲ್ಲೆಯಲ್ಲಿ ಚಂಡೀಗಢ–ದಿಬ್ರೂಗಢ ಎಕ್ಸ್‌ಪ್ರೆಸ್ ರೈಲು ಗುರುವಾರ ಹಳಿ ತಪ್ಪಿದ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ ನಾಲ್ಕಕ್ಕೇರಿದೆ’ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದರು.

‘ಗೊಂಡಾ– ಗೋರಖಪುರ ಸೆಕ್ಷನ್‌ನ ಝಿಲಾಯಿ ರೈಲು ನಿಲ್ದಾಣ ಸಮೀಪ ಸಂಭವಿಸಿದ ಅಪಘಾತದಲ್ಲಿ ಇದುವರೆಗೆ ನಾಲ್ಕು ಮಂದಿ ಮೃತಪಟ್ಟಿದ್ದಾರೆ. 31 ಮಂದಿ ಗಾಯಗೊಂಡಿದ್ದಾರೆ. ಈ ಪೈಕಿ ಆರು ಮಂದಿಯ ಸ್ಥಿತಿ ಗಂಭೀರವಾಗಿದೆ’ ಎಂದು ಗೊಂಡ ಜಿಲ್ಲಾಧಿಕಾರಿ ನೇಹಾ ಶರ್ಮಾ ತಿಳಿಸಿದರು.

‘ಮೃತರನ್ನು ರಾಹುಲ್ (38) ಸರೋಜ್ ಕುಮಾರ್ ಸಿಂಗ್ (31) ಎಂದು ಗುರುತಿಸಿದ್ದು, ಇನ್ನಿಬ್ಬರ ಗುರುತು ಪತ್ತೆಯಾಗಬೇಕಿದೆ. ನಾಲ್ಕು ಮೃತದೇಹಗಳನ್ನು ಜಿಲ್ಲಾ ಕೇಂದ್ರಕ್ಕೆ ತರಲಾಗಿದೆ. ಸಂಬಂಧಿಕರು ಬಂದ ಬಳಿಕ ಮರಣೋತ್ತರ ಪರೀಕ್ಷೆ ನಡೆಸಲಾಗುವುದು’ ಎಂದು ತಿಳಿಸಿದರು.

‘ಅಪಘಾತ ಕುರಿತಂತೆ ನ್ಯಾಯಾಂಗ ತನಿಖೆಗೆ ಆದೇಶಿಸಲಾಗಿದೆ’ ಎಂದರು.

₹10 ಲಕ್ಷ ಪರಿಹಾರ: ಅಪಘಾತದಲ್ಲಿ ಮೃತಪಟ್ಟ ಕುಟುಂಬದ ಸದಸ್ಯರಿಗೆ ರೈಲ್ವೆ ಇಲಾಖೆಯು ₹10 ಲಕ್ಷ ಪರಿಹಾರ, ಗಂಭೀರ ಗಾಯಗೊಂಡವರಿಗೆ ₹2.5 ಲಕ್ಷ ಹಾಗೂ ಸಣ್ಣಪುಟ್ಟ ಗಾಯಗಳಾದವರಿಗೆ ₹50 ಸಾವಿರ ಪರಿಹಾರ ಘೋಷಿಸಿದೆ.

ಈಜಾಟ... ಪಶ್ಚಿಮ ಬಂಗಾಳದ ನಾದಿಯ ಜಿಲ್ಲೆಯ ಹೂಗ್ಲಿ ನದಿಯಲ್ಲಿ ಚಿಣ್ಣರ ಈಜಾಟದ ಸಂಭ್ರಮ ಪಿಟಿಐ ಚಿತ್ರ

ಕೋವಿಡ್: 2.6 ವರ್ಷ ಕುಗ್ಗಿದ ಜೀವಿತಾವಧಿ– ವರದಿ

ಸತ್ತವರು ಎಂಟು ಪಟ್ಟು ಅಧಿಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದಲ್ಲಿ 2020ರಲ್ಲಿ ಕೋವಿಡ್‌ನಿಂದ ಅಂದಾಜು 11.9 ಲಕ್ಷದಷ್ಟು ಸಾವು ದಾಖಲಾಗಿದೆ. ಇದು ಸರ್ಕಾರದ ಅಧಿಕೃತ ಲೆಕ್ಕಕ್ಕಿಂತ ಎಂಟು ಪಟ್ಟು ಅಧಿಕ ಎಂದು ಹೊಸ ಅಧ್ಯಯನ ವರದಿ ತಿಳಿಸಿದೆ.

ಕೋವಿಡ್‌ನ ಮೊದಲ ವರ್ಷದಲ್ಲಿ ಭಾರತದಲ್ಲಿ ಮುಸ್ಲಿಮರು, ಆದಿವಾಸಿಗಳು ಮತ್ತು ದಲಿತರು ಒಳಗೊಂಡಂತೆ ಸಮಾಜದ ಶೋಷಿತ ವರ್ಗದವರು ಹಾಗೂ ಮಹಿಳೆಯರು ಹೆಚ್ಚಿನ ತೊಂದರೆ ಅನುಭವಿಸಿದ್ದಾರೆ ಎಂಬುದನ್ನು ಶುಕ್ರವಾರ ಪ್ರಕಟಗೊಂಡ ಅಧ್ಯಯನ ವರದಿ ಕಂಡುಕೊಂಡಿದೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮತ್ತು ನ್ಯೂಯಾರ್ಕ್ ಸಿಟಿ ವಿಶ್ವವಿದ್ಯಾಲಯದ ತಜ್ಞರ ತಂಡ ನಡೆಸಿದ ಸಂಶೋಧನೆಯಲ್ಲಿ ಈ ಅಂಶ ಬಹಿರಂಗವಾಗಿದೆ. ಕೋವಿಡ್ ಸಾಂಕ್ರಾಮಿಕವು ವಯಸ್ಸು, ಲಿಂಗ ಮತ್ತು ಸಮಾಜದ ವಿವಿಧ ವರ್ಗಗಳ ಜನರ ಮೇಲೆ ಯಾವ ರೀತಿ ಪರಿಣಾಮ ಬೀರಿದೆ ಎಂಬುದನ್ನು ಸರ್ಕಾರದ ಅಧಿಕೃತ ದತ್ತಾಂಶವನ್ನು ಬಳಸಿಕೊಂಡು ವಿಶ್ಲೇಷಿಸಲಾಗಿದೆ.

‘ಮರಣ ಪ್ರಮಾಣವನ್ನು ವಯಸ್ಸು, ಲಿಂಗ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿ ನೋಡಿರುವುದರಿಂದ ನಮ್ಮ ಅಧ್ಯಯನವು ಇತರ ಅಧ್ಯಯನಗಳಿಗಿಂತ ಭಿನ್ನವಾಗಿದೆ. ಕೋವಿಡ್ ಪಿಡುಗು ಭಾರತದಲ್ಲಿ ಸಮಾಜದ ವಿವಿಧ ವರ್ಗಗಳ ಮೇಲೆ ಅಸಮಾನ ರೀತಿಯಲ್ಲಿ ಪರಿಣಾಮ ಬೀರಿದೆ ಎಂಬುದನ್ನು ಕಂಡುಕೊಳ್ಳಲು ಸಾಧ್ಯವಾಗಿದೆ’ ಎಂದು ಸಿಟಿ ವಿಶ್ವವಿದ್ಯಾಲಯದ ಅರ್ಥಶಾಸ್ತ್ರಜ್ಞರಾದ ಸಂಗೀತಾ ವ್ಯಾಸ್ ತಿಳಿಸಿದರು.

> **ಅಧ್ಯಯನದ ಕಾರ್ಯ ವಿಧಾನದಲ್ಲಿ ಕೆಲವು ನ್ಯೂನತೆಗಳಿವೆ. ಇದರಿಂದಾಗಿ ಅವರು ತಪ್ಪು ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ**
> **ವಿನೋದ್ ಪಾಲ್**
> ನೀತಿ ಆಯೋಗದ ಸದಸ್ಯ

ಭಾರತದಲ್ಲಿ 2020ರಲ್ಲಿ ಕೋವಿಡ್‌ನಿಂದ ಸುಮಾರು 8 ಲಕ್ಷ ಮಂದಿ ಮೃತಪಟ್ಟಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ವರದಿ ತಿಳಿಸಿತ್ತು. ಕೇಂದ್ರ ಸರ್ಕಾರವು ಮೃತಪಟ್ಟವರ ಸಂಖ್ಯೆ 1.50 ಲಕ್ಷ ಎಂದು ಹೇಳಿತ್ತು.

‘ಡಬ್ಲ್ಯುಎಚ್‌ಒ ವರದಿಗಿಂತ ಒಂದೂವರೆ ಪಟ್ಟು ಅಧಿಕ ಹಾಗೂ ಸರ್ಕಾರದ ಅಧಿಕೃತ ಅಂಕಿ–ಅಂಶಕ್ಕಿಂತ 8 ಪಟ್ಟು ಅಧಿಕ ಮಂದಿ ಮೃತಪಟ್ಟಿರುವುದನ್ನು ನಮ್ಮ ಅಧ್ಯಯನ ತಂಡ ಅಂದಾಜು ಮಾಡಿದೆ’ ಎಂದು ವ್ಯಾಸ್ ಹೇಳಿದ್ದಾರೆ.

ಕುಗ್ಗಿದ ಜೀವಿತಾವಧಿ: ಕೋವಿಡ್ ಪಿಡುಗಿನ ಪರಿಣಾಮದಿಂದ ಭಾರತದಲ್ಲಿ ಜನರ ಜೀವಿತಾವಧಿಯು ಕುಗ್ಗಿದೆ. ಸಮಾಜದ ವಿವಿಧ ವರ್ಗಗಳಲ್ಲಿ ಜೀವಿತಾವಧಿ ಎಷ್ಟು ಕುಗ್ಗಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಮುಸ್ಲಿಮರು (5.4 ವರ್ಷ) ಹೆಚ್ಚು ತೊಂದರೆಗೆ ಒಳಗಾಗಿರುವುದು ಕಂಡುಬಂದಿದೆ.

ಪರಿಶಿಷ್ಟ ಪಂಗಡದವರ ಜೀವಿತಾವಧಿಯು 4.1 ವರ್ಷ ಹಾಗೂ ಪರಿಶಿಷ್ಟ ಜಾತಿಯವರ ಜೀವಿತಾವಧಿ 2.7 ವರ್ಷದಷ್ಟು ಕುಗ್ಗಿದೆ ಎಂದು ವರದಿ ತಿಳಿಸಿದೆ.

ಪುರುಷರ ಜೀವಿತಾವಧಿ 3.1 ವರ್ಷ ಹಾಗೂ ಮಹಿಳೆಯರ ಜೀವಿತಾವಧಿಯಲ್ಲಿ 2.1 ವರ್ಷಗಳಷ್ಟು ಕುಸಿತ ಕಂಡಿದೆ. ಕೋವಿಡ್‌ನಿಂದಾಗಿ ಒಟ್ಟಾರೆಯಾಗಿ ಭಾರತದಲ್ಲಿ ಜೀವಿತಾವಧಿಯು 2.6 ವರ್ಷಗಳು ಕುಗ್ಗಿದೆ. ಇದಕ್ಕೆ ಹೋಲಿಸಿದರೆ, ಮೇಲ್ವರ್ಗದ ಹಿಂದೂಗಳು ಮತ್ತು ಇತರೆ ಹಿಂದುಳಿದ ವರ್ಗಗಳಲ್ಲಿ (ಒಬಿಸಿ) ಜೀವಿತಾವಧಿಯು 1.3 ವರ್ಷಗಳಷ್ಟು ಕುಸಿತ ಕಂಡಿದೆ.

ಆಂಧ್ರ, ತೆಲಂಗಾಣದಲ್ಲಿ ಮಳೆ ಅಬ್ಬರ

ಹೈದರಾಬಾದ್: ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದಾಗಿ ಆಂಧ್ರಪ್ರದೇಶ, ತೆಲಂಗಾಣದಲ್ಲಿ ಭಾರಿ ಮಳೆಯಾಗುತ್ತಿದ್ದು, ಗುರುವಾರ ರಾತ್ರಿಯಿಂದಲೇ ಜನಜೀವನ ಅಸ್ತವ್ಯಸ್ತಗೊಂಡಿದೆ. ಆಂಧ್ರದ ಹಲವು ಕಡೆಗಳಲ್ಲಿ ಶನಿವಾರವೂ ಭಾರಿ ಮಳೆಯ ಮುನ್ಸೂಚನೆ ನೀಡಲಾಗಿದೆ.

ಆರು ಮಸೂದೆ ಮಂಡನೆಗೆ ಸಿದ್ಧತೆ

ನವದೆಹಲಿ (ಪಿಟಿಐ): ಸೋಮವಾರ ಆರಂಭವಾಗುವ ಸಂಸತ್ ಅಧಿವೇಶನದಲ್ಲಿ 90 ವರ್ಷ ಹಳೆಯ ವೈಮಾನಿಕ ಕಾಯ್ದೆಗೆ ಬದಲು ಜಾರಿಗೆ ತರುವ ಭಾರತೀಯ ವಾಯುಯಾನ ಮಸೂದೆ’ ಸೇರಿ 6 ಮಸೂದೆಗಳನ್ನು ಮಂಡಿಸಲು ಸರ್ಕಾರ ನಿರ್ಧರಿಸಿದೆ.

ವೈಮಾನಿಕ ಕ್ಷೇತ್ರದಲ್ಲಿ ವಹಿವಾಟು ನಡೆಸಲು ಇರುವ ಕೆಲ ತೊಡಕುಗಳನ್ನು ನಿವಾರಿಸುವುದು ಈ ತಿದ್ದುಪಡಿ ಮಸೂದೆ ಮಂಡನೆಯ ಉದ್ದೇಶವಾಗಿದೆ.

ಜುಲೈ 22ರಂದು ಆರಂಭವಾಗುವ ಅಧಿವೇಶನ ಆಗಸ್ಟ್ 12ರವರೆಗೂ ನಡೆಯಲಿದೆ.

ಇದರ ಜೊತೆಗೆ ಪ್ರಕೃತಿ ವಿಕೋಪ ನಿರ್ವಹಣೆ (ತಿದ್ದುಪಡಿ) ಮಸೂದೆಯನ್ನು ಮಂಡಿಸಿ, ಅನುಮೋದನೆ ಪಡೆಯುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಪ್ರಕೃತಿ ವಿಕೋಪ ನಿರ್ವಹಣೆಯಲ್ಲಿ ಭಿನ್ನ ಪಾತ್ರ ವಹಿಸುತ್ತಿರುವ ಸಂಘಟನೆಗಳ ಜವಾಬ್ದಾರಿ ಕುರಿತಂತೆ ಹೆಚ್ಚಿನ ಖಚಿತತೆ ಇರುವಂತೆ ನೋಡಿಕೊಳ್ಳುವುದು ಮಸೂದೆಯ ಉದ್ದೇಶವಾಗಿದೆ.

ಕಾಫಿ (ಉತ್ತೇಜನ ಮತ್ತು ಅಭಿವೃದ್ಧಿ) ಮಸೂದೆ, ರಬ್ಬರ್ (ಉತ್ತೇಜನ ಮತ್ತು ಅಭಿವೃದ್ಧಿ) ಮಸೂದೆ ಮಂಡನೆಯಾಗಲಿರುವ ಇತರೆ ಎರಡು ಮಸೂದೆಗಳು.

ನಿರ್ಮಲಾ ರಾಜೀನಾಮೆಗೆ ಸಿ.ಎಂ. ಆಗ್ರಹ

ಒಂದನೇ ಪುಟದಿಂದ...

ವಿರೋಧ ಪಕ್ಷಗಳ ಸದಸ್ಯರ ಗದ್ದಲದ ಮಧ್ಯೆಯೇ ಉತ್ತರ ನೀಡಿದ ಸಿದ್ದರಾಮಯ್ಯ, ಲಿಖಿತ ಭಾಷಣವನ್ನು ಓದಿದರು. ಮಧ್ಯದಲ್ಲಿ ಕೆಲವೊಮ್ಮೆ ಏರು ದನಿಯಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

‘ಹಗರಣಕ್ಕೆ ಮುಖ್ಯಮಂತ್ರಿಯೇ ಹೊಣೆ ಎಂಬ ಬಿಜೆಪಿ ಆರೋಪದಲ್ಲಿ ಹುರುಳಿಲ್ಲ. ಆಯಾ ಇಲಾಖೆಗಳಿಗೆ ಅನುದಾನ ಬಿಡುಗಡೆ ಮಾಡುವುದಷ್ಟೇ ಹಣಕಾಸು ಇಲಾಖೆಯ ಕೆಲಸ. ಅಲ್ಲಿ ಅನುದಾನ ಬಳಕೆಯ ನಿರ್ಧಾರ ಕೈಗೊಳ್ಳುವುದು ನಿಗಮಗಳ ಮುಖ್ಯಸ್ಥರದ್ದೇ ಜವಾಬ್ದಾರಿ. ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆ ಬದಲಾವಣೆಗೆ ಮುನ್ನ ಹಣಕಾಸು ಇಲಾಖೆಯ ಅನುಮತಿಯನ್ನೂ ಪಡೆದಿರಲಿಲ್ಲ. ಈ ಅಕ್ರಮಕ್ಕೂ ನನಗೂ ಯಾವ ಸಂಬಂಧವೂ ಇಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಲೆಕ್ಕಾಧೀಕ್ಷಕ ಪಿ. ಚಂದ್ರಶೇಖರನ್ ಮೇ 26ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಬಳಿಕ ಪ್ರಕರಣದ ತನಿಖೆಗೆ ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಲಾಗಿತ್ತು. ಎಸ್‌ಐಟಿ ಈವರೆಗೆ 12 ಮಂದಿಯನ್ನು ಬಂಧಿಸಿದೆ. ₹85.25 ಕೋಟಿಯನ್ನು ವಶಕ್ಕೆ ಪಡೆದಿದೆ. ಇನ್ನು ಸ್ವಲ್ಪ ಮೊತ್ತ ಮಾತ್ರ ಬಾಕಿ ಇದೆ. ಹಗರಣದಲ್ಲಿ ಶಾಮೀಲಾದವರು ಎಷ್ಟೇ ದೊಡ್ಡವರಿದ್ದರೂ ಬಿಡುವುದಿಲ್ಲ. ಎಲ್ಲರನ್ನೂ ಬಂಧಿಸಿ ಜೈಲಿಗೆ ಅಟ್ಟಲಾಗುವುದು ಎಂದರು.

₹187 ಕೋಟಿ ಮೊತ್ತದ ಹಗರಣ ನಡೆದಿದೆ ಎಂಬ ಆರೋಪದಲ್ಲಿ ಹುರುಳಿಲ್ಲ. ನಿಗಮದ ಬ್ಯಾಂಕ್ ಖಾತೆಗೆ ಅಷ್ಟು ಮೊತ್ತ ವರ್ಗಾವಣೆ ಆಗಿತ್ತು. ಅಲ್ಲಿಂದ ಹೈದರಾಬಾದ್‌ನ ಬ್ಯಾಂಕ್ ಖಾತೆಗಳಿಗೆ ₹94.63 ಕೋಟಿ ವರ್ಗಾವಣೆ ಆಗಿತ್ತು. ಅದರಲ್ಲಿ ₹5 ಕೋಟಿ ವಾಪಸ್ ಬಂದಿತ್ತು. ಬಿಜೆಪಿಯವರು ಜನರನ್ನು ದಿಕ್ಕು ತಪ್ಪಿಸಲು ಸುಳ್ಳು ಹೇಳುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಇ.ಡಿ ದುರ್ಬಳಕೆ: ಬಿಜೆಪಿ ಸರ್ಕಾರದ ಅವಧಿಯಲ್ಲಿನ 21 ಹಗರಣಗಳ ಪಟ್ಟಿಯನ್ನು ಸದನದಲ್ಲಿ ಓದಿದ ಮುಖ್ಯಮಂತ್ರಿ, ‘ಹಿಂದೆಯೂ ಇಲ್ಲಿ ಹಗರಣಗಳು ನಡೆದಿದ್ದವು. ಯಾವತ್ತೂ ಜಾರಿ ನಿರ್ದೇಶನಾಲಯ ಸ್ವಯಂಪ್ರೇರಿತವಾಗಿ ತನಿಖೆಗೆ ಬಂದಿರಲಿಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮದ ಪ್ರಕರಣದಲ್ಲಿ ಇ.ಡಿ ಅಧಿಕಾರಿಗಳು ಸ್ವಯಂಪ್ರೇರಿತ ತನಿಖೆ ಆರಂಭಿಸಿದ್ದಾರೆ. ಇ.ಡಿಯನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ’ ಎಂದು ಆರೋಪಿಸಿದರು.

‘ಶಾಸಕ ಬಿ. ನಾಗೇಂದ್ರ ಅವರನ್ನು ಬಂಧಿಸಿರುವ ಇ.ಡಿ ಅಧಿಕಾರಿಗಳು, ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಹೆಸರು ಹೇಳುವಂತೆ ಒತ್ತಡ ಹೇರುತ್ತಿರುವ ಮಾಹಿತಿ ಇದೆ. ಇ.ಡಿ ಭಯ ನಮಗಿಲ್ಲ. ಬಿಜೆಪಿ ಅವಧಿಯ ಎಲ್ಲ ಹಗರಣಗಳ ಬಗ್ಗೆ ತನಿಖೆ ನಡೆಸುತ್ತೇವೆ. ಸಾರ್ವಜನಿಕ ಹಣ ನುಂಗಿದವರನ್ನು ಬಂಧಿಸಿ ಜೈಲಿಗೆ ಕಳುಹಿಸುತ್ತೇವೆ’ ಎಂದು ಹೇಳಿದರು.

ವಿವಾದಿತ ಐಎಎಸ್ ಪ್ರೊಬೇಷನರಿ ಅಧಿಕಾರಿ

ಪೂಜಾ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಐಎಎಸ್ ಪ್ರೊಬೇಷನರಿ ಅಧಿಕಾರಿ ಪೂಜಾ ಖೇಡ್ಕರ್ ಅವರ ವಿರುದ್ಧ ಕ್ರಮಕ್ಕೆ ಮುಂದಾಗಿರುವ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ), ನಕಲಿ ದಾಖಲೆ ಸಲ್ಲಿಕೆಗೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಿದೆ.

32 ವರ್ಷದ ಮಹಾರಾಷ್ಟ್ರದ ಪೂಜಾ ಅವರ ತರಬೇತಿಗೆ ಈಗಾಗಲೇ ತಡೆಯೊಡ್ಡಿದೆ. ಅವರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿದ್ದು, ಭವಿಷ್ಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗದಂತೆ ಏಕೆ ಡಿಬಾರ್ ಮಾಡಬಾರದು ಎಂದು ಪ್ರಶ್ನಿಸಿದೆ.

ಐಎಎಸ್ ಪ್ರೊಬೇಷನರಿ ಅವಧಿಯಲ್ಲಿ ಪುಣೆಯಲ್ಲಿ ಸೇವೆಗೆ ನಿಯೋಜಿತರಾಗಿದ್ದ ವೇಳೆ ತಮ್ಮ ಕಾರ್ಯವೈಖರಿಯಿಂದ ಅವರು ಚರ್ಚೆಗೆ ಗ್ರಾಸವಾಗಿದ್ದರು. ತಮ್ಮ ಖಾಸಗಿ ಕಾರಿಗೆ ಸರ್ಕಾರಿ ಲಾಂಛನ, ಕೆಂಪು ದೀಪ ಅಳವಡಿಸಿದ್ದು ವಿವಾದಕ್ಕೀಡಾಗಿತ್ತು.

ಅಂಗವಿಕಲ, ಒಬಿಸಿ ಕೋಟಾದಲ್ಲಿ ಹುದ್ದೆಗೆ ಆಯ್ಕೆ ಆಗಿದ್ದು ವಿವಾದಕ್ಕೀಡಾಗಿತ್ತು. ಈ ಕುರಿತ ಹೇಳಿಕೆಯಲ್ಲಿ ಯುಪಿಎಸ್‌ಸಿ, ಅಧಿಕಾರಿ ವಿರುದ್ಧ ತನಿಖೆ ನಡೆಯುತ್ತಿದೆ ಎಂದು ತಿಳಿಸಿದೆ. ತಂದೆ, ತಾಯಿ ಹೆಸರು, ಭಾವಚಿತ್ರ, ಇ–ಮೇಲ್ ವಿಳಾಸ ತಪ್ಪಾಗಿ ನೀಡಿದ್ದು ಗೊತ್ತಾಗಿತ್ತು.

ಈ ಹಿನ್ನೆಲೆಯಲ್ಲಿ ಅಧಿಕಾರಿ ವಿರುದ್ಧ ಸರಣಿ ಕ್ರಮಕ್ಕೆ ಯುಪಿಎಸ್‌ಸಿ ಮುಂದಾಗಿದೆ. ದಾಖಲೆ ತಿರುಚಿದ ಹಾಗೂ ವಂಚನೆಗೆ ಸಂಬಂಧಿಸಿದಂತೆ ಭಾರತೀಯ ನ್ಯಾಯಸಂಹಿತೆ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಎಫ್‌ಐಆರ್ ದಾಖಲಿಸಿದೆ ಎಂದು ತಿಳಿಸಿದೆ.

ಖೇಡ್ಕರ್ ಸಂಸ್ಥೆಗೆ ಬೀಗಮುದ್ರೆ

ಪುಣೆ (ಪಿಟಿಐ): ವಿವಾದಿತ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಅವರ ತಾಯಿಗೆ ಸೇರಿದ್ದ ಎಂಜಿನಿಯರಿಂಗ್ ಸಂಸ್ಥೆಗೆ ಪಿಂಪ್ರಿ–ಚಿಂಚವಾಡಾ ನಗರಸಭೆಯು ಬೀಗಮುದ್ರೆ ಹಾಕಿದೆ.

ಈ ಸಂಸ್ಥೆಯು ಮನೋರಮಾ ಖೇಡ್ಕರ್ ಅವರಿಗೆ ಸೇರಿದ್ದಾಗಿದ್ದು, ₹ 2 ಲಕ್ಷ ರೂಪಾಯಿ ಆಸ್ತಿ ತೆರಿಗೆ ಪಾವತಿಸಿರಲಿಲ್ಲ ಎಂದು ನಗರಸಭೆಯ ಅಧಿಕಾರಿಗಳು ತಿಳಿಸಿದ್ದಾರೆ. ಕ್ರಿಮಿನಲ್ ಪ್ರಕರಣವೊಂದರ ಸಂಬಂಧ ಮನೋರಮಾ ಸದ್ಯ ಪೊಲೀಸರ ವಶದಲ್ಲಿದ್ದಾರೆ.

‘ಇವರು, ತಲವಾಡೆಯಲ್ಲಿ ಥರ್ಮೊವೆರಿಟಾ ಇಂಡಿಯಾ ಪ್ರೈವೇಟ್ ಸಂಸ್ಥೆ ನಡೆಸುತ್ತಿದ್ದರು. ಸಂಸ್ಥೆಯು 2022–24ರವರೆಗೆ ಆಸ್ತಿ ತೆರಿಗೆ ಪಾವತಿಸಿರಲಿಲ್ಲ. ₹ 1.96 ಲಕ್ಷ ರೂಪಾಯಿ ಬಾಕಿ ಇತ್ತು. ಈ ವರ್ಷದ್ದೂ ಸೇರಿಸಿದರೆ ₹ 2.77 ಲಕ್ಷ ಬಾಕಿ ಆಗಲಿದೆ’ ಎಂದು ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು 738



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,800
ಇಂದಿನ ಅಂತ್ಯ	24,530
▼	269
ದಿನದ ಕನಿಷ್ಠ	24,508

ವಿನಿಮಯ ದರ

$	ಡಾಲರ್	83.70
£	ಪೌಂಡ್	108.65
€	ಯುರೊ	91.44
¥	ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹573

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1570 (1570)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹965 (965)
ಪಾಮೋಲಿನ್	₹908 (908)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹193-469
ದ್ವಿತಳಿ (ಬಿ.ವಿ)	₹300-633

ರಿಲಯನ್ಸ್ ಲಾಭ ಇಳಿಕೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಉದ್ಯಮಿ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಲಾಭದಲ್ಲಿ ಶೇ 5.5ರಷ್ಟು ಇಳಿಕೆಯಾಗಿದೆ. ಕಂಪನಿಯು ಒಟ್ಟು ₹15,138 ಕೋಟಿ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹16,011 ಕೋಟಿ ಲಾಭ ಗಳಿಸಿತ್ತು. 2023–24ನೇ ಮಾರ್ಚ್ ತ್ರೈಮಾಸಿಕದಲ್ಲಿ ₹18,951 ಕೋಟಿ ಲಾಭ ಗಳಿಸಿತ್ತು. ಈ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 20ರಷ್ಟು ಕಡಿಮೆಯಾಗಿದೆ ಎಂದು ಕಂಪನಿಯು ಶುಕ್ರವಾರ ಷೇರುಪೇಟೆಗೆ ತಿಳಿಸಿದೆ. ತೈಲ ಸಂಸ್ಕರಣಾ ಲಾಭದಲ್ಲಿ ಇಳಿಕೆಯಾಗಿದೆ. ವೆಚ್ಚ ಪ್ರಮಾಣದ ಹೆಚ್ಚಳದಿಂದಾಗಿ ಲಾಭವು ಕಡಿಮೆಯಾಗಿದೆ ಎಂದು ತಿಳಿಸಿದೆ. ಕಳೆದ ವರ್ಷ ₹2.10 ಲಕ್ಷ ಕೋಟಿ ವರಮಾನ ಗಳಿಸಿತ್ತು. ಈ ಬಾರಿ ₹2.36 ಲಕ್ಷ ಕೋಟಿ ಆಗಿದೆ.

ಜಿಯೊ ಲಾಭ ಏರಿಕೆ: ರಿಲಯನ್ಸ್ ಜಿಯೊ ಇನ್ಫೋಕಾಮ್ ಜೂನ್ ತ್ರೈಮಾಸಿಕದಲ್ಲಿ ₹5,445 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭದಲ್ಲಿ ಶೇ 12ರಷ್ಟು ಹೆಚ್ಚಳವಾಗಿದೆ. ವರಮಾನದಲ್ಲಿ ಶೇ 10ರಷ್ಟು ಹೆಚ್ಚಳವಾಗಿದ್ದು, ₹26,478 ಕೋಟಿ ಆಗಿದೆ ಎಂದು ಕಂಪನಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಬಿಪಿಸಿಎಲ್ ಲಾಭ ಶೇ 73 ಕುಸಿತ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಬಿಪಿಸಿಎಲ್) ನಿವ್ವಳ ಲಾಭದಲ್ಲಿ ಶೇ 73ರಷ್ಟು ಕುಸಿತವಾಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹10,644 ಕೋಟಿ ಲಾಭ ಗಳಿಸಲಾಗಿತ್ತು. ಈ ಬಾರಿ ₹2,841 ಕೋಟಿ ಗಳಿಸಲಾಗಿದೆ ಎಂದು ಕಂಪನಿಯು ಶುಕ್ರವಾರ ತಿಳಿಸಿದೆ.

ಚುನಾವಣಾ ಪೂರ್ವದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ₹2 ಕಡಿಮೆ ಮಾಡಲಾಯಿತು. ಇದರಿಂದ ಲಾಭದ ಪ್ರಮಾಣ ಇಳಿಕೆಯಾಗಿದೆ ಎಂದು ಹೇಳಿದೆ.

ಪೇಟಿಎಂ: ₹840 ಕೋಟಿ ನಷ್ಟ

ನವದೆಹಲಿ (ಪಿಟಿಐ): ಪೇಟಿಎಂನ ಮಾತೃಸಂಸ್ಥೆ ಒನ್ 97 ಕಮ್ಯುನಿಕೇಷನ್ 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹840 ಕೋಟಿ ನಷ್ಟ ದಾಖಲಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹358 ಕೋಟಿ ನಷ್ಟವಾಗಿತ್ತು. ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಲಿಮಿಟೆಡ್ (ಪಿಪಿಬಿಎಲ್) ಮೇಲೆ ಆರ್‌ಬಿಐ ನಿರ್ಬಂಧ ಹೇರಿದ್ದರಿಂದ ನಷ್ಟವಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ಶುಕ್ರವಾರ ತಿಳಿಸಿದೆ. ಈ ತ್ರೈಮಾಸಿಕದಲ್ಲಿ ಕಂಪನಿಯು ₹1,639 ಕೋಟಿ ವರಮಾನಗಳಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 33ರಷ್ಟು ಕುಸಿತವಾಗಿದೆ.

ಮಾಧ್ಯಮ, ಬ್ಯಾಂಕಿಂಗ್ ವಲಯದ ಸೇವೆಗೆ ತೊಂದರೆ • 365 ಆ್ಯಪ್‌ಗಳು ಸ್ಥಗಿತ

ಮೈಕ್ರೊಸಾಫ್ಟ್ ದಿಢೀರ್ ಸ್ತಬ್ಧ

ನವದೆಹಲಿ (ಪಿಟಿಐ): ಜಾಗತಿಕ ಟೆಕ್ ಕಂಪನಿ ಮೈಕ್ರೊಸಾಫ್ಟ್‌ನ ವಿಂಡೋಸ್‌ನಲ್ಲಿ ಶುಕ್ರವಾರ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದು ಭಾರತ, ಅಮೆರಿಕ ಸೇರಿ ವಿಶ್ವದಾದ್ಯಂತ ಹಲವು ದೇಶಗಳಲ್ಲಿ ಲಕ್ಷಾಂತರ ಬಳಕೆದಾರರು ತೊಂದರೆಗೆ ಸಿಲುಕಿದ್ದಾರೆ.

ಜಾಗತಿಕ ಮಟ್ಟದಲ್ಲಿ ಸರ್ಕಾರಿ ಕಚೇರಿಗಳು, ಮಾಧ್ಯಮ ಸಂಸ್ಥೆಗಳು, ಬ್ಯಾಂಕ್‌ಗಳು ಹಾಗೂ ವ್ಯಾಪಾರ ವಹಿವಾಟಿನಲ್ಲಿ ವ್ಯತ್ಯಯವಾಗಿದೆ. ಅದರಲ್ಲೂ ವಿಮಾನಯಾನ ಮತ್ತು ಮಾಹಿತಿ ತಂತ್ರಜ್ಞಾನ ವಲಯದ ಸೇವೆಯು ಅಸ್ತವ್ಯಸ್ತಗೊಂಡಿದೆ. ಮೈಕ್ರೊಸಾಫ್ಟ್‌ನ 365 ಆ್ಯಪ್‌ಗಳು ಮತ್ತು ಸೇವೆಗಳು ಸ್ಥಗಿತಗೊಂಡಿವೆ.

ಬಳಕೆದಾರರು ಕಂಪ್ಯೂಟರ್ ಹಾಗೂ ಲ್ಯಾಪ್‌ಟಾಪ್ ತೆರೆದಾಗ ನೀಲಿ ಬಣ್ಣದ ಹಿಂಪರದೆಯಲ್ಲಿ ಎರರ್ ಸಂದೇಶ ಕಾಣಿಸಿಕೊಂಡಿದೆ. ವಿಂಡೋಸ್‌ನ ಈ ದೋಷದ ಬಗ್ಗೆ ‘ಬ್ಲೂ ಸ್ಕ್ರೀನ್ ಆಫ್ ಡೆತ್’ (ಬಿಎಸ್‌ಒಡಿ) ಎಂದು ಕರೆಯಲಾಗುತ್ತದೆ. ಇದರಿಂದ ಕಂಪ್ಯೂಟರ್‌ಗಳು ಏಕಾಏಕಿ ಸ್ಥಗಿತ ಅಥವಾ ರಿಸ್ಟಾರ್ಟ್ ಆಗುತ್ತವೆ. ಮೈಕ್ರೊಸಾಫ್ಟ್‌ನ ಕ್ಲೌಡ್ ಸೇವೆಯಲ್ಲಿನ ಸಮಸ್ಯೆಯಿಂದಾಗಿ ಈ ತೊಂದರೆ ಎದುರಾಗಿದೆ ಎಂದು ಹೇಳಲಾಗಿದೆ.

ಭಾರತದ ಬ್ಯಾಂಕಿಂಗ್ ವ್ಯವಸ್ಥೆಗೆ ಸಮಸ್ಯೆಯಿಲ್ಲ: ಜಾಗತಿಕ ಮಟ್ಟದಲ್ಲಿ ಬ್ಯಾಂಕ್‌ಗಳು ಮತ್ತು ಪೇಮೆಂಟ್ ವ್ಯವಸ್ಥೆ ಮೇಲೆ ಪರಿಣಾಮ ಬೀರಿದೆ. ಆದರೆ, ಭಾರತದಲ್ಲಿ ಯಾವುದೇ ಸಮಸ್ಯೆಯಾಗಿಲ್ಲ.

‘ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸೇವೆಗೆ ಯಾವುದೇ ತೊಂದರೆಯಾಗಿಲ್ಲ. ಸುಸೂತ್ರವಾಗಿ ಕಾರ್ಯ ನಿರ್ವಹಿಸಲಾಗಿದೆ’ ಎಂದು ಎಸ್‌ಬಿಐ ಅಧ್ಯಕ್ಷ ದಿನೇಶ್ ಖಾರಾ ಹೇಳಿದ್ದಾರೆ.

‘ದೇಶದಲ್ಲಿ ಜನಪ್ರಿಯವಾಗಿರುವ ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಮೇಲೂ ಪರಿಣಾಮ ಬೀರಿಲ್ಲ’ ಎಂದು ರಾಷ್ಟ್ರೀಯ ಪಾವತಿ ನಿಗಮದ (ಎನ್‌ಪಿಸಿಐ) ಸಿಇಒ ದಿಲೀಪ್ ಅಸ್ಬೆ ತಿಳಿಸಿದ್ದಾರೆ.

ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಮತ್ತು ಎಕ್ಸಿಸ್ ಬ್ಯಾಂಕ್‌ಗಳು ಯಾವುದೇ ಸಮಸ್ಯೆಯಾಗಿಲ್ಲ ಎಂದು ಸ್ಪಷ್ಟಪಡಿಸಿವೆ.

‘ದೇಶದ 10 ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳ ವಹಿವಾಟಿನಲ್ಲಿ ಸಣ್ಣ ಪ್ರಮಾಣದ ತೊಂದರೆಯಾಗಿದೆ’ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ರಾಷ್ಟ್ರೀಯ ಷೇರು ವಿನಿಮಯ ಮತ್ತು ಮುಂಬೈ ಷೇರು ವಿನಿಮಯ ಕೇಂದ್ರಗಳು ಎಂದಿನಂತೆ ಕಾರ್ಯ ನಿರ್ವಹಿಸಿವೆ.

ಕೈಬರಹದ ಬೋರ್ಡಿಂಗ್ ಪಾಸ್ ಪಡೆಯಲು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಪ್ರಯಾಣಿಕರು ಸಾಲುಗಟ್ಟಿ ನಿಂತಿದ್ದರು —ಪಿಟಿಐ ಚಿತ್ರ

200 ಇಂಡಿಗೊ ವಿಮಾನ ರದ್ದು ಪ್ರಯಾಣಿಕರ ಪರದಾಟ

ಮುಂಬೈ (ಪಿಟಿಐ): ದೆಹಲಿ, ಮುಂಬೈ, ಬೆಂಗಳೂರು ಮತ್ತು ಚೆನ್ನೈ ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರು ಪರದಾಡಿದರು.

‘ಇಂಡಿಗೊ ಕಂಪನಿಯು 200 ವಿಮಾನಗಳ ಹಾರಾಟವನ್ನು ರದ್ದುಪಡಿಸಿದೆ’ ಎಂದು ಮೂಲಗಳು ತಿಳಿಸಿವೆ.

ಬೆಳಿಗ್ಗೆ 10.40ಗಂಟೆಯಿಂದ ಇಂಡಿಗೊ, ಸ್ಪೈಸ್‌ಜೆಟ್, ಆಕಾಸಾ, ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಯಾನ ಕಂಪನಿಗಳ ಸೇವೆಯಲ್ಲಿ ಸಮಸ್ಯೆ ಕಾಣಿಸಿಕೊಂಡಿತು. ತಮಗಾಗಿರುವ ತೊಂದರೆ ಬಗ್ಗೆ ಹಲವು ಪ್ರಯಾಣಿಕರು ಸಾಮಾಜಿಕ ಜಾಲತಾಣಗಳಲ್ಲಿ ಅಳಲು ತೋಡಿಕೊಂಡರು.

ಟಿಕೆಟ್ ಬುಕಿಂಗ್, ಚೆಕ್–ಇನ್ ಮತ್ತು ಬೋರ್ಡಿಂಗ್ ಪಾಸ್ ಪಡೆಯಲು ನಿಲ್ದಾಣಗಳಲ್ಲಿ ಪ್ರಯಾಣಿಕರು ಸಾಲುಗಟ್ಟಿ ನಿಂತಿದ್ದ ದೃಶ್ಯ ಕಂಡುಬಂದಿತು. ವಿಮಾನಯಾನ ಕಂಪನಿಗಳ ಸಿಬ್ಬಂದಿ ಕೈಬರಹದ ಮೂಲಕ ಬೋರ್ಡಿಂಗ್ ಪಾಸ್ ವಿತರಿಸಿದರು.

‘ಭಾರತದಲ್ಲಿ ಶುಕ್ರವಾರ ವಿವಿಧ ಮಾರ್ಗಗಳಲ್ಲಿ 3,652 ವಿಮಾನಗಳ ಹಾರಾಟ ನಿಗದಿಯಾಗಿತ್ತು. ಈ ಪೈಕಿ ಹಲವು ವಿಮಾನಗಳ ಸಂಚಾರ ರದ್ದಾಗಿದೆ. ಕೆಲವು ವಿಮಾನಗಳ ಹಾರಾಟದಲ್ಲಿ ವಿಳಂಬವಾಗಿದೆ’ ಎಂದು ವಿಮಾನಯಾನ ವಿಶ್ಲೇಷಣಾ ಕಂಪನಿ ಸಿರಿಯಮ್ ತಿಳಿಸಿದೆ.

‘ಪ್ರಯಾಣಿಕರಿಗೆ ಆಗಿರುವ ತೊಂದರೆ ತಪ್ಪಿಸಲು ಸಚಿವಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವು (ಎಎಐ) ಕ್ರಮಕೈಗೊಂಡಿದೆ’ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ತಿಳಿಸಿದ್ದಾರೆ.

ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು ಈ ಸಮಸ್ಯೆ ಮೇಲೆ ನಿಗಾ ಇಟ್ಟಿದೆ.

ಸಮಸ್ಯೆಗೆ ಕಾರಣ ಏನು?

ಕುತಂತ್ರಾಂಶ ಸೇರಿ ಇತರೆ ಸೈಬರ್ ದಾಳಿ ತಡೆಯಲು ಕ್ರೌಡ್‌ಸ್ಟ್ರೈಕ್ ಕಂಪನಿಯು ಫಾಲ್ಕನ್ ಸೆನ್ಸಾರ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ. ವಿಂಡೋಸ್‌ನಲ್ಲಿ ಇದರ ಅಪ್‌ಡೇಟ್ ಮಾಡುವಾಗ ದೋಷ ಕಾಣಿಸಿಕೊಂಡಿದೆ. ಈ ಎರಡರ ನಡುವೆ ಹೊಂದಾಣಿಕೆಯಾಗಿಲ್ಲ. ಹಾಗಾಗಿ, ಮೈಕ್ರೊಸಾಫ್ಟ್ ಸೇವೆ ಸ್ಥಗಿತಗೊಂಡಿದೆ ಎಂದು ಹೇಳಲಾಗಿದೆ.

‘ಜಾಗತಿಕ ಮಟ್ಟದಲ್ಲಿ ಆಗಿರುವ ತೊಂದರೆ ಬಗ್ಗೆ ನಮಗೆ ಅರಿವಿದೆ. ಥರ್ಡ್‌ಪಾರ್ಟಿ ತಂತ್ರಾಂಶದ ಅಪ್‌ಡೇಟ್‌ನಿಂದಾಗಿ ವಿಂಡೋಸ್‌ನಲ್ಲಿ ದೋಷ ಕಾಣಿಸಿಕೊಂಡಿದೆ. ಸಮರೋಪಾದಿಯಲ್ಲಿ ಈ ತಾಂತ್ರಿಕ ಸಮಸ್ಯೆಯನ್ನು ಬಗೆಹರಿಸುವ ಕೆಲಸ ನಡೆಯುತ್ತಿದೆ’ ಎಂದು ಮೈಕ್ರೊಸಾಫ್ಟ್ ವಕ್ತಾರರು ಸ್ಪಷ್ಟಪಡಿಸಿದ್ದಾರೆ.

ಕಂಪನಿ ಜತೆ ಸಂಪರ್ಕ

‘ಮೈಕ್ರೊಸಾಫ್ಟ್ ಕಂಪನಿ ಜೊತೆಗೆ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯವು ನಿರಂತರವಾಗಿ ಸಂಪರ್ಕದಲ್ಲಿದೆ’ ಎಂದು ಕೇಂದ್ರ ಐ.ಟಿ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

‘ರಾಷ್ಟ್ರೀಯ ಮಾಹಿತಿ ಕೇಂದ್ರದ (ಎನ್‌ಐಸಿ) ನೆಟ್‌ವರ್ಕ್ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ಮೈಕ್ರೊಸಾಫ್ಟ್ ಕಂಪನಿಯು ಸಮಸ್ಯೆಯನ್ನು ಪತ್ತೆ ಹಚ್ಚಿದ್ದು, ಬಗೆಹರಿಸಲು ಮುಂದಾಗಿದೆ’ ಎಂದು ಅವರು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 738, ನಿಫ್ಟಿ 269 ಅಂಶ ಇಳಿಕೆ

ಮುಂಬೈ (ಪಿಟಿಐ): ಸತತ ನಾಲ್ಕು ದಿನಗಳ ವಹಿವಾಟಿನಲ್ಲಿ ಏರಿಕೆ ಕಂಡಿದ್ದ ದೇಶದ ಷೇರುಪೇಟೆಗಳು ಶುಕ್ರವಾರ ಇಳಿಕೆ ಕಂಡಿವೆ. ಷೇರುದಾರರು ಲಾಭ ಮಾಡಿಕೊಳ್ಳಲು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ, ಕರಡಿ ಕುಣಿತ ಜೋರಾಯಿತು.

ಹೂಡಿಕೆದಾರರ ಸಂಪತ್ತು ಒಂದೇ ದಿನ ₹7.94 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಆರಂಭಿಕ ವಹಿವಾಟಿನಲ್ಲಿ 81,587 ಅಂಶಗಳಿಗೆ ತಲುಪಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಮುಟ್ಟಿತ್ತು. ವಹಿವಾಟಿನ ಅಂತ್ಯದವರೆಗೂ ಈ ಏರಿಕೆ ಕಾಪಾಡಿಕೊಳ್ಳುವಲ್ಲಿ ವಿಫಲವಾಯಿತು. ಅಂತಿಮವಾಗಿ 738 ಅಂಶ ಇಳಿಕೆ ಕಂಡು (ಶೇ 0.91ರಷ್ಟು) 80,604 ಅಂಶಗಳಲ್ಲಿ ಸ್ಥಿರಗೊಂಡಿತು.



ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 269 ಅಂಶ ಇಳಿಕೆ ಕಂಡು (ಶೇ 1.09ರಷ್ಟು) 24,530 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟಾಟಾ ಸ್ಟೀಲ್ ಷೇರಿನ ಮೌಲ್ಯದಲ್ಲಿ ಶೇ 5ರಷ್ಟು ಹಾಗೂ ಜೆಎಸ್‌ಡಬ್ಲ್ಯು ಷೇರಿನ ಮೌಲ್ಯದಲ್ಲಿ ಶೇ 5ರಷ್ಟು ಇಳಿಕೆಯಾಗಿದೆ. ರಿಲಯನ್ಸ್ ಇಂಡಸ್ಟ್ರೀಸ್, ಟಾಟಾ ಮೋಟರ್ಸ್, ಎನ್‌ಟಿಪಿಸಿ, ಅಲ್ಟ್ರಾ ಟೆಕ್ ಸಿಮೆಂಟ್, ಟೆಕ್ ಮಹೀಂದ್ರ, ಬಜಾಜ್ ಫಿನ್‌ಸರ್ವ್, ಪವರ್ ಗ್ರಿಡ್, ಮಹೀಂದ್ರ ಆ್ಯಂಡ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಇನ್ಫೊಸಿಸ್ ಷೇರಿನ ಮೌಲ್ಯದಲ್ಲಿ ಶೇ 2ರಷ್ಟು ಏರಿಕೆಯಾಗಿದೆ. ಐಟಿಸಿ, ಏಷ್ಯನ್ ಪೇಂಟ್ಸ್ ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ವಿಪ್ರೊಗೆ ₹3,000 ಕೋಟಿ ಲಾಭ

ಬೆಂಗಳೂರು (ಪಿಟಿಐ): ದೇಶದ ಪ್ರಮುಖ ಐ.ಟಿ ಕಂಪನಿ ವಿಪ್ರೊ, 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹3,003 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಗಳಿಸಿದ್ದ ಲಾಭಕ್ಕಿಂತ ಶೇ 4.6ರಷ್ಟು ಏರಿಕೆಯಾಗಿದೆ ಎಂದು ಕಂಪನಿಯು ಶುಕ್ರವಾರ ಷೇರುಪೇಟೆಗೆ ತಿಳಿಸಿದೆ.

ಈ ತ್ರೈಮಾಸಿಕದ ವರಮಾನದಲ್ಲಿ ಶೇ 3.8ರಷ್ಟು ಇಳಿಕೆಯಾಗಿದ್ದು, ₹21,963 ಕೋಟಿ ಆಗಿದೆ ಎಂದು ತಿಳಿಸಿದೆ.

₹8,369 ಕೋಟಿಗಿಂತಲೂ ಹೆಚ್ಚು ಮೌಲ್ಯದ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಇತ್ತೀಚಿನ ವರ್ಷಗಳ ಒಪ್ಪಂದದ ಪೈಕಿ ಇದು ದೊಡ್ಡ ಮೊತ್ತವಾಗಿದೆ’ ಎಂದು ಕಂಪನಿಯ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಶ್ರೀನಿ ಪಲ್ಲಿಯಾ ತಿಳಿಸಿದ್ದಾರೆ.

‘ಪ್ರಸಕ್ತ ಹಣಕಾಸು ವರ್ಷದಲ್ಲಿ ಕಂಪನಿಯು ಹೊಸದಾಗಿ 10 ಸಾವಿರದಿಂದ 12 ಸಾವಿರ ವೃತ್ತಿಪರರನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಿದೆ’ ಎಂದು ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಸೌರಭ್ ಗೋವಿಲ್ ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-38500
ಹಳತು	38500-46500
ಚಿತ್ರದುರ್ಗ	
ಅಪಿ	48100-48500
ಬೆಟ್ಟೆ	35100-35500
ಕೆಂಪುಗೋಟು	28600-29000
ರಾಶಿ	47600-48000
ಕಾರ್ಕಳ	
ಹೊಸತು	25000-38500
ಹಳತು	30000-46500
ಕುಮಟ	
ಚಿಪ್ಪು	25689-28569
ಕೋಕ	11869-24089
ಫ್ಯಾಕ್ಟರಿ	9099-19390
ಹಳೆಚಾಲಿ	36599-39500
ಹೊಸಚಾಲಿ	32089-35499
ಪುತ್ತೂರು	
ಹೊಸತು	26500-38000
ಶಿವಮೊಗ್ಗ	
ಬೆಟ್ಟೆ	45199-54300
ಗೊರಬಲು	15000-38000
ರಾಶಿ	26500-50199
ಸರಕು	56699-84610
ಸಿದ್ದಾಪುರ	
ಬಿಳಿಗೋಟು	25899-29489
ಚಾಲಿ	32729-35099
ಕೋಕ	24589-30699
ಕೆಂಪುಗೋಟು	25689-26789
ರಾಶಿ	43899-47299
ತಟ್ಟಿಬೆಟ್ಟೆ	30099-30689
ಶಿರಸಿ	
ಬೆಟ್ಟೆ	31499-43739
ಬಿಳಿಗೋಟು	21405-29822
ಚಾಲಿ	33399-36211
ಕೆಂಪುಗೋಟು	21300-27000
ರಾಶಿ	45199-47439
ಯಲ್ಲಾಪುರ	
ಬಿಳಿಗೋಟು	22012-30699
ಚಾಲಿ	31299-36199
ಕೋಕ	8699-23899
ಕೆಂಪುಗೋಟು	24899-31757
ರಾಶಿ	43899-52619
ತಟ್ಟಿಬೆಟ್ಟೆ	33899-43319

ಮುಂಬೈ ಧಾರಣೆ (ಶೇಂಗಾ)

19-07-2024

ಜಾವಾ 70/80(ಹೊಸ)	11700-11800
ಜಾವಾ 80/90(ಹೊಸ)	11100-11200
ದಪ್ಪ ಮಧ್ಯಪ್ರದೇಶ(ಹೊಸ)	9500-9600
ದಪ್ಪ ಗುಜರಾತ್(ಹೊಸ)	10300-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಸೋಯಾ ಕಚ್ಚಾ	915 (915)
ಪಾಮ್ ವಾರದ ಡೆಲಿವರಿ	908 (906)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (915)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹72,850 (73,650)

ಬೆಳ್ಳಿ ಕೆ.ಜಿ ₹88,900 (91,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹206

ಆರ್‌ಎಸ್‌ಎಸ್-5 ₹201

ಗುಡ್ ಲಾಟ್ ₹188

(ಪ್ರತಿ ಕೆ.ಜಿಗೆ)

ಟ್ರಂಪ್ ಒಗ್ಗಟ್ಟಿನ ಜಪ

ಮಿಲ್ವಾಕೀ (ಅಮೆರಿಕ) (ಪಿಟಿಐ): ‘ಸಂಕಷ್ಟದ ಈ ಹೊತ್ತಿನಲ್ಲಿ ಎಲ್ಲ ಅಮೆರಿಕನ್ನರು ಒಗ್ಗಟ್ಟನ್ನು ಕಾಯ್ದುಕೊಳ್ಳಬೇಕು’ ಎಂದು ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

‘ನವೆಂಬರ್ 5ರಂದು ನಡೆಯುವ ಅಧ್ಯಕ್ಷೀಯ ಚುನಾವಣೆಯಲ್ಲಿ ನನ್ನನ್ನು ಆಯ್ಕೆ ಮಾಡಬೇಕು’ ಎಂದು ಮನವಿ ಮಾಡಿದರು.

ಇಲ್ಲಿ ನಡೆಯುತ್ತಿರುವ ರಿಪಬ್ಲಿಕನ್ ಪಕ್ಷದ ರಾಷ್ಟ್ರೀಯ ಸಮಾವೇಶದಲ್ಲಿ ಅವರು ಪಕ್ಷದ ಕಾರ್ಯಕರ್ತರು ಹಾಗೂ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದರು. ತಮ್ಮ ಹತ್ಯೆ ಯತ್ನದ ನಂತರ ಟ್ರಂಪ್ ಅವರು ಮೊದಲ ಬಾರಿಗೆ ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದಾರೆ.

“ನವೆಂಬರ್‌ನಲ್ಲಿ ನಡೆಯುವ ಚುನಾವಣೆಯಲ್ಲಿ ಗೆದ್ದು ಬಂದರೆ ಉತ್ತಮ ಆಡಳಿತ ನೀಡುವೆ’ ಎಂದು ವಾಗ್ದಾನ ಮಾಡಿದರು.

ಅಮೆರಿಕ ಅಧ್ಯಕ್ಷ ಸ್ಥಾನ: ಕಮಲಾ ಹ್ಯಾರಿಸ್ ಪರ ಡೆಮಾಕ್ರಟಿಕ್ ನಾಯಕರ ಒಲವು

ವಾಷಿಂಗ್ಟನ್(ಎಪಿ): ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸದಂತೆ ಹಾಲಿ ಅಧ್ಯಕ್ಷ ಜೋ ಬೈಡನ್ ಅವರ ಮೇಲೆ ಡೆಮಾಕ್ರಟಿಕ್ ಪಕ್ಷದ ನಾಯಕರೇ ಒತ್ತಡ ಹೆಚ್ಚುತ್ತಿದ್ದಾರೆ. ಇನ್ನೊಂದೆಡೆ, ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗಲಿ ಎಂದು ಪಕ್ಷದ ಬಹುತೇಕ ನಾಯಕರೇ ಹೇಳುತ್ತಿದ್ದಾರೆ.

ಎಪಿ–ಎನ್‌ಒಆರ್‌ಸಿ ಸೆಂಟರ್ ಫಾರ್ ಪಬ್ಲಿಕ್ ಅಫೇರ್ಸ್ ರಿಸರ್ಚ್ ಎಂಬ ಸಂಸ್ಥೆ ನಡೆಸಿರುವ ಸಮೀಕ್ಷೆ ವೇಳೆ, ಪಕ್ಷದ ನಾಯಕರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ಕಮಲಾ ಹ್ಯಾರಿಸ್ ಅವರು ಅಧ್ಯಕ್ಷರಾದರೆ ಆ ಸ್ಥಾನಕ್ಕೆ ನ್ಯಾಯ ಒದಗಿಸುತ್ತಾರೆ ಎಂದು ಹತ್ತು ಡೆಮಾಕ್ರಟಿಕ್ ನಾಯಕರಲ್ಲಿ ಆರು ಜನ ಹೇಳಿದ್ದರೆ, ಹತ್ತು ನಾಯಕರಲ್ಲಿ ಇಬ್ಬರು ಮಾತ್ರ ಈ ಮಾತಿಗೆ ಸಹಮತ ವ್ಯಕ್ತಪಡಿಸಿಲ್ಲ. ಇನ್ನೊಂದೆಡೆ, ಹತ್ತರಲ್ಲಿ ಇಬ್ಬರು ಮಾತ್ರ ಈ ವಿಷಯವಾಗಿ ಹೇಳುವುದಕ್ಕೆ ತಮ್ಮ ಬಳಿ ಹೆಚ್ಚಿನ ಮಾಹಿತಿ ಇಲ್ಲ ಎಂಬುದಾಗಿ ಪ್ರತಿಕ್ರಿಯಿಸಿದ್ದಾರೆ’ ಎಂದು ಸಮೀಕ್ಷೆ ಹೇಳಿದೆ.

ಕಮಲಾ ಹ್ಯಾರಿಸ್

‘ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ವಿರುದ್ಧ ಸ್ಪರ್ಧಿಸಲು ಕಮಲಾ ಹ್ಯಾರಿಸ್ ಸಮರ್ಥ ನಾಯಕಿಯಾಗುವರು’ ಎಂದೂ ಪಕ್ಷದ ಕಾರ್ಯಕರ್ತರು, ಬೆಂಬಲಿಗರು ಹೇಳಿದ್ದಾರೆ.

ಒಬಾಮಾ ಎಚ್ಚರಿಕೆ ನಡೆ: ಚುನಾವಣೆಯಲ್ಲಿ ಸ್ಪರ್ಧಿಸದಂತೆ ಅಧ್ಯಕ್ಷ ಜೋ ಬೈಡನ್ ಅವರ ಮೇಲೆ ಒತ್ತಡ ಹೆಚ್ಚುತ್ತಿರುವ ನಡುವೆಯೇ, ಡೆಮಾಕ್ರಟಿಕ್ ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರು ಎಚ್ಚರಿಕೆಯ ಹೆಜ್ಜೆಯನ್ನಿಡುತ್ತಿದ್ದಾರೆ.

ಪಕ್ಷದ ನಾಯಕರು, ಸಂಸದರ ಅಭಿಪ್ರಾಯಗಳನ್ನು ಆಲಿಸಿರುವ ಒಬಾಮಾ, ‘ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಬೈಡನ್ ಮಾತ್ರ ನಿರ್ಧಾರ ಕೈಗೊಳ್ಳಬೇಕು’ ಎಂದು ಪ್ರತಿಕ್ರಿಯಿಸಿದ್ದಾರೆ.

ಮೀಸಲಾತಿ ವಿರೋಧಿಸಿ ಪ್ರತಿಭಟನೆ; ದೇಶದಾದ್ಯಂತ ಕರ್ಫ್ಯೂ ಜಾರಿ

ಬಾಂಗ್ಲಾ: ಸಾವಿನ ಸಂಖ್ಯೆ 105ಕ್ಕೆ ಏರಿಕೆ

ಢಾಕಾ (ಎಪಿ/ಎಎಫ್‌ಪಿ): ಸರ್ಕಾರಿ ನೇಮಕಾತಿಗಳಲ್ಲಿ ಮೀಸಲಾತಿ ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆ ಶುಕ್ರವಾರವೂ ಮುಂದುವರಿದಿದ್ದು, ಕೆಲವೆಡೆ ಇಂಟರ್‌ನೆಟ್ ಹಾಗೂ ಮೊಬೈಲ್ ಸೇವೆ ಕಡಿತಗೊಳಿಸಲಾಗಿದೆ. ಪ್ರತಿಭಟನಕಾರರ ಮೇಲೆ ಪೊಲೀಸರು, ಭದ್ರತಾ ಪಡೆಗಳು ಗುಂಡಿನ ದಾಳಿ, ಅಶ್ರುವಾಯು ಪ್ರಯೋಗಿಸಿದ್ದಾರೆ. ಕಳೆದೊಂದು ವಾರದಲ್ಲಿ ಸಂಘರ್ಷದಲ್ಲಿ ಮೃತಪಟ್ಟವರ ಸಂಖ್ಯೆ 105ಕ್ಕೆ ಏರಿಕೆಯಾಗಿದೆ.

ವಾರದ ಹಿಂದೆ ಆರಂಭಗೊಂಡಿರುವ ಪ್ರತಿಭಟನೆ ತೀವ್ರಸ್ವರೂಪ ಪಡೆದುಕೊಂಡಿದೆ. ಗುರುವಾರದವರೆಗೆ ದೇಶದ ವಿವಿಧೆಡೆ 75 ಮಂದಿ ಮೃತಪಟ್ಟಿದ್ದರು. ಶುಕ್ರವಾರ ಢಾಕಾದ ಮೂರು ಆಸ್ಪತ್ರೆಗಳಲ್ಲಿ 24 ಮಂದಿ ಹಾಗೂ ರಂಗ್‌ಪುರದಲ್ಲಿ ಆರು ಮಂದಿ ಮೃತಪಟ್ಟಿರುವುದಾಗಿ ವರದಿಯಾಗಿದೆ.

ಪರಿಸ್ಥಿತಿ ನಿಯಂತ್ರಿಸುವ ಸಲುವಾಗಿ ದೇಶದಾದ್ಯಂತ ಕರ್ಫ್ಯೂ ಜಾರಿ ಮಾಡಲಾಗಿದ್ದು, ವಿವಿಧೆಡೆ ಸೇನೆಯನ್ನು ನಿಯೋಜಿಸಲಾಗಿದೆ.

ಇಂಟರ್‌ನೆಟ್ ವೇಗ ನಿಧಾನ: ಶುಕ್ರವಾರ ಬೆಳಿಗ್ಗೆ ರಾಜಧಾನಿ ಢಾಕಾದಲ್ಲಿ ಇಂಟರ್‌ನೆಟ್ ಸೇವೆ ಆರಂಭಗೊಂಡರೂ, ನಿಧಾನಗತಿಯಿಂದ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆ್ಯಪ್ ಪುಟಗಳು ತೆರೆಯುತ್ತಿರಲಿಲ್ಲ.

‘ಗುರುವಾರ ಪ್ರತಿಭಟನಕಾರರು ಡೇಟಾ ಕೇಂದ್ರಗಳ ಮೇಲೆ ದಾಳಿ ನಡೆಸಿದ್ದಾರೆ. ಇದರಿಂದ ಕೆಲವು ಉಪಕರಣಗಳು ಬೆಂಕಿಗೆ ಆಹುತಿಯಾಗಿವೆ. ಹೀಗಾಗಿ, ಹಿಂದಿನಂತೆ ಮತ್ತೆ ಇಂಟರ್‌ನೆಟ್ ಸೇವೆ ಒದಗಿಸಲು ಸಾಧ್ಯವಾಗುತ್ತಿಲ್ಲ’ ಎಂದು ಬಾಂಗ್ಲಾದೇಶ ದೂರಸಂಪರ್ಕ ನಿಯಂತ್ರಣ ಆಯೋಗವು ಶುಕ್ರವಾರ ಹೇಳಿಕೆ ನೀಡಿದೆ.

ಢಾಕಾದಲ್ಲಿ ಪ್ರತಿಭಟನಕಾರರು ಪೊಲೀಸರ ಮೇಲೆ ಕಲ್ಲು ತೂರಿದರು —ಎಎಫ್‌ಪಿ ಚಿತ್ರ

8 ಸಾವಿರ ವಿದ್ಯಾರ್ಥಿಗಳು ಸೇರಿ 15 ಸಾವಿರ ಭಾರತೀಯರು ಬಾಂಗ್ಲಾದೇಶದಲ್ಲಿ ನೆಲೆಸಿದ್ದು, ಎಲ್ಲರೂ ಸುರಕ್ಷಿತವಾಗಿದ್ದಾರೆ. 245 ಮಂದಿ ಭಾರತಕ್ಕೆ ವಾಪಸಾಗಿದ್ದಾರೆ

ರಣ್‌ಧೀರ್ ಜೈಸ್ವಾಲ್, ವಿದೇಶಾಂಗ ಸಚಿವಾಲಯದ ವಕ್ತಾರ

ವಿದ್ಯಾರ್ಥಿಗಳಿಗೆ ಸುಪ್ರೀಂಕೋರ್ಟ್‌ನಲ್ಲಿ ನ್ಯಾಯ ಸಿಗುವ ನಂಬಿಕೆಯಿದೆ. ಅವರ ನಂಬಿಕೆ ಹುಸಿಯಾಗುವುದಿಲ್ಲ. ತಾಳ್ಮೆಯಿಂದ ಕಾದುನೋಡಿ

ಶೇಕ್ ಹಸೀನಾ, ಬಾಂಗ್ಲಾದೇಶ ಪ್ರಧಾನಿ

ವಿರೋಧ ಏಕೆ?: 1971ರಲ್ಲಿ ಪಾಕಿಸ್ತಾನ ವಿರುದ್ಧ ನಡೆದ ಯುದ್ಧದಲ್ಲಿ ಹೋರಾಡಿದ ಯೋಧರ ಮಕ್ಕಳು ಸೇರಿದಂತೆ ನಿರ್ದಿಷ್ಟ ಗುಂಪುಗಳಿಗೆ ಸರ್ಕಾರಿ ಉದ್ಯೋಗದ ನೇಮಕಾತಿ ವೇಳೆ ಶೇ 50ರಷ್ಟು ಮೀಸಲಾತಿ ನಿಗದಿಗೊಳಿಸಿ ಬಾಂಗ್ಲಾದೇಶ ಸರ್ಕಾರ ಆದೇಶ ಹೊರಡಿಸಿತ್ತು. ಈ ನಿರ್ಧಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ವಿದ್ಯಾರ್ಥಿ ಸಂಘಟನೆಗಳು, ‘ಅರ್ಹತೆ’ಗೆ ಅನುಗುಣವಾಗಿ ನೇಮಕಾತಿ ವ್ಯವಸ್ಥೆ ಜಾರಿಗೆ ತರಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿವೆ.

‘ಸ್ವಾತಂತ್ರ್ಯ ಚಳವಳಿಯ ನೇತೃತ್ವ ವಹಿಸಿದ್ದ ಪ್ರಧಾನಿ ಶೇಕ್ ಹಸೀನಾ ನೇತೃತ್ವದ ಅವಾಮಿ ಲೀಗ್ ಪಕ್ಷದ ಬೆಂಬಲಿಗರೇ ಮೀಸಲಾತಿಯಿಂದ ಹೆಚ್ಚಿನ ಲಾಭ ಪಡೆಯಲಿದ್ದು, ಈ ನಿರ್ಧಾರ ತಾರತಮ್ಯದಿಂದ ಕೂಡಿದೆ’ ಎಂದು ಪ್ರತಿಭ-

ಜೈಲಿನಿಂದ ನೂರಾರು ಮಂದಿಗೆ ‘ಬಂಧಮುಕ್ತಿ’

ಪ್ರತಿಭಟನಕಾರರು ಬಾಂಗ್ಲಾದೇಶ ಮಧ್ಯಭಾಗದ ನರಸಿಂಗಾಡಿ ಜಿಲ್ಲೆಯ ಜೈಲಿಗೆ ಶುಕ್ರವಾರ ನುಗ್ಗಿ ಅಲ್ಲಿದ್ದ ಕೈದಿಗಳನ್ನು ಬಿಡುಗಡೆಗೊಳಿಸಿ, ನಂತರ ಜೈಲಿಗೆ ಬೆಂಕಿ ಹಚ್ಚಿದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಜೈಲಿನಲ್ಲಿದ್ದವರನ್ನು ಬಿಡುಗಡೆ ಮಾಡಿ, ಬೆಂಕಿ ಹಚ್ಚಿದ್ದಾರೆ. ಬಿಡುಗಡೆಯಾದವರು ಎಷ್ಟು ಎಂದು ತಿಳಿದಿಲ್ಲ, ನೂರಕ್ಕಿಂತಲೂ ಅಧಿಕ ಸಂಖ್ಯೆ ಇರಬಹುದು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Call Centre

IKONTEL HIRING Support Executive Voice process. Good communication, computer skills. Salary+Incentive Call: 7411800015/ 7008230175/ 9845914011 Bangalore.

Drivers

WANTED FEMALE Driver for reputed cab company. Salary 32k per month. Must have 1 year old driving license. Contact 9916242982 / 9902474455

General

ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿಇದೆ. ತಿಂಗಳಿಗೆ ವೇತನ 18000 ರಿಂದ 20000/- ವರಗೆ. ವಿಳಾಸ: ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಬೆಂಗಳೂರು. 9019626612

Multiple Vacancy

REQUIRED EXPERIENCED Telecaller & Field executive For Bank Loan collection Salary + Incentive. 9916276701, 7899040499

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವ್ಮೊಗ 8095555517

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9663563555

ಭವಿಷ್ಯ

Astrology

★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರವಾಸ

Travel

13 ದಿನಗಳ ಚಾರ್‌ಧಾಮ್. 8 ದಿನಗಳ ನೇಪಾಳ,ಮುಕ್ತಿನಾಥ. 13/7 ದಿನಗಳು ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಇಂಡೋನೇಷ್ಯಾ ಬಾಲಿ. 6 ದಿನಗಳ ದುಬೈ. 18 ದಿನಗಳ ಯುಕೆ,ಯುರೋಪ್ (10ದೇಶಗಳು). 6 ದಿನಗಳ ಶ್ರೀಲಂಕಾ ಪ್ರವಾಸ. ಸಂಪರ್ಕಿಸಿ: 9900080793 9880079588. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು-04

13.09.2024 01.10.2024 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 23.09.2024 ನೇಪಾಳ 9 ದಿನಗಳು. 23.09.2024 ಭೂತಾನ್ 8 ದಿನಗಳು. 16.09.2024 ಶ್ರೀಲಂಕಾ 6 ದಿನಗಳು. 26.09.2024 ಮಧ್ಯಪ್ರದೇಶ 10 ದಿನಗಳು. ಜೈನ್ ಟ್ರಾವಲ್ಸ್, ಬೆಂಗಳೂರು-03. 9448402248 7022547922

ಶ್ರೀ ಶಿವನಂದಿ ಟೂರ್ಸ್ 8792104518, 8147311578 ತಮಿಳುನಾಡು 5 ದಿನ 22/07/2024, ಗುಜರಾತ್ 10ದಿನ 15/09/2024, ಕಾಶಿ, ಅಯೋಧ್ಯ, ನೇಪಾಳ್ 13 ದಿನ 03/10/2024, ಶ್ರೀಲಂಕಾ 8ದಿನ 11/12/2024.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ @50/-* PER WORDS www.dhclassifieds.com ಬುಕ್ ಮಾಡಿ

ಹೆಸರು ಬದಲಾವಣೆ — ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: +91 7795158424 | +91 9901641752 +91 9731810277 | +91 9900428036

*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

LOOKING FOR JOB OPPORTUNITY
Refer Classifieds on Wednesday

ಪುಣ್ಯಸ್ಮರಣೆ



ಡಾ॥ ವಿ. ವೆಂಕಟಗಿರಿ

(ನಿವೃತ್ತ ಡಿಸ್ಟ್ರಿಕ್ಟ್ ಸರ್ಜನ್, ಹನುಮಂತನಗರ, ಬೆಂಗಳೂರು–50

(1937 – 2024) ನಿಧನ: 12–07–2024

ಇಂತಿ: ಪತ್ನಿ ಸುನಂದ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

SAD DEMISE

Sri GOVINDA

Proprietor, Asha Nursery and Garden
Vice President: The Nursery Men Co-operative Society Ltd, Lalbagh, 5th Cross, 1st Block Jayanagar, Bengaluru - 560 011.

We deeply regret to inform the sad demise of Sri Govinda on 19th July 2024. Cremation will be held on 20th July 2024.

Deeply mourned by: Wife, Children Relatives & Friends

Ph: 9741112811, 8553504565 9900512007

ಮೊದಲನೇ ವರ್ಷದ ಪುಣ್ಯಸ್ಮರಣೆ

ಕೆ.ಎಸ್. ಸುರೇಶ್

(ಕೆ.ಶ್ರೀನಿವಾಸ ರೆಡ್ಡಿಯವರ ಪುತ್ರ)

ಕಸವನಹಳ್ಳಿ, ಬೆಂಗಳೂರು

ನಮ್ಮೆಲ್ಲರಿಗೆ ಸದಾ ಸ್ಫೂರ್ತಿಯಾಗಿರುವ ಸದಾ ನಿಮ್ಮನ್ನು ಸ್ಮರಿಸುವ

ಇಂತಿ ದುಃಖತಪ್ತರು:

ಪತ್ನಿ, ಮಕ್ಕಳು ಹಾಗೂ ಕುಟುಂಬ ವರ್ಗದವರು.

ಒಲಿಂಪಿಕ್ಸ್ ಕ್ರೀಡೆಗಳಲ್ಲಿ ಕೂದಲೆಳೆಯ ಅಂತರದಲ್ಲಿ ಕಂಚಿನ ಪದಕ ಕೈತಪ್ಪಿದವರ ನಿರಾಶೆ

ನಾಲ್ಕನೇ ಸ್ಥಾನದ 'ಮಹಾ ಸಂಕಟ'

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆಯುವುದು ಎಂದರೆ ನಿರಾಶೆಯ ಪರಾಕಾಷ್ಠೆ ಎಂದು ಹೇಳಲಾಗುತ್ತದೆ. ಕೂದಲೆಳೆಯ ಅಂತರದಲ್ಲಿ ಪದಕ ಕೈತಪ್ಪಿ ನಾಲ್ಕನೇ ಸ್ಥಾನಕ್ಕೆ ಜಾರಿದ ಆ ಕ್ರೀಡಾಪಟುವಿಗೆ ತನ್ನ ಜೀವಮಾನದ ಕನಸು ಕೈಜಾರಿದಂತೆ ಭಾಸವಾಗುತ್ತದೆ. ಇಂತಹ ಸಂಕಟವನ್ನು ಭಾರತದ ಹಲವು ಅಥ್ಲೀಟ್‌ಗಳು ಈ ಹಿಂದಿನ ಒಲಿಂಪಿಕ್ಸ್‌ಗಳಲ್ಲಿ ಅನುಭವಿಸಿದ್ದಾರೆ. 1956ರಿಂದ ಈಚೆಗಿನ ಕೂಟಗಳಲ್ಲಿ ಘಟಿಸಿದ ಇಂತಹ ನಿರಾಶೆಗಳ ಬಗ್ಗೆ ಒಂದಿಷ್ಟು ಮಾಹಿತಿ ಇಲ್ಲಿದೆ;

ಮೆಲ್ಬರ್ನ್ (1956)

ಭಾರತ ಫುಟ್‌ಬಾಲ್ ತಂಡವು ಮೆಲ್ಬರ್ನ್ ಒಲಿಂಪಿಕ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿತ್ತು. ಕ್ವಾರ್ಟರ್‌ಫೈನಲ್‌ಲ್ಲಿ ಭಾರತ ತಂಡವು 4–2ರಿಂದ ಆತಿಥೇಯ ಆಸ್ಟ್ರೇಲಿಯಾವನ್ನು ಸೋಲಿಸಿತ್ತು. ಭಾರತದ ನೆವಿಲ್ ಡಿಸೋಜಾ ಹ್ಯಾಟ್ರಿಕ್ ಗೋಲು ಗಳಿಸಿದ್ದರು. ಒಲಿಂಪಿಕ್ಸ್‌ನಲ್ಲಿ ಈ ಸಾಧನೆ ಮಾಡಿದ ಏಷ್ಯಾದ ಮೊದಲ ಆಟಗಾರನಾದರು.

ಆದರೆ ಸೆಮಿಫೈನಲ್‌ನಲ್ಲಿ ಯುಗೊಸ್ಲಾವಿಯಾ ಎದುರು ಭಾರತ ಸೋತಿತು. ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಭಾರತ 0–3ರಿಂದ ಬಲ್ಗೇರಿಯಾ ವಿರುದ್ಧ ಸೋತಿತು.

ಲಿಯಾಂಡರ್ ಪೇಸ್ ಮತ್ತು ಮಹೇಶ್ ಭೂಪತಿ

2004 (ಅಥೆನ್ಸ್)

ಎರಡು ದಶಕಗಳ ನಂತರ ಮತ್ತೊಮ್ಮೆ ಭಾರತಕ್ಕೆ 4ನೇ ಸ್ಥಾನದ 'ಗುಮ್ಮ' ಕಾಡಿತು. ಈ ಬಾರಿ ಟೆನಿಸ್ ಅಂಕಣದಲ್ಲಿ ಕೂದಲೆಳೆಯಲ್ಲಿ ಕಂಚು ಕೈತಪ್ಪಿತ್ತು. ಭಾರತದ ಲಿಯಾಂಡರ್ ಪೇಸ್ ಮತ್ತು ಮಹೇಶ್ ಭೂಪತಿ ಜೋಡಿಯು ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ 6-7, 6-4, 14-16ರಿಂದ ಕ್ರೊವೇಷಿಯಾದ ಮಾರಿಯೊ ಅನ್ಸಿಚ್ ಮತ್ತು ಐವನ್ ಜುಬಿಸಿಚ್ ಜೋಡಿಯ ವಿರುದ್ಧ ಸೋತಿತ್ತು.

ಅದೇ ಕೂಟದಲ್ಲಿ ಭಾರತದ ವೇಟ್‌ಲಿಫ್ಟರ್ ಕುಂಜುರಾಣಿ ದೇವಿ ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು. ಕ್ಲೀನ್ ಮತ್ತು ಜರ್ಕ್ ವಿಭಾಗದಲ್ಲಿ 112.5 ಕೆ.ಜಿ. ಭಾರ ಎತ್ತುವ ಸಂದರ್ಭದಲ್ಲಿ ಫಾಲ್ಟ್ ಮಾಡಿದರು. ಕುಂಜುರಾಣಿ ಅವರು ಒಟ್ಟು 190 ಕೆ.ಜಿ. ತೂಕ ಎತ್ತಿದರು. ಅವರಿಗಿಂತ ಹತ್ತು ಕೆ.ಜಿ. ಹೆಚ್ಚು ತೂಕ ಎತ್ತಿದ್ದ ಥಾಯ್ಲೆಂಡ್‌ನ ಎರೀ ವಿರತಾವರ್ನ್ ಕಂಚು ಪಡೆದರು.

ಮಾಸ್ಕೊ (1980)

ಭಾರತ ಮಹಿಳೆಯರ ಹಾಕಿ ತಂಡವು ಪದಕ ಕೈತಪ್ಪಿಸಿಕೊಂಡ ಒಲಿಂಪಿಕ್ ಕೂಟ ಅದು. ಆಗಿನ ಸೋವಿಯತ್ ರಷ್ಯಾದ ಆತಿಥ್ಯದಲ್ಲಿ ಕೂಟ ನಡೆದಿತ್ತು. ರಾಜತಾಂತ್ರಿಕ ಕಾರಣಗಳಿಗಾಗಿ ನೆದರ್ಲೆಂಡ್ಸ್, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ದೇಶದ ತಂಡಗಳು ಈ ಕೂಟವನ್ನು ಬಹಿಷ್ಕಾರಿಸಿದ್ದವು. ಈ ಕೂಟದಲ್ಲಿ ಭಾರತದ ಮಹಿಳೆಯರು ತಮ್ಮ ಕೊನೆಯ ಪಂದ್ಯದಲ್ಲಿ ಆತಿಥೇಯ ತಂಡದ ಎದುರು ಸೋತಿದ್ದರು. ಪಾಯಿಂಟ್ ಪಟ್ಟಿಯಲ್ಲಿ ಜಿಂಬಾಬ್ವೆ, ಝೆಕೊಸ್ಲೊವಾಕಿಯಾ ಮತ್ತು ರಷ್ಯಾದ ನಂತರದ ಸ್ಥಾನ ಪಡೆದಿತ್ತು.

ಲಾಸ್ ಏಂಜಲೀಸ್ (1984)

ಭಾರತಕ್ಕೆ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಮತ್ತೊಮ್ಮೆ ಸಣ್ಣ ಅಂತರದಲ್ಲಿ ಪದಕ ಕೈತಪ್ಪಿದ ಕೂಟ ಇದು. ಈ ಸಲ 'ಪಯ್ಯೋಳಿ ಎಕ್ಸ್‌ಪ್ರೆಸ್' ಪಿ.ಟಿ. ಉಷಾ ಅವರು 400 ಮೀ ಹರ್ಡಲ್ಸ್ ಓಟದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು. ಆ ಸಂದರ್ಭದಲ್ಲಿ ಎಲ್ಲರಿಗೂ ರೋಮ್ ಒಲಿಂಪಿಕ್ಸ್‌ನಲ್ಲಿ ಮಿಲ್ಖಾ ಸಿಂಗ್ ಅವರ ಘಟನೆ ನೆನಪಾಗಿತ್ತು.

ರೊಮೆನಿಯಾದ ಕ್ರಿಸ್ಟಿನಾ ಒಜೊಕರು ಕಂಚಿನ ಪದಕ ಜಯಿಸಿದ್ದರು. ನಾಲ್ಕನೇ ಸ್ಥಾನ ಪಡೆದರೂ ಪಿ.ಟಿ. ಉಷಾ ಅವರ ವೀರೋಚಿತ ಹೋರಾಟದ ರೀತಿಯ ಪ್ರಯತ್ನವು ಪ್ರೇರಣಾದಾಯಿಯಾಗಿತ್ತು. ಅ ಕೂಟದಿಂದ ಉಷಾ ಅವರು ಮನೆಮಾತಾದರು.

ರೋಮ್‌ನಲ್ಲಿ 1960ರಲ್ಲಿ ನಡೆದಿದ್ದ ಒಲಿಂಪಿಕ್ ಕೂಟದಲ್ಲಿ ಮಿಲ್ಖಾ ಸಿಂಗ್ ಓಟ (ಎಡದಿಂದ ಎಡಡನೇಯವರು) ಚಿತ್ರ ಒಲಿಂಪಿಕ್ಸ್ ಡಾಟ್ ಕಾಮ್

ರೋಮ್ (1960)

ಅಥ್ಲೆಟಿಕ್ಸ್‌ನ ದಂತಕಥೆ ಮಿಲ್ಖಾ ಸಿಂಗ್ 400 ಮೀಟರ್ಸ್ ಓಟದ ಫೈನಲ್‌ನಲ್ಲಿ ಕೂದಲೆಳೆಯ ಅಂತರದಲ್ಲಿ ಕಂಚಿನ ಪದಕ ಕೈತಪ್ಪಿಸಿಕೊಂಡರು. ಫ್ಲೈಯಿಂಗ್ ಸಿಖ್ ಎಂದೇ ಖ್ಯಾತರಾಗಿದ್ದ ಮಿಲ್ಖಾ ಸಿಂಗ್ ಅವರು ಆ ರೇಸ್‌ನಲ್ಲಿ ಅವರ ಓಟದ ವೇಗ ಕಡಿತವಾಗಿ ಉಳಿದವರು ಮುನ್ನುಗ್ಗಿದ್ದರು. ಇಲ್ಲದಿದ್ದರೆ ಸಿಂಗ್ ಅವರು ಕನಿಷ್ಠ ಕಂಚಿನ ಪದಕ ಪಡೆಯುವ ಅವಕಾಶ ಇತ್ತು. ಅದೇ ದಿನ ಭಾರತಕ್ಕೆ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಮೊದಲ ಪದಕ ಲಭಿಸುತ್ತಿತ್ತು.

ಲಂಡನ್ (2012)

ಶೂಟರ್ ಜಾಯ್‌ದೀಪ್ ಕರ್ಮಾಕರ್ ಪುರುಷರ 50 ಮೀ ರೈಫಲ್ ಪ್ರೋನ್ ವಿಭಾಗದ ಫೈನಲ್‌ನಲ್ಲಿ ಕೇವಲ 1.9 ಅಂಕಗಳ ಅಂತರದಿಂದ ಕಂಚಿನ ಪದಕ ಕೈತಪ್ಪಿಸಿಕೊಂಡರು.

ರಿಯೊ ಡಿ ಜನೈರೊ (2016)

ಮಹಿಳೆಯರ ಜಿಮ್ನಾಸ್ಟಿಕ್ಸ್‌ನಲ್ಲಿ ಭಾರತದ ದೀಪಾ ಕರ್ಮಾಕರ್ ಅವರು ವಾಲ್ಟ್ ವಿಭಾಗದಲ್ಲಿ ನಾಲ್ಕನೇ ಸ್ಥಾನ ಪಡೆದರು. 0.150 ಪಾಯಿಂಟ್ಸ್ ಅಂತರದಲ್ಲಿ ಅವರು ಕಂಚು ಕೈತಪ್ಪಿಸಿಕೊಂಡರು. ಇದೇ ಕೂಟದ ಪುರುಷರ ಶೂಟಿಂಗ್‌ನಲ್ಲಿ ಅಭಿನವ್ ಬಿಂದ್ರಾ ಅವರೂ ಕಂಚು ಕೈತಪ್ಪಿಸಿಕೊಂಡರು. 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದ ಬಿಂದ್ರಾ ಅವರು ರಿಯೊನಲ್ಲಿ ನಿರಾಶೆ ಅನುಭವಿಸಿದರು.

ಟೋಕಿಯೊ (2020)

ನಾಲ್ಕು ದಶಕಗಳ ನಂತರ ಭಾರತ ಮಹಿಳೆಯರ ಹಾಕಿ ತಂಡವು ಒಲಿಂಪಿಕ್ಸ್ ಅಂಗಳದಲ್ಲಿ ಮತ್ತೊಮ್ಮೆ ಕಣ್ಣೀರು ಹಾಕಿತು. ಬಲಿಷ್ಠ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿದ್ದ ಭಾರತ ತಂಡವು ಅಪಾರ ಭರವಸೆ ಮೂಡಿಸಿತ್ತು.

ಆದರೆ ನಾಲ್ಕರ ಘಟ್ಟದ ಪಂದ್ಯದಲ್ಲಿ 0–1ರಿಂದ ಅರ್ಜೆಂಟೀನಾ ವಿರುದ್ಧ ಸೋತಿತು. ಮೂರನೇ (ಕಂಚು) ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ರಾಣಿ ರಾಂಪಾಲ್ ನಾಯಕತ್ವದ ತಂಡವು ಗ್ರೇಟ್ ಬ್ರಿಟನ್ ಎದುರು 3–2ರಿಂದ ಮುನ್ನಡೆ ಗಳಿಸಿತ್ತು. ಆದರೆ ತಿರುಗೇಟು ನೀಡಿದ್ದ ಬ್ರಿಟನ್ ತಂಡವು 4–3ರಿಂದ ಗೆದ್ದಿತ್ತು.

ಇದೇ ಕೂಟದಲ್ಲಿ ಮಹಿಳೆಯರ ಗಾಲ್ಫ್‌ನಲ್ಲಿ ಬೆಂಗಳೂರಿನ ಅದಿತಿ ಅಶೋಕ್ ಪದಕ ಗೆದ್ದು ಇತಿಹಾಸ ನಿರ್ಮಿಸುವ ಹಂತದಲ್ಲಿ ಎಡವಿದರು. ನಾಲ್ಕನೇ ಸ್ಥಾನ ಪಡೆದರು.

'ಶೂಟಿಂಗ್: ಸಿದ್ಧತೆ ಇನ್ನೂ ಉತ್ತಮವಾಗಿರಬೇಕಿತ್ತು'

ನವದೆಹಲಿ (ಪಿಟಿಐ): 'ಪ್ಯಾರಿಸ್‌ಗೆ ತೆರಳುತ್ತಿರುವ ಭಾರತ ತಂಡದ ಸಿದ್ಧತೆ ಇನ್ನೂ ಉತ್ತಮವಾಗಿ ಇರಬೇಕಾಗಿತ್ತು' ಎಂದು ಏಷ್ಯನ್ ಗೇಮ್ಸ್ ಚಿನ್ನ ವಿಜೇತ ಶೂಟರ್ ರಂಜನ್ ಸೋಧಿ ಅಭಿಪ್ರಾಯ ಪಟ್ಟರು. ರಾಷ್ಟ್ರೀಯ ಫೆಡರೇಷನ್ ನಡೆಸುವಲ್ಲಿ ಆಡಳಿತಗಾರರ ಜೊತೆ ಕ್ರೀಡಾಪಟುಗಳ ಮಾತಿಗೂ ಹೆಚ್ಚು ಬೆಲೆ ಇರಬೇಕು' ಎಂದೂ ಅವರು ಒತ್ತಾಯಿಸಿದರು.

ಪ್ಯಾರಿಸ್ ಕ್ರೀಡೆಗಳಿಗೆ 21 ಮಂದಿಯ ತಂಡವನ್ನು ಘೋಷಣೆ ಮಾಡುವಲ್ಲಿ ಭಾರತ ರಾಷ್ಟ್ರೀಯ ರೈಫಲ್ ಶೂಟಿಂಗ್ ಸಂಸ್ಥೆ ವಿಳಂಬ ಮಾಡಿತು. ಆದರೂ ಈ ದೊಡ್ಡ ತಂಡದ ಮೇಲೆ ಅಪಾರ ವಿಶ್ವಾಸ ಹೊಂದಿರುವುದಾಗಿ ಒಲಿಂಪಿಯನ್ ಡಬಲ್ ಟ್ರ್ಯಾಪ್ ಶೂಟರ್ ಸೋಧಿ ಶುಕ್ರವಾರ ಹೇಳಿದರು.

ಪ್ಯಾರಿಸ್ ಒಲಿಂಪಿಕ್ಸ್‌ಗೆ ದಾಖಲೆ ಸಂಖ್ಯೆಯ ಶೂಟರ್‌ಗಳು ಅರ್ಹತೆ ಪಡೆದಿದ್ದಾರೆ. 2021ರ ಟೋಕಿಯೊ ಕ್ರೀಡೆಗಳಲ್ಲಿ 15 ಮಂದಿ ಪಾಲ್ಗೊಂಡಿದ್ದೇ ಇದುವರೆಗಿನ ದಾಖಲೆ ಆಗಿತ್ತು. ಕಳೆದ ಎರಡು ಒಲಿಂಪಿಕ್ಸ್‌ಗಳಲ್ಲಿ ಭಾರತಕ್ಕೆ ಶೂಟಿಂಗ್‌ನಲ್ಲಿ ಒಂದೂ ಪದಕ ಬಂದಿಲ್ಲ.

'ಎರಡು ತಿಂಗಳು ಇರುವಾಗ ನೀವು (ಎನ್‌ಆರ್‌ಎಐ) ತಂಡವನ್ನು ಘೋಷಿಸುವುದು ಬಹಳ ವಿಳಂಬ ಮಾಡಿದಂತೆ. ನಾನು ಮನಸ್ಸಿನಲ್ಲಿರುವುದನ್ನು ಹೇಳುತ್ತೇನೆ. ತಂಡವನ್ನು ಇನ್ನೂ ಬೇಗ ಪ್ರಕಟಿಸಬಹುದಿತ್ತು' ಎಂದರು.

ಶೂಟಿಂಗ್‌ನಲ್ಲಿ ಪ್ರಬಲ ಶಕ್ತಿಯಾಗಿರುವ ಯುರೋಪ್‌ನ ದೇಶಗಳು ಮತ್ತು ಇತರೆಡೆಯ ದೇಶಗಳು ತಮ್ಮ ತಂಡಗಳನ್ನು ಮಾರ್ಚ್–ಏಪ್ರಿಲ್‌ನಲ್ಲೇ ಪ್ರಕಟಿಸಿದವು. ಆದರೆ ಎನ್‌ಆರ್‌ಎಐ ಜೂನ್ ಮಧ್ಯದಲ್ಲಿ ನಾಲ್ಕು ಟ್ರಯಲ್ಸ್‌ಗಳನ್ನು ನಡೆಸಿ ತಂಡವನ್ನು ಆಯ್ಕೆ ಮಾಡಿತು. ಇದು ಶೂಟರ್‌ಗಳಲ್ಲಿ ಒತ್ತಡ, ಉದ್ವೇಗ ಹೆಚ್ಚುವಂತೆ ಮಾಡಿತು. ಅವರು ಸಿದ್ಧತೆಗಾಗಿ ವಿದೇಶ ಪ್ರವಾಸ ಯೋಜಿಸಲು ಕಷ್ಟಪಡಬೇಕಾಯಿತು' ಎಂದರು.

2010 ಮತ್ತು 2011ರಲ್ಲಿ ಸೋಧಿ ಅವರು ತಮ್ಮ ವೃತ್ತಿ ಜೀವನದ ಉತ್ತುಂಗದಲ್ಲಿದ್ದು ಸತತ ಎರಡು ವರ್ಷ ವಿಶ್ವಕಪ್ ಚಿನ್ನದ ಪದಕ ಗೆದ್ದುಕೊಂಡಿದ್ದರು. ವಿಶ್ವ ಅಗ್ರ ಕ್ರಮಾಂಕಕ್ಕೂ ಏರಿದ್ದರು.

ಕ್ರೀಡಾಸಂಸ್ಥೆಗಳು ಕ್ರೀಡಾಪಟುಸ್ನೇಹಿಯಾಗಿರಲು ದೇಶದ ಕ್ರೀಡಾ ಫೆಡರೇಷನ್‌ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಪಟುಗಳು ಇರಬೇಕು ಎಂದರು. ಆಡಳಿತ ನಡೆಸುವಲ್ಲಿ ರಾಜಕಾರಣಿಗಳ ಜೊತೆ ಕ್ರೀಡಾಪಟುಗಳಿಗೂ ಧ್ವನಿ ಇರಬೇಕು ಎಂದರು.

ದೌರ್ಬಲ್ಯ ಪರಿಹರಿಸುವತ್ತ ಚಿತ್ತ ಹರಿಸಿದ್ದೇನೆ: ಲಕ್ಷ್ಯ

ಮುಂಬೈ (ಪಿಟಿಐ): 'ನೆಟ್ ಬಳಿಯ ಆಟದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿದ್ದೇನೆ. ಪಂದ್ಯದ ಅಂತಿಮ ಹಂತದಲ್ಲಿ ಪಾಯಿಂಟ್‌ಗಳನ್ನು ಬಿಟ್ಟುಕೊಡುವ ಇತ್ತೀಚಿನ ಸಮಸ್ಯೆಗೂ ದಾರಿ ಕಂಡುಕೊಂಡಿದ್ದೇನೆ' ಎಂದು ಭಾರತದ ಬ್ಯಾಡ್ಮಿಂಟನ್ ತಾರೆ ಲಕ್ಷ್ಯ ಸೇನ್ ಹೇಳಿದ್ದಾರೆ.

ಮುಂದಿನ ವಾರ ಪ್ಯಾರಿಸ್‌ನಲ್ಲಿ ಆರಂಭವಾಗುವ ಒಲಿಂಪಿಕ್ಸ್‌ಗೆ ಅದೇ ದೇಶದ ಬಂದರು ನಗರ ಮಾರ್ಸೆಯಲ್ಲಿ ಅವರು ಸಿದ್ಧತೆ ನಡೆಸುತ್ತಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 19ನೆ ಸ್ಥಾನದಲ್ಲಿರುವ ಲಕ್ಷ್ಯ ಅವರು 'ಎಲ್' ಗುಂಪಿನಲ್ಲಿದ್ದಾರೆ. ಈ ಗುಂಪಿನಲ್ಲಿ ಅವರಿಗೆ ಕಠಿಣ ಪೈಪೋಟಿ ಎದುರಾಗುವ ನಿರೀಕ್ಷೆಯಿದೆ.

ಮೂರನೇ ಕ್ರಮಾಂಕದ ಜೊನಾಥನ್ ಕ್ರಿಸ್ಟಿ (ಇಂಡೊನೇಷ್ಯಾ), 41ನೇ ಕ್ರಮಾಂಕದ ಕೆವಿನ್ ಕಾರ್ಡನ್ (ಗ್ವಾಟೆಮಾಲಾ), 52ನೇ ಕ್ರಮಾಂಕದ ಜೂಲಿಯನ್ ಕರಾಗಿ (ಬೆಲ್ಜಿಯಂ) ಅವರೂ ಇದೇ ಗುಂಪಿನಲ್ಲಿದ್ದಾರೆ. ಇವರಲ್ಲಿ ಕೆವಿನ್ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದರು.

'ಆಟದ ಒಟ್ಟಾರೆ ಸುಧಾರಣೆಯ ಕಡೆ ನಾವು ಗಮನವನ್ನು ಕೇಂದ್ರೀಕರಿಸಿದ್ದೇವೆ. ಕಳೆದ 6–7 ವಾರಗಳಿಂದ ಆಟದ ಎಲ್ಲ ವಿಭಾಗಗಳಲ್ಲಿ ಹೆಚ್ಚು ಶ್ರಮ ಹಾಕಿದ್ದೇನೆ. ಆಟದಲ್ಲಿರುವ ದೌರ್ಬಲ್ಯಗಳನ್ನು ತಿದ್ದುವ ಕಡೆ ಗಮಹರಿಸುತ್ತಿದ್ದೇವೆ' ಎಂದು ಅವರು ಆನ್‌ಲೈನ್ ಸಂವಾದದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಆಟದಲ್ಲಿ ಚುರುಕಿನ ಜೊತೆಗೆ ಆಕ್ರಮಣಕಾರಿಯಾಗುವುದು ಮುಖ್ಯ' ಎಂದರು.

ಸಮುದ್ರದ ಬದಿ ಪ್ರದೇಶಲ್ಲಿ ಷಟ್ಲ್ ಚಲಿಸುವ ವೇಗಕ್ಕೆ ಹೊಂದಿಕೊಳ್ಳುವುದು ಭಿನ್ನ ಅನುಭವ. ಇಲ್ಲಿನ (ಮಾರ್ಸೆ) ಪರಿಸ್ಥಿತಿ ಪ್ಯಾರಿಸ್‌ನಲ್ಲೂ ಇರಬಹುದೆಂಬ ನಿರೀಕ್ಷೆಯಲ್ಲಿದ್ದಾರೆ 22 ವರ್ಷದ ಲಕ್ಷ್ಯ. ಅವರು ಜುಲೈ 22 ರಂದು ಪ್ಯಾರಿಸ್‌ಗೆ ಹೋಗಲಿದ್ದಾರೆ. ನಮ್ಮ ತಂಡದಲ್ಲಿ ಹತ್ತು ಮಂದಿ ಇದ್ದಾರೆ ಎಂದು ಹೇಳಿದರು.

ಏಷ್ಯಾ ಕಪ್ ಟಿ20 ಕ್ರಿಕೆಟ್ : ಪೂಜಾ, ದೀಪ್ತಿ ಉತ್ತಮ ದಾಳಿ

ಭಾರತಕ್ಕೆ ಮಣಿದ ಪಾಕ್ ತಂಡ

ದಂಬುಲಾ, ಶ್ರೀಲಂಕಾ (ಪಿಟಿಐ): ಮಧ್ಯಮವೇಗಿ ಪೂಜಾ ವಸ್ತ್ರಕರ್ ಮತ್ತು ಸ್ಪಿನ್ನರ್ ದೀಪ್ತಿ ಶರ್ಮಾ ಅವರ ಪರಿಣಾಮಕಾರಿ ದಾಳಿಯ ಬಲದಿಂದ ಭಾರತ ತಂಡವು ಶುಕ್ರವಾರ ಆರಂಭವಾದ ಮಹಿಳಾ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಪಾಕಿಸ್ತಾನ ಎದುರು ಜಯಿಸಿತು.

ರಣಗಿರಿ ದಂಬುಲಾ ಅಂತರ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಭಾರತ ತಂಡವು 7 ವಿಕೆಟ್‌ಗಳಿಂದ ಪಾಕ್ ತಂಡವನ್ನು ಮಣಿಸಿತು.

ಟಾಸ್ ಗೆದ್ದ ಪಾಕಿಸ್ತಾನ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಭಾರತದ ಪೂಜಾ ವಸ್ತ್ರಕರ್ (31ಕ್ಕೆ2) ಆರಂಭದಲ್ಲಿಯೇ ಪೆಟ್ಟುಕೊಟ್ಟರು. ದೀಪ್ತಿ ಶರ್ಮಾ (20ಕ್ಕೆ3) ಮಧ್ಯಮ ಕ್ರಮಾಂಕವನ್ನು ಕಾಡಿದರು. ಇದರಿಂದಾಗಿ ಪಾಕ್ ತಂಡವು 19.2 ಓವರ್‌ಗಳಲ್ಲಿ 108 ರನ್ ಗಳಿಸಿ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು.

ಸಿದ್ರಾ ಅಮೀನ್ (25; 35ಎ, 4X3), ತೌಬಾ ಹಸನ್ (22 ರನ್) ಮತ್ತು ಫಾತಿಮಾ ಸನಾ (ಔಟಾಗದೆ 22) ಅವರ ಬ್ಯಾಟಿಂಗ್‌ನಿಂದ ತಂಡವು ಶತಕದ ಗಡಿ ದಾಟಿತು.

ಭಾರತ ತಂಡದ ಶಫಾಲಿ ವರ್ಮಾ, ಪೂಜಾ ವಸ್ತ್ರಕರ್ ಮತ್ತು ದೀಪ್ತಿ ಶರ್ಮಾ –ಪಿಟಿಐ ಚಿತ್ರ

ಗುರಿ ಬೆನ್ನಟ್ಟಿದ ಭಾರತ ತಂಡವು 14.1 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 109 ರನ್ ಗಳಿಸಿತು. ಆರಂಭಿಕ ಜೋಡಿ ಶಫಾಲಿ ವರ್ಮಾ (40; 29ಎ, 4X6, 6X1) ಮತ್ತು ಸ್ಮೃತಿ ಮಂದಾನ (45; 31ಎ, 4X9) ಮೊದಲ ವಿಕೆಟ್ ಜೊತೆಯಾಟದಲ್ಲಿ 85 ರನ್ ಸೇರಿಸಿದರು. ಇದರಿಂದಾಗಿ ಜಯ ಸುಲಭವಾಯಿತು.

ಪಾಕ್ ತಂಡದ ಲೆಗ್‌ಸ್ಪಿನ್ನರ್ ಸಯೀದಾ ಅರೂಬ್ ಶಾ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 19.2 ಓವರ್‌ಗಳಲ್ಲಿ 108 (ಅಮೀನ್ 25, ತೌಬಾ ಹಸನ್ 22, ಫಾತಿಮಾ ಸನಾ ಔಟಾಗದೆ 22, ರೇಣುಕಾ ಸಿಂಗ್ 14ಕ್ಕೆ2, ಪೂಜಾ ವಸ್ತ್ರಕರ್ 31ಕ್ಕೆ2, ದೀಪ್ತಿ ಶರ್ಮಾ 20ಕ್ಕೆ3, ಶ್ರೇಯಾಂಕಾ ಪಾಟೀಲ 14ಕ್ಕೆ2) **ಭಾರತ:** 14.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 109 (ಶಫಾಲಿ ವರ್ಮಾ 40, ಸ್ಮೃತಿ ಮಂದಾನ 45, ಹೇಮಲತಾ ದಯಾಳನ್ 14, ಹರ್ಮನ್‌ಪ್ರೀತ್ ಕೌರ್ ಔಟಾಗದೆ 5, ಜೆಮಿಮಾ ರಾಡ್ರಿಗಸ್ ಔಟಾಗದೆ 3, ಸಯೀದಾ ಅರೂಬ್ ಶಾ 9ಕ್ಕೆ2) **ಪಂದ್ಯದ ಆಟಗಾರ್ತಿ:** ದೀಪ್ತಿ ಶರ್ಮಾ **ಫಲಿತಾಂಶ:** ಭಾರತಕ್ಕೆ 7 ವಿಕೆಟ್‌ಗಳ ಜಯ.

ಪ್ಯಾರಿಸ್ ಕೂಟದಿಂದ ಹಿಂದೆ ಸರಿದ ಜಪಾನ್ ಜಿಮ್ನಾಸ್ಟ್

ಟೋಕಿಯೊ (ರಾಯಿಟರ್ಸ್): ತಂಡದ ನೀತಿ–ನಿಯಮ ಉಲ್ಲಂಘಿಸಿ ಧೂಮಪಾನ, ಮದ್ಯಪಾನ ಮಾಡಿ ಸಿಕ್ಕಿಬಿದ್ದ ಕಾರಣ ಜಪಾನ್ ಮಹಿಳಾ ಜಿಮ್ನಾಸ್ಟಿಕ್ಸ್ ತಂಡದ ನಾಯಕಿ ಶೋಕೊ ಮಿಯಾಟಾ ಅವರನ್ನು ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡೆಗಳಿಂದ ಶುಕ್ರವಾರ ಹಿಂದೆ ಸರಿದಿದ್ದಾರೆ.

ಜಪಾನ್ ಜಿಮ್ನಾಸ್ಟಿಕ್ಸ್ ಸಂಸ್ಥೆ ಈ ವಿಷಯ ತಿಳಿಸಿದೆ. 19 ವರ್ಷ ವಯಸ್ಸಿನ ಮಿಯಾಟಾ, ಮೊನಾಕೊದಲ್ಲಿ ನಡೆಯುತ್ತಿದ್ದ ತಂಡದ ತರಬೇತಿ ಶಿಬಿರ ತೊರೆದು ಗುರುವಾರ ಜಪಾನ್‌ಗೆ ಬಂದಿಳಿದಿದ್ದರು. ವಿಚಾರಣೆ ವೇಳೆ ಧೂಮಪಾನ, ಮದ್ಯಪಾನ ಮಾಡಿದ್ದು ದೃಢಪಟ್ಟಿದೆ.

ತಂಡದಲ್ಲಿ ಈಗ ಐವರ ಬದಲು ನಾಲ್ವರು ಮಾತ್ರ ಇರುತ್ತಾರೆ ಎಂದು ಸಂಸ್ಥೆ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದೆ. 'ಇದಕ್ಕಾಗಿ ನಾವು ಹೃದಯಾಂತರಾಳದಿಂದ ಕ್ಷಮೆ ಕೇಳುತ್ತೇವೆ' ಎಂದು ಸಂಸ್ಥೆಯ ಅಧ್ಯಕ್ಷ ತಡಾಶಿ ಫುಜಿಟಾ ತಿಳಿಸಿದ್ದಾರೆ. ಇತರ ಅಧಿಕಾರಿಗಳ ಜೊತೆ ಮಿಯಾಟಾ ಅವರ ವೈಯಕ್ತಿಕ ಕೋಚ್ ಮುತ್ಸುಮಿ ಹರಾಡ ಅವರೂ ಇದ್ದರು.

1964ರ ಟೋಕಿಯೊ ಕ್ರೀಡೆಗಳ ನಂತರ ಜಪಾನ್ ತಂಡವು ಇಲ್ಲಿ ಚಿನ್ನಕ್ಕಾಗಿ ಪ್ರಬಲ ದಾವೇದಾರನಾಗಿತ್ತು. ತಂಡದ ಐದೂ ಮಂದಿಗೆ ಇದು ಮೊದಲ ಒಲಿಂಪಿಕ್ಸ್ ಆಗಿತ್ತು.

'ಮಿಯಾಟಾ ವರ್ತನೆ ಅತಿರೇಕದ್ದಾತ್ತು. ಅತ್ಯುನ್ನತ ಮಟ್ಟದಲ್ಲಿ ಉತ್ತಮ ಸಾಧನೆ ತೋರಲೇಬೇಕಾದ ತೀವ್ರ ಒತ್ತಡದಲ್ಲಿದ್ದರು' ಎಂದು ಕೋಚ್ ಹರಾಡ ತಿಳಿಸಿದ್ದಾರೆ. 'ಒತ್ತಡದ ಭಾರದೊಡನೆ ಆಕೆ ದಿನ ಕಳೆಯುತ್ತಿದ್ದಳು' ಎಂದು ಭಾವೋದ್ವೇಗಕ್ಕೆ ಒಳಗಾದ ಹರಾಡ ಹೇಳಿದರು.

ಅಮೆರಿಕದ ಸೂಪರ್‌ಸ್ಟಾರ್ ಜಿಮ್ನಾಸ್ಟ್ ಸಿಮೋನ್ ಬಿಲ್ಸ್ ಅವರು ಮಾನಸಿಕ ಒತ್ತಡದ ಕಾರಣ ಟೋಕಿಯೊ ಕ್ರೀಡೆಗಳ ಸ್ಪರ್ಧೆಯಿಂದ ಹಿಂದೆಸರಿದಿದ್ದರು.

ಜುಲೈ 27 ರಿಂದ ಆಗಸ್ಟ್ 5ರವರೆಗೆ ಜಿಮ್ನಾಸ್ಟಿಕ್ಸ್ ಸ್ಪರ್ಧೆಗಳು ನಿಗದಿಯಾಗಿವೆ.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ರೇಸ್‌ನಲ್ಲಿ ಜಾಕಿ ಪಿ. ಟ್ರೆವರ್ ಅವರು ಸವಾರಿ ಮಾಡಿದ ಫ್ಲೈಟ್ ಆನ್ ಕುದುರೆಯು ಕೆ.ಎನ್. ಗುರುಸ್ವಾಮಿ ಮೆಮೊರಿಯಲ್ ಟ್ರೋಫಿ (ಡಿವಿಷನ್ 1) ಜಯಿಸಿತು –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಬೆಂಗಳೂರಿನಲ್ಲಿ ನಾಳೆ ರಾಷ್ಟ್ರೀಯ ರ‍್ಯಾಲಿ ಎರಡನೇ ಲೆಗ್

ಬೆಂಗಳೂರು: ಎಫ್‌ಎಂಎಸ್‌ಸಿಐ ಇಂಡಿಯನ್ ರ‍್ಯಾಲಿ ಸ್ಪ್ರಿಂಟ್ ಚಾಂಪಿಯನ್‌ಷಿಪ್‌ನ ಎರಡನೇ ಲೆಗ್ (ದ್ವಿಚಕ್ರ ವಾಹನಗಳಿಗಾಗಿ) ಭಾನುವಾರ ಇಲ್ಲಿ ನಡೆಯಲಿದೆ. ಹೆಸರಾಂತ ರೈಡರ್‌ಗಳಾದ ಅಸದ್ ಖಾನ್, ಸಚಿನ್ ಡಿ., ಯುವ ಕುಮಾರ್, ಸುಹೇಲ್ ಅಹ್ಮದ್ ದಕ್ಷಿಣ ವಲಯ ಕ್ವಾಲಿಫೈಯರ್ಸ್‌ನಲ್ಲಿ ಪಾಲ್ಗೊಳ್ಳಲಿರುವ ಪ್ರಮುಖರು.

ಏಳು ಕಿ.ಮೀ. ದೂರದ ಈ ರ‍್ಯಾಲಿಯಲ್ಲಿ ಸುಮಾರು 140 ಮಂದಿ ವಿವಿಧ ವಿಭಾಗಗಳಲ್ಲಿ ಸ್ಪರ್ಧಿಸುವ ನಿರೀಕ್ಷೆಯಿದೆ. ಚೆನ್ನೈನಲ್ಲಿ ನಡೆದ ಮೊದಲ ಲೆಗ್‌ನಲ್ಲಿ ಜಯಶಾಲಿಯಾಗಿದ್ದ ಅಹ್ಮದ್ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಬೆಂಗಳೂರಿನಲ್ಲಿ 21ರಂದು ನಡೆಯುವ ಸ್ಪರ್ಧೆಯ ಮಹಿಳಾ ವಿಭಾಗದಲ್ಲಿ ಐದು ಪ್ರವೇಶಗಳು ಬಂದಿವೆ. ಒಟ್ಟು 13 ವಿವಿಧ ವಿಭಾಗಗಳಲ್ಲಿ ಸ್ಪರ್ಧೆಗಳು ನಿಗದಿಯಾಗಿವೆ. ವೆಟರನ್ಸ್ ಕ್ಲಾಸ್, ಟೀಮ್ ಆ್ಯಮಡ್ ಮ್ಯಾನುಫ್ಯಾಕ್ಚರರ್ಸ್ ಟ್ರೋಫಿ ವಿಭಾಗ ಹೊಸದಾಗಿ ಸೇರ್ಪಡೆಯಾಗಿವೆ.

ಸಮ್ಝಾನಾ ಅಜೇಯ ಅರ್ಧ ಶತಕ; ನೇಪಾಳ ಶುಭಾರಂಭ

ಡಂಬುಲಾ (ಪಿಟಿಐ): ಆರಂಭ ಆಟಗಾರ್ತಿ ಸಮ್ಝಾನಾ ಖಡಕಾ ಅವರ ಬಿರುಸಿನ ಅಜೇಯ ಅರ್ಧ ಶತಕದ ನೆರವಿನಿಂದ ನೇಪಾಳ ತಂಡ ಮಹಿಳೆಯರ ಏಷ್ಯಾ ಕಪ್ ಟಿ20 ಪಂದ್ಯದಲ್ಲಿ ಶುಕ್ರವಾರ ಯುಎಇ ತಂಡವನ್ನು ಆರು ವಿಕೆಟ್‌ಗಳಿಂದ ಸೋಲಿಸಿ ಶುಭಾರಂಭ ಮಾಡಿತು.

ಖಡಕಾ 45 ಎಸೆತಗಳಲ್ಲಿ ಔಟಾಗದೇ 71 ರನ್ ಹೊಡೆದರು. ಈ ಇನಿಂಗ್ಸ್‌ನಲ್ಲಿ 11 ಬೌಂಡರಿಗಳಿದ್ದವು.

ಮೊದಲು ಆಡಿದ ಯುಎಇ ತಂಡ 20 ಓವರುಗಳಲ್ಲಿ 8 ವಿಕೆಟ್‌ಗೆ 115 ರನ್ ಗಳಿಸಿತು. ಖುಷಿ ಶರ್ಮಾ 39 ಎಸೆತಗಳಲ್ಲಿ 36 ರನ್ ಗಳಿಸಿದ್ದೇ ಅತ್ಯಧಿಕ. ನೇಪಾಳ ಕಡೆ ಮಧ್ಯಮ ವೇಗಿ ಇಂದು ಬರ್ಮಾ 15 ರನ್ನಿಗೆ 3 ವಿಕೆಟ್ ಪಡೆದು ಯಶಸ್ವಿ ಎನಿಸಿದರು. ನೇಪಾಳ 23 ಎಸೆತಗಳಿರುವಂತೆ 4 ವಿಕೆಟ್‌ಗೆ 118 ರನ್ ಹೊಡೆಯಿತು.

ಸ್ಕೋರುಗಳು: ಯುಎಇ: 20 ಓವರುಗಳಲ್ಲಿ 8 ವಿಕೆಟ್‌ಗೆ 115 (ಖುಷಿ ಶರ್ಮಾ 36, ಕವಿಶಾ ಕುಮಾರಿ 22; ಇಂದು ಬರ್ಮಾ 19ಕ್ಕೆ3); **ನೇಪಾಳ:** 16.1 ಓವರುಗಳಲ್ಲಿ 4 ವಿಕೆಟ್‌ಗೆ 118 (ಸಮ್ಝಾನಾ ಖಡಕಾ ಔಟಾಗದೇ 72; ಕವಿಶಾ ಕುಮಾರಿ 12ಕ್ಕೆ3). **ಪಂದ್ಯದ ಆಟಗಾರ್ತಿ:** ಸಮ್ಝಾನಾ ಖಡಕಾ

ಕೆವೆಮ್ ಹಾಜ್ ಶತಕ; ವಿಂಡೀಸ್ ಹೋರಾಟ

ನಾಟಿಂಗ್‌ಹ್ಯಾಮ್ (ಎಎಫ್‌ಪಿ): ಚೆಂದದ ಬ್ಯಾಟಿಂಗ್ ಮಾಡಿದ ಕೆವೆಮ್ ಹಾಜ್ ಅವರ ಶತಕದ ಬಲದಿಂದ ವೆಸ್ಟ್ ಇಂಡೀಸ್ ತಂಡವು ಆತಿಥೇಯ ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ದಿಟ್ಟ ಹೋರಾಟ ಮಾಡಿದೆ.

ಪಂದ್ಯದ ಎರಡನೇ ದಿನವಾದ ಶುಕ್ರವಾರ ವಿಂಡೀಸ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 77 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 322 ರನ್ ಗಳಿಸಿತು. ಮೊದಲ ದಿನದಾಟದಲ್ಲಿ ಇಂಗ್ಲೆಂಡ್ ತಂಡವು 88.3 ಓವರ್‌ಗಳಲ್ಲಿ 416 ರನ್‌ಗಳನ್ನು ಗಳಿಸಿತ್ತು. ಆತಿಥೇಯ ತಂಡದ ಒಲಿ ಪೋಪ್ (121; 167ಎ) ಶತಕ ಬಾರಿಸಿದ್ದರು. ಬೆನ್ ಡಕೆಟ್ (71 ರನ್) ಮತ್ತು ನಾಯಕ ಬೆನ್ ಸ್ಟೋಕ್ಸ್ (69 ರನ್) ಅರ್ಧಶತಕಗಳನ್ನು ಗಳಿಸಿದರು.

ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ವಿಂಡೀಸ್ ತಂಡಕ್ಕೆ ಕ್ರೇಗ್ ಬ್ರಾಥ್‌ವೇಟ್ (48; 72ಎ), ಅಲಿಕ್ ಅಥಾಂಝೆ (82; 99ಎ) ಹಾಗೂ ಹಾಜ್ (120 ರನ್) ಶತಕ ಆಸರೆಯಾದವು. ಇದರಿಂದಾಗಿ ತಂಡವು ದಿಟ್ಟ ಉತ್ತರ ನೀಡಿತು. ತಂಡವು 84ಕ್ಕೆ3 ವಿಕೆಟ್ ಕಳೆದುಕೊಂಡಿದ್ದ ಹಂತದಲ್ಲಿ ಅಥಾಂಜೆ ಮತ್ತು ಹಾಜ್ 4ನೇ ವಿಕೆಟ್ ಜೊತೆಯಾಟದಲ್ಲಿ 175 ರನ್ ಸೇರಿಸಿದರು.

ವೆಸ್ಟ್ ಇಂಡೀಸ್ ತಂಡದ ಕೆವೆಮ್ ಹಾಜ್ ಶತಕ ಸಂಭ್ರಮ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 88.3 ಓವರ್‌ಗಳಲ್ಲಿ 416. ವೆಸ್ಟ್ ಇಂಡೀಸ್: 77 ಓವರ್‌ಗಳಲ್ಲಿ 5ಕ್ಕೆ322 (ಕ್ರೇಗ್ ಬ್ರಾಥ್‌ವೇಟ್ 48, ಮೆಕೈಲ್ ಲೂಯಿಸ್ 21, ಅಲಿಕ್ ಅಥಾಂಜೆ 82, ಕೆವೆಮ್ ಹಾಜ್ 120, ಶೋಯಬ್ ಬಶೀರ್ 100ಕ್ಕೆ2)

ಟೇಬಲ್ ಟೆನಿಸ್: ಸಹನಾ, ರೋಹಿತ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ಸಹನಾ ಎಚ್.ಮೂರ್ತಿ ಹಾಗೂ ರೋಹಿತ್ ಶಂಕರ್ ಅವರು ಇಲ್ಲಿ ನಡೆಯುತ್ತಿರುವ ಮೂರನೇ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳಾ ಹಾಗೂ ಪುರುಷರ ಸಿಂಗಲ್ಸ್‌ನ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಮೈಸೂರು ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯು ಮೈಸೂರು ವಿಶ್ವವಿದ್ಯಾಲಯದ ಜಿಮ್ನಾಷಿಯಂ ಹಾಲ್‌ನಲ್ಲಿ ಆಯೋಜಿಸಿರುವ ಟೂರ್ನಿಯಲ್ಲಿ ಶುಕ್ರವಾರ ನಡೆದ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಸಹನಾ ಮೂರ್ತಿ ಅವರು ದೇಶ್ನಾ ಎಂ.ವಂಶಿಕಾ ಅವರನ್ನು 6 -11, 11 -5, 11-8, 12-10, 4-11, 5-11, 11-9ರಿಂದ ಮಣಿಸಿ ಪ್ರಶಸ್ತಿ ಗೆದ್ದರು.

ಸೆಮಿಫೈನಲ್‌ನಲ್ಲಿ ಸಹನಾ ಅವರು ಪ್ರೇಕ್ಷಾ ತಿಲಾವತ್ ಹಾಗೂ ದೇಶ್ನಾ ಅವರು ಖುಷಿ ಅವರನ್ನು ಮಣಿಸಿ ಫೈನಲ್ ಪ್ರವೇಶಿಸಿದ್ದರು.

ಪ್ರಶಸ್ತಿ ಗೆದ್ದ ಸಹನಾ ಎಚ್.ಮೂರ್ತಿ, ರೋಹಿತ್ ಶಂಕರ್ ಹಾಗೂ ತನಿಷ್ಕಾ ಕಪಿಲ್ ಕಾಲಭೈರವ್

ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಬೆಂಗಳೂರಿನ ರೋಹಿತ್ ಶಂಕರ್ ಅವರು ರೈಲ್ವೇಸ್‌ನ ಎಂ.ಕಲೈವಣ್ಣನ್ ಅವರನ್ನು 9-11 , 4-11, 11-5 , 7-11 ,11-5, 11-8, 11-5ರಿಂದ ಮಣಿಸಿ ಚಾಂಪಿಯನ್ ಆದರು.

ಇದಕ್ಕೂ ಮೊದಲು ನಡೆದ ಸೆಮಿಫೈನಲ್‌ನಲ್ಲಿ ರೋಹಿತ್ ಅವರು ಆಕಾಶ್ ಅವರನ್ನು, ಕಲೈವಣ್ಣನ್ ಅವರು ಯಶವಂತ್ ಅವರನ್ನು ಮಣಿಸಿ ಅಂತಿಮಘಟ್ಟ ಪ್ರವೇಶಿಸಿದ್ದರು.

17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಬೆಳಗಾವಿಯ ತನಿಷ್ಕಾ ಕಪಿಲ್ ಕಾಲಭೈರವ್ ಅವರು 11-4, 11-8, 11-9ರಿಂದ ಬೆಂಗಳೂರಿನ ಹಿಮಾಂಶಿ ಚೌಧರಿ ಅವರನ್ನು ಸುಲಭವಾಗಿ ಮಣಿಸಿ ಪ್ರಶಸ್ತಿ ಗೆದ್ದರು.

ಫೈನಲ್‌ಗೆ ಬೀಗಲ್ಸ್, ಡಿವೈಇಎಸ್ ತಂಡಗಳು

ಬೆಂಗಳೂರು: ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಹಾಗೂ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಮೈಸೂರು ತಂಡಗಳು ಇಲ್ಲಿ ನಡೆಯುತ್ತಿರುವ ರಾಜ್ಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಫೈನಲ್ ತಲುಪಿವೆ.

ಶುಕ್ರವಾರ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಸಂಜನಾ (34) ಮತ್ತು ಮೇಖಲಾ (22) ಅವರ ಅಮೋಘ ಆಟದ ನೆರವಿನಿಂದ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 72–59ರಿಂದ ಮೌಂಟ್ಸ್ ಕ್ಲಬ್ ತಂಡವನ್ನು ಸೋಲಿಸಿತು.

ಮೌಂಟ್ಸ್ ಪರ ಪಾವಣಿ 24 ಮತ್ತು ನಿಧಿ 11 ಅಂಕ ಗಳಿಸಿದರು.

ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ (ಡಿವೈಇಎಸ್) ಮೈಸೂರು ತಂಡವು 64–27ರ ಅಂತರದಲ್ಲಿ ಜೆಎಸ್‌ಸಿ ತಂಡವನ್ನು ಮಣಿಸಿತು. ಮೈಸೂರು ತಂಡದ ಪರ ಶಕ್ತಿ 18, ಐಶ್ವರ್ಯ 13 ಮತ್ತು ಜೆಎಸ್‌ಸಿ ಪರ ಆಧ್ಯಾ 13 ಅಂಕ ಗಳಿಸಿದರು.

ಸುಧಾ, ಮಯೂರ ಓದಿರಿ

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

AD SALES

Qualification : Minimum Graduate
Experience : 3-5 years
Location : Bangalore (should be open to work from Bangalore)

REQUIREMENT:
* Drive advertisement revenue for educational publications (DHiE, Spardhavani, Student events and other products).
* Willingness to travel across Bangalore.
* Generate and follow up on leads.
* Develop and maintain client relationships
* Should have good communication skills both in English and kannada.

SALARY: Open for Discussion

Please send your application for the above position mentioning the job applied for (subject of the e-mail) and along with updated resume to:

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಮಹಿಳಾ ಪ್ರೊ ಗಾಲ್ಫ್: ಒಂಬತ್ತನೇ ಲೆಗ್‌ನಲ್ಲಿ ವಿಧಾತ್ರಿಗೆ ಪ್ರಶಸ್ತಿ

ಹೊಸೂರು (ತಮಿಳುನಾಡು), (ಪಿಟಿಐ): ಮೈಸೂರಿನ ವಿಧಾತ್ರಿ ಅರಸ್ ಅವರು ಇಲ್ಲಿನ ಕ್ಲೋವರ್ ಗ್ರೀನ್ಸ್‌ನಲ್ಲಿ ಶುಕ್ರವಾರ ಮುಕ್ತಾಯಗೊಂಡ ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್‌ನ ಒಂಬತ್ತನೇ ಲೆಗ್‌ನಲ್ಲಿ ವಿಜೇತರಾದರು. ವೃತ್ತಿಪರ ಗಾಲ್ಫರ್ ಆದ ನಂತರ ಇದು ಅವರ ಮೊದಲ ಪ್ರಶಸ್ತಿ.

ಅಮೆಚೂರ್ ಆಗಿ ಅವರು ಈ ಹಿಂದೆ ಪ್ರಶಸ್ತಿಗಳನ್ನು ಗೆದ್ದಿದ್ದರು. ಸಾನ್ವಿ ಸೋಮು ಅವರು ಎರಡನೇ ಸ್ಥಾನ ಪಡೆದರು. ಅನುಭವಿ ಗಾಲ್ಫರ್ ಗೌರಿಕಾ ಬಿಷ್ಣೋಯಿ ಮೂರನೇ ಸ್ಥಾನ ಗಳಿಸಿದರು.

ವೃತ್ತಿಪರರಾದ ಮೇಲೆ ಮೊದಲ ಎರಡು ಪ್ರಯತ್ನಗಳಲ್ಲಿ ಅವರು ಮೂರನೇ ಸ್ಥಾನ ಪಡೆದಿದ್ದರು. ಆದರೆ ಈ ಲೆಗ್‌ನ ಆರಂಭದಿಂದಲೇ ಉತ್ತಮ ನಿರ್ವಹಣೆ ತೋರಿದರು. ಖುಷಿ ಖಾನಿಜಾವು, ಶ್ವೇತಾ ಮಾನಸಿಂಗ್ ಮತ್ತು ಸ್ನೇಹಾ ಸಿಂಗ್ ನಾಲ್ಕನೇ ಸ್ಥಾನಕ್ಕೆ ಟೈ ಆದರು. ಮಹಿಳಾ ಪ್ರೊ ಗಾಲ್ಫ್ ಟೂರ್‌ನ ಹತ್ತನೇ ಲೆಗ್ ಇದೇ ತಿಂಗಳ 23 ರಿಂದ 26ರವರೆಗೆ ಬೆಂಗಳೂರಿನ ಪ್ರೆಸ್ಟೀಜ್ ಗಾಲ್ಫ್‌ಶೈರ್‌ನಲ್ಲಿ ನಡೆಯಲಿದೆ.

ಟೆನಿಸ್: ಫೈನಲ್‌ಗೆ ಲಕ್ಷ್ಮೀಪ್ರಭಾ, ಮನೋಜ್ಞಾ

ಬೆಂಗಳೂರು: ಲಕ್ಷ್ಮೀ ಪ್ರಭಾ, ಮನೋಜ್ಞಾ ಎಂ. ಅವರು ಎಸ್‌ಎಟಿ ಸ್ಪೋರ್ಟ್ಸ್ ಓಪನ್ ₹1 ಲಕ್ಷ ಬಹುಮಾನದ ಎಐಟಿಎ ಮಹಿಳಾ ಟೆನಿಸ್ ಟೂರ್ನಿಯ ಫೈನಲ್ ತಲುಪಿದ್ದಾರೆ. ಎಸ್‌ಎಟಿ ಸ್ಪೋರ್ಸ್ ಕೋರ್ಟ್‌ನಲ್ಲಿ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಲಕ್ಷ್ಮೀ ಪ್ರಭಾ 6-1, 6-4ರಿಂದ ದ ಈಶ್ವರಿ ಎ.ಎಂ ಅವರನ್ನು ಸೋಲಿಸಿ ಫೈನಲ್‌ಗೆ ಲಗ್ಗೆ ಹಾಕಿದರು. ಇನ್ನೊಂದು ಸೆಮಿಫೈನಲ್‌ನಲ್ಲಿ ಮನೋಜ್ಞಾ ಅವರು 6-2, 6-2 ಅಂತರದಲ್ಲಿ ಅರ್ಜಾನ್ ಖೋರಕಿವಾಲಾ ವಿರುದ್ಧ ಸುಲಭ ಜಯ ಸಾಧಿಸಿದರು.